ಭಾನುವಾರ, ಜನವರಿ 15, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಕರ ಸಂಕ್ರಾಂತಿ
ಉತ್ತರಪ್ರದೇಶದ ಮೊರಾದಾಬಾದ್‌ನಲ್ಲಿ ಮಕರ ಸಂಕ್ರಾಂತಿ ಕಾರ್ಯಕ್ರಮದಲ್ಲಿ ಮುಖಕ್ಕೆ ಬಣ್ಣಹಚ್ಚಿ ಪಾಲ್ಗೊಂಡಿದ್ದ ಯುವತಿಯರು

ಸದ್ಗುರುಗಳ
ಹೃತ್ಪೂರ್ವಕ ಆಹ್ವಾನ

ಅನಾವರಣ
ಆದಿಯೋಗಿ
ಬೆಂಗಳೂರು

ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಬಸವರಾಜ
ಬೊಮ್ಮಾಯಿಯವರ ಉಪಸ್ಥಿತಿಯಲ್ಲಿ

15 ಜನವರಿ 2023
ಸಂಜೆ 6 ಗಂಟೆಯಿಂದ
ಸದ್ಗುರು ಸನ್ನಿಧಿ
ಅವಲಗುರ್ಕಿ, ಚಿಕ್ಕಬಳ್ಳಾಪುರ

"ನಿಮ್ಮನ್ನು ನೀವು
ಪರಿವರ್ತಿಸಿಕೊಳ್ಳಲು ಮತ್ತು
ನಿಮ್ಮ ಸ್ವಂತ ಹಣೆಬರಹವನ್ನು
ಸೃಷ್ಟಿಸಿಕೊಳ್ಳಲು, ಆದಿಯೋಗಿಯು
ಒಂದು ಸಂಕೇತ, ಸಾಧ್ಯತೆ ಮತ್ತು
ಸಾಧನಗಳ ಮೂಲ."
–ಸದ್ಗುರು

ನೇರಪ್ರಸಾರದಲ್ಲಿ ಪಾಲ್ಗೊಳ್ಳಿ
ಸದ್ಗುರು ಅಪ್ಲಿಕೇಶನ್
/ಸದ್ಗುರು
ಮತ್ತು ಎಲ್ಲಾ ಪ್ರಮುಖ ಟಿವಿ ಚಾನೆಲ್‌ಗಳು

ದರ್ಶನಕ್ಕಾಗಿ ರಾತ್ರಿಯಿಡೀ
ತೆರೆದಿರುತ್ತದೆ
ಸಂಜೆ 8 ಗಂಟೆಯಿಂದ

ಗ್ರಾಮ ಪಂಚಾಯಿತಿ ನೌಕರರ ಪ್ರತಿಭಟನೆ ಫೆ.6ರಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: 'ರಾಜ್ಯದ ಗ್ರಾಮ ಪಂಚಾಯಿತಿ ನೌಕರರನ್ನು 'ಸಿ' ಮತ್ತು 'ಡಿ' ದರ್ಜೆ ನೌಕರರು ಎಂದು ಗುರುತಿಸಿ, ಬಡ್ತಿ ನೀಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಸರ್ಕಾರ 15 ದಿನಗಳೊಳಗೆ ಈಡೇರಿಸದಿದ್ದರೆ ಚುನಾವಣೆ ಬಹಿಷ್ಕಾರ ಮಾಡುತ್ತೇವೆ. ಬರುವ ಫೆ.6ರಿಂದ ರಾಜ್ಯದ ಎಲ್ಲ ಪಂಚಾಯಿತಿ ನೌಕರರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಿದ್ದೇವೆ' ಎಂದು ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಶ್ರೇಯೋಭಿವೃದ್ಧಿ ಸಂಘದ ಅಧ್ಯಕ್ಷ ಡಾ. ದೇವಿಪ್ರಸಾದ್ ಬೆಳ್ಳ ಶನಿವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡುವ ಬಿಲ್ ವಸೂಲಿಗಾರರು, ಕ್ಲರ್ಕ್ ಅಥವಾ ಡಾಟಾ ಎಂಟ್ರಿ ಆಪರೇಟರ್, ವಾಟರ್ ಮೆನ್, ಪಂಪ್ ಚಾಲಕ, ಶುಚಿತ್ವ ನೌಕರರು, ಅಟೆಂಡರ್‌ಗಳಿಗೆ ಉದ್ಯೋಗ ಭದ್ರತೆಯೇ ಇಲ್ಲ. ಭವಿಷ್ಯ ನಿಧಿ, ಚಿಕಿತ್ಸಾ ಸೌಲಭ್ಯಗಳನ್ನೂ ಹೊಂದಿಲ್ಲ. ನಮಗೆ ಸರಿಯಾದ ವೇತನ ಶ್ರೇಣಿಯನ್ನೂ ನಿಗದಿಪಡಿಸಿಲ್ಲ. ಮೂರು ದಶಕಗಳಿಂದ ಕೇವಲ ಕನಿಷ್ಠ ಕೂಲಿ ಪಡೆದು ಕರ್ತವ್ಯ ನಿರ್ವಹಿಸುತ್ತಿದ್ದೇವೆ' ಎಂದರು.

'ನಮ್ಮನ್ನು ಜೀತದಾಳುಗಳಂತೆ ಹಗಲಿರುಳು ದುಡಿಸಿಕೊಳ್ಳಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ರಾಜಕೀಯ ಒತ್ತಡ, ಮೇಲಧಿಕಾರಿಗಳ ದಬ್ಬಾಳಿಕೆಯೊಂದಿಗೆ ಕಾರ್ಯನಿರ್ವಹಿಸಬೇಕಾದ ಸ್ಥಿತಿ ಇದೆ. ನಮ್ಮ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಬೆಳಗಾವಿಯ ಸುವರ್ಣ ಸೌಧದ ಬಳಿ 2022 ಡಿ.19ರಂದು ಪ್ರತಿಭಟನೆ ನಡೆಸಿದ್ದೆವು. ಮುಖ್ಯಮಂತ್ರಿ ಬೊಮ್ಮಾಯಿ ಅವರ ಸೂಚನೆ ಮೇರೆಗೆ ಸಚಿವ ಗೋವಿಂದ ಕಾರಜೋಳ ನಮ್ಮನ್ನು ಭೇಟಿ ಮಾಡಿ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ' ಎಂದು ಆರೋಪಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪದ್ಮನಾಭ ಆರ್. ಕುಲಾಲ್, 'ಫೆ.6ರಿಂದ ನಡೆಯುವ ಪ್ರತಿಭಟನೆಯಲ್ಲಿ ರಾಜ್ಯದ 5,955 ಗ್ರಾ. ಪಂ. ಎಲ್ಲಾ ನೌಕರರೂ ಭಾಗವಹಿಸಲಿದ್ದಾರೆ' ಎಂದರು.



ಭಾನುವಾರ, ಜನವರಿ 15, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 15 | ಪುಟ 16 + 4 + 4
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಕ್ರಾಂತಿ: ಬಾಂಧವ್ಯದ ಮಹಾಕ್ರಾಂತಿ 7

ಭಾನುವಾರದ ಪುರವಣಿ
ಗ್ರೀಸ್‌ನ ಈದ್ರಾ ದ್ವೀಪ ಪ್ರವಾಸಿಗರಿಗೆ ಇಷ್ಟ. ಕತ್ತೆಗಳಿಗೆ ಬೇಡಿಕೆಯೂ ಹೆಚ್ಚು. ಯಾಕೆ?

ನೈಸರ್ಗಿಕ ಡ್ರಗ್ಸ್‌ಗಿಂತ ದುಬಾರಿ ರಾಸಾಯನಿಕ ಡ್ರಗ್ಸ್ • ಡಾರ್ಕ್‌ನೆಟ್ ಬಳಕೆ

‘ಸಿಂಥೆಟಿಕ್’ ಡ್ರಗ್ಸ್ ದಂಧೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನೈಸರ್ಗಿಕವಾಗಿ ಬೆಳೆಯುವ ಗಾಂಜಾ, ಅಫೀಮು ಜೊತೆಯಲ್ಲೇ ಇತ್ತೀಚಿನ ದಿನಗಳಲ್ಲಿ ‘ಸಿಂಥೆಟಿಕ್’ ಡ್ರಗ್ಸ್ ವಹಿವಾಟು ವ್ಯಾಪಕವಾಗುತ್ತಿದೆ. ಯುವ ಸಮೂಹವನ್ನು ಬಹುಬೇಗ ಜಾಲದೊಳಗೆ ಸಿಲುಕಿಸಿ ವ್ಯಸನಿಗಳಾಗಿ ಮಾಡಲಾಗುತ್ತಿದೆ. ಸಂಪೂರ್ಣ ರಾಸಾಯನಿಕವನ್ನಷ್ಟೇ ಬಳಸಿ ಸಿದ್ಧಪಡಿಸುವ ಸಿಂಥೆಟಿಕ್ ಡ್ರಗ್ಸ್ ಸಾಗಣೆ ಹಾಗೂ ಮಾರಾಟದಿಂದ ದೇಶ-ವಿದೇಶಗಳಲ್ಲಿ ಕೋಟ್ಯಂತರ ರೂಪಾಯಿ ವ್ಯವಹಾರ ನಡೆಯುತ್ತಿದೆ.

ಮೊಬೈಲ್, ದೂರವಾಣಿ, ಇ- ಮೇಲ್, ಆ್ಯಪ್, ಸಾಮಾಜಿಕ ಮಾಧ್ಯಮಗಳ ಸಂಪರ್ಕದ ಮೂಲಕ ನಡೆಯುತ್ತಿದ್ದ ಸಿಂಥೆಟಿಕ್ ಡ್ರಗ್ಸ್ ದಂಧೆ, ಇದೀಗ ‘ಡಾರ್ಕ್‌ನೆಟ್’ ರೂಪ ಪಡೆದುಕೊಂಡಿದೆ. ಅಪರಿಚಿತರಾಗಿ ಕೋಡ್‌ಗಳ ಮೂಲಕ ಸಿಂಥೆಟಿಕ್ ಡ್ರಗ್ಸ್ ಮಾರಾಟ ಹಾಗೂ ಖರೀದಿ ಪ್ರಕ್ರಿಯೆ ನಡೆಸುತ್ತಿರುವ ಪೆಡ್ಲರ್ ಮತ್ತು ಮಧ್ಯವರ್ತಿಗಳು, ವ್ಯವಸ್ಥಿತ ಜಾಲ ಹುಟ್ಟುಹಾಕಿದ್ದಾರೆ.

ಸ್ನೇಹಿತರು, ಸಹೋದ್ಯೋಗಿಗಳ ಸಹವಾಸದಿಂದ ಯುವಸಮೂಹ ವ್ಯಸನಿಗಳಾಗುತ್ತಿದ್ದಾರೆ. ಕೆಲ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಕೆಲ ಐಟಿ-ಬಿಟಿ ಕಂಪನಿಗಳ ಉದ್ಯೋಗಿಗಳು, ಉದ್ಯಮಿಗಳು, ವ್ಯಾಪಾರಿಗಳು, ಸಿನಿ ತಾರೆಯರು ಸೇರಿದಂತೆ ಹಲವರು ಕ್ರಮೇಣ ವ್ಯಸನಿಗಳಾಗುತ್ತಿದ್ದಾರೆ. ಸಣ್ಣ ವಯಸ್ಸಿನಲ್ಲೇ ಮಾನಸಿಕ ಹಾಗೂ ದೈಹಿಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ.

ಸಂಗೀತ ಹಾಗೂ ವೀಕೆಂಡ್ ಕಾರ್ಯಕ್ರಮ, ವಿಶೇಷ ಔತಣಕೂಟ, ಮೋಜು-ಮಸ್ತಿ ಸ್ಥಳಗಳು.. ಸೇರಿದಂತೆ ವಿವಿಧೆಡೆ ಸಿಂಥೆಟಿಕ್ ಡ್ರಗ್ಸ್ ಹಾವಳಿ ಇದೆ. ವ್ಯಸನಿಗಳು, ತಮ್ಮ ಸ್ನೇಹಿತರು ಹಾಗೂ ಆಪ್ತರನ್ನು ಪಾರ್ಟಿಗಳಿಗೆ ಕರೆದೊಯ್ಯುತ್ತಾರೆ. ಚಾಕೊಲೇಟ್, ಮದ್ಯ ಹಾಗೂ ಪಾನೀಯಗಳಲ್ಲಿ ಮಾದಕ ವಸ್ತುಗಳ ಮಿಶ್ರಣ ಮಾಡಿ ಹೊಸಬರಿಗೆ ನೀಡುತ್ತಾರೆ. ಒಮ್ಮೆ ಅದನ್ನು ಸೇವಿಸುವ ವ್ಯಕ್ತಿ, ಪದೇ ಪದೇ ಬೇಕೆಂದು ಹಂಬಲಿಸುತ್ತಾರೆ. ಅವಾಗಲೇ ವ್ಯಸನಿಯಾಗಿ ಬದಲಾಗುತ್ತಾರೆ. ಜೊತೆಗೆ, ವ್ಯಸನಿಗಳೇ ಪೆಡ್ಲರ್‌ಗಳಾಗಿ ಮಾರ್ಪಡುತ್ತಿದ್ದಾರೆ.

ಇವುಗಳನ್ನು ಸೇವಿಸುವವರ ಪೈಕಿ, ವಿದ್ಯಾವಂತರೇ ಹೆಚ್ಚಿದ್ದಾರೆ. ದುಬಾರಿ ಮಾದಕವಸ್ತು ಖರೀದಿಸಿ ಅಮಲು ಏರಿಸಿಕೊಳ್ಳುತ್ತಿದ್ದಾರೆ. ಕೆಲ ಎಂಜಿನಿಯರ್‌ಗಳು, ಕೆಲ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು, ಕಚೇರಿ-ಕಾಲೇಜಿನಲ್ಲಿ ತಮ್ಮದೇ ತಂಡ ಕಟ್ಟಿಕೊಂಡು ಡ್ರಗ್ಸ್ ಸೇವಿಸುತ್ತಿದ್ದಾರೆ.

4ನೇ ಪುಟ ನೋಡಿ

ಒಳನೋಟ
ಮಾದಕವಸ್ತು ‘ಮಾಯಾಜಾಲ’
ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು ನಗರದಲ್ಲಿ ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಸಿಸಿಬಿ ಅಧಿಕಾರಿಗಳು ಕಾರ್ಯಾಚರಣೆ ನಡೆಸುತ್ತಿದ್ದಾರೆ. 2022ರಲ್ಲಿ ₹ 77 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿ, ನಾಶಪಡಿಸಲಾಗಿದೆ
ಎಸ್.ಡಿ. ಶರಣಪ್ಪ
ಜಂಟಿ ಕಮಿಷನರ್, ಸಿಸಿಬಿ

ರಾಜ್ಯದಲ್ಲಿ ದಾಖಲಾದ ಡ್ರಗ್ಸ್ ಪ್ರಕರಣ

2020	2021	2022
4,054	5,787	6,642



–ಸಾಂದರ್ಭಿಕ ಚಿತ್ರ

‘ಒಂದೇ ಪುಸ್ತಕದಲ್ಲಿ ₹ 2.40 ಕೋಟಿ ಮೌಲ್ಯದ ಎಲ್‌ಎಸ್‌ಡಿ’

‘ಸಿಂಥೆಟಿಕ್ ಡ್ರಗ್ಸ್‌ಗಳಲ್ಲಿ ಒಂದಾದ ಎಲ್‌ಎಸ್‌ಡಿ ಕಾಗದ ರೂಪದಲ್ಲಿರುತ್ತದೆ. ಕಾಗವನ್ನು ಚೂರುಗಳ(ಬ್ಲಾಕ್) ಲೆಕ್ಕದಲ್ಲಿ ಬೇರ್ಪಡಿಸಿ, ಅದಕ್ಕೆ 'ಲೈಸರ್ಜಿಕ್ ಆ್ಯಸಿಡ್ ಡೈಥೈಲಾಮೈಡ್‘ ದ್ರಾವಣವನ್ನು ಸಿಂಪಡಿಸುತ್ತಾರೆ. ವ್ಯಕ್ತಿ, ಪ್ರೇಕ್ಷಣೀಯ ಸ್ಥಳಗಳು, ದೇವರುಗಳ ಫೋಟೊ... ನಾನಾ ರೀತಿಯ ಸ್ಟಿಕ್ಕರ್ ರೂಪದಲ್ಲಿ ಇಂಥ ಕಾಗದಗಳು ಗೋಚರಿಸುತ್ತವೆ‘ ಎಂದು ಡ್ರಗ್ಸ್ ವಿರುದ್ಧದ ಕಾರ್ಯಾಚರಣೆಯಲ್ಲಿರುವ ಅಧಿಕಾರಿ ಹೇಳಿದರು.

ಎಲ್‌ಎಸ್‌ಡಿ ಕಾಗದ

‘ಎಲ್‌ಎಸ್‌ಡಿಯಲ್ಲಿ ಸಿಂಗಲ್ ಡಿಪ್ (300 ಮೈಕ್ರಾನ್) ಹಾಗೂ ಡಬಲ್ ಡಿಪ್ (600 ಮೈಕ್ರಾನ್) ಎಂಬ ಎರಡು ವಿಧಗಳಿವೆ. ಇಂಥ ಕಾಗದದ ಚೂರುಗಳನ್ನು ನಾಲಿಗೆಗೆ ತಾಗಿಸಿಕೊಂಡರೆ, ಅಮಲು ಏರುತ್ತದೆ. 100 ಪುಟಗಳ ಒಂದೇ ಪುಸ್ತಕದಲ್ಲಿ ₹ 2.40 ಕೋಟಿ ಮೌಲ್ಯದ ಎಲ್‌ಎಸ್‌ಡಿ ಕಾಗದ ಚೂರುಗಳ ಹಾಳೆಗಳನ್ನು ಬಚ್ಚಿಟ್ಟು ಸಾಗಿಸಬಹುದು. ಇಂಥ ಸಾಗಣೆ ಯಾರಿಗೂ ಗೊತ್ತೇ ಆಗುವುದಿಲ್ಲ. ಹಲವು ಪೆಡ್ಲರ್‌ಗಳು, ಎಲ್‌ಎಸ್‌ಡಿ ಸಾಗಣೆಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ’ ಎಂದು ವಿವರಿಸಿದರು.

‘ಕುಟುಂಬ ನಿರ್ವಹಣೆಗೆ ಸ್ತ್ರೀ ಯೋಜನೆ’

ಬೆಂಗಳೂರು/ದಾವಣಗೆರೆ: ಮನೆ ನಿರ್ವಹಣೆಗಾಗಿ ರಾಜ್ಯದ ಎಲ್ಲ ಕುಟುಂಬಗಳ ಮಹಿಳೆಯರಿಗೆ ಆರ್ಥಿಕ ನೆರವು ನೀಡುವ ಸ್ತ್ರೀ ಸಾಮರ್ಥ್ಯ ಯೋಜನೆಯನ್ನು ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಸ್ತ್ರೀ ಸಾಮರ್ಥ್ಯ ಮತ್ತು ಸ್ತ್ರೀ ಶಕ್ತಿಯನ್ನು ಹೆಚ್ಚಿಸುವ ಉದ್ದೇಶದಿಂದ ಸರ್ಕಾರ ಯೋಜನೆ ರೂಪಿಸುತ್ತಿದೆ. ಮನೆ ನಿರ್ವಹಣೆ, ಕೋವಿಡ್ ಉಪಚಾರ, ಆರೋಗ್ಯ ಮುಂತಾದವುಗಳಿಗೆ ಸಹಾಯವಾಗುವಂತೆ ಪ್ರತಿ ಕುಟುಂಬಕ್ಕೆ ಅವರ ವೆಚ್ಚಕ್ಕೆ ಅನುಗುಣವಾಗಿ ₹ 1,000ದಿಂದ ₹ 2,000ದವರೆಗೂ ನೆರವು ನೀಡುವ ಯೋಚನೆ ಇದೆ’ ಎಂದರು.

5ನೇ ಪುಟ ನೋಡಿ

ಶುಭಾಶಯಗಳು
ನಾಡಿನ ಜನತೆಗೆ ಮಕರ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು.
ಎಳ್ಳು ಬೆಲ್ಲದ ಹಬ್ಬವು ನಿಮ್ಮೆಲ್ಲರ ಜೀವನದಲ್ಲಿ ಸುಖ, ಸಂತೋಷ, ನೆಮ್ಮದಿ ತರಲಿ
–ಸಂಪಾದಕ

ಪ್ರಾದೇಶಿಕ ಪಕ್ಷಗಳಿಗೆ ದೊಡ್ಡ ಪಾತ್ರ: ಅಮರ್ತ್ಯ 7

ಚಿನಕುರಳಿ
ಪ್ರಕಾಶ್ ಶೆಟ್ಟಿ

ಜೋಶಿಮಠ ಪರಿಸ್ಥಿತಿ: ಅನುಮತಿ ಇಲ್ಲದೆ ಹೇಳಿಕೆ ಬೇಡ – ಎನ್‌ಡಿಎಂಎ

ನವದೆಹಲಿ (ಪಿಟಿಐ): ‘ಸರ್ಕಾರಿ ಸಂಸ್ಥೆಗಳು ಹಾಗೂ ಅವುಗಳ ತಜ್ಞರು ತನ್ನ ಅನುಮತಿ ಇಲ್ಲದೆಯೇ ಜೋಶಿಮಠದ ಪರಿಸ್ಥಿತಿ ಬಗ್ಗೆ ಮಾಧ್ಯಮಗಳಿಗೆ ಯಾವುದೇ ಹೇಳಿಕೆ ನೀಡುವಂತಿಲ್ಲ. ಪ್ರಕಟಣೆಯನ್ನೂ ಹೊರಡಿಸುವಂತಿಲ್ಲ’ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ಶನಿವಾರ ಕಟ್ಟುನಿಟ್ಟಾಗಿ ಸೂಚಿಸಿದೆ. ಉತ್ತರಾಖಂಡ ಸರ್ಕಾರವೂ ಈ ಕುರಿತು ಸಂಬಂಧಪಟ್ಟ ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ.

‘ಜೋಶಿಮಠದ ವಸ್ತುಸ್ಥಿತಿಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲೂ ಯಾವುದೇ ಮಾಹಿತಿ ಹಂಚಿಕೊಳ್ಳುವಂತಿಲ್ಲ’ ಎಂದೂ ಎನ್‌ಡಿಎಂಎ ತಾಕೀತು ಮಾಡಿದೆ.

ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬದಲು, ಇಸ್ರೊ ವರದಿ ಮೇಲೆ ನಿಷೇಧ ಹೇರಲಾಗುತ್ತಿದೆ. ನರೇಂದ್ರ ಮೋದಿ ಅವರೇ, ಸಂದೇಶವಾಹಕರ ಮೇಲೆ ಗುಂಡು ಹಾರಿಸಬೇಡಿ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

‘ಹಲವು ಸರ್ಕಾರಿ ಸಂಸ್ಥೆಗಳು ಜೋಶಿಮಠದ ಪರಿಸ್ಥಿತಿ ಕುರಿತ ಮಾಹಿತಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿವೆ. ಅಷ್ಟೇ ಅಲ್ಲದೆ ಮಾಧ್ಯಮಗಳ ಎದುರು ತಮಗೆ ತೋಚಿದ ಹಾಗೆ ಪರಿಸ್ಥಿತಿಯನ್ನು ವ್ಯಾಖ್ಯಾನಿಸುತ್ತಿರುವುದೂ ನಮ್ಮ ಗಮನಕ್ಕೆ ಬಂದಿದೆ. ಇಂತಹ ಹೇಳಿಕೆ ಅಥವಾ ವ್ಯಾಖ್ಯಾನಗಳು ಸ್ಥಳೀಯ ನಿವಾಸಿಗಳ ಜೊತೆಗೆ ದೇಶದ ನಾಗರಿಕರನ್ನೂ ಗೊಂದಲಕ್ಕೀಡು ಮಾಡುತ್ತವೆ’ ಎಂದು ಹೇಳಿದೆ.

7ನೇ ಪುಟ ನೋಡಿ

ಉಪಗ್ರಹ ಚಿತ್ರ ಹಿಂಪಡೆದ ಇಸ್ರೊ

ಡೆಹ್ರಾಡೂನ್: ಜೋಶಿಮಠದಲ್ಲಿ 12 ದಿನಗಳಲ್ಲಿ 5.4 ಸೆಂ.ಮೀನಷ್ಟು ವೇಗವಾಗಿ ಭೂಮಿ ಕುಸಿದಿರುವುದನ್ನು ಬಿಂಬಿಸುವ ಉಪಗ್ರಹ ಚಿತ್ರಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದ ಇಸ್ರೊ ಶನಿವಾರ ಅವುಗಳನ್ನು ಹಿಂಪಡೆದಿದೆ.



ನಾಲಿಗೆ ಕತ್ತರಿಸಬೇಕಾಗುತ್ತದೆ: ಯತ್ನಾಳಗೆ ನಿರಾಣಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಲಿಗೆ ಹರಿಬಿಟ್ಟು ಮಾತನಾಡುವುದನ್ನು ಮುಂದುವರಿಸಿದರೆ ನಾಲಿಗೆ ಕತ್ತರಿಸುವ ಕೆಲಸ ಮಾಡಬೇಕಾಗುತ್ತದೆ’ ಎಂದು ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರು, ಹೆಸರನ್ನು ಹೇಳದೆ ಪರೋಕ್ಷವಾಗಿ ತಮ್ಮದೇ ಪಕ್ಷದ ಶಾಸಕ ಬಸನಗೌಡ ಪಾಟೀಲ ಯತ್ನಾಳಗೆ ಎಚ್ಚರಿಕೆ ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿವಾಸದ ಬಳಿ ಶನಿವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

‘ವಿಜಯಪುರದವರು ಒಬ್ಬರಿದ್ದಾರೆ. ಅವರದು ಎಲುಬಿಲ್ಲದ ನಾಲಿಗೆ. ಪದೇಪದೇ ಒಬ್ಬರನ್ನು ಹಿಯಾಳಿಸಿ ಮಾತನಾಡುವುದು, ಬಾಯಿಗೆ ಬಂದಂತೆ ಟೀಕಿಸುವುದು ಅವರಿಗೆ ಅಭ್ಯಾಸವಾಗಿದೆ. ಒಳ್ಳೆಯ ಕುಟುಂಬದ ಹಿನ್ನೆಲೆ, ಸಂಸ್ಕಾರ ಇದ್ದವರು ಈ ರೀತಿ ಮಾತನಾಡುವುದಿಲ್ಲ. ಬಾಯಿ ಮುಚ್ಚಿಕೊಂಡು ಸುಮ್ಮನಿದ್ದರೆ ಒಳ್ಳೆಯದು. ಇಲ್ಲದಿದ್ದರೆ ನಾವು ಕೂಡ ಅದೇ ಧಾಟಿಯಲ್ಲಿ ಮಾತನಾಡಬೇಕಾಗುತ್ತದೆ. ನಾಲಿಗೆ ಉದ್ದ ಇದೆ ಎಂದು ಚಾಚಿದರೆ ಕತ್ತರಿಸುವ ಕೆಲಸವೂ ನಮಗೆ ಗೊತ್ತಿದೆ’ ಎಂದರು.

6ನೇ ಪುಟ ನೋಡಿ

‘ಅಮಿತ್ ಶಾ ಅವರದ್ದು ಒಂಥರಾ ರೌಡಿಸಂ...’

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ‘ಅಮಿತ್ ಶಾ ಅವರದ್ದು ಒಂಥರಾ ರೌಡಿಸಂ. ಆ ವ್ಯಕ್ತಿ ಮೇಲ್ನೋಟಕ್ಕೆ ಇರುವುದೇ ಬೇರೆ. ಮಾತನಾಡುವುದೇ ಬೇರೆ. ಚುನಾವಣೆಯಲ್ಲಿ ಗೆದ್ದ ನಂತರ ಆಪರೇಷನ್ ಕಮಲ ಮಾಡಿದರೆ ನಮಗೆ ಕೆಟ್ಟ ಹೆಸರು. ಹೀಗಾಗಿ ಈ ಬಾರಿ ಮುಂಚಿತವಾಗಿಯೇ ಮಾಡುತ್ತೇವೆ’...

ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರು ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಅದರಲ್ಲಿ ಈ ಮಾತುಗಳಿವೆ. ಆದರೆ, ‘ಈ ಆಡಿಯೊದಲ್ಲಿ ಇರುವ ಧ್ವನಿ ನನ್ನದಲ್ಲ’ ಎಂದು ಯೋಗೇಶ್ವರ್ ಬೆಂಗಳೂರಿನಲ್ಲಿ ಸ್ಪಷ್ಟನೆ ನೀಡಿದ್ದಾರೆ.

‘ನನ್ನ ವಿರುದ್ಧ ಸಾಕಷ್ಟು ಮಂದಿ ಷಡ್ಯಂತ್ರ ನಡೆಸಿದ್ದು, ನಕಲಿ ಆಡಿಯೊ ಬಿಟ್ಟಿದ್ದಾರೆ. ಇದರಿಂದ ನನ್ನ ರಾಜಕೀಯ ಜೀವನಕ್ಕೆ ಯಾವುದೇ ತೊಂದರೆ ಆಗದು’ ಎಂದು ಅವರು ಹೇಳಿದ್ದಾರೆ.

6ನೇ ಪುಟ ನೋಡಿ

ಬೆಂಗಳೂರು ನಗರ

ಭಾನುವಾರದ ಉಷ್ಣಾಂಶ 29° ಗರಿಷ್ಠ 14° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಕವಿದ ವಾತಾವರಣ. ನಂತರ ಶುಭ್ರ ಆಕಾಶ

ಸೋಮವಾರ	ಮಂಗಳವಾರ	ಬುಧವಾರ
29° 14°	29° 15°	29° 15°

ಸೂರ್ಯೋದಯ: 6:46 ಸೂರ್ಯಾಸ್ತ : 6:13 ಚಂದ್ರೋದಯ: ರಾ. 12:00 ಚಂದ್ರಾಸ್ತ: ಬೆ. 11:38

ಶನಿವಾರದ ಹವಾಮಾನ : ಗರಿಷ್ಠ 30° ಕನಿಷ್ಠ 15°

ಪ್ರಜಾವಾಣಿ

ಇಂದಿನಿಂದ ಉಚಿತ ಪ್ಲಾಸ್ಟಿಕ್ ಸರ್ಜರಿ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಟ್ಟ ಗಾಯಗಳು, ಅಪಘಾತ, ಆ್ಯಸಿಡ್ ದಾಳಿಗೆ ತುತ್ತಾದ ಸಂತ್ರಸ್ತರಿಗೆ ಫ್ರೆಂಡ್ಸ್ ವೆಲ್‌ಫೇರ್ ಆರ್ಗನೈಸೇಷನ್ ನಗರದಲ್ಲಿ ಉಚಿತ ಪ್ಲಾಸ್ಟಿಕ್ ಸರ್ಜರಿ ಶಿಬಿರ ಆಯೋಜಿಸಿದೆ.

ಗಿರಿನಗರದ ಬನಶಂಕರಿ 3ನೇ ಹಂತದಲ್ಲಿನ ಭಗವಾನ್ ಮಹಾವೀರ ಜೈನ ಆಸ್ಪತ್ರೆಯಲ್ಲಿ ಜ. 15ರಿಂದ 24ರವರೆಗೆ ಬೆಳಿಗ್ಗೆ 8.30ರಿಂದ ಸಂಜೆವರೆಗೆ ಶಿಬಿರ ನಡೆಯಲಿದೆ. 27 ವರ್ಷಗಳಿಂದ ಈ ಶಿಬಿರ ಆಯೋಜಿಸುತ್ತಿದ್ದು, 4,500ಕ್ಕೂ ಹೆಚ್ಚು ಜನ ಪ್ಲಾಸ್ಟಿಕ್ ಸರ್ಜರಿ ಮಾಡಿಕೊಂಡಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ. ಮಾಹಿತಿಗೆ ಮೊ: 98803 07780 ಅಥವಾ 9148741707 ಸಂಪರ್ಕಿಸಬಹುದು.

ಜೋಳದ ಚಿಗುರು ತಿಂದು 23 ಹಸು ಸಾವು

ಬೀರೂರು: ಸಮೀಪದ ಹೊಗರೇಹಳ್ಳಿ ಗ್ರಾಮದಲ್ಲಿ ಶನಿವಾರ ಜೋಳದ ಚಿಗುರು ತಿಂದು 23 ಹಸುಗಳು ಮೃತಪಟ್ಟಿವೆ.

ಗ್ರಾಮದ ರಂಗಪ್ಪ ಅವರ ಮಗ ರವಿ 40 ಹಸುಗಳನ್ನು ಸಾಕಿದ್ದರು. ಜಮೀನಿನಲ್ಲಿ ಚಿಗುರು ಜೋಳದ ಕುಡಿಗಳನ್ನು ತಿಂದ ಹಸುಗಳು ಸಮೀಪದ ಕೆರೆಯಲ್ಲಿ ನೀರು ಕುಡಿದಿವೆ. ಚಿಗುರು ತಿಂದಿದ್ದರಿಂದ ಉಸಿರಾಡಲು, ಮೆಲುಕು ಹಾಕಲು ಸಾಧ್ಯವಾಗದ ಕಾರಣ ಜಾನುವಾರುಗಳು ಜೀವ ಬಿಟ್ಟಿವೆ. 3 ಹಸುಗಳ ಸ್ಥಿತಿ ಚಿಂತಾಜನಕವಾಗಿದೆ.

ರಾಷ್ಟ್ರೀಯ ಯೋಗ ಸ್ಪರ್ಧೆ: ನೇಹಾಗೆ ಸ್ವರ್ಣ

ಬೆಂಗಳೂರು: ದೆಹಲಿಯ ಮೌಂಟ್ ಅಬು ಪಬ್ಲಿಕ್ ಶಾಲೆಯಲ್ಲಿ ಈಚೆಗೆ ನಡೆದ ಸಿಬಿಎಸ್‌ಇ ಶಾಲೆಗಳ ರಾಷ್ಟ್ರೀಯ ಯೋಗ ಸ್ಪರ್ಧೆಯಲ್ಲಿ ಮಾರತ್ತಹಳ್ಳಿಯ ವಾಗ್ದೇವಿ ವಿಲಾಸ ಶಾಲೆಯ ವಿದ್ಯಾರ್ಥಿನಿ ನೇಹಾ ಎಂ ಕೊರ್ಸೆ ಸ್ವರ್ಣ ಪದಕ ಪಡೆದಿದ್ದಾರೆ.

ದೇಶದ 118 ಸಿಬಿಎಸ್‌ಇ ಶಾಲೆಗಳಿಂದ 450ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. 19 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ 9ನೇ ತರಗತಿಯ ವಿದ್ಯಾರ್ಥಿನಿ ನೇಹಾ ಪ್ರಥಮ ಸ್ಥಾನ ಪಡೆದಿದ್ದಾರೆ ಎಂದು ವಾಗ್ದೇವಿ ವಿಲಾಸ ಸಂಸ್ಥೆ ಅಧ್ಯಕ್ಷ ಕೆ. ಹರೀಶ್ ಮಾಹಿತಿ ನೀಡಿದ್ದಾರೆ.

"Our Army always puts the Nation first. I salute all those great individuals who sacrificed their lives while serving the Nation. India will never forget our valiant heroes."

OUR FALLEN HEROES IN THE YEAR 2022

RANK	NAME	ARMS/SERVICES
SEPOY	SANTOSH YADAV	INFANTRY
SEPOY	CHAVAN ROMIT TANAJI	INFANTRY
HAVILDAR	JUGAL KISHOR	INFANTRY
RIFLEMAN	ANKESH BHARDWAJ	INFANTRY
RIFLEMAN	AKSHAY PATHANIA	INFANTRY
RIFLEMAN	VISHAL SHARMA	INFANTRY
RIFLEMAN	RAKESH SINGH	INFANTRY
RIFLEMAN	ARUN KATTAL	INFANTRY
GUNNER	GURBAJ SINGH	ARTILLERY
SUBEDAR	PRABHU SINGH	INFANTRY
NAIK	ALTHAF AHAMAD	ARMY ORDNANCE CORPS
LANCE NAIK	NISHAN SINGH	INFANTRY
LIEUTENANT COLONEL	KAPIL DEV PANDEY	INFANTRY
SUBEDAR	UMESH LAMA	INFANTRY
SUBEDAR	SAJIT SUBBA	INFANTRY
NAIB SUBEDAR	SITARAM RAI	INFANTRY
HAVILDAR	CHANDAN GURUNG	INFANTRY
HAVILDAR	DEEPKAR PRADHAN	INFANTRY
RIFLEMAN	PRITAM KUMAR DUTTA	INFANTRY
HAVILDAR	MILAN TAMANG	INFANTRY
HAVILDAR	BEDHYAN RAI	INFANTRY
NAIK	TSHERING LEPCHA	INFANTRY
NAIK	DIWANKAR THAPA	INFANTRY
LANCE NAIK	BHUPEN RAI	INFANTRY

RANK	NAME	ARMS/SERVICES
LANCE NAIK	BISHAL CHHETRI	INFANTRY
RIFLEMAN	MD JIARUL HOQUE	INFANTRY
RIFLEMAN	BALARAM SHARMA	INFANTRY
RIFLEMAN	SANKAR CHHETRI	INFANTRY
RIFLEMAN	LADUP TAMANG	INFANTRY
RIFLEMAN	MARCUS GURUNG	INFANTRY
RIFLEMAN	SANJAY ORAON	INFANTRY
RIFLEMAN	BENJAMIN RAI	INFANTRY
RIFLEMAN	TAK BAHADUR THAPA	INFANTRY
HAVILDAR	SANTU BANERJEE	INFANTRY
HAVILDAR	UMESH LIMBU	INFANTRY
NAIK	CHHEDUP LAMA	INFANTRY
LANCE HAVILDAR	BIKRAM SARKI	INFANTRY
RIFLEMAN	PRASANTA DEB	INFANTRY
RIFLEMAN	SANJOY DEBNATH	INFANTRY
RIFLEMAN	SK MAHIUDDIN AHMED	INFANTRY
RIFLEMAN	SHUBHAM KUMAR SINGH	INFANTRY
SUBEDAR	SHAMSHER SINGH CHAUHAN	ARMY EDUCATION CORPS
MAJOR	SANKALP YADAV	ARTILLERY
NAIK	JASBIR SINGH	INFANTRY
SUBEDAR	RAJENDRA PRASAD	INFANTRY
RIFLEMAN	MANOJ KUMAR	INFANTRY
RIFLEMAN	NISHANT MALIK	INFANTRY
RIFLEMAN	LAKSHMANAN D	INFANTRY

RANK	NAME	ARMS/SERVICES
HAVILDAR	SATYAPAL	INFANTRY
SEPOY	RAJESH KUMAR	INFANTRY
LANCE NAIK	KSHIRSAGAR PRASAD KAILAS	ARTILLERY
LANCE NAIK	BISHOWAJIT NARAH	INFANTRY
SEPOY	TASOUNII R	INFANTRY
SUBEDAR	SHINDE VIJAYRAO SARJERAO	INFANTRY
NAIB SUBEDAR	GURUDAYAL SAHU	INFANTRY
NAIK	MOHAMED SAIJAL T	INFANTRY
NAIK	JADHAV PRASHANT SHIVAJI	INFANTRY
NAIK	RAMANUJ KUMAR	INFANTRY
NAIK	SANDEEP KUMAR PAL	INFANTRY
SEPOY	BAPPADITYA KHUTIA	INFANTRY
RIFLEMAN	PRIYAM DUTTA	INFANTRY
NAIK	ROHIT RAI	INFANTRY
NAIB SUBEDAR	SOM BAHADUR SUBBA	INFANTRY
LANCE NAIK	MONAJ KUMAR CHETTRI	INFANTRY
SEPOY	DEVENDRA SINGH	INFANTRY
SUBEDAR	BAJARANG LAL	INFANTRY
NAIK	PRAVEEN SINGH	INFANTRY
RIFLEMAN	KULBUSHAN MANTA	INFANTRY
NAIK	BHONDE CHANDRASEKHAR RUPCHAND	INFANTRY
HAVILDAR	BARIA TULSI BHAI RAYAJI BHAI	INFANTRY

Visit us at www.indianarmy.nic.in | www.facebook.com/Indianarmy.adgpi | www.twitter.com/adgpi | adgpi-Indianarmy | @Indianarmy.adgpi

CBC 10127/13/0005/2223

ಸ್ಯಾಂಕಿ ರಸ್ತೆ ವಿಸ್ತರಣೆ ಬೇಡ: ಬಿಎನ್‌ಪಿ ಮನವಿ

ಬೆಂಗಳೂರು: ಸ್ಯಾಂಕಿ ರಸ್ತೆ ವಿಸ್ತರಣೆಗೆ ವಿರೋಧ ವ್ಯಕ್ತಪಡಿಸಿರುವ ಬೆಂಗಳೂರು ನವನಿರ್ಮಾಣ ಪಾರ್ಟಿ (ಬಿಎನ್‌ಪಿ), ಈ ಯೋಜನೆಯ ಟೆಂಡರ್ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸುವಂತೆ ಆಗ್ರಹಿಸಿದೆ.

ಯೋಜನಾ ವಿಸ್ತೃತಾ ವರದಿಯನ್ನು (ಡಿಪಿಆರ್) ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿಲ್ಲ. ನಾಗರಿಕರ ಸಲಹೆಯನ್ನೂ ಪಡೆದಿಲ್ಲ ಎಂದಿದೆ.

ಮಲ್ಲೇಶ್ವರದ 18ನೇ ಅಡ್ಡರಸ್ತೆಯಿಂದ ಭಾಷ್ಯಂ ವೃತ್ತದವರೆಗೆ ಮೇಲ್ಸೇತುವೆ ನಿರ್ಮಿಸಲು ಸ್ಯಾಂಕಿ ರಸ್ತೆಯನ್ನು ವಿಸ್ತರಿಸುವ ಯೋಜನೆಯನ್ನು ಕೈಬಿಡಬೇಕು ಎಂದು ಮಲ್ಲೇಶ್ವರದ ನಿವಾಸಿಗಳ ಗುಂಪು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮನವಿ ಮಾಡಿತು.

'ನಮ್ಮದು ಈಸ್ಟ್ ಇಂಡಿಯಾ ಕಂಪನಿ ಆಳ್ವಿಕೆಯಲ್ಲ'

ಬೆಂಗಳೂರು: 'ನಮ್ಮದು ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲ. ಕಲ್ಯಾಣ ರಾಜ್ಯದ ಆಶಯಗಳನ್ನು ಹೊಂದಿದ ಆಡಳಿತ' ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕಿವಿ ಹಿಂಡಿರುವ ಹೈಕೋರ್ಟ್, ಪದ್ಮನಾಭನಗರ ನಿವಾಸಿಯೊಬ್ಬರ ಬೆಲೆಬಾಳುವ ಎರಡು ನಿವೇಶನಗಳನ್ನು 'ನಾಗರಿಕ ಸೌಲಭ್ಯಗಳಿಗೆ ಮೀಸಲಿರಿಸಲಾದ (ಸಿಎ) ನಿವೇಶನಗಳು' ಎಂದು ಹೇಳಿದ್ದ ಬಿಡಿಎ ಆಯುಕ್ತರ ಆದೇಶವನ್ನು ವಜಾಗೊಳಿಸಿದೆ.

ಬಿಡಿಎ ಆದೇಶ ಪ್ರಶ್ನಿಸಿ ಬಿ.ವಿ. ಓಂಪ್ರಕಾಶ್ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಪ್ರಕರಣವೇನು?: ಶ್ರೀ ರಾಧಾಕೃಷ್ಣ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಖಾಸಗಿ ಲೇಔಟ್ ಅಭಿವೃದ್ಧಿಪಡಿಸಿತ್ತು. ಇದಕ್ಕೆ ಕಟ್ಟಡ ನಿರ್ಮಾಣ ಕ್ಷೇತ್ರದ ತರಬೇತಿ ಮಂಡಳಿಯು (ಸಿಐಟಿಬಿ) 1993ರ ಅಕ್ಟೋಬರ್ 24ರಂದು ಒಪ್ಪಿಗೆ ನೀಡಿತ್ತು. ಏತನ್ಮಧ್ಯೆ, 1973ರ ಲೇಔಟ್ ಯೋಜನೆಯ ಅಧಿಕೃತತೆ ಆಕ್ಷೇಪಿಸಿ ಕಂದಾಯ ಅಧಿಕಾರಿ ಪ್ರಮಾಣಪತ್ರ ಸಲ್ಲಿಸಿದ್ದರು. ವಿಚಾರಣೆ ವೇಳೆ ಬಿಡಿಎ ವಕೀಲರು ಈ ಅಂಶದ ಬಗ್ಗೆ ನ್ಯಾಯಪೀಠದ ಗಮನ ಸೆಳೆದಿದ್ದರು.

ಪ್ರಕರಣವನ್ನು ಪರಿಶೀಲಿಸಿದ ನ್ಯಾಯಪೀಠವು, 'ಸಂವಿಧಾನದ 300ಎ ವಿಧಿಯಡಿ ಆಸ್ತಿಯ ಹಕ್ಕುಗಳನ್ನು ಖಾತರಿಪಡಿಸಲಾಗಿದೆ. ಹೀಗಾಗಿ, ಲೇಔಟ್ ಯೋಜನೆಯ ಅಧಿಕೃತತೆಯ ಬಗ್ಗೆ ಯಾವುದೇ ವಿವಾದ ಇಲ್ಲ. ಸೊಸೈಟಿಯಿಂದ ಅಧಿಕಾರಿಗಳು ಸೂಕ್ತ ಮಾಹಿತಿ ಪಡೆದುಕೊಂಡಿದ್ದರೆ, ಅರ್ಜಿದಾರರನ್ನು ಈ ಸ್ಥಿತಿಗೆ ದೂಡುತ್ತಿರಲಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ರಷ್ಯಾ ಕ್ಷಿಪಣಿ ದಾಳಿ: ಉಕ್ರೇನ್‌ನ ಐವರ ಸಾವು

ಕೀವ್ (ರಾಯಿಟರ್ಸ್): ರಷ್ಯಾ ನಡೆಸಿದ ಕ್ಷಿಪಣಿ ದಾಳಿಯಿಂದಾಗಿ ಉಕ್ರೇನ್‌ನ ಡಿನಿಪ್ರೊ ನಗರದ ವಸತಿ ಸಮುಚ್ಚಯವೊಂದರ ಐವರು ಮೃತಪಟ್ಟಿದ್ದು, 27 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ 6 ಮಕ್ಕಳು ಸೇರಿದ್ದಾರೆ ಎಂದು ಅಲ್ಲಿಯ ಸ್ಥಳೀಯ ಗವರ್ನರ್ ವಾಲೆಂಟೈನ್ ರೆಝ್ನಿಚೆಂಕೊ ಅವರು ತಿಳಿಸಿದ್ದಾರೆ.

ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅವರು ಹೇಳಿದ್ದಾರೆ.

10 ಸಾವಿರ ಕುಟುಂಬಗಳಿಗೆ ಸಂಕ್ರಾಂತಿ ಕಿಟ್ ವಿತರಿಸಿದ ಸಚಿವ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಹಬ್ಬ ಹರಿದಿನಗಳಲ್ಲಿ ಉಡುಗೊರೆ ನೀಡುವುದು, ಸಿಹಿ ಹಂಚಿ ಭೇದ–ಭಾವವಿಲ್ಲದೆ ಸಂಭ್ರಮಿಸುವುದು ಸನಾತನ ಸಂಪ್ರದಾಯದ ಭಾಗವಾಗಿದೆ ಎಂದು ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಅವರು ಹೇಳಿದರು.

ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಹೇರೋಹಳ್ಳಿ ವಾರ್ಡಿನ ಸುಮಾರು ಹತ್ತು ಸಾವಿರ ಕುಟುಂಬಗಳಿಗೆ ಎಳ್ಳು-ಬೆಲ್ಲ, ಕಬ್ಬು, ಗೆಣಸು, ಕಡಲೇಕಾಯಿ, ಅವರೇಕಾಯಿ ಇದ್ದ ಕಿಟ್‌ಅನ್ನು ವಿತರಿಸಿ ಅವರು ಮಾತನಾಡಿದರು.

'ರಾಜಾಳ್ವಿಕೆಯ ಕಾಲದಿಂದ ನಾಡಿನಲ್ಲಿ ವಸ್ತ್ರ, ದವಸ–ಧಾನ್ಯಗಳನ್ನು ಅರಸರು ದಾನವಾಗಿ ನೀಡುತ್ತಿದ್ದರು. ಆರ್ಥಿಕ ದುರ್ಬಲರಿಗೆ ಸಹಾಯಹಸ್ತ ಚಾಚುವ ಸತ್ಸಂಪ್ರದಾಯವನ್ನು ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರ ಸಹಕಾರದೊಂದಿಗೆ ಮುಂದುವರಿಸಲಾಗಿದೆ' ಎಂದು ಅವರು ಹೇಳಿದರು.

ಬಿಜೆಪಿ ಯುವ ಮುಖಂಡ ನಿಶಾಂತ್ ಸೋಮಶೇಖರ್, ಹೇರೋಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ಎಂ.ಜಿ. ರವಿಶಂಕರ್, ಕರ್ನಾಟಕ ವಸತಿ ಮಹಾಮಂಡಲದ ನಿರ್ದೇಶಕ ವಿ.ರಘು, ಬಿಜೆಪಿ ಮುಖಂಡ ಅಂಜನ್‌ಕುಮಾರ್, ಪಾಲಿಕೆಯ ಮಾಜಿ ಸದಸ್ಯ ರಾಜಣ್ಣ, ಮುಖಂಡರಾದ ರಘುನಂದನ್, ನಾಗವೇಣಿ ಮತ್ತಿತರು ಈ ವೇಳೆ ಹಾಜರಿದ್ದರು.

ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಅವರು ಹೇರೋಹಳ್ಳಿ ವಾರ್ಡ್‌ನ ಹತ್ತು ಸಾವಿರ ಕುಟುಂಬಗಳಿಗೆ ಕಡಲೇಕಾಯಿ, ಅವರೇಕಾಯಿ, ಕಬ್ಬು, ಬೆಲ್ಲವುಳ್ಳ ಕಿಟ್‌ಗಳನ್ನು ವಿತರಿಸಿದರು.

ಮಲಬಾರ್ ಗೋಲ್ಡ್ : ಸಾಂಪ್ರದಾಯಿಕ ಆಭರಣಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಎಂ.ಜಿ. ರಸ್ತೆಯ ಬಳಿ ಇರುವ ಮಳಿಗೆಯಲ್ಲಿ ಸಾಂಪ್ರದಾಯಿಕ ಆಭರಣಗಳ ಪ್ರದರ್ಶನ ಆಯೋಜಿಸಲಾಗಿದೆ. ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನದ ಆಭರಣಗಳ ಪ್ರದರ್ಶನ ಮತ್ತು ಮಾರಾಟವು ಶನಿವಾರದಿಂದ ಇದೇ 22ರವರೆಗೆ ನಡೆಯಲಿದೆ ಎಂದು ಕಂಪನಿಯು ಮಾಹಿತಿ ನೀಡಿದೆ.

ಗ್ರಾಹಕರಿಗೆ ಹಣಕ್ಕೆ ಉತ್ತಮ ಮೌಲ್ಯವನ್ನು ನೀಡಲಾಗುವುದು. ಹರಳಿನ ತೂಕ, ನಿವ್ವಳ ತೂಕ ಮತ್ತು ಆಭರಣದ ಹರಳಿನ ಶುಲ್ಕವನ್ನು ಸೂಚಿಸುವ ಪಾರದರ್ಶಕ ಬೆಲೆ, ಹಳೆಯ ಚಿನ್ನಾಭರಣಗಳನ್ನು ಮಾರಾಟ ಮಾಡುವಾಗ ಚಿನ್ನಕ್ಕೆ ಶೇ 100ರಷ್ಟು ಮೌಲ್ಯ, ಚಿನ್ನದ ಶುದ್ಧತೆ ಪ್ರಮಾಣೀಕರಿಸುವ 100 ಮತ್ತು 916 ಬಿಐಎಸ್ ಹಾಲ್‌ಮಾರ್ಕಿಂಗ್, ಐಜಿಐ ಮತ್ತು ಜಿಐಎ ಪ್ರಮಾಣೀಕೃತ ವಜ್ರಗಳು, ಮರುಖರೀದಿಯನ್ನು ಖಾತರಿಪಡಿಸಲಾಗುವುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಎಂಟು ಮಂದಿ ಸೆರೆ

ನವದೆಹಲಿ (ಪಿಟಿಐ): ದೆಹಲಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಳ್ಳತನ ಮಾಡುತ್ತಿದ್ದ ತಂಡವೊಂದನ್ನು ಭೇದಿಸಿದ ದೆಹಲಿ ಪೊಲೀಸರು, ನಿಲ್ದಾಣದ ನಿರ್ವಹಣೆ ಹೊಣೆ ಹೊತ್ತ ಸಂಸ್ಥೆಯ 8 ಸಿಬ್ಬಂದಿಯನ್ನು ಬಂಧಿಸಿದ್ದಾರೆ. ನಗದು, ದುಬಾರಿ ವಸ್ತುಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ತೋಟಗಾರಿಕೆ ಇಲಾಖೆ, ಕರ್ನಾಟಕ ದ್ರಾಕ್ಷಿ ಮತ್ತು ವೈನ್ ಬೋರ್ಡ್ ಹಾಗೂ ಮಂತ್ರಿ ಮಾಲ್ ಸಹಯೋಗದಲ್ಲಿ ಆರಂಭವಾಗಿರುವ ವೈನ್ ಮೇಳದಲ್ಲಿ ಯುವತಿಯರು ದ್ರಾಕ್ಷಿ ತುಳಿದು ವೈನ್ ತಯಾರಿಸಿ ಸಂಭ್ರಮಿಸಿದರು.

ವೈನ್‌ಮೇಳದಲ್ಲಿ ಪಾನ ವೈವಿಧ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಇಲಾಖೆ, ಕರ್ನಾಟಕ ದ್ರಾಕ್ಷಿ ಮತ್ತು ವೈನ್ ಬೋರ್ಡ್ ಹಾಗೂ ಮಂತ್ರಿ ಮಾಲ್ ಸಹಯೋಗದಲ್ಲಿ ಎರಡು ದಿನಗಳ ದ್ರಾಕ್ಷಾರಸ ಮೇಳ ಶನಿವಾರ ಆರಂಭವಾಯಿತು.

ಮಂತ್ರಿ ಮಾಲ್‌ನಲ್ಲಿ ನಡೆದಿರುವ ಮೇಳದಲ್ಲಿ ತರಹೇವಾರಿ ವೈನ್‌ಗಳು, ವೈನ್‌ಪ್ರಿಯರನ್ನು ಆಕರ್ಷಿಸುತ್ತಿವೆ. ಪೈನಾಪಲ್‌ನಿಂದ ತಯಾರಿಸಿದ ವೈನ್ ಮೇಳದಲ್ಲಿ ಗಮನ ಸೆಳೆಯುತ್ತಿದೆ.

ಕರ್ನಾಟಕ ದ್ರಾಕ್ಷಿ ಮತ್ತು ವೈನ್ ಬೋರ್ಡ್ ವ್ಯವಸ್ಥಾಪಕ ನಿರ್ದೇಶಕ ಟಿ.ಸೋಮು ಹಾಗೂ ನಿರ್ದೇಶಕ ಎಸ್. ಅಭಿಲಾಷ ಕಾರ್ತಿಕ ಮೇಳಕ್ಕೆ ಚಾಲನೆ ನೀಡಿದರು. ಯುವತಿಯರು ಸ್ಥಳದಲ್ಲೇ ದ್ರಾಕ್ಷಿ ತುಳಿದು ಸಾಂಪ್ರದಾಯಿಕ ವೈನ್ ತಯಾರಿಸಿ ಸಂಭ್ರಮಿಸಿದರು.

ಟಿ.ಸೋಮು ಮಾತನಾಡಿ, 'ರಾಜ್ಯದ ದ್ರಾಕ್ಷಿ ಬೆಳೆಗಾರರಿಗೆ ವೈನ್ ನೀತಿ ಜಾರಿಗೊಳಿಸಿದ ಬಳಿಕ ಉತ್ತಮ ಬೆಲೆ ಸಿಗುತ್ತಿದೆ. ರಾಜ್ಯದಲ್ಲಿ 17 ವೈನ್ ಕಂಪನಿಗಳಿದ್ದು, 4 ಸಾವಿರ ಎಕರೆ ಪ್ರದೇಶದಲ್ಲಿ ದ್ರಾಕ್ಷಿ ಬೆಳೆ ಬೆಳೆಯುತ್ತಾರೆ. ರೆಡ್‌ವೈನ್, ವೈಟ್‌ವೈನ್, ರೋಸ್ ವೈನ್, ಫೈನಾಪಲ್ ವೈನ್, ಹನಿಕ್ರಷ್ ವೈನ್, ಸ್ಪಾರ್‌ಲೆಗ್ ವೈನ್ ವಿವಿಧ ಮಾದರಿಯ ವೈನ್‌ಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ ಎಂದರು.

ಮೇಳದಲ್ಲಿ ಪ್ರತೇಲಿ ವೈನ್ ಸಂಸ್ಥೆ ಬಿಯರ್ ಕ್ಯಾನ್ ಮಾದರಿಯಲ್ಲಿ ಮೊದಲ ಬಾರಿಗೆ 'ವೈನ್ ಕ್ಯಾನ್' ಪರಿಚಯಿಸಿದೆ. ಟಿನ್‌ನಲ್ಲಿ ಕ್ಲಾಸಿಕ್ ರೆಡ್, ಕ್ಲಾಸಿಕ್ ವೈಟ್, ರೋಸೆ ಮತ್ತು ಬಬ್ಲಿ ಎಂಬ ನಾಲ್ಕು ಮಾದರಿಯ ವೈನ್‌ಗಳು ದೊರೆಯುತ್ತಿವೆ. ಪ್ರತೇಲಿ ಸಂಸ್ಥೆ ಮೇಳದಲ್ಲಿ ಕ್ಯಾಬರ್ನೆಟ್ ಫ್ರಾನ್ಸಿಸ್ ಶಿರಾಜ್ ಎಂಬ ಬ್ರ್ಯಾಂಡ್ ಪರಿಚಯಿಸಿದೆ. ಬಿಡದಿ ವ್ಯಾಲಿ ಬ್ರೆವರೀಸ್ ಸಂಸ್ಥೆಯು ವೈಟ್ ಮತ್ತು ರೆಡ್ ವೈನ್ ಅನ್ನು ಏಲಕ್ಕಿ ಫ್ಲೇವರ್‌ನಲ್ಲಿ ತಯಾರಿಸಿದೆ. ದ್ರಾಕ್ಷಿ ಬಳಸಿ ಲವಂಗ ಫ್ಲೇವರ್‌ನಲ್ಲಿ ವೈನ್ ತಯಾರಿಸಲಾಗಿದೆ. ನಂದಿ ವ್ಯಾಲಿ ವೈನರಿ ಕಿಣ್ವಾ ವೈನ್ ಸಂಸ್ಥೆ ಸೀಬೇಕಾಯಿಯಿಂದ ವೈನ್ ತಯಾರಿಸಿದ್ದು, ಇದು ಕೂಡ ಮತ್ತೊಂದು ವಿಶೇಷವಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಗಡ್ಕರಿ ಕಚೇರಿಗೆ ಬೆದರಿಕೆ ಕರೆ: ರಾಜ್ಯಕ್ಕೆ ಪೊಲೀಸ್ ತಂಡ

ಮುಂಬೈ: ಅಪರಿಚಿತ ವ್ಯಕ್ತಿಯಿಂದ ಬೆದರಿಕೆ ಕರೆ ಬಂದ ಹಿನ್ನೆಲೆಯಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರ ಭದ್ರತಾ ವ್ಯವಸ್ಥೆ ಹೆಚ್ಚಿಸಲಾಗಿದೆ.

ನಾಗಪುರದ ಖಮ್ಲಾ ಪ್ರದೇಶದಲ್ಲಿರುವ ಸಾರ್ವಜನಿಕ ಸಂಪರ್ಕ ಕಚೇರಿಗೆ ಕರೆ ಮಾಡಿದ ಅಪರಿಚಿತ ವ್ಯಕ್ತಿ, ತಾನು ದಾವೂದ್ ಇಬ್ರಾಹಿಂ ತಂಡದ ಸದಸ್ಯನೆಂದು ಹೇಳಿಕೊಂಡು ₹ 100 ಕೋಟಿಗೆ ಬೇಡಿಕೆ ಇಟ್ಟಿದ್ದಾನೆ. ಗಡ್ಕರಿ ಅವರ ಕಚೇರಿ ಮತ್ತು ನಿವಾಸದ ಭದ್ರತೆ ಹೆಚ್ಚಿಸಲಾಗಿದೆ.

ಕರೆ ಮಾಡಿದಾತ ತನ್ನ ಮೊಬೈಲ್ ಸಂಖ್ಯೆ ಮತ್ತು ಕರ್ನಾಟಕದ ವಿಳಾಸ ಹಂಚಿಕೊಂಡಿದ್ದು, ಅಲ್ಲಿಗೆ ಹಣ ಕಳುಹಿಸುವಂತೆ ಹೇಳಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಆತನನ್ನು ಪೊಲೀಸರು ಗುರುತಿಸಿದ್ದು, ಕರ್ನಾಟಕಕ್ಕೆ ಪೊಲೀಸ್ ತಂಡ ಕಳುಹಿಸಲಾಗಿದೆ.

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/137/2023
ದಿನಾಂಕ : 10-01-2023
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಚಿಕ್ಕಮಗಳೂರು – ಹಾದಿಹಳ್ಳಿ ಮತ್ತು ಹಾದಿಹಳ್ಳಿ – ಬೇಲೂರು ನಡುವೆ ಹೊಸ ಮಾರ್ಗ ಯೋಜನೆಗಾಗಿ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ಕನ್‌ಸ್ಟ್ರಕ್ಷನ್ (ಇಪಿಸಿ) ಗುತ್ತಿಗೆ ಮೂಲಕ ಯೋಜನೆ ನಿರ್ವಹಣಾ ಸೇವೆಗಳನ್ನು ಒದಗಿಸಲು ಅಧಿಕೃತ ಇಂಜಿನಿಯರ್ ನೇಮಕಾತಿ ಪ್ರಸ್ತಾವನೆಗಾಗಿ ಮನವಿ. (ಟೆಂಡರ್ ಉಲ್ಲೇಖ ಸಂ. ಪಿಕೆಡಿ–ಡಿಎಂಎಂ–ಪಿಎಂಎಸ್)	ರೂ. 3,05,63,526/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 09-02-2023 ರಂದು 15:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಮುಖ್ಯ ಸಾಮಗ್ರಿ ವ್ಯವಸ್ಥಾಪಕರು / ನಿರ್ಮಾಣ ಬೆಂಗಳೂರು ದಂಡು
ಪಿಯುಬಿ/605/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23
S.W.Railways SWRRLY SWRRLY

ಜಮ್ಮು–ಕಾಶ್ಮೀರದಲ್ಲಿ ಹಿಮಕುಸಿತ: ಎಚ್ಚರಿಕೆ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಬಂಡಿಪೋರ ಜಿಲ್ಲೆಯ ಗುರೇಜ್ ಸೆಕ್ಟರ್‌ನಲ್ಲಿ ಶನಿವಾರ ಹಿಮಕುಸಿತ ಸಂಭವಿಸಿದೆ. ಮಧ್ಯಾಹ್ನದ ವೇಳೆ ಇಲ್ಲಿನ ಜುರ್ನಿಯಲ್ ಗ್ರಾಮದಲ್ಲಿ ಘಟನೆ ಸಂಭವಿಸಿದೆ. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಿಮಪಾತದ ಬೆನ್ನಲ್ಲೇ ಬಂಡಿಪೋರ ಸೇರಿದಂತೆ 12 ಜಿಲ್ಲೆಗಳಲ್ಲಿ ಮುಂದಿನ 24 ಗಂಟೆಗಳಲ್ಲಿ ಹಿಮಕುಸಿತ ಸಂಭವಿಸುವ ಎಚ್ಚರಿಕೆ ನೀಡಲಾಗಿದೆ.

fabindia
60 YEARS OF CELEBRATING INDIA
ESTABLISHED 1960
CLEARANCE SALE
FLAT 50 %OFF*
ON SELECT MERCHANDISE
10 am - 8 pm
Venue :
Sri Hari Kalyana Mantap, 30th Main, Banshankari, B.S.K. 3rd Stage, Near K.I.M.S., Bangalore - 560 085
S K R Convention Hall, #68, Thubarahalli, Kundalahalli Gate, Varthur Main Road, Bangalore - 560 066
fab family | fabindia.com | ALL COVID-19 PROTOCOLS WILL BE TAKEN CARE OF *T&C Apply
Surya Agency Private Limited

ನಿಧನ

1952 ಮತ್ತು 1957ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಶಾಸಕರಾಗಿದ್ದ ಹಾಗೂ ಕರ್ನಾಟಕ ರಾಜ್ಯ ಕೋ–ಅಪರೇಟಿವ್ ಅಪೆಕ್ಸ್ ಬ್ಯಾಂಕ್ ಲಿ. ಮಾಜಿ ಅಧ್ಯಕ್ಷರಾದ ದಿವಂಗತ ಎ.ವಿ. ನರಸಿಂಹ ರೆಡ್ಡಿಯವರ ಮಗನಾದ
ಎ.ಎನ್ ಸುಭಾಷ್ ಚಂದ್ರ
16.11.1945 - 14.01.2023
ಶ್ರೀಯುತರು ದಿನಾಂಕ:14.01.2023ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ಇವರ ಅಂತ್ಯಕ್ರಿಯೆಯನ್ನು 15 ಜನವರಿ 2023 ಮಧ್ಯಾಹ್ನ 3:00ಕ್ಕೆ, ಎ.ವಿ.ಎನ್ ಕಾರ್ನರ್, ನಂ.02, ಅಂಬಲಿಪುರ, ಹೆಚ್ ಎಸ್ ಆರ್ ಅಂಚೆ, ಬೆಂಗಳೂರು-560102 ರಲ್ಲಿ ನೆರವೇರಿಸಲಾಗುವುದು, ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು
ಪತ್ನಿ ಶ್ರೀಮತಿ ಜ್ಯೋತಿ, ಮಗಳು ಸಂಕೀರ್ತಿ ಎಸ್ ರೆಡ್ಡಿ ಮತ್ತು
- ಕುಟುಂಬಸ್ಥರು ಹಾಗೂ ಬಂಧು-ಮಿತ್ರರು

ಸೋಮಶೇಖರ್ ಮಣಿಸಲು 'ಕೈ'–'ದಳ' ತಂತ್ರ

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

• ವಿಜಯಕುಮಾರ್ ಎಸ್.ಕೆ.

ಕ್ಷೇತ್ರ ಸ್ಥಿತಿ–ಗತಿ

ಬೆಂಗಳೂರು: ಕಾಂಗ್ರೆಸ್ ತೆಕ್ಕೆಯಿಂದ ಬಿಜೆಪಿಗೆ ಹೊರಳಿರುವ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಈಗ ಪಕ್ಷಕ್ಕಿಂತ ಶಾಸಕ ಎಸ್.ಟಿ.ಸೋಮಶೇಖರ್ ಹಿಡಿತ ಹೆಚ್ಚಿದೆ. ಮೂರು ಬಾರಿ ಪೈಪೋಟಿ ನೀಡಿ ಸೋತಿರುವ ಜೆಡಿಎಸ್ ಈ ಬಾರಿ ಪುಟಿದೇಳುವ ತವಕದಲ್ಲಿದ್ದರೆ, ಕಾಂಗ್ರೆಸ್ ಟಿಕೆಟ್ ಪಡೆಯಲು ಆಕಾಂಕ್ಷಿಗಳು ಸೆಣೆಸುತ್ತಿದ್ದಾರೆ.

ಹೆಸರಿಗಷ್ಟೆ ಇದು ಯಶವಂತಪುರ ವಿಧಾನಸಭಾ ಕ್ಷೇತ್ರ. ತುಮಕೂರು ರಸ್ತೆಯ ಚಿಕ್ಕಬಿದರಕಲ್ಲಿನಿಂದ ಆರಂಭವಾಗಿ ಮೈಸೂರು ರಸ್ತೆ ದಾಟಿ ಕನಕಪುರ ರಸ್ತೆ ಕಗ್ಗಲಿಪುರ ತನಕ, ಇತ್ತ ಮೈಸೂರು ರಸ್ತೆಯಲ್ಲಿ ಬಿಡದಿವರೆಗೆ, ಮಾಗಡಿ ರಸ್ತೆಯಲ್ಲಿ ತಿಪ್ಪಗೊಂಡನಹಳ್ಳಿ ಹತ್ತಿರಕ್ಕೆ ಈ ಕ್ಷೇತ್ರ ವ್ಯಾಪಿಸಿದೆ. ನಗರ ಹಾಗೂ ಗ್ರಾಮೀಣ ಪ್ರದೇಶಕ್ಕೆ ವಿಸ್ತರಿಸಿಕೊಂಡಿರುವ ದೊಡ್ಡ ಕ್ಷೇತ್ರಗಳಲ್ಲಿ ಇದೂ ಒಂದು.

2008ಕ್ಕೂ ಮುನ್ನ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದೊಳಗಿದ್ದ ಈ ಕ್ಷೇತ್ರವು ಮರು ವಿಂಗಡಣೆ ಬಳಿಕ ಯಶವಂತಪುರ ವಿಧಾನಸಭಾ ಕ್ಷೇತ್ರವಾಯಿತು. ಒಕ್ಕಲಿಗ ಮತದಾರರ ಪ್ರಾಬಲ್ಯ ಇದ್ದು, 2008ರ ಚುನಾವಣೆಯಲ್ಲಿ ಶೋಭಾ ಕರಂದ್ಲಾಜೆ ವಿರುದ್ಧ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಸೋಮಶೇಖರ್ ಸೋತಿದ್ದರು. 2013ರ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಸೋಮಶೇಖರ್ ಮತ್ತೆ ಸೋಲು ನೋಡಿಲ್ಲ. 2018ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದು, ಆಪರೇಷನ್ ಕಮಲಕ್ಕೆ ಒಳಗಾದರು. ಬಿಜೆಪಿ ಸೇರಿ ಸಚಿವರೂ ಆದರು. ಬಳಿಕ 2019ರ ಆಗಸ್ಟ್‌ನಲ್ಲಿ ನಡೆದ ಉಪ ಚುನಾವಣೆಯಲ್ಲೂ ಗೆಲುವು ಕಂಡರು.

ಇಲ್ಲಿ ಎಸ್.ಟಿ.ಸೋಮಶೇಖರ್ ಅವರಿಗೆ ಮೂರು ಬಾರಿಯೂ ಪ್ರಬಲ ಪೈಪೋಟಿ ನೀಡಿರುವುದು ಜೆಡಿಎಸ್‌ನ ಟಿ.ಎನ್.ಜವರಾಯಿಗೌಡ. ಈ ಬಾರಿಯೂ ಅವರನ್ನೇ ಕಣಕ್ಕಿಳಿಸಲು ಅವರ ಬೆಂಬಲಿಗರು ಸಜ್ಜಾಗಿದ್ದಾರೆ. ಸತತ ಸೋಲಿನಿಂದ ಬೇಸರಗೊಂಡಿರುವ ಅವರನ್ನು ಮತ್ತೊಮ್ಮೆ ಸ್ಪರ್ಧೆಗಿಳಿಸಲು ಕಾರ್ಯಕರ್ತರು ಉತ್ಸುಕರಾಗಿದ್ದಾರೆ. ಅನುಕಂಪದ ಮತಗಳು ದೊರಕುವ ವಿಶ್ವಾಸದಲ್ಲಿ ಕಾರ್ಯಕರ್ತರಿದ್ದಾರೆ.

ಇನ್ನೊಂದೆಡೆ ಚಿತ್ರನಟಿ ಭಾವನಾ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಲು ಆಕಾಂಕ್ಷಿಯಾಗಿದ್ದಾರೆ. ಟಿಕೆಟ್ ಬಯಸಿ ಅರ್ಜಿಯನ್ನೂ ಕೆಪಿಸಿಸಿಗೆ ಸಲ್ಲಿಸಿದ್ದಾರೆ. ಕ್ಷೇತ್ರದಲ್ಲೂ ಓಡಾಟ ನಡೆಸುತ್ತಿದ್ದಾರೆ. ಬೆಂಗಳೂರು ಉತ್ತರ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಾಜಕುಮಾರ್ ಅವರ ಮಗ ಕೃಷ್ಣಂ ರಾಜು, ಮುಖಂಡ ಬಾಲರಾಜುಗೌಡ ಕೂಡ ಕಾಂಗ್ರೆಸ್ ಟಿಕೆಟ್ ಬಯಸಿದ್ದಾರೆ. ಕಾಂಗ್ರೆಸ್ ತೊರೆದು ಬಿಜೆಪಿ ಸೇರಿರುವ ಎಸ್.ಟಿ.ಸೋಮಶೇಖರ್ ಸೋಲಿಸಲು ಇರುವ ತಂತ್ರಗಳನ್ನು ಕಾಂಗ್ರೆಸ್ ಹುಡುಕುತ್ತಿದೆ. ಅಲ್ಲದೇ, ಸೋಮಶೇಖರ್ ಅವರನ್ನೇ ವಾಪಸ್ ಕರೆತರಲು ಸಾಧ್ಯವೇ ಎಂಬ ಆಲೋಚನೆಯಲ್ಲೂ ಕಾಂಗ್ರೆಸ್ ಇದೆ. ಇನ್ನು ಆಮ್ ಆದ್ಮಿ ಪಕ್ಷದಿಂದ(ಎಎಪಿ) ಶಶಿಧರ್ ಆರಾಧ್ಯ ಅಭ್ಯರ್ಥಿಯಾಗುವ ಸಾಧ್ಯತೆ ಇದೆ. 2018ರ ಚುನಾವಣೆಯಲ್ಲಿ ಅವರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಯಶವಂತಪುರ

ಎಸ್.ಟಿ.ಸೋಮಶೇಖರ್
ಹಾಲಿ ಶಾಸಕ (ಬಿಜೆಪಿ)

2019ರ ಉಪ ಚುನಾವಣೆ
ಗೆಲುವು– ಎಸ್.ಟಿ.ಸೋಮಶೇಖರ್ (ಬಿಜೆಪಿ)– **1,44,722** ಮತಗಳು
ಟಿ.ಎನ್.ಜವರಾಯಿಗೌಡ(ಜೆಡಿಎಸ್)–**1,17,023**
ಪಿ.ನಾಗರಾಜ್(ಕಾಂಗ್ರೆಸ್)–**15,714**

ಹಾಲಿ ಮತದಾರರ ವಿವರ
2,64,583 ಪುರುಷರು
2,51,075 ಮಹಿಳೆಯರು
58 ತೃತೀಯ ಲಿಂಗಿಗಳು
5,15,716 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	1,15,273	1,20,380	56,561
ಬಿಜೆಪಿ	59,308	12,747	57,643
ಜೆಡಿಎಸ್	1,04,562	91,280	32,947

ಸಿಬ್ಬಂದಿ ನಿವೃತ್ತಿ ವೇತನ ಪಾವತಿ ಬಳಕೆದಾರರ ಹೆಗಲಿಗೆ? ₹ 3,353 ಕೋಟಿ ಸಂಗ್ರಹಕ್ಕೆ ಶಿಫಾರಸು

ವಿದ್ಯುತ್ ಗ್ರಾಹಕರಿಗೆ ಮತ್ತೆ ಹೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ನಿಗಮಗಳ ಸಿಬ್ಬಂದಿಯ ನಿವೃತ್ತಿ ವೇತನ ಪಾವತಿಯ ಹೊರೆಯನ್ನು ರಾಜ್ಯದ ಗ್ರಾಹಕರ ಮೇಲೆ ಹೇರಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಆದೇಶಕ್ಕೆ ಗೃಹ, ವಾಣಿಜ್ಯ ಹಾಗೂ ಕೈಗಾರಿಕೆಗಳ ಬಳಕೆದಾರರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

'ದರ ಪರಿಷ್ಕರಣೆಯ ಅಂಶಗಳು ಜಾರಿಯಾದರೆ ಉದ್ದಿಮೆಗಳು ಬಾಗಿಲು ಬಂದ್ ಮಾಡುವ ಸ್ಥಿತಿ ಬರಲಿದೆ. ವಿದ್ಯುತ್ ಸರಬರಾಜು ಕಂಪನಿಗಳ ನಷ್ಟ ಸರಿದೂಗಿಸಿಕೊಳ್ಳಲು ಬಳಕೆದಾರರಿಗೆ ಬರೆ ಹಾಕುವುದು ಎಷ್ಟು ಸರಿ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಬಿ.ವಿ. ಗೋಪಾಲರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಪ್ರಶ್ನಿಸಿದರು.

'ಹೊಸ ಆದೇಶದಂತೆ ವಾರ್ಷಿಕ ಮೂರು ಕಂತುಗಳಲ್ಲಿ ₹ 3,353 ಕೋಟಿಯನ್ನು ಗ್ರಾಹಕರೇ ಪಾವತಿಸುವ ಸ್ಥಿತಿ ಬರಲಿದೆ. ತಣ್ಣೀರುಬಾವಿ ವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ₹ 1,657 ಕೋಟಿಯನ್ನು ಗ್ರಾಹಕರ ಮೂಲಕ ಸಂಗ್ರಹಿಸಲು ಆದೇಶಿಸಿದೆ. ರಾಜ್ಯದ ವಿದ್ಯುತ್ ಬಳಕೆದಾರರು ₹ 1,500 ಕೋಟಿ ಹಣ ಪಾವತಿಸಬೇಕಾಗುತ್ತದೆ' ಎಂದು ಹೇಳಿದರು.

'ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗದ ಎದುರು ಎಲ್ಲಾ ವಿದ್ಯುತ್ ಸರಬರಾಜು ಕಂಪ ನಿಗಳು 4 ಪ್ರಸ್ತಾವ ಸಲ್ಲಿಸಿವೆ. ಆ ಪ್ರಸ್ತಾವಕ್ಕೂ ಅನುಮತಿ ಸಿಕ್ಕಿದರೆ ಬಳಕೆ ದಾರರು ದುಪ್ಪಟ್ಟು ಶುಲ್ಕ ಪಾವತಿ ಸಬೇಕಿದೆ. ಬೇಡಿಕೆ, ನಿಗದಿತ ಶುಲ್ಕ ಹೆಚ್ಚಿಸಲು ಕೆಇಆರ್‌ಸಿಗೆ ಪ್ರಸ್ತಾವ ಸಲ್ಲಿ ಸಲಾಗಿದೆ. ಉದಾಹರಣೆಗೆ 100 ಕೆ.ವಿಗೆ ₹ 30 ಸಾವಿರ ಪಾವತಿಸು ತ್ತಿದ್ದವರು ₹ 60 ಸಾವಿರ ಶುಲ್ಕ ಪಾವತಿಸುವ ಸಂದರ್ಭ ಎದುರಾಗಲಿದೆ. ಬೇಡಿಕೆ ಯಷ್ಟು ವಿದ್ಯುತ್ ಬಳಸದಿದ್ದರೂ ಹೆಚ್ಚಿನ ಶುಲ್ಕ ಪಾವತಿಸುವುದು ಅನಿವಾರ್ಯ ಆಗಲಿದೆ. ಮೊದಲೇ ನಷ್ಟದಲ್ಲಿರುವ ಕೈಗಾರಿಕೆಗಳು ಮತ್ತಷ್ಟು ಸಂಕಷ್ಟ ಎದುರಿಸಲಿವೆ. ನಿಗದಿತ ಶುಲ್ಕ ಹೆಚ್ಚಿಸಿದರೆ ಸಾಮಾನ್ಯ ಗ್ರಾಹಕನಿಗೆ ತೊಂದರೆಯಾಗಲಿದೆ' ಎಂದು ಗೋಪಾಲರೆಡ್ಡಿ ಹೇಳಿದರು.

ಸಣ್ಣ ಕೈಗಾರಿಕೆಗೆ ಜಾಗದ ಸಮಸ್ಯೆ

'ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅನುಮತಿ ನೀಡಲು ಅವೈಜ್ಞಾನಿಕವಾಗಿ ಶುಲ್ಕ ನಿಗದಿ ಪಡಿಸುತ್ತಿದ್ದು, ಇದರಿಂದ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಿಗೆ ತೊಂದರೆ ಆಗುತ್ತಿದೆ' ಎಂದು ಎಫ್‌ಕೆಸಿಸಿಐನ ಕೈಗಾರಿಕೆ ಸಮಿತಿ ಅಧ್ಯಕ್ಷ ಶಶಿಧರ್ ಹೇಳಿದರು.

'ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಜಾಗ ಸಿಗುತ್ತಿಲ್ಲ. ಬ್ಯಾಂಕ್‌ಗಳೂ ಸಾಲ ಸೌಲಭ್ಯ ನೀಡುತ್ತಿಲ್ಲ. ಇದರಿಂದ ಕೈಗಾರಿಕಾ ವಲಯ ತೊಂದರೆ ಅನುಭವಿಸುತ್ತಿದೆ. ಆಸ್ತಿ ತೆರಿಗೆ ಹೆಚ್ಚಳದಿಂದಲೂ ತೊಂದರೆಯಾಗಿದೆ' ಎಂದರು.

'ವಿಶೇಷ ಪ್ರೋತ್ಸಾಹ ಯೋಜನೆ ವಾಪಸ್ ತೆಗೆದುಕೊಳ್ಳುವುದು ಹಾಗೂ ಗೃಹ ಬಳಕೆದಾರರಿಗೆ ನೀಡಿದ್ದ ಸೋಲಾರ್ ವಾಟರ್ ರಿಯಾಯಿತಿ ಯೋಜನೆ ಹಿಂಪಡೆಯುವ ಅಂಶಗಳು ಪ್ರಸ್ತಾವದಲ್ಲಿವೆ. ಇದಕ್ಕೆ ನಮ್ಮ ವಿರೋಧವಿದೆ' ಎಂದರು.

'ಉತ್ಪಾದನಾ, ಸೇವಾ ವಲಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಉತ್ಪಾದನಾ ಘಟಕಗಳು 15,147 (ಎಚ್‌ಟಿ) ಹಾಗೂ 5,35,220 ಸಣ್ಣ ಕೈಗಾರಿಕಾ ಘಟಕಗಳಿವೆ. ರಾಜ್ಯದ ವಿದ್ಯುತ್ ಬಳಕೆಯಲ್ಲಿ ಶೇ 3.20ರಷ್ಟನ್ನು ಸಣ್ಣ ಕೈಗಾರಿಕೆಗಳು ಬಳಸಿ, 40 ಲಕ್ಷ ಮಂದಿಗೆ ಉದ್ಯೋಗ ನೀಡಿವೆ. ಎಚ್.ಟಿ ಬಳಕೆದಾರರು ಶೇ 16.30ರಷ್ಟು ವಿದ್ಯುತ್ ಬಳಸುತ್ತಿದ್ದಾರೆ. ದರ ಏರಿಕೆಯಿಂದ ಉದ್ದಿಮೆ ಮುಚ್ಚುವ ಸ್ಥಿತಿ ಬರಲಿದೆ' ಎಂದು ಹೇಳಿದರು.

'ಉಚಿತ ವಿದ್ಯುತ್ ಬೇಕಿಲ್ಲ. ಕಡಿಮೆ ಬೆಲೆಯಲ್ಲಿ ನಿರಂತರ ಹಾಗೂ ಗುಣಮಟ್ಟ ವಿದ್ಯುತ್ ಪೂರೈಸಬೇಕು. ರಾಜ್ಯ ಸರ್ಕಾರದ ಈ ನಡೆಯಿಂದ ವಿದೇಶಿ ಕಂಪನಿಗಳು ಬಂಡವಾಳ ಹೂಡಿಕೆಗೆ ಹಿಂದೇಟು ಹಾಕಲಿವೆ' ಎಂದು ಸಂಸ್ಥೆಯ ಎಂ.ಜಿ.ಪ್ರಭಾಕರ್ ಹೇಳಿದರು.

ಒಳ ಮೀಸಲಾತಿ ವಿರುದ್ಧ ರ‍್ಯಾಲಿ: ಸಂಘಟಕರ ಮೇಲೆ ಎಫ್‌ಐಆರ್

ಬೆಂಗಳೂರು: ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಹಾಗೂ ಒಳ ಮೀಸಲಾತಿ ವಿರೋಧಿಸಿ ನಗರದಲ್ಲಿ ಪ್ರತಿಭಟನಾ ರ‍್ಯಾಲಿ ನಡೆಸಿದ್ದ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಪದಾಧಿಕಾರಿಗಳ ವಿರುದ್ಧ ಉಪ್ಪಾರಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಹೈಕೋರ್ಟ್ ಆದೇಶಗಳನ್ನು ಉಲ್ಲಂಘಿಸಿ ಜ. 10ರಂದು ಪ್ರತಿಭಟನೆ ಹಾಗೂ ಮೆರವಣಿಗೆ ನಡೆಸಲಾಗಿದೆ. ಈ ಸಂಬಂಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಒಕ್ಕೂಟದ ಅಧ್ಯಕ್ಷ ಎಚ್. ರವಿ ಮಾಕಳಿ, ಕಾರ್ಯದರ್ಶಿ ಅನಂತ್ ನಾಯಕ್, ದಾನಪಾಲ್, ಮಣಿಕಂಠ ರಾಥೋಡ್, ರಾಘವೇಂದ್ರ ನಾಯಕ್, ಕಿರಣ್ ಕುಮಾರ್ ಕೊಟ್ಟಗೆರೆ, ಆನಂದ್ ಏಕಲವ್ಯ, ಆದರ್ಶ ಯಲ್ಲಪ್ಪ ಹಾಗೂ ಇತರರನ್ನು ಆರೋಪಿಗಳನ್ನಾಗಿ ಮಾಡಲಾಗಿದೆ' ಎಂದು ತಿಳಿಸಿವೆ.

'ಒಳ ಮೀಸಲಾತಿ ಪರ ಹಾಗೂ ವಿರೋಧವಾಗಿ ಎರಡು ಬಣಗಳು ಪ್ರತಿಭಟನೆ ಹಮ್ಮಿಕೊಳ್ಳಲು ಅನುಮತಿ ಕೋರಿದ್ದವು. ಸ್ವಾತಂತ್ರ್ಯ ಉದ್ಯಾನದಲ್ಲಷ್ಟೇ ಪ್ರತಿಭಟನೆ ಮಾಡುವಂತೆ ಸೂಚಿಸಿ ಹೈಕೋರ್ಟ್ ಆದೇಶವನ್ನು ಪಾಲಿಸುವಂತೆ ಎಚ್ಚರಿಸಿ ಅನುಮತಿ ನೀಡಲಾಗಿತ್ತು. ಅನುಮತಿ ನಿಯಮ ಉಲ್ಲಂಘಿಸಿದ್ದ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಪದಾಧಿಕಾರಿಗಳು, ಮೆಜೆಸ್ಟಿಕ್‌ನ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಿದ್ದರು. ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿ, ಸಾರ್ವಜನಿಕರಿಗೆ ತೊಂದರೆಯನ್ನುಂಟು ಮಾಡಿದ್ದರು. ಕಾನೂನು ಸುವ್ಯವಸ್ಥೆಗೂ ಧಕ್ಕೆ ತಂದಿದ್ದರು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ವಿಮಾನದಲ್ಲೇ ಪ್ರಯಾಣಿಕ ಸಾವು

ಇಂದೋರ್(ಪಿಟಿಐ): ಪ್ರಯಾಣಿಕರೊಬ್ಬರ ಆರೋಗ್ಯ ಹದಗೆಟ್ಟ ಹಿನ್ನೆಲೆಯಲ್ಲಿ ಶನಿವಾರ ಸಂಜೆ ಮಧುರೈನಿಂದ ದೆಹಲಿಗೆ ತೆರಳುತ್ತಿದ್ದ ಇಂಡಿಗೋ ವಿಮಾನವನ್ನು ಇಂದೋರ್ ವಿಮಾನ ನಿಲ್ದಾಣದಲ್ಲಿ ಇಳಿಸಲಾಯಿತು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಂತರ, ಪ್ರಯಾಣಿಕನನ್ನು ನಿಲ್ದಾಣ ಬಳಿಯ ಆಸ್ಪತ್ರೆಗೆ ಕರೆದೊಯ್ಯಲಾಯಿತು, ಅಲ್ಲಿ ವೈದ್ಯರು ಅವರು ಮೃತಪಟ್ಟಿರುವುದಾಗಿ ಘೋಷಿಸಿದರು ಎಂದು ಹೇಳಿದರು. ಪ್ರಯಾಣದ ಮಧ್ಯದಲ್ಲಿ ನೊಯ್ಡಾದ ಅತುಲ್ ಗುಪ್ತಾ (60) ಅವರ ಬಾಯಿಯಿಂದ ರಕ್ತಸ್ರಾವವಾಗಿ, ಆರೋಗ್ಯ ಸ್ಥಿತಿ ಹದಗೆಟ್ಟಿತ್ತು.

ಶಾಸಕ ಕೃಷ್ಣ ಬೈರೇಗೌಡ, ರಾಶಿಪೂಜೆ ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಗ್ರಾಮೀಣ ಸೊಗಡಿನ ಸಂಕ್ರಾಂತಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ಅಲಂಕೃತ ಎತ್ತುಗಳು, ರಾಶಿ ಪೂಜೆ, ಚಿತ್ತಾರದ ರಂಗೋಲಿ, ಬಾನಂಗಳದಲ್ಲಿ ಹಾರಾಡಿದ ಗಾಳಿಪಟ, ಹಳ್ಳಿ ಆಟಗಳು, ಜಾನಪದ ಕಲೆಗಳ ಅನಾವರಣ, ಕರಕುಶಲ ವಸ್ತುಗಳು, ಸಿರಿಧಾನ್ಯಗಳ ಉತ್ಪನ್ನಗಳು ಮತ್ತು ತಿನಿಸುಗಳ ಮಾರಾಟ, ಅಲಂಕೃತ ಎತ್ತಿನಬಂಡಿಯಲ್ಲಿ ಸವಾರಿಮಾಡಿ ಖುಷಿಪಟ್ಟ ನಾಗರಿಕರು...

ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕೆಬಿಜಿ ತಂಡವು ಶಾಸಕ ಕೃಷ್ಣಬೈರೇಗೌಡ ನೇತೃತ್ವದಲ್ಲಿ ಜಕ್ಕೂರಿನ ಅರ್ಕಾವತಿ ಬಡಾವಣೆಯಲ್ಲಿ ಆಯೋಜಿಸಿದ್ದ 'ಸುಗ್ಗಿ-ಹುಗ್ಗಿ' ಆಚರಣೆಯ ದೃಶ್ಯಗಳಿವು.

ಮಕ್ಕಳು ಮತ್ತು ಪೋಷಕರು ವಿವಿಧ ಆಕೃತಿಯ ಗಾಳಿಪಟಗಳನ್ನು ಹಾರಿಸಿ ಖುಷಿಪಟ್ಟರು. ಪೊಂಗಲ್, ಕಡಲೆಕಾಯಿ, ಅವರೆಕಾಯಿ, ಕಬ್ಬಿನ ಜಲ್ಲೆ ಹಾಗೂ ಸಿರಿಧಾನ್ಯಗಳಿಂದ ತಯಾರಿಸಿದ ಖಾದ್ಯ ಸವಿದರು.

ಕೃಷಿ ಇಲಾಖೆ ವತಿಯಿಂದ ಏರ್ಪಡಿಸಿದ್ದ ರಾಶಿಪೂಜೆ ಪ್ರದರ್ಶನ ಆಕರ್ಷಣೀಯವಾಗಿತ್ತು.

ಶಾಸಕ ಕೃಷ್ಣ ಬೈರೇಗೌಡ, ಸಂಕ್ರಾಂತಿ ಹಬ್ಬವು ಗ್ರಾಮೀಣ ಸೊಗಡಿನ ಸಂಸ್ಕೃತಿಯ ಸಂಕೇತ ಎಂದರು.

ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್.ಶ್ರೀನಿವಾಸಯ್ಯ, ದಾನೇಗೌಡ, ಎನ್.ಕೆ.ಮಹೇಶ್ ಕುಮಾರ್, ಪಿ.ವಿ.ಮಂಜುನಾಥಬಾಬು ಇದ್ದರು.

ಚಲನಚಿತ್ರ ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ಅಭಿಮತ

'ಚಲನಚಿತ್ರದಲ್ಲಿ ಗೀತೆಗಳನ್ನು ತುರುಕಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್‌ಕುಮಾರ್ ಅವರ ಕಾಲದ ಚಲನಚಿತ್ರಗಳಲ್ಲಿ ಪಾತ್ರ, ಸನ್ನಿವೇಶಕ್ಕೆ ತಕ್ಕಂತೆ ಗೀತೆಗಳನ್ನು ಅಳವಡಿಸುತ್ತಿದ್ದರು. ಆದರೆ, ಇತ್ತೀಚಿನ ವರ್ಷಗಳಲ್ಲಿನ ಚಲನಚಿತ್ರಗಳಲ್ಲಿ ಹಾಡುಗಳನ್ನು ತುರುಕಲಾಗುತ್ತಿದೆ' ಎಂದು ನಟ, ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ತಿಳಿಸಿದರು.

ಚಿತ್ರ ಪ್ರಕಾಶನ ನಗರದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ರಾಜ್‌ಕುಮಾರ್ ಅವರ ಚಿತ್ರಗಳ ಸಮಗ್ರ ಗೀತಮಾಲಿಕೆ 'ಗಂಧರ್ವಗಾನ' ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು. 'ರಾಜ್‌ಕುಮಾರ್ ಅವರಿಗೆ ಅವರ ತಂದೆಯವರು ಸಂಗೀತ ಅಭ್ಯಾಸಕ್ಕಾಗಿ ಮೇಷ್ಟ್ರು ಬಳಿ ಕಳಿಸುವ ವೇಳೆ ಚಡ್ಡಿ ಹಾಕಿಸಿ, ಕಳುಹಿಸುತ್ತಿದ್ದರಂತೆ. ರಾಜ್ ಅವರು ತಪ್ಪು ಮಾಡಿದ ಪ್ರತಿ ಬಾರಿಯೂ ತೊಡೆಯ ಮೇಲೆ ಗುರುಗಳಿಂದ ಏಟು ಬೀಳುತ್ತಿತ್ತು. ಇದರಿಂದ ತಪ್ಪು ಮಾಡದೆ, ಸಂಗೀತ ಕಲಿಯಲಿ ಎಂಬುದು ಅವರ ತಂದೆಯ ಆಶಯವಾಗಿತ್ತು. ಏಟು ಬೀಳದ ದಿನ ಮಗನನ್ನು ತಬ್ಬಿ ಮುದ್ದಾಡುತ್ತಿದ್ದರಂತೆ' ಎಂದು ತಿಳಿಸಿದರು.

ಪುಸ್ತಕದ ಬಗ್ಗೆ ಮಾತನಾಡಿದ ಸಾಹಿತಿ ಮಂಜುನಾಥ್ ಅಜ್ಜಂಪುರ, 'ಈ ಪುಸ್ತಕವನ್ನು ಓದಿದಾಗ ಹಿನ್ನೆಲೆ ಗಾಯನದಲ್ಲಿ ಹಾಡುಗಳನ್ನು ಕೇಳಿದ ಅನುಭವ ನೀಡಲಿದೆ. ರಾಜಕುಮಾರ್ ಅಭಿನಯದ ಎಲ್ಲ ಸಿನಿಮಾಗಳ ಹಾಡುಗಳ ಹಿನ್ನೆಲೆ ತಿಳಿದು, ಟಿಪ್ಪಣಿ ಬರೆಯಲಾಗಿದೆ. ಅದರ ಹಿಂದೆ ದಾಸಸಾಹಿತ್ಯ, ವಚನ, ಕವಿಗಳ ಅನುಭವ ಹೀಗೆ ಹತ್ತಾರು ಮಾಹಿತಿ ಸಿಗಲಿದೆ. ರಾಜ್ ಅವರ ಜೀವನ ಸಂಸ್ಕೃತಿ, ಗಾಯನ ಸಂಸ್ಕೃತಿ ಮತ್ತು ಅಪಾರವಾದ ನೆನಪಿವ ಶಕ್ತಿ ಎಂತಹದ್ದು ಎಂಬುದನ್ನು ಅರಿಯಲು ಸಾಧ್ಯ' ಎಂದರು.

ಸಂಗೀತ ನಿರ್ದೇಶಕ ವಿ. ಮನೋಹರ್, 'ರಾಜ್‌ಕುಮಾರ್ ಅವರ ಚಿತ್ರಗಳ ಹಾಡುಗಳ ಕುರಿತು ಸುಮಾರು 6 ವರ್ಷಗಳ ಕಾಲ ಸಂಶೋಧನೆ ಮಾಡಿ, ಈ ಪುಸ್ತಕ ಬರೆದಿದ್ದಾರೆ. ಎಲ್ಲಿಯೂ ಬೇಸರವಾಗದಂತೆ ಓದಿಸಿಕೊಂಡು ಹೋಗಲಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ರಾಘವೇಂದ್ರ ರಾಜ್‌ಕುಮಾರ್ ಅವರು 'ಗಂಧರ್ವಗಾನ' ಪುಸ್ತಕ ಬಿಡುಗಡೆ ಮಾಡಿದರು. ಬೀ.ಸಿ. ಜಗನ್ನಾಥ್ ಜೋಯಿಸ್, ಮಂಜುನಾಥ ಅಜ್ಜಂಪುರ ಹಾಗೂ ವಿ. ಮನೋಹರ್ ಇದ್ದಾರೆ.

ಸುದ್ದಿ 2 ನಿಮಿಷ

'32 ಲಕ್ಷ ಮನೆಗಳ ಮೇಲೆ ಬಿಜೆಪಿ ಬಾವುಟ'

ಬೆಂಗಳೂರು: ಜನವರಿ 2ರಿಂದ 12ರವರೆಗೆ ನಡೆದ ಬೂತ್ ವಿಜಯ ಅಭಿಯಾನದಲ್ಲಿ ರಾಜ್ಯದ 32 ಲಕ್ಷ ಮನೆಗಳ ಮೇಲೆ ಬಿಜೆಪಿ ಬಾವುಟ ಹಾರಿಸಲಾಗಿದೆ ಎಂದು ಅಭಿಯಾನದ ಸಂಚಾಲಕರೂ ಆಗಿರುವ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಭಿಯಾನದ ಅವಧಿಯಲ್ಲಿ 51,872 ಮತಗಟ್ಟೆ ಹಂತದ ಸಮಿತಿ ರಚಿಸಿದ್ದು, 13.21 ಲಕ್ಷ 'ಪೇಜ್ ಪ್ರಮುಖ'ರನ್ನು ನೇಮಕ ಮಾಡಲಾಗಿದೆ. ಕಾರ್ಯಕರ್ತರಿಗಾಗಿ 50,260 ವಾಟ್ಸ್ ಆ್ಯಪ್ ಗುಂಪುಗಳನ್ನು ರಚಿಸಲಾಗಿದೆ. 15.93 ಲಕ್ಷ ಕಾರ್ಯಕರ್ತರು ಅಭಿಯಾನದಲ್ಲಿ ಪಾಲ್ಗೊಂಡಿದ್ದಾರೆ' ಎಂದರು.

ಇನ್ನು ಕೆಲವು ದಿನಗಳಲ್ಲಿ ಒಟ್ಟು 50 ಲಕ್ಷ ಮನೆಗಳ ಮೇಲೆ ಪಕ್ಷದ ಬಾವುಟ ಹಾರಿಸುವ ಗುರಿ ಸಾಧಿಸಲಾಗುವುದು. ಬೂತ್ ವಿಜಯ ಅಭಿಯಾನವೇ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಕಾರಣವಾಗಲಿದೆ ಎಂದು ಹೇಳಿದರು.

ಅಭಿಯಾನದ ಸಹ ಸಂಚಾಲಕರಾಗಿರುವ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಮಹೇಶ್ ಟೆಂಗಿನಕಾಯಿ ಮಾತನಾಡಿ, 'ಪ್ರತಿ ಮತಗಟ್ಟೆ ಹಂತದಲ್ಲೂ ಬಿಜೆಪಿ ಗೆಲುವು ಸಾಧಿಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರಿ ನೀಡಿದ್ದಾರೆ. ಈ ಅಭಿಯಾನದ ಮೂಲಕ ರಾಜ್ಯದ ಮನೆ, ಮನೆಯನ್ನೂ ತಲುಪುವ ಪ್ರಯತ್ನ ಆರಂಭವಾಗಿದೆ' ಎಂದರು.

ಜನರ ದಿಕ್ಕು ತಪ್ಪಿಸುತ್ತಿರುವ ಕಾಂಗ್ರೆಸ್: ಬೊಮ್ಮಾಯಿ ಆರೋಪ

ಬೆಂಗಳೂರು: ಉಚಿತ ವಿದ್ಯುತ್ ಯೋಜನೆ ಅನುಷ್ಠಾನ ಅಸಾಧ್ಯವೆಂದು ತಿಳಿದಿದ್ದರೂ, ಕಾಂಗ್ರೆಸ್ ಪಕ್ಷವು ರಾಜ್ಯದ ಜನರನ್ನು ದಿಕ್ಕು ತಪ್ಪಿಸುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪ್ರತಿ ಕುಟುಂಬಕ್ಕೆ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ಪೂರೈಸುವುದಾಗಿ ಕಾಂಗ್ರೆಸ್ ಭರವಸೆ ನೀಡಿರುವ ಕುರಿತು ಶನಿವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, 'ಹಿಂದೆ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ವಿದ್ಯುತ್ ಸರಬರಾಜು ಕಂಪನಿಗಳನ್ನು ಸಾಲದ ಸುಳಿಗೆ ತಳ್ಳಿದ್ದರು. ಈಗ ಅಧಿಕಾರಕ್ಕೆ ಬರುವುದಿಲ್ಲ ಎಂದು ಗೊತ್ತಿದ್ದರೂ ಭರವಸೆ ನೀಡುತ್ತಿದ್ದಾರೆ' ಎಂದರು.

ಕಾಂಗ್ರೆಸ್ ಸರ್ಕಾರ ಎಸ್ಕಾಂಗಳನ್ನು ಸಾಲದ ಶೂಲಕ್ಕೆ ಸಿಲುಕಿಸಿತ್ತು. ತಮ್ಮ ಸರ್ಕಾರವು ನೇರವಾಗಿ ₹ 8,000 ಕೋಟಿಯನ್ನು ಎಸ್ಕಾಂಗಳಿಗೆ ನೀಡಿದೆ. ₹ 13,000 ಕೋಟಿ ಸಾಲಕ್ಕೆ ಖಾತರಿ ನೀಡಿದೆ. ಒಟ್ಟು ₹ 21,000 ಕೋಟಿ ಒದಗಿಸಿದೆ. ಇಲ್ಲವಾದರೆ ಇಂಧನ ಇಲಾಖೆ ಮತ್ತು ಎಸ್ಕಾಂಗಳು ಜೀವಂತವಾಗಿರುತ್ತಿರಲಿಲ್ಲ ಎಂದು ಹೇಳಿದರು.

ಕಾಂಗ್ರೆಸ್ ನೀಡಿರುವ ಉಚಿತ ವಿದ್ಯುತ್ ಪೂರೈಕೆ ಯೋಜನೆ ಅನುಷ್ಠಾನ ಸಾಧ್ಯವಿಲ್ಲ. ಅದಕ್ಕೆ ₹ 9,000 ಕೋಟಿ ಬೇಕಾಗುತ್ತದೆ. ಉಚಿತ ವಿದ್ಯುತ್‌ಗೆ ಅಷ್ಟು ಅನುದಾನ ಒದಗಿಸಿದರೆ ಸಾಮಾಜಿಕ ವಲಯದಲ್ಲಿ ಕಡಿತ ಮಾಡಬೇಕಾಗುತ್ತದೆ. ಈ ಸತ್ಯ ಗೊತ್ತಿದ್ದರೂ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಸಂಕ್ರಾಂತಿ ಸಂಭ್ರಮ

ಸಂಕ್ರಾಂತಿ ಹಬ್ಬದ ಮುನ್ನಾ ದಿನವಾದ ಶನಿವಾರ ನಗರದ ಕೆ.ಆರ್.ಮಾರುಕಟ್ಟೆಯಲ್ಲಿ ಹೂವಿನ ಮಾರಾಟ ಭರ್ಜರಿಯಾಗಿ ನಡೆಯಿತು. ಪ್ರಜಾವಾಣಿ ಚಿತ್ರ/ ಕಿಶೋರ್‌ಕುಮಾರ್ ಬೋಳಾರ್

ನಗರದ ಗಾಂಧಿಬಜಾರ್‌ನ ಮಳಿಗೆಯೊಂದರಲ್ಲಿ ಶನಿವಾರ ಎಳ್ಳು, ಬೆಲ್ಲ ಹಾಗೂ ಸಕ್ಕರೆ ಅಚ್ಚುಗಳ ಖರೀದಿಯಲ್ಲಿ ತೊಡಗಿದ್ದ ಮಹಿಳೆಯರು
ಪ್ರಜಾವಾಣಿ ಚಿತ್ರ/ ರಂಜು ಪಿ.

ಮಲ್ಲೇಶ್ವರಂ 8ನೇ ಅಡ್ಡರಸ್ತೆಯಲ್ಲಿ ಜನರು ಸಂಕ್ರಾಂತಿ ಹಬ್ಬಕ್ಕೆ ಕಬ್ಬು ಖರೀದಿಸಿದರು
ಪ್ರಜಾವಾಣಿ ಚಿತ್ರ / ಎಂ.ಎಸ್.ಮಂಜುನಾಥ್

ಕನಕಪುರ ರಸ್ತೆಯ ರೋಹನ್ ಆಕೃತಿ ಅಪಾರ್ಟ್‌ಮೆಂಟ್ ಸಮುಚ್ಚಯದವರು ಸಂಕ್ರಾಂತಿ ಹಬ್ಬದ ನಿಮಿತ್ತ 'ಸುಗ್ಗಿ ಸಂಜೆ' ಕಾರ್ಯಕ್ರಮವನ್ನು ಶನಿವಾರ ಏರ್ಪಡಿಸಿದ್ದರು. ಮನರಂಜನಾ ಕ್ರೀಡೆಗಳನ್ನು ಆಡಿ, ವಿವಿಧ ಪ್ರತಿಭಾ ಕಾರ್ಯಕ್ರಮಗಳನ್ನು ನಡೆಸಿದರು

ಬಿಬಿಎಂಪಿಯಲ್ಲಿ ಟೆಂಡರ್ ಆಗದ 40 ಸಾವಿರಕ್ಕೂ ಹೆಚ್ಚು ಜಾಬ್‌ಕೋಡ್ ವಜಾ

₹8 ಸಾವಿರ ಕೋಟಿ ಮೌಲ್ಯದ ಜಾಬ್‌ಕೋಡ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ ಟೆಂಡರ್ ಆಗದ 40 ಸಾವಿರಕ್ಕೂ ಹೆಚ್ಚು ಜಾಬ್ ಕೋಡ್‌ಗಳನ್ನು ರದ್ದುಪಡಿಸಿದ್ದು, ₹7,931 ಕೋಟಿ ದುರುಪಯೋಗ ಆಗುವುದನ್ನು ತಡೆ ಹಿಡಿದಿದೆ.

11 ವರ್ಷಗಳ ಅವಧಿಯಲ್ಲಿ ರಸ್ತೆ, ಚರಂಡಿ ಸೇರಿ ವಿವಿಧ ಕಾಮಗಾರಿಗಳಿಗೆ ಬಿಬಿಎಂಪಿ ಬಜೆಟ್ ಅನ್ವಯ ಜಾಬ್ ಕೋಡ್‌ಗಳನ್ನು ನೀಡಲಾಗಿತ್ತು. ಈ ಜಾಬ್ ಕೋಡ್‌ಗಳು ಬಿಬಿಎಂಪಿ ಅಧಿಕಾರಿಗಳು, ಮಾಜಿ ಕಾರ್ಪೊರೇಟರ್ ಅವರಲ್ಲಿಯೇ ಉಳಿದುಕೊಂಡಿವೆ. ಅವನ್ನು ಅವರಿಗೆ ಅನುಕೂಲವಾಗುವ ಸಂದರ್ಭದಲ್ಲಿ ಬಳಸಿಕೊಂಡು, ಟೆಂಡರ್ ಕರೆದುಕೊಳ್ಳುತ್ತಿದ್ದರು.

ಕೆಲವರು ಈ ಜಾಬ್ ಕೋಡ್‌ಗಳನ್ನು ಬೇರೆಯವರಿಗೆ ಮಾರಿಕೊಂಡು ಹಣ ಮಾಡಿಕೊಂಡಿದ್ದಾರೆ. ಆಗಾಗ ಈ ಜಾಬ್ ಕೋಡ್‌ಗಳನ್ನು ಬಳಸಿಕೊಂಡು ಟೆಂಡರ್ ಕರೆಯಲಾಗುತ್ತಿತ್ತು. ಆದರೆ ಇದೀಗ, 2010 ರಿಂದ 2021 ರವರೆಗೆ ನೀಡಲಾಗಿರುವ ಎಲ್ಲ ಕಾಮಗಾರಿಗಳ ಜಾಬ್ ಕೋಡ್‌ಗಳಿಗೆ ಕಾರ್ಯಾದೇಶ ನೀಡದಂತೆ ಐಎಫ್‌ಎಂಎಸ್ ತಂತ್ರಾಂಶದಲ್ಲಿ ರದ್ದು ಮಾಡಲಾಗಿದೆ. ಈ ಅವಧಿಯಲ್ಲಿ 960 ಕಾಮಗಾರಿಗಳಿಗೆ ಟೆಂಡರ್ ಕರೆದು ಕಾಮಗಾರಿ ಪೂರ್ಣಗೊಳಿಸಲಾಗಿದ್ದು, ಅದಕ್ಕೆ ಸಮ್ಮತಿ ನೀಡಲಾಗಿದೆ.

ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ ಅವರು 2010 ರಿಂದ ನೀಡಲಾಗಿರುವ ಎಲ್ಲ ಜಾಬ್ ಕೋಡ್‌ಗಳನ್ನು ಪರಿಶೀಲನೆ ನಡೆಸಿ, 45,781 ಜಾಬ್ ಕೋಡ್‌ಗಳನ್ನು ರದ್ದು ಮಾಡಿದ್ದಾರೆ.

2011 ರಲ್ಲಿ ಗಾಂಧಿನಗರ, ರಾಜರಾಜೇಶ್ವರಿ ನಗರ, ಮಲ್ಲೇಶ್ವರ ವಿಭಾಗಗಳಲ್ಲಿ ಕೆಲಸವಾಗದ ಕಾಮಗಾರಿಗಳಿಗೆ ವರ್ಕ್ ಕೋಡ್, ನಕಲಿ ಬಿಲ್ ನೀಡಿದ್ದ ₹1539 ಕೋಟಿ ಮೌಲ್ಯದ ಹಗರಣ ಬಹಿರಂಗವಾದಾಗ ಅಂದಿನ ಆಯುಕ್ತ ಸಿದ್ದಯ್ಯ ಪ್ರಕರಣವನ್ನು ಸಿಐಡಿಗೆ ವಹಿಸಲು ನಿರ್ಧರಿಸಿದ್ದರು. ಆಗ ಅವರ ವರ್ಗಾವಣೆ ಆಗಿತ್ತು.

ಬಜೆಟ್‌ನಲ್ಲೇ ಜಾಬ್ ಕೋಡ್

2021ರವರೆಗೆ ಬಿಬಿಎಂಪಿ ಬಜೆಟ್‌ನಲ್ಲಿ ಸೇರಿಸಿದ ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಲಾಗುತ್ತಿತ್ತು. ಸ್ಟ್ಯಾಂಪ್ ಪೇಪರ್ ರೀತಿಯಲ್ಲಿ ಕೊಡುತ್ತಿದ್ದರು. ಇವುಗಳನ್ನು ಕೆಲವರು ತಮ್ಮಲ್ಲೇ ಉಳಿಸಿಕೊಂಡಿದ್ದರು. ಅವರ ಅಗತ್ಯಕ್ಕೆ ಅನುಸಾರ ಟೆಂಡರ್ ಕರೆದು ಕಾಮಗಾರಿ ಮಾಡುತ್ತಿದ್ದರು.

‘ಈ ಜಾಬ್ ಕೋಡ್‌ಗಳಿಗೆ ಗರಿಷ್ಠ ಅವಧಿ ಇರಲಿಲ್ಲ. ಈಗಲೂ ಟೆಂಡರ್ ಕರೆಯಬಹುದಾಗಿತ್ತು. ಕೆಲಸ ಆಗಿದೆ ಎಂದು ಎಲ್ಲರ ಬಳಿ ಸಹಿ ಹಾಕಿಸಿಕೊಂಡು ಬಂದರೆ ನಾವು ಹಣ ಬಿಡುಗಡೆ ಮಾಡಬೇಕಿತ್ತು. 2021 ಏಪ್ರಿಲ್ ನಿಂದ ಇ-ಪ್ರೊಕ್ಯುರ್‌ನಿಂದ ಎಲ್ಲ ಕಾಮಗಾರಿಗಳು ನಡೆಯುತ್ತಿವೆ. ಟೆಂಡರ್ ಆದಮೇಲೆ ಈಗ ಜಾಬ್ ಕೋಡ್ ನೀಡಲಾಗುತ್ತಿದೆ. ಹೀಗಾಗಿ ಹಿಂದಿನ ಎಲ್ಲ ಜಾಬ್ ಕೋಡ್‌ಗಳನ್ನು ಪರಿಶೀಲಿಸಲಾಯಿತು. ವೈಯಕ್ತಿಕ ಮನೆ ನಿರ್ಮಾಣ ಕಾಮಗಾರಿಗಳನ್ನು ಹೊರತು ಪಡಿಸಿ ಎಲ್ಲ ಕಾಮಗಾರಿಗಳ ಜಾಬ್ ಕೋಡ್ ರದ್ದು ಮಾಡಲಾಗಿದೆ. ಆ ಕಾಮಗಾರಿಗಳನ್ನು ಮಾಡಿದರೂ ಹಣ ನೀಡಲು ಸಾಧ್ಯ ಇಲ್ಲ. ಹೀಗಾಗಿ ಮುಂದೆ ಬಿಲ್‌ಗಾಗಿ ಬರಬಹುದಾಗಿದ್ದ ಸುಮಾರು ₹8 ಸಾವಿರ ಕೋಟಿಯಷ್ಟು ಹಣವನ್ನು ಉಳಿಸಲಾಗಿದೆ’ ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ ಮಾಹಿತಿ ನೀಡಿದರು.

ಕಾರ್ಯಾದೇಶ ರದ್ದು ಮಾಡಲಾಗಿರುವ ವಿವರ

ಆರ್ಥಿಕ ವರ್ಷ	ಕಾಮಗಾರಿ ಸಂಖ್ಯೆ	ಟೆಂಡರ್ ಆಗದ ಇರುವ ಕಾಮಗಾರಿ	ರದ್ದುಪಡಿಸಿರುವ ಮೊತ್ತ (₹ಕೋಟಿಗಳಲ್ಲಿ)
2010-11 ರಿಂದ 2017-18	40,751	40,580	6,396.15
2018-19	2,269	2,209	641.26
2019-20 ಮತ್ತು 2020-21	3,721	2,992	893.84
ಒಟ್ಟು	46,741	45,781	7,931.25

ಸುದ್ದಿ 2 ನಿಮಿಷ

ಮನೀಷ್ ಸಿಸೋಡಿಯಾ ಕಚೇರಿಗೆ ಸಿಬಿಐ ತಂಡ ಭೇಟಿ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ತನಿಖೆ ನಡೆಸುತ್ತಿರುವ ಸಿಬಿಐ ತಂಡವು ಶನಿವಾರ ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರ ಕಚೇರಿಗೆ ಭೇಟಿ ನೀಡಿ ಕೆಲ ದಾಖಲೆಗಳಿಗಾಗಿ ಹುಡುಕಾಟ ನಡೆಸಿದೆ.

‘ನಾನು ಯಾವ ತಪ್ಪೂ ಮಾಡಿಲ್ಲ. ಈ ಹಿಂದೆ ನನ್ನ ಮನೆ ಮೇಲೆ ದಾಳಿ ನಡೆಸಿದ್ದ ಅಧಿಕಾರಿಗಳು ಲಾಕರ್‌ನಲ್ಲಿ ಹುಡುಕಾಟ ನಡೆಸಿದ್ದರು. ನನ್ನ ಗ್ರಾಮಕ್ಕೂ ಭೇಟಿ ನೀಡಿ ವಿಚಾರಣೆ ನಡೆಸಿದ್ದರು. ಆಗ ಅವರಿಗೆ ಯಾವ ದಾಖಲೆಯೂ ಸಿಕ್ಕಿರಲಿಲ್ಲ. ಈ ಬಾರಿಯೂ ಅವರು ಬರಿಗೈಯಲ್ಲಿ ಹಿಂದಿರುಗಲಿದ್ದಾರೆ’ ಎಂದು ಸಿಸೋಡಿಯಾ ಟ್ವೀಟ್ ಮಾಡಿದ್ದಾರೆ.

‘ಸಿಸೋಡಿಯಾ ಅವರ ಕಚೇರಿ ಮೇಲೆ ದಾಳಿ ನಡೆಸಿಲ್ಲ. ಶೋಧವನ್ನೂ ಕೈಗೊಂಡಿಲ್ಲ. ತಂಡವು ಕೆಲ ದಾಖಲೆಗಳನ್ನು ಪಡೆಯುವುದಕ್ಕಾಗಿ ಭೇಟಿ ನೀಡಿರಬಹುದು’ ಎಂದು ಸಿಬಿಐ ಅಧಿಕಾರಿಗಳು ಹೇಳಿದ್ದಾರೆ.

ಪಿಟಿಸಿಎಲ್ ಹೋರಾಟ 13ನೇ ದಿನಕ್ಕೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯ(ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ 13ನೇ ದಿನವೂ ಮುಂದುವರಿದಿದೆ.

ಸಂಕ್ರಾಂತಿ ಹಬ್ಬವನ್ನೂ ತೊರೆದು ಸಂತ್ರಸ್ತರು ಹೋರಾಟ ಮುಂದುವರಿಸಿದ್ದಾರೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಮತ್ತು ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಅವರು ಶನಿವಾರ ಧರಣಿಯಲ್ಲಿ ಭಾಗವಹಿಸಿ ಬೆಂಬಲ ಸೂಚಿಸಿದರು.

‘ಬಲಾಢ್ಯರ ಕೈಗೆ ದುರ್ಬಲರ ಭೂಮಿ ಹೋಗಬಾರದು ಎಂಬ ಕಾರಣಕ್ಕೆ ಕಾನೂನು ತರಲಾಗಿದೆ. ಅದರಲ್ಲಿರುವ ತೊಡಕುಗಳನ್ನು ನಿವಾರಿಸದಿದ್ದರೆ ದಲಿತರು ಭೂರಹಿತರಾಗಲಿದ್ದಾರೆ’ ಎಂದು ಆಯನೂರು ಮಂಜುನಾಥ್ ಹೇಳಿದರು.

‘ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತಂದರೆ ದಲಿತರ ಭೂಮಿ ಉಳಿಯಲಿದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಒತ್ತಡ ಹೇರಲಾಗುವುದು’ ಎಂದರು.

‘ರೌಡಿ ಮೋರ್ಚಾ ಕಟ್ಟಲು ಶಾ ಪ್ರೇರಣೆಯೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಪಿ. ಯೋಗೇಶ್ವರ್ ಅವರು ಪಕ್ಷದ ನಾಯಕರು ಹಾಗೂ ರಾಜ್ಯ ರಾಜಕಾರಣದ ಕುರಿತು ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಉಲ್ಲೇಖಿಸಿ, ಬಿಜೆಪಿ ಮತ್ತು ರಾಜ್ಯ ಸರ್ಕಾರದ ವಿರುದ್ಧ ಕಾಂಗ್ರೆಸ್ ಸರಣಿ ಟ್ವೀಟ್ ಮಾಡಿ ಟೀಕಾ ಪ್ರಹಾರ ನಡೆಸಿದೆ.

‘ಪ್ರೀತಿಯ ಬಿಜೆಪಿಯವರೇ, ‘ಅಮಿತ್ ಶಾ ರೌಡಿ ಇದ್ದಂಗೆ’ ಎಂಬ ನಿಮ್ಮದೇ ಪಕ್ಷದವರ ಮಾತನ್ನು ಒಪ್ಪುವಿರಾ. ಅಮಿತ್ ಶಾ ಪ್ರೇರಣೆಯಿಂದಲೇ ಜೈಲಲ್ಲಿರಬೇಕಾದ ರೌಡಿಗಳನ್ನು ಕರೆದು ರೌಡಿ ಮೋರ್ಚಾ ಕಟ್ಟುತ್ತಿದ್ದೀರಾ. ಬಿಜೆಪಿಯಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಿರುವ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಯೋಗೇಶ್ವರ್ ಹೇಳಿಕೆಗಳ ಬಗ್ಗೆ ತುಟಿ ಬಿಚ್ಚುತ್ತಿಲ್ಲವೇಕೆ’ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಮತ್ತೊಂದು ಟ್ವೀಟ್‌ನಲ್ಲಿ, ‘ಜನಾದೇಶದಿಂದ ಬಿಜೆಪಿ ಅಧಿಕಾರಕ್ಕೆ ಬರಲ್ಲ’ ಎಂದು ಸಿ.ಪಿ. ಯೋಗೇಶ್ವರ್ ಹೇಳಿದ್ದಾರೆ. ಬಸವರಾಜ ಬೊಮ್ಮಾಯಿಯವರೇ, ನಿಮ್ಮ ಆಡಳಿತದ ಮೇಲೆ ಜನರಿಗಷ್ಟೇ ಅಲ್ಲ, ಸ್ವತಃ ನಿಮ್ಮದೇ ಪಕ್ಷದ ಶಾಸಕರಿಗೇ ನಂಬಿಕೆ ಕಳೆದುಹೋಗಿದ್ದು ಶೋಚನೀಯವಲ್ಲವೇ? ಮ್ಯಾನೇಜ್ಮೆಂಟ್ ಸರ್ಕಾರ ನಡೆಸುತ್ತಿರುವ ಬಿಜೆಪಿ ಸೋಲುವುದು ಸೂರ್ಯ ಚಂದ್ರರಿರುವಷ್ಟೇ ಸತ್ಯ’ ಎಂದೂ ವಾಗ್ದಾಳಿ ನಡೆಸಿದೆ.

ಬೊಮ್ಮಾಯಿ ಅವರ ಕುರಿತಂತೆ ‘#ಪಪ್ಪೆಟ್ ಸಿಎಂ’ ಟ್ಯಾಗ್ ಬಳಸಿ ಛೇಡಿಸಿರುವ ಕಾಂಗ್ರೆಸ್, ‘ಬಿಜೆಪಿ ಸೋಲುವುದು ಖಚಿತ. ಕಾಂಗ್ರೆಸ್ ಗೆಲ್ಲುವುದು ನಿಶ್ಚಿತ’ -ಇದು ಬಿಜೆಪಿಯ ಎಂಎಲ್‌ಸಿ ಯೋಗೇಶ್ವರ್ ಹೇಳಿರುವ ಮಾತು. ಬಸವರಾಜ ಬೊಮ್ಮಾಯಿ ಅವರೇ, ನಿಮ್ಮ ಘನಂದಾರಿ ಆಡಳಿತಕ್ಕೆ ಬೇರೆ ಇನ್ನಾವ ಪ್ರಮಾಣಪತ್ರ ಬೇಕು? ಬಿಜೆಪಿ ಮುಳುಗುತ್ತಿರುವ ಹಡಗಲ್ಲ, ಈಗಾಗಲೇ ಮುಳುಗಿಹೋದ ಹಡಗು! ಬಿಜೆಪಿಗರಿಗೆ ಇದು ಸ್ಪಷ್ಟವಾಗಿದೆ’ ಎಂದು ಅದು ತಿವಿದಿದೆ.

ನಾಲ್ವರಿಗೆ ಏಳು ವರ್ಷ ಕಠಿಣ ಶಿಕ್ಷೆ

ಡಕಾಯತಿ ಮಾಡಿ ಬಂಧನವಾಗಿದ್ದ ಅಪರಾಧಿಗಳು • ಎನ್‌ಐಎ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಯೋತ್ಪಾದಕ ಕೃತ್ಯಗಳಿಗೆ ಹಣ ಕ್ರೋಡೀಕರಿಸುವ ಸಲುವಾಗಿ ನಗರ ವ್ಯಾಪ್ತಿಯಲ್ಲಿ ಡಕಾಯತಿ ಮಾಡಿ ಬಂಧನಕ್ಕೊಳಗಾಗಿದ್ದ ಪಶ್ಚಿಮ ಬಂಗಾಳದ ನಾಲ್ವರು ಅಪರಾಧಿಗಳಿಗೆ ನಗರದ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯ ಏಳು ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ.

ಈ ಕುರಿತಂತೆ ಎನ್‌ಐಎ ದಾಖಲಿಸಿದ್ದ ಪ್ರಕರಣವನ್ನು ವಿಚಾರಣೆ ನಡೆಸಿದ ಎನ್‌ಐಎ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಿ.ಎಂ.ಗಂಗಾಧರ ಅವರು ನಾಲ್ವರು ಅಪರಾಧಿಗಳಿಗೆ ಜೈಲು ಶಿಕ್ಷೆಯ ಜೊತೆಗೆ ತಲಾ ₹ 40 ಸಾವಿರದವರೆಗೆ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಪಶ್ಚಿಮ ಬಂಗಾಳದ ಬೀರ್‌ಭೂಮ್ ಜಿಲ್ಲೆಯ ಕದೋರ್ ಖಾಜಿ ಅಲಿಯಾಸ್ ಮೋಟಾ ಅನಾಸ್ (33), ಮುಸ್ತಾಫಿಝುರ್ ರಹಮಾನ್ ಅಲಿಯಾಸ್ ತುಹಿನ್ (39), ಶಂಷೇರ್ ಗಂಜ್ ಜಿಲ್ಲೆಯ ಅದಿಲ್ ಶೇಖ್ (27) ಮತ್ತು ಮುರ್ಷಿದಾಬಾದ್ ಜಿಲ್ಲೆಯ ಅಬ್ದುಲ್ ಕರೀಮ್ ಅಲಿಯಾಸ್ ಚೋಟಾ (21) ಶಿಕ್ಷೆಗೊಳಗಾದವರು.

ಕದೋರ್ ಖಾಜಿ

ಅಬ್ದುಲ್ ಕರೀಂ


ಆದಿಲ್ ಶೇಖ್

ಮುಸ್ತಾಫಿಝುರ್

ಅಪರಾಧ ಸುದ್ದಿ

ಪ್ರಾಸಿಕ್ಯೂಷನ್ ವಾದವನ್ನು ಪುರಸ್ಕರಿಸಿರುವ ನ್ಯಾಯಾಧೀಶರು, ‘ಆರೋಪಿಗಳು ಭಾರತೀಯ ದಂಡ ಸಂಹಿತೆ-1860 ಮತ್ತು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ-1967 ಹಾಗೂ ಶಸ್ತ್ರಾಸ್ತ್ರ ಕಾಯ್ದೆ-1959ರ ವಿವಿಧ ಕಲಂಗಳ ಅನುಸಾರ ಅಪರಾಧ ಎಸಗಿರುವುದು ಸಾಬೀತಾಗಿದೆ. ಇವರು ಬೆಂಗಳೂರಿನಲ್ಲಿ ವಾಸವಿದ್ದ ಮನೆಗಳಲ್ಲಿ ಸ್ಫೋಟಕಗಳನ್ನು ತಯಾರಿಸಲು ಬಳಸುತ್ತಿದ್ದ ವಸ್ತುಗಳನ್ನು ವಶಪಡಿಸಿಕೊಂಡಿರುವುದು ಮತ್ತು ಮುಸ್ತಾಫಿಝುರ್ ರೆಹಮಾನ್ ಸಹಚರರೊಂದಿಗೆ ಸೇರಿ ಸ್ಫೋಟಕಗಳನ್ನು ತಯಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವುದು ದೃಢಪಟ್ಟಿದೆ’ ಎಂದು ಆದೇಶದಲ್ಲಿ ವಿವರಿಸಿದ್ದಾರೆ.

ಬೋಧಗಯಾ ಸ್ಫೋಟದ ನಂಟು: ಎನ್‌ಐಎ ಪರ ವಕೀಲ ಪಿ.ಪ್ರಸನ್ನಕುಮಾರ್, ‘ಎಲ್ಲಾ ಅಪರಾಧಿಗಳು ಬಾಂಗ್ಲಾದೇಶದ ಜಮಾತ್-ಉಲ್-ಮುಜಾಹಿದ್ದೀನ್ (ಜೆಎಂಬಿ) ಭಯೋತ್ಪಾದನಾ ಸಂಘಟನೆಗೆ ಸೇರಿದವರಾಗಿದ್ದು, ಅಪರಾಧಿಗಳು ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲಾದ 12 ಸದಸ್ಯರ ಗುಂಪಿನ ಭಾಗವಾಗಿದ್ದಾರೆ. ಇವರಲ್ಲಿ ಅಬ್ದುಲ್ ಕರೀಂ 2013 ಜುಲೈ 7ರಂದು ವಿಶ್ವ ಪರಂಪರೆಯ ತಾಣವಾದ ಮಹಾಬೋಧಿ ದೇವಾಲಯದ ಸಂಕೀರ್ಣದಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಭಾಗವಹಿಸಿದ್ದ. ಈ ಸ್ಫೋಟದಲ್ಲಿ ಇಬ್ಬರು ಬೌದ್ಧ ಸನ್ಯಾಸಿಗಳು ಸೇರಿ ಐವರು ಗಾಯಗೊಂಡಿದ್ದರು’ ಎಂದು ಪ್ರತಿಕ್ರಿಯಿಸಿದ್ದಾರೆ.

ಪ್ರಕರಣವೇನು?

ಆರೋಪಿಗಳು 2018ರಲ್ಲಿ ನಗರದ ಕೆ.ಆರ್.ಪುರ, ಕೊತ್ತನೂರು ಮತ್ತು ಅತ್ತಿಬೆಲೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಡಕಾಯತಿ ನಡೆಸಿ ಹಣ, ಬೆಲೆಬಾಳುವ ಎಲೆಕ್ಟ್ರಾನಿಕ್ ವಸ್ತುಗಳನ್ನು ದೋಚಿದ್ದರು. ಚಿಕ್ಕಬಾಣಾವರ ವ್ಯಾಪ್ತಿಯ ಮನೆಯೊಂದರಲ್ಲಿ ಆಶ್ರಯ ಹೊಂದಿದ್ದರು. ಭಯೋತ್ಪಾದನಾ ಸಂಘಟನೆಯ ನಂಟು ಹೊಂದಿದ ಆಧಾರದಲ್ಲಿ ತನಿಖೆ ಕೈಗೊಂಡಿದ್ದ ಎನ್‌ಐಎ ತನಿಖಾಧಿಕಾರಿಗಳು ಆರೋಪಿಗಳಿಂದ ಅಪಾರ ಪ್ರಮಾಣದ ಎಲೆಕ್ಟ್ರಾನಿಕ್ ವಸ್ತುಗಳು, ರಾಸಾಯನಿಕ ಉಪಕರಣಗಳು, ಬಾಂಬ್‌ಗಳನ್ನು ತಯಾರಿಸಲು ಬಳಸುವ ಕಂಟೈನರ್, ಸುಧಾರಿತ ಸ್ಫೋಟಕ ಸಾಧನ, ಡಿಜಿಟಲ್ ಕ್ಯಾಮೆರಾ ಮತ್ತು ಕೈಬರಹದ ದಾಖಲೆಗಳನ್ನು ವಶಪಡಿಸಿಕೊಂಡು 2019 ಮತ್ತು 2020ರಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಸನ್ಮಾನ ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಲೇಖಕ ಲಕ್ಷ್ಮೀಕಾಂತ ಹೆಗಡೆ, ಕಲಾವಿದರಾದ ಯಶಸ್ವಿನಿ ಜೋಶಿ ಹಾಗೂ ಸ್ವಾತಿ ಎಸ್. ಪಂಡಿತ್ ಅವರನ್ನು ಗೌರವಿಸಲಾಯಿತು. ಸಂಘದ ವಿಶ್ವೇಶ್ವರ ಗಾಯತ್ರಿ ಮತ್ತಿತರರು ಇದ್ದಾರೆ

ಅಲ್ಪಸಂಖ್ಯಾತರ ಘೋಷಣೆ: ಯಥಾಸ್ಥಿತಿ ಕಾಪಾಡಿಕೊಂಡ ರಾಜ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ನಿರ್ದಿಷ್ಟ ಸಮುದಾಯವನ್ನು ಅಲ್ಪಸಂಖ್ಯಾತ ಸಮುದಾಯ ಎಂದು ಘೋಷಿಸುವ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರವು ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದಾಗಿ ಹೇಳಿದೆ.

ಸುಪ್ರೀಂ ಕೋರ್ಟ್‌ನಲ್ಲಿ ಈ ವಿಷಯದ ಕುರಿತು ಬಾಕಿ ಇರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಿಗೆ ಸಂಬಂಧಿಸಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಪ್ರತಿಕ್ರಿಯೆ ನೀಡಬೇಕು ಎಂದು ಕೇಂದ್ರವು ಹೇಳಿತ್ತು. ಅದರಂತೆ ಕರ್ನಾಟಕವು ತನ್ನ ನಿಲುವನ್ನು ವ್ಯಕ್ತಪಡಿಸಿದೆ.

‘ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಕಾಯ್ದೆ, 1994ರ ಸೆಕ್ಷನ್ 10 (ಬಿ)ನಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗವು ಕರ್ನಾಟಕ ಸರ್ಕಾರಕ್ಕೆ ಮುಸ್ಲಿಂ, ಕ್ರೈಸ್ತ, ಸಿಖ್, ಬೌದ್ಧ, ಜೈನ ಹಾಗೂ ಪಾರ್ಸಿ ಸಮುದಾಯಗಳನ್ನು ಅಲ್ಪಸಂಖ್ಯಾತ ಸಮುದಾಯಗಳನ್ನಾಗಿ ಘೋಷಿಸಲು ಶಿಫಾರಸು ಮಾಡಿದೆ. ಅದರಂತೆ, ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಸಚಿವಾಲಯವು ಸದರಿ ಕಾಯ್ದೆಯ ಸೆಕ್ಷನ್ 2 (ಡಿ) ಅಡಿಯಲ್ಲಿ ಆ ಸಮುದಾಯಗಳನ್ನು ಅಲ್ಪಸಂಖ್ಯಾತ ಸಮುದಾಯಗಳೆಂದು ಘೋಷಿಸಿದೆ. ಈ ವಿಷಯದಲ್ಲಿ ಕರ್ನಾಟಕ ರಾಜ್ಯದ ನಿಲುವು ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದಾಗಿದೆ’ ಎಂದು ಹೇಳಿದೆ.

ಸಮುದಾಯಗಳನ್ನು ಅಲ್ಪಸಂಖ್ಯಾತ ಎಂದು ಘೋಷಿಸುವ ಅಧಿಕಾರವನ್ನು ರಾಷ್ಟ್ರಮಟ್ಟದ ಬದಲಿಗೆ ಜಿಲ್ಲೆ ಅಥವಾ ರಾಜ್ಯಗಳಿಗೆ ನೀಡಲು ನಿರ್ದೇಶನ ನೀಡಬೇಕೆಂದು ಕೋರಿ ವಕೀಲರಾದ ಅಶ್ವಿನಿ ಕುಮಾರ್ ಉಪಾಧ್ಯಾಯ ಸೇರಿದಂತೆ ಇತರರು ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ 24 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಪ್ರತಿಕ್ರಿಯೆಯನ್ನು ನೀಡಿವೆ.

ಆದರೆ, ದೆಹಲಿ ಮಾತ್ರ ಹಿಂದೂಗಳಿಗೆ ಯಾವುದೇ ರೂಪದಲ್ಲಿ ಅಲ್ಪಸಂಖ್ಯಾತ ಸ್ಥಾನಮಾನವನ್ನು ನೀಡುವುದನ್ನು ಬಹಿರಂಗವಾಗಿ ಬೆಂಬಲಿಸಿದೆ. ‘ತಮ್ಮ ಮೂಲ ರಾಜ್ಯದಲ್ಲಿ (ಜಮ್ಮು- ಕಾಶ್ಮೀರ, ಲಡಾಖ್ ಇತ್ಯಾದಿ) ಧಾರ್ಮಿಕ ಅಲ್ಪಸಂಖ್ಯಾತರಾಗಿರುವ ಹಿಂದೂ ಧರ್ಮದ ಅನುಯಾಯಿಗಳಿಗೆ ವಲಸಿಗ ಅಲ್ಪಸಂಖ್ಯಾತ ಸ್ಥಾನಮಾನವನ್ನು ಕೇಂದ್ರ ಸರ್ಕಾರವು ಘೋಷಿಸಬಹುದು ಎಂದೂ ದೆಹಲಿ ತಿಳಿಸಿದೆ.

ಆಂಧ್ರಪ್ರದೇಶ, ಅಸ್ಸಾಂ, ತಮಿಳುನಾಡು, ಪಂಜಾಬ್ ಸೇರಿದಂತೆ ಇತರ ಕೆಲವು ರಾಜ್ಯಗಳು ರಾಜ್ಯಮಟ್ಟದಲ್ಲಿಯೇ ಅಲ್ಪಸಂಖ್ಯಾತ ಸಮುದಾಯವನ್ನು ಗುರುತಿಸಲು ಒಲವು ತೋರಿದವು. ಆದರೆ, ಯಾವುದೇ ನಿರ್ದಿಷ್ಟ ಸಮುದಾಯವನ್ನು ಹೆಸರಿಸಿರಲಿಲ್ಲ.

ಕಳ್ಳತನ: 150 ಮೊಬೈಲ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಕರ ಸೋಗಿನಲ್ಲಿ ಸಂಚರಿಸಿ ಪರ್ಸ್ ಹಾಗೂ ಮೊಬೈಲ್ ಕಳ್ಳತನ ಮಾಡುತ್ತಿದ್ದ ಜಾಲ ಭೇದಿಸಿರುವ ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು, ಏಳು ಆರೋಪಿಗಳನ್ನು ಬಂಧಿಸಿದ್ದಾರೆ.

‘ಸುಭಾಷ್‌ನಗರದ ಜಾಫರ್ ಸಿದ್ದಿಕ್ (26), ಬೇಗೂರು ಬೋಳಿಗುಡ್ಡದ ಸೈಯದ್ ಅಖಿಲ್ ಅಲಿಯಾಸ್ ಸಮೀರ್ (40), ಹಳೇಗುಡ್ಡದಹಳ್ಳಿಯ ರೆಹಮಾನ್ ಶರೀಫ್ (42), ಶಫಿಕ್ ಅಹಮ್ಮದ್ ಅಲಿಯಾಸ್ ಮೌಲಾ (38), ಪಾದರಾಯನಪುರದ ಮುಷ್ತಾಕ್ ಅಹಮ್ಮದ್ (45) ಹಾಗೂ ಪಾರ್ವತಿಪುರದ ಇಮ್ರಾನ್ ಪಾಷಾ (34) ಬಂಧಿತರು. ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ತನಿಖೆ ಮುಂದುವರಿಸಲಾಗಿದೆ’ ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ಎಂ. ಚಂದ್ರಶೇಖರ್ ಶನಿವಾರ ‘ಪತ್ರಿಕಾಗೋಷ್ಠಿ’ಯಲ್ಲಿ ತಿಳಿಸಿದರು.

‘ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ ಜಾಫರ್ ಹಾಗೂ ಸೈಯದ್, ತಮ್ಮದೇ ವ್ಯವಸ್ಥಿತ ಜಾಲ ರೂಪಿಸಿಕೊಂಡು ಕೃತ್ಯ ಎಸಗುತ್ತಿದ್ದರು. ಯಾರಾದರೂ ಬೆನ್ನಟ್ಟಿದರೆ ಅವರಿಂದ ತಪ್ಪಿಸಿಕೊಂಡು ಹೋಗುವ ಎಲ್ಲ ದಾರಿಗಳನ್ನೂ ಕಂಡುಕೊಂಡಿದ್ದರು. ಈ ಜಾಲದಿಂದ ಸದ್ಯ ₹ 25 ಲಕ್ಷ ಮೌಲ್ಯದ 150 ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಹೇಳಿದರು.

ಮೂರು ವರ್ಷದಿಂದ ಕಳ್ಳತನ: ‘ಜಾಫರ್ ಹಾಗೂ ಸೈಯದ್ ಮೂರು ವರ್ಷಗಳಿಂದ ಕಳ್ಳತನ ಮಾಡುತ್ತಿದ್ದರು. ಇವರಿಬ್ಬರ ಬಗ್ಗೆ ಯಾವುದೇ ಸುಳಿವು ಸಿಕ್ಕಿರಲಿಲ್ಲ. ಇತ್ತೀಚೆಗೆ ಸುದ್ದಗುಂಟೆಪಾಳ್ಯ ಠಾಣೆ ವ್ಯಾಪ್ತಿಯ ಬಸ್ಸಿನಲ್ಲಿ ಪ್ರಯಾಣಿಕರೊಬ್ಬರ ಮೊಬೈಲ್ ಕಳ್ಳತನವಾಗಿತ್ತು. ಈ ಪ್ರಕರಣದ ತನಿಖೆ ಕೈಗೊಂಡಾಗಲೇ ಆರೋಪಿಗಳು ಸಿಕ್ಕಿಬಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಜನರಿಂದ ತುಂಬಿರುತ್ತಿದ್ದ ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದ ಆರೋಪಿಗಳು, ಪರ್ಸ್ ಹಾಗೂ ಮೊಬೈಲ್ ಕದಿಯುತ್ತಿದ್ದರು. ಹಣ ಹಾಗೂ ಬೆಲೆಬಾಳುವ ವಸ್ತುಗಳನ್ನು ತೆಗೆದುಕೊಂಡು ನಿರ್ಜನ ಪ್ರದೇಶಗಳಲ್ಲಿ ಪರ್ಸ್ ಬಿಸಾಡುತ್ತಿದ್ದರು. ಮೊಬೈಲ್‌ಗಳನ್ನು ಮಧ್ಯವರ್ತಿಗಳ ಮೂಲಕ ಮಾರಿಸಿ ಹಣ ಸಂಪಾದಿಸುತ್ತಿದ್ದರು’ ಎಂದು ಹೇಳಿದರು.

‘ಜಾಫರ್, ಸೈಯದ್ ಎಸಗುತ್ತಿದ್ದ ಕೃತ್ಯಕ್ಕೆ ರೆಹಮಾನ್ ಶರೀಫ್, ಶಫಿಕ್ ಅಹಮ್ಮದ್, ಮುಸ್ತಾಕ್ ಅಹಮ್ಮದ್, ಇಮ್ರಾನ್ ಪಾಷಾ ಹಾಗೂ ಇತರರು ಸಹಕಾರ ನೀಡುತ್ತಿದ್ದರು’ ಎಂದು ತಿಳಿಸಿದರು.

ಸಿನಿಮೀಯ ರೀತಿಯಲ್ಲಿ ಪರಾರಿ: ‘ಸೈಯದ್ ಹಾಗೂ ಜಾಫರ್ ಕಳ್ಳತನಕ್ಕೆಂದು ಬಸ್ ಏರುತ್ತಿದ್ದರು. ಇತರೆ ಆರೋಪಿಗಳು ಆಟೊದಲ್ಲಿ ಬಸ್ ಹಿಂಬಾಲಿಸುತ್ತಿದ್ದರು. ಕಳ್ಳತನದ ನಂತರ ಬಸ್ಸಿನಿಂದ ಇಳಿಯುತ್ತಿದ್ದ ಆರೋಪಿಗಳು, ಆಟೊದಲ್ಲಿ ಹತ್ತಿ ಸಿನಿಮೀಯ ರೀತಿಯಲ್ಲಿ ಸ್ಥಳದಿಂದ ಪರಾರಿಯಾಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಕೆಲ ಪ್ರಯಾಣಿಕರು ಆರೋಪಿಗಳನ್ನು ಬೆನ್ನಟ್ಟಲು ಯತ್ನಿಸಿದ್ದರು. ಅವರಿಂದ ತಪ್ಪಿಸಿಕೊಂಡಿದ್ದ ಆರೋಪಿಗಳು, ಆಟೊದಿಂದ ಆಟೊ ಏರಿ ಸ್ಥಳದಿಂದ ಪರಾರಿಯಾಗಿದ್ದ ಬಗ್ಗೆಯೂ ಮಾಹಿತಿ ಇದೆ’ ಎಂದು ತಿಳಿಸಿದರು.

‘ಕದ್ದ ಮೊಬೈಲ್‌ಗಳನ್ನು ಸಾಮಾಜಿಕ ಮಾಧ್ಯಮ ಹಾಗೂ ಜಾಲತಾಣಗಳ ಮೂಲಕ ಮಾರುತ್ತಿದ್ದರೆಂದು ಗೊತ್ತಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಳು ಸಿಕ್ಕ ಬಳಿಕವೇ ಮತ್ತಷ್ಟು ಮಾಹಿತಿ ಲಭ್ಯವಾಗಿದೆ’ ಎಂದು ಹೇಳಿದರು.

‘ಮೊಬೈಲ್ ಮಾಲೀಕರಿಗಾಗಿ ಹುಡುಕಾಟ’

‘ಆರೋಪಿಗಳಿಂದ ಜಪ್ತಿ ಮಾಡಲಾದ 150 ಮೊಬೈಲ್‌ಗಳ ಪೈಕಿ ಬಹುತೇಕ ಮೊಬೈಲ್‌ಗಳ ಮಾಲೀಕರು ಯಾರೆಂಬುದು ಗೊತ್ತಾಗಿಲ್ಲ. ಮೊಬೈಲ್ ಜಪ್ತಿ ಬಗ್ಗೆ ವಿವಿಧ ಠಾಣೆಗಳಿಗೆ ಮಾಹಿತಿ ಕಳುಹಿಸಲಾಗಿದೆ. ಐಎಂಇಐ ಸಂಖ್ಯೆ ಆಧರಿಸಿ ಮಾಲೀಕರಿಗಾಗಿ ಹುಡುಕಾಟ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಕಬ್ಬನ್ ಪಾರ್ಕ್: ಪ್ಯಾಂಟ್ ಬಿಚ್ಚಿ ಅಸಭ್ಯ ವರ್ತನೆ

ಬೆಂಗಳೂರು: ಕಬ್ಬನ್ ಪಾರ್ಕ್‌ನಲ್ಲಿ ವಿದೇಶಿ ಮಹಿಳೆಯೊಬ್ಬರ ಎದುರು ವ್ಯಕ್ತಿಯೊಬ್ಬ ಅಸಭ್ಯವಾಗಿ ವರ್ತಿಸಿದ್ದು, ಈ ಕುರಿತು ಎಫ್‌ಐಆರ್ ದಾಖಲಾಗಿದೆ.

‘ಸ್ವೀಡನ್ ದೇಶದ 38 ವರ್ಷದ ಮಹಿಳೆ ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. 50 ವರ್ಷದ ಅಪರಿಚಿತ ವ್ಯಕ್ತಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ಸದ್ಯ ಆರೋಪಿ ತಲೆಮರೆಸಿಕೊಂಡಿದ್ದಾನೆ. ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವುದಕ್ಕಾಗಿ ಮಹಿಳೆ ನಗರಕ್ಕೆ ಬಂದಿದ್ದರು. ಇದೇ ವೇಳೆ ಕಬ್ಬನ್ ಪಾರ್ಕ್‌ಗೆ ಜ. 8ರಂದು ಭೇಟಿ ನೀಡಿದ್ದರು. ಆಗ ಮಹಿಳೆ ಬಳಿ ಬಂದ ಆರೋಪಿ, ತಾನು ಧರಿಸಿದ್ದ ಪ್ಯಾಂಟ್ ಅರ್ಧ ಬಿಚ್ಚಿ ಅಂಗಾಂಗವನ್ನು ತೋರಿಸುತ್ತ ಅಸಭ್ಯವಾಗಿ ವರ್ತಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮುಂಬೈ ರೇಸ್

ಕಿಂಗ್ಸ್ ರಾನ್ಸಮ್ ಗೆಲ್ಲುವ ನಿರೀಕ್ಷೆ

ವಿಲ್ಲೂ ಸಿ.ಪೂನಾವಾಲ ಇಂಡಿಯನ್ ಓಕ್ಸ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಿಂಗ್ಸ್ ರಾನ್ಸಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.15ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆರ್ಬಿಟ್ರೇಝ್ 6, ಚಾಂಪಿಯನ್ ಸ್ಟೈಲ್ 3 ಸೂಪರ್ ಇಂಪೋಸ್ 1
2ನೇ ರೇಸ್: ಸ್ಟೈಫಾಲ್ 1, ಮೊಜೆಲ್ 4, ಅರ್ಕಾನ 5
3ನೇ ರೇಸ್: ರಾಸ್ಪುಟಿನ್ 3, ಗ್ರೇಟ್ ಗನ್ಸ್ 1, ಎಂಪವರ್ 5
4ನೇ ರೇಸ್: ಸ್ನೋಫಾಲ್ 1, ಪಿರಸ್ 9, ಐಸ್ ಆಫ್ ದಿ ಪ್ರೈಜ್ 4
5ನೇ ರೇಸ್: ವೈಲ್ಡ್ ಥಿಂಗ್ 4, ವಿನ್ಸೆಂಟ್ ವ್ಯಾನ್ ಗಾಗ್ 1, ಮ್ಯಾಡ್ ಲವ್ 3
6ನೇ ರೇಸ್: ಅಹೆಡ್ ಆಫ್ ಮೈ ಟೈಮ್ 1, ಒನ್ಸ್ ಯು ಗೋ ಬ್ಲಾಕ್ 4, ಮೊಯಿಟೊ 3
7ನೇ ರೇಸ್: ಪೋರ್ಟೋಫಿನೊ ಬೇ 2, ಐರಿಶ್ ಗೋಲ್ಡ್ 1, ಫೈಟಾನ್ 4
8ನೇ ರೇಸ್: ಕಿಂಗ್ಸ್ ರಾನ್ಸಮ್ 4, ಡೇಂಜರಸ್ 1, ಥನ್‌ಬರ್ಗ್ 7
9ನೇ ರೇಸ್: ದೌಲತ್ ಮಾಯ್ 3, ಅಟ್ಟೈನ್ಡ್ 7, ಮಿಲ್ಲಿ 1
10ನೇ ರೇಸ್: ಪವರ್ ಆಫ್ ನೀತ್ 8, ಪರ್ಫೆಕ್ಟ್ ವಿನ್ 7, ಅಟಾಶ್ 5

ಉತ್ತಮ ಬೆಟ್: ದೌಲತ್ ಮಾಯ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್
3,4,5,6,7	6,7,8,9,10	4,5,6

2ನೇ ಟ್ರಿಬಲ್ 7,8,9 3ನೇ ಟ್ರಿಬಲ್ 8,9,10

ನಗರದಲ್ಲಿ ಇಂದು

ಸಂಕ್ರಾಂತಿ ಹಬ್ಬದ ತತ್ವಪದ ಮತ್ತು ಜಾನಪದ ಗಾಯನ: ಉದ್ಘಾಟನೆ: ನಾಗರತ್ನಾ ಕೆ.ಎಂ. ವೆಂಕಟೇಶ್, ಮುಖ್ಯ ಅತಿಥಿಗಳು: ಮೈಸೂರು ಗುರುರಾಜ್, ಅಶ್ವಥ್, ಸಂತೋಷ್ ಕುಮಾರ್, ಕೆಂಚಮ್ಮ, ಕೆ.ಆರ್. ಶಾಂತಯ್ಯ, ಆಯೋಜನೆ ಹಾಗೂ ಸ್ಥಳ: ಶ್ರೀ ಮಲೆಮಹದೇಶ್ವರ ಸಾಂಸ್ಕೃತಿಕ ಸೇವಾ ಟ್ರಸ್ಟ್, ಏಕದಾರಿ ರಾಮಯ್ಯ ರಸ್ತೆ, ಕೆಂಚನಪಾಳ್ಯ, ಬೆಳಿಗ್ಗೆ 5ರಿಂದ

ವಿಶ್ವಕವಿ ತಿರುವಳ್ಳುವರ್ ಜಯಂತಿ ಆಚರಣೆ: ಮುಖ್ಯ ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಬಿ.ಕೆ. ಹರಿಪ್ರಸಾದ್, ದಿನೇಶ್ ಗುಂಡೂರಾವ್, ಕೆ.ಎಚ್. ಮುನಿಯಪ್ಪ, ರಾಮಲಿಂಗಾರೆಡ್ಡಿ, ಆಯೋಜನೆ: ವಿಶ್ವಕವಿ ತಿರುವಳ್ಳುವರ್ ಜಯಂತಿ ಆಚರಣಾ ಸಮಿತಿ, ಸ್ಥಳ: ತಿರುವಳ್ಳುವರ್ ಪ್ರತಿಮೆ, ಹಲಸೂರು, ಬೆಳಿಗ್ಗೆ 10

‘ಗುರುಕುಲ-ಗೃಹ ಸಮಗ್ರ ಶಿಕ್ಷಣ ದಿಕ್ಸೂಚಿ’ ಗ್ರಂಥ ಲೋಕಾರ್ಪಣೆ: ಸಾನ್ನಿಧ್ಯ: ಸ್ವಾಮಿ ನಿತ್ಯಸ್ಥಾನಂದಜೀ ಮಹಾರಾಜ್, ಸ್ವಾಮಿ ಯೋಗೇಶ್ವರಾನಂದಜೀ ಮಹಾರಾಜ್, ಮುಖ್ಯ ಅತಿಥಿಗಳು: ಪ್ರೊ. ರಾಮಚಂದ್ರ ಜಿ. ಭಟ್ ಕೋಟೆಮನೆ, ಸುರೇಶ್ ವೆಂ. ಕುಲಕರ್ಣಿ, ನೆ.ಲ. ನರೇಂದ್ರ ಬಾಬು ಆಯೋಜನೆ ಹಾಗೂ ಸ್ಥಳ: ಶುಭಂ ಕರೋತಿ ಮೈತ್ರೇಯೀ ಗುರುಕುಲ, ರಾಮೋಹಳ್ಳಿ, ಬೆಳಿಗ್ಗೆ 10.30

ಸಂಕ್ರಾಂತಿ ಸಂಭ್ರಮ: ಚಿತ್ರಕಲಾ, ರಂಗೋಲಿ, ಮೊಸರು ಗಡಿಗೆ ಒಡೆಯುವ ಸ್ಪರ್ಧೆ, ಆಯೋಜನೆ: ಸಂಕ್ರಾಂತಿ ಸೇವಾ ಸಮಿತಿ, ಸ್ಥಳ: ಮಹಾಲಕ್ಷ್ಮಿ ದೇವಸ್ಥಾನದ ಹತ್ತಿರ, 80 ಅಡಿ ರಸ್ತೆ, ಭುವನೇಶ್ವರಿ ನಗರ, ಬೆಳಿಗ್ಗೆ 10.30ರಿಂದ

ನಟರಾಜ್ ಹುಳಿಯಾರ್ ಸಂಪಾದಿಸಿರುವ ‘ಎಲ್ಲರ ಗಾಂಧೀಜಿ’ ಕೃತಿ ಲೋಕಾರ್ಪಣೆ: ಸಿದ್ದರಾಮಯ್ಯ, ಮುಖ್ಯ ಅತಿಥಿ: ಎಚ್.ಸಿ. ಮಹದೇವಪ್ಪ, ಆಯೋಜನೆ: ಪಲ್ಲವ ಪ್ರಕಾಶನ, ಸ್ಥಳ: ಸಿದ್ದರಾಮಯ್ಯ ಅವರ ಗೃಹ ಕಚೇರಿ ಆವರಣ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ನಟರಾಜ್ ಹುಳಿಯಾರ್

27ನೇ ವಾರ್ಷಿಕ ಸಂಕ್ರಾಂತಿ ಸಂಗೀತ ಉತ್ಸವ ಹಾಗೂ ಸಂಗೀತ ಕಲಾನಿಧಿ ಆರ್.ಕೆ. ಶ್ರೀಕಂಠನ್ ಅವರ 103ನೇ ಜನ್ಮ ದಿನಾಚರಣೆ: ಬೆಳಿಗ್ಗೆ 10.30ರಿಂದ: ಕಲಾವಿದರು: ಅರುಣ್ ಕುಮಾರ್, ವೈಭವ ರಮಣಿ, ರಾಧೇಶ, ಸಂಜೆ 5ರಿಂದ: ನಂಬೂದಿರಿ, ಅಚಿತಾ ರಾವ್, ರೇಣುಕಾ ಪ್ರಸಾದ್, ಓಂಕಾರ್ ರಾವ್, ನಿತ್ಯಾ, ವಿದ್ಯಾ, ವಿಶ್ವಜಿತ್, ಎ.ಎಸ್. ಎನ್.ಸ್ವಾಮಿ, ರಾಮದಾಸ್, ಶಿವಮೊಗ್ಗ ಕುಮಾರಸ್ವಾಮಿ, ವೆಂಕಟೇಶ್, ಸುನಿಲ್ ಸುಬ್ರಮಣ್ಯಂ, ಕೃಷ್ಣ ಪ್ರಸಾದ್, ಟಿ.ವಿ. ರಾಮಪ್ರಸಾದ್, ಮತ್ತೂರ್ ಶ್ರೀನಿಧಿ, ಬಿ.ಸಿ. ಮಂಜುನಾಥ್, ಜಿ. ಗುರುಪ್ರಸನ್ನ, ಆಯೋಜನೆ: ವಿದ್ವಾನ್ ಆರ್.ಕೆ. ಶ್ರೀಕಂಠನ್ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ

ಡಾ.ಬಿ.ಟಿ. ರುದ್ರೇಶ್ ಅವರ ‘ಅಶ್ವಿನಿ ಸ್ಪರ್ಶ’ ಕೃತಿ ಲೋಕಾರ್ಪಣೆ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಪುಸ್ತಕ ಪರಿಚಯ; ಗುರುರಾಜ ಕರಜಗಿ, ಮುಖ್ಯ ಅತಿಥಿ: ರಾಮ್‌ಜೀ ಸಿಂಗ್, ಆಯೋಜನೆ: ಹೋಮಿಯೋಪಥಿ ಫೌಂಡೇಷನ್, ಮಡಿಲು ಪ್ರಕಾಶನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11.30


ಡಾ.ಬಿ.ಟಿ. ರುದ್ರೇಶ್

ಕುಸ್ತಿ ಪಂದ್ಯಾವಳಿ, ಕಡಲೆಕಾಯಿ ಪರಿಷೆ ಹಾಗೂ ಬಸವೇಶ್ವರಸ್ವಾಮಿ ರಥೋತ್ಸವ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಮುಮ್ಮಡಿ ನಿರ್ಮಾಣ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ರಥ ಸಮರ್ಪಣೆ: ವಿಜಯೇಂದ್ರ ಯಡಿಯೂರಪ್ಪ, ಉಪಸ್ಥಿತಿ: ಎಂ. ರುದ್ರೇಶ್, ಆಯೋಜನೆ: ಕಾಳಮ್ಮ ಮಲ್ಲೇಶಯ್ಯ ಫೌಂಡೇಷನ್, ರಾಮನಗರ ಜಿಲ್ಲಾ ಅಮೆಚೂರ್ ಕುಸ್ತಿ ಸಂಘ, ಸ್ಥಳ: ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ, ಚನ್ನವೀರಯ್ಯನ ಪಾಳ್ಯ, ಕೆಂಗೇರಿ, ಮಧ್ಯಾಹ್ನ 12

ಸ್ವರ ಸಾಮ್ರಾಟ್ ಉತ್ಸವ: ಭರತನಾಟ್ಯ: ಮಾಳವಿಕಾ ಸರುಕ್ಕೈ, ಗಾಯನ: ಬಾಂಬೆ ಜಯಶ್ರೀ, ತಾಳವಾದ್ಯ: ತಬಲಾ: ಯೋಗೇಶ್ ಸಾಮ್ಸಿ, ಮೃದಂಗ: ಪತ್ರಿ ಸತೀಶ್ ಕುಮಾರ್, ಘಟ: ಗಿರಿಧರ್ ಕುಮಾರ್, ಹಾರ್ಮೋನಿಯಂ: ಮಿಲಿಂದ್ ಕುಲಕರ್ಣಿ, ಜುಗಲ್‌ಬಂದಿ: ಗಾಯನ: ದೇವಪ್ರಿಯ ಅಧಿಕಾರಿ, ಸಿತಾರ: ಸಮನ್ವಯ ಸರ್ಕಾರ್, ತಬಲಾ: ರಾಜೇಂದ್ರ ನಾಕೋಡ್, ಆಯೋಜನೆ: ಶ್ರೀ ರಂಜನಿ ಟ್ರಸ್ಟ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 4

ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯ

‘ಧರ್ಮ ಮೂಲದ ಶಿಕ್ಷಣವೇ ಮೌಲ್ಯ ಶಿಕ್ಷಣವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮ ಮೂಲದ ಶಿಕ್ಷಣವೇ ಮೌಲ್ಯಾಧರಿತ ಶಿಕ್ಷಣವಲ್ಲ, ಮಕ್ಕಳಿಗೆ ಮಾನವೀಯತೆ ಕಲಿಸುವುದೇ ಮೌಲ್ಯಯುತ ಶಿಕ್ಷಣ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಜನ ಪ್ರಕಾಶನ, ನಾಡೋಜ ಡಾ.ಬರಗೂರು ಪ್ರತಿಷ್ಠಾನ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಅಧ್ಯಾಪಕರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಕ್ಷತಾ ಕೃಷ್ಣಮೂರ್ತಿ ಅವರ ‘ಇಸ್ಕೂಲು’ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಎಲ್ಲಾ ಮನುಷ್ಯರೂ ಒಂದೇ ಎಂಬುದೇ ಧರ್ಮ. ಸಂವಿಧಾನದ ಆಶಯಗಳೇ ಮೌಲ್ಯಯುತ ಶಿಕ್ಷಣ. ಅವುಗಳನ್ನು ಅನುಸರಿಸುವುದೇ ನಿಜವಾದ ಮೌಲ್ಯ. ಸಮತೆ ಮತ್ತು ಮಮತೆ ಇರುವ ಮನಸುಗಳನ್ನು ಸೃಷ್ಟಿಸುವುದೇ ಶಿಕ್ಷಣ’ ಎಂದು ಅವರು ಪ್ರತಿಪಾದಿಸಿದರು.

‘ಮಕ್ಕಳಿಗೆ ಅರಿವು ಮತ್ತು ಅಂತಃಕರಣ ಮೌಲ್ಯ ಕಲಿಸಬೇಕು. ಈ ನಿಟ್ಟಿನಲ್ಲಿ ಶಿಕ್ಷಕರನ್ನು ಮೊದಲು ತಯಾರು ಮಾಡಬೇಕು. ಅವರ ಮೂಲಕ ಮಕ್ಕಳಿಗೆ ಮೌಲ್ಯವನ್ನು ಕಲಿಸಬೇಕು. ಇದನ್ನು ಮಾಡದೆ ಏನೇ ಬದಲಾವಣೆ ಮಾಡಿದರೂ ಅದು ಸಾಕಾರವಾಗದು’ ಎಂದರು.

‘ಮೌಲ್ಯಯುತ ಶಿಕ್ಷಣದ ಬಗ್ಗೆ ಮಾತನಾಡುವ ಸರ್ಕಾರ, ಶಿಕ್ಷಣವೇ ದೊಡ್ಡ ಮೌಲ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಧರ್ಮ ಮೂಲ ಶಿಕ್ಷಣ ಹೇರಿ ಮೌಲ್ಯ ಶಿಕ್ಷಣ ಎನ್ನುವುದು ತಪ್ಪು ಕಲ್ಪನೆ’ ಎಂದು ಹೇಳಿದರು.

ಶಿಕ್ಷಣ ಕ್ಷೇತ್ರದ ಸುಧಾರಣೆ ಆಗಬೇಕೆಂದರೆ ಮೊದಲು ಶಿಕ್ಷಕರನ್ನು ಸಿದ್ಧಪಡಿಸಬೇಕು. ಅಧ್ಯಾಪಕರನ್ನು ಕರೆದು ಸುಧಾರಣೆ ಬಗ್ಗೆ ಸಲಹೆಗಳನ್ನು ಸರ್ಕಾರ ಪಡೆದುಕೊಳ್ಳಬೇಕು. ಅಧಿಕಾರಿಗಳು ಮತ್ತು ರಾಜಕಾರಣಿಗಳೇ ಶಿಕ್ಷಣ ಸುಧಾರಣೆ ಬಗ್ಗೆ ಸಭೆ ನಡೆಸಿದರೆ ಪ್ರಯೋಜನವಾಗದು ಎಂದರು.

ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಮೌಲ್ಯಗಳನ್ನು ತುಂಬುವುದು ಹೇಗೆ ಎಂಬುದನ್ನು ‘ಇಸ್ಕೂಲು’ ಪುಸ್ತಕದಲ್ಲಿ ಅಕ್ಷತಾ ಕೃಷ್ಣಮೂರ್ತಿ ಹೇಳಿದ್ದಾರೆ ಎಂದು ಬರಗೂರು ಹೇಳಿದರು. ಪುಸ್ತಕದ ಕುರಿತು ಸಾಹಿತಿ ರಾಜಪ್ಪ ದಳವಾಯಿ ಮಾತನಾಡಿದರು.

‘ಇಸ್ಕೂಲು’ ಪುಸ್ತಕವನ್ನು ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು. ಜನ ಪ್ರಕಾಶನದ ಬಿ.ರಾಜಶೇಖರಮೂರ್ತಿ, ಲೇಖಕಿ ಸುಕನ್ಯಾ ಮಾರುತಿ, ಅಕ್ಷತಾ ಕೃಷ್ಣಮೂರ್ತಿ, ರಾಜಪ್ಪ ದಳವಾಯಿ, ಬೆಂಗಳೂರು ನಗರ ವಿ.ವಿ ಅಧ್ಯಾಪಕರ ಸಂಘದ ಅಧ್ಯಕ್ಷ ಬೆಳಕೆರೆ ಲಿಂಗರಾಜಯ್ಯ ಇದ್ದರು —ಪ್ರಜಾವಾಣಿ ಚಿತ್ರ

ಬಿಡುಗಡೆಯಾದ ಪುಸ್ತಕ

ಪುಸ್ತಕ: ಇಸ್ಕೂಲು (ಲೇಖನಗಳ ಸಂಗ್ರಹ)
ಲೇಖಕರು: ಅಕ್ಷತಾ ಕೃಷ್ಣಮೂರ್ತಿ
ಪುಟ: 184
ಬೆಲೆ: ₹200
ಪ್ರಕಾಶಕರು: ಜನ ಪ್ರಕಾಶನ

14ನೇ ಆವೃತ್ತಿಯ ಚಿತ್ರೋತ್ಸವ ಮಾರ್ಚ್ ಮೊದಲ ವಾರ ನಡೆಯುವುದು ಅನುಮಾನ

• ವಿಶಾಖ ಎನ್.

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ 14ನೇ ಆವೃತ್ತಿಯ ಸಿದ್ಧತಾ ಕೆಲಸಗಳು ಇನ್ನೂ ಪ್ರಾರಂಭವಾಗಿಲ್ಲ. ಇನ್ನೆರಡು ದಿನಗಳಲ್ಲಿ ಲಾಂಛನ ಅನಾವರಣಗೊಳ್ಳುವ ನಿರೀಕ್ಷೆ ಇದ್ದು, ಮಾರ್ಚ್ ಮೊದಲ ವಾರದಲ್ಲಿ ಚಿತ್ರೋತ್ಸವ ಶುರುವಾಗುವುದು ಅನುಮಾನವಾಗಿದೆ.

'ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಧಿಕಾರಿಗಳು ಕೆಲವು ದಿನಗಳ ಕಾಲ ರಜೆಯಲ್ಲಿದ್ದರು. ಸಚಿವ ಆರ್. ಅಶೋಕ ಅವರೊಟ್ಟಿಗೆ ಕಳೆದ ವಾರದಿಂದ ನಿರಂತರ ಸಂಪರ್ಕದಲ್ಲಿರುವೆ. ಇನ್ನು ಮೂರ್ನಾಲ್ಕು ದಿನಗಳಲ್ಲಿ ಚಿತ್ರೋತ್ಸವಕ್ಕೆ ಸಂಬಂಧಿಸಿದ ಮಾಹಿತಿ ಅಧಿಕೃತವಾಗಿ ಹೊರಬೀಳುವ ನಿರೀಕ್ಷೆ ಇದೆ' ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಅಶೋಕ್ ಕಶ್ಯಪ್ ತಿಳಿಸಿದರು.

'ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನ' ತೆರೆಕಂಡಿದ್ದು ಮಾರ್ಚ್‌ನಲ್ಲಿ. ಹೀಗಾಗಿ ಆ ನೆನಪಿನಲ್ಲಿ ಅದೇ ತಿಂಗಳಲ್ಲಿ ಚಿತ್ರೋತ್ಸವ ಆಯೋಜಿಸಬೇಕು ಎನ್ನುವುದು ಎಲ್ಲರ ಬಯಕೆ. ಈ ಕುರಿತು ಅಧಿಕೃತವಾಗಿ ಸರ್ಕಾರಿ ಆದೇಶವೇನೂ ಆಗಿಲ್ಲ. ಈ ಬಾರಿಯೂ ಮಾರ್ಚ್‌ನಲ್ಲಿಯೇ ಆಯೋಜಿಸಲು ಶತಾಯಗತಾಯ ಯತ್ನಿಸುತ್ತೇವೆ' ಎಂದು ಅವರು ಹೇಳಿದರು.

'ಒಂದು ಚಿತ್ರೋತ್ಸವವನ್ನು ಆಯೋಜನೆ ಮಾಡಲು ಕನಿಷ್ಠ 70 ದಿನಗಳ ಪೂರ್ವಭಾವಿ ತಯಾರಿ ಬೇಕು. ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕನಾಗಿ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಎರಡು ತಿಂಗಳ ಹಿಂದೆ ನನಗೆ ಅಧಿಕೃತ ಪತ್ರ ಬಂದಿದೆ. ಇಂತಹ ದಿನದಿಂದ ಚಿತ್ರೋತ್ಸವ ಪ್ರಾರಂಭವಾಗುತ್ತದೆ ಎನ್ನುವುದು ನಿಶ್ಚಯವಾದ ಮೇಲೆ ಉಳಿದ ಕೆಲಸಗಳು ಶುರುವಾಗಲಿವೆ' ಎಂದು ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎಚ್.ಎನ್. ನರಹರಿ ರಾವ್ ಪ್ರತಿಕ್ರಿಯಿಸಿದರು.

'ಗುಣಮಟ್ಟದ ಚಿತ್ರೋತ್ಸವವನ್ನು ತರಾತುರಿಯಿಂದ ನಡೆಸಲಾಗದು. ಸ್ಪರ್ಧೆಗೆ ಬರುವ ಸಿನಿಮಾಗಳನ್ನು ಸೋಸಿ, ಗಟ್ಟಿಯಾದುದನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಲು ಹೆಚ್ಚು ಸಮಯ ಬೇಕಾಗುತ್ತದೆ. ತೀರ್ಪುಗಾರರ ಸಮಿತಿಗಳನ್ನೂ ಇನ್ನೂ ರಚಿಸಿಲ್ಲ. ಕಾನ್ ಮತ್ತಿತರ ಕಡೆ ಪ್ರದರ್ಶಿತವಾದ ಬೇರೆ ಭಾಷೆಯ ಸಿನಿಮಾಗಳನ್ನು ಇಲ್ಲಿಗೆ ಬೇಗ ತರುವುದೇನೊ ಸಾಧ್ಯ. ಅದನ್ನೂ ಮೀರಿ, ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೇ ವಿಶೇಷ ಎನ್ನುವಂತಹ ಸಿನಿಮಾಗಳನ್ನು ಸೇರಿಸಿಕೊಳ್ಳಬೇಕಾದರೆ ಅದಕ್ಕೂ ಹೆಚ್ಚು ಕಾಲಾವಕಾಶ ಬೇಕಾಗುತ್ತದೆ. ಕಳೆದ ಬಾರಿ ಡಿಸೆಂಬರ್‌ನಲ್ಲೇ ಚಿತ್ರೋತ್ಸವದ ಪೂರ್ವ ಸಿದ್ಧತಾ ಕೆಲಸಗಳು ಶುರುವಾಗಿದ್ದವು' ಎಂದು ಆಗ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸದಸ್ಯರಾಗಿದ್ದ ಪ್ರದೀಪ್ ಕೆಂಚನೂರು ಅನುಭವ ಹಂಚಿಕೊಂಡರು. ವಿಧಾನಸಭಾ ಚುನಾವಣೆ ಕೂಡ ಸಮೀಪಿಸುತ್ತಿದೆ. ಅದಕ್ಕೆ ಸಂಬಂಧಿಸಿದಂತೆ ನೀತಿ ಸಂಹಿತೆ ಜಾರಿಯಾಗುವುದರೊಳಗೆ ಚಿತ್ರೋತ್ಸವವನ್ನು ಮುಗಿಸಬೇಕಾದ ಒತ್ತಡದಲ್ಲಿ ಅಕಾಡೆಮಿ ಹಾಗೂ ಸಂಬಂಧಪಟ್ಟ ಸಿನಿಮಾ ಕ್ಷೇತ್ರದ ಸಂಸ್ಥೆಗಳಿವೆ.

'ಇನ್ನೆರಡು ದಿನಗಳಲ್ಲಿ ಲಾಂಛನ'

'ವಿಧಾನಸಭಾ ಚುನಾವಣೆ ಬರಲಿದೆ ಎನ್ನುವುದು ನಿಜ. ಆದರೆ, ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಇದರಿಂದ ವಿಳಂಬವೇನೂ ಆಗದು. ಇನ್ನೆರಡು ದಿನಗಳಲ್ಲಿ ಲಾಂಛನ ಬಿಡುಗಡೆ ಮಾಡುತ್ತೇವೆ. ಮಾರ್ಚ್‌ನಲ್ಲೇ ಚಿತ್ರೋತ್ಸವವನ್ನು ಸುಸೂತ್ರವಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ಕಳೆದ ಬಾರಿ ₹5 ಕೋಟಿ ಬಜೆಟ್ ನೀಡಲಾಗಿತ್ತು. ಈ ಸಲ ₹6 ಕೋಟಿಯನ್ನು ನಿರೀಕ್ಷಿಸಲಾಗಿದೆ' ಎಂದು ಚಿತ್ರೋತ್ಸವದ ಸಂಘಟನಾ ಸಮಿತಿಯ ಅಧ್ಯಕ್ಷರೂ ಆಗಿರುವ ಕಂದಾಯ ಸಚಿವ ಆರ್. ಅಶೋಕ ಅವರು ತಿಳಿಸಿದರು.

ವ್ಯಕ್ತಿ ಸಾವು: ಪೊಲೀಸರ ಅಮಾನತು

ರಜೌರಿ/ಜಮ್ಮು (ಪಿಟಿಐ): 23 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಅನುಮಾನಾಸ್ಪದ ರೀತಿಯಲ್ಲಿ ಸಾವಿಗೀಡಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಮೂವರು ಪೊಲೀಸರನ್ನು ಅಮಾನತು ಮಾಡಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ವ್ಯಕ್ತಿಯು ಗುರುವಾರ ಕಾಣೆಯಾಗಿದ್ದರು. ಬಳಿಕ ಅವರ ಮೃತ ದೇಹ ಪತ್ತೆಯಾಗಿತ್ತು ಎಂದಿದ್ದಾರೆ. 'ಸಿಯೋಟ್‌ನಲ್ಲಿ ಪಾನಮತ್ತನಾಗಿದ್ದ ಸ್ಥಿತಿಯಲ್ಲಿ ವ್ಯಕ್ತಿ ಪತ್ತೆಯಾಗಿದ್ದರು. ಅವರನ್ನು ಆಸ್ಪತ್ರೆಗೆ ಕರೊದೊಯ್ಯುವ ಬದಲು ಪೊಲೀಸರು ಠಾಣೆಗೆ ಕರೆದೊಯ್ದರು' ಎಂದು ಆರೋಪಿಸಲಾಗಿತ್ತು.

ಕಳೆದ ವರ್ಷ ಗರಿಷ್ಠ ಸಂಖ್ಯೆಯಲ್ಲಿ ಅಂಗಾಂಗ, ಅಂಗಾಂಶ ದಾನ

ಸಾವಿನಲ್ಲೂ ಸಾರ್ಥಕತೆ ಕಂಡ 151 ಜೀವ

• ವರುಣ ಹೆಗಡೆ

ಬೆಂಗಳೂರು: ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭಗಳಲ್ಲಿ ಗಂಭೀರ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡವರಲ್ಲಿ ಕಳೆದ ವರ್ಷ 151 ಮಂದಿ ಅಂಗಾಂಗಗಳನ್ನು ದಾನ ಮಾಡಿದ್ದಾರೆ. ಅವರಿಂದ 403 ಅಂಗಾಂಗಗಳು ಹಾಗೂ 348 ಅಂಗಾಂಶಗಳನ್ನು ಸಂಗ್ರಹಿಸಲಾಗಿದೆ.

ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (ಸೊಟ್ಟೊ), ಅಂಗಾಂಗ ಹಾಗೂ ಅಂಗಾಂಶವನ್ನು ಸಂಗ್ರಹಿಸಿ, ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಕಸಿ ಮಾಡಿಸಲು ನೆರವಾಗುತ್ತಿದೆ. ಈ ಸಂಸ್ಥೆಯಡಿ ಕಳೆದ ವರ್ಷ ಗರಿಷ್ಠ ಸಂಖ್ಯೆಯಲ್ಲಿ ಅಂಗಾಂಗ ದಾನ ನಡೆದಿದೆ. 2019ರಲ್ಲಿ 105 ಮಂದಿ ಅಂಗಾಂಗ ದಾನ ಮಾಡಿದ್ದು, 296 ಅಂಗಾಂಗಗಳು ಹಾಗೂ 197 ಅಂಗಾಂಶಗಳನ್ನು ಸಂಗ್ರಹಿಸಲಾಗಿತ್ತು. ಬಳಿಕ ಕೋವಿಡ್ ಕಾಣಿಸಿಕೊಂಡಿದ್ದರಿಂದ ಅಂಗಾಂಗ ದಾನಕ್ಕೆ ಸಮಸ್ಯೆಯಾಗಿತ್ತು. 2020ರಲ್ಲಿ 35 ಮಂದಿ ಮಾತ್ರ ಅಂಗಾಂಗ ದಾನ ಮಾಡಿದ್ದರು. 2022ರ ಮಾರ್ಚ್ ಬಳಿಕ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖ ಆದದ್ದರಿಂದ, ಅಂಗಾಂಗ ದಾನ ಪ್ರಮಾಣ ಏರಿಕೆ ಕಂಡಿದೆ.

2022ರ ಜನವರಿ ತಿಂಗಳಲ್ಲಿ 7 ದಾನಿಗಳಿಂದ 21 ಅಂಗಾಂಗಗಳು ಹಾಗೂ 12 ಅಂಗಾಂಶಗಳನ್ನು ಸಂಗ್ರಹಿಸಿದರೆ, ಅಕ್ಟೋಬರ್ ತಿಂಗಳಲ್ಲಿ 20 ದಾನಿಗಳಿಂದ 57 ಅಂಗಾಂಗಗಳು ಹಾಗೂ 53 ಅಂಗಾಂಶಗಳನ್ನು ಸಂಗ್ರಹಿಸಲಾಗಿದೆ. ಈವರೆಗೆ ತಿಂಗಳೊಂದರಲ್ಲಿ ಸಂಗ್ರಹಿಸಿದ ಗರಿಷ್ಠ ಅಂಗಾಂಗ ಹಾಗೂ ಅಂಗಾಂಶಗಳು ಇವಾಗಿವೆ. ಹೆಚ್ಚಿನವರು ಮೂತ್ರಪಿಂಡಗಳು ಹಾಗೂ ಕಣ್ಣುಗಳನ್ನು ದಾನ ಮಾಡಿದ್ದಾರೆ.

16 ವರ್ಷಗಳಲ್ಲಿ 755 ಮಂದಿ ದಾನ: ಈ ಮೊದಲು ಜೀವಸಾರ್ಥಕತೆ ಹೆಸರಿನಿಂದ ನೋಂದಾಯಿಸಲಾಗಿದ್ದ ಸೊಟ್ಟೊ, ಅಂಗಾಂಗ ದಾನಕ್ಕೆ ಉತ್ತೇಜನ ನೀಡುವುದು ಹಾಗೂ ಮೃತ ದಾನಿಗಳಿಂದ ಅಂಗಾಂಗ ಒದಗಿಸುವ ಕಾರ್ಯವನ್ನು ಮಾಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗವನ್ನು ದಾನವಾಗಿ ಪಡೆಯಲಾಗುತ್ತದೆ. 2007ರಿಂದ 2022ರ ಅವಧಿಯಲ್ಲಿ 755 ಮಂದಿ ಅಂಗಾಂಗ ದಾನ ಮಾಡಿದ್ದಾರೆ. ಇಷ್ಟು ಮಂದಿಯಿಂದ 2,035 ಅಂಗಾಂಗಗಳು ಹಾಗೂ 1,552 ಅಂಗಾಂಶಗಳನ್ನು ಸಂಗ್ರಹಿಸಲಾಗಿದೆ.

'ಮಾನವ ಅಂಗಾಂಗ ದಾನ ಕಸಿ ಕಾಯ್ದೆ 1994 ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿ ಅಂಗಾಂಗಗಳನ್ನು ದಾನ ಮಾಡಬಹುದಾಗಿದೆ. ಹೃದಯ, ಮೂತ್ರಪಿಂಡ, ಶ್ವಾಸಕೋಶ ಸೇರಿ ವಿವಿಧ ಅಂಗಾಂಗಗಳಿಂದ ಐವರಿಗೆ, ಹೃದಯದ ಕವಾಟ, ಚರ್ಮ, ಕಣ್ಣು ಗುಡ್ಡೆ ಸೇರಿ ವಿವಿಧ ಅಂಗಾಂಶಗಳ ನೆರವಿನಿಂದ 50 ಮಂದಿಗೆ ನೆರವಾಗಬಹುದು' ಎಂದು ಸೊಟ್ಟೊ ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದರು.

ಅಂಗಾಂಗ ದಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ಆಸ್ಪತ್ರೆಗಳಲ್ಲಿಯೂ ಈ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಇದರಿಂದ ಅಂಗಾಂಗ ದಾನ ಹೆಚ್ಚಳವಾಗುತ್ತಿದೆ.

ಡಾ.ಸಿ.ಎನ್. ಮಂಜುನಾಥ್
ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

5 ವರ್ಷಗಳಲ್ಲಿ ನಡೆದ ಅಂಗಾಂಗ ದಾನ

ವರ್ಷ	ದಾನಿಗಳು	ಅಂಗಾಂಗ	ಅಂಗಾಂಶ
2018	89	257	183
2019	105	296	197
2020	35	95	68
2021	70	187	90
2022	151	403	348

ಮೂತ್ರಪಿಂಡಕ್ಕೆ ಬೇಡಿಕೆ

ಅಂತಿಮ ಹಂತದ ಅಂಗಾಂಗ ವೈಫಲ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಸೊಟ್ಟೊ ಸಂಸ್ಥೆ ನೆರವಾಗುತ್ತಿದೆ.

ಸಂಸ್ಥೆಯಡಿ ಮೂತ್ರ ಪಿಂಡಕ್ಕಾಗಿ 4,601 ಮಂದಿ, ಯಕೃತ್ತಿಗಾಗಿ 1,267 ಮಂದಿ, ಹೃದಯಕ್ಕಾಗಿ 114 ಮಂದಿ ಹಾಗೂ ಶ್ವಾಸಕೋಶಕ್ಕಾಗಿ 46 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಆದ್ಯತೆ ಅನುಸಾರ ಸಂಸ್ಥೆಯು ಅಂಗಾಂಗಗಳನ್ನು ಒದಗಿಸುತ್ತಿದೆ. ಕಳೆದ 16 ವರ್ಷಗಳಲ್ಲಿ 1,129 ಮೂತ್ರಪಿಂಡ ಹಾಗೂ 1,184 ಕಣ್ಣುಗಳನ್ನು ಸಂಗ್ರಹಿಸಿ, ನೋಂದಾಯಿತರಿಗೆ ಒದಗಿಸಲಾಗಿದೆ.

DS MAX

Home Sweet Home

A handful of Dreams, Desires and Aspirations mixed with abundant Joy of Living, Appreciation and Amenities, garnished with a Lifetime of Assurance, Best Prices and Prime Locations.

Our best-kept secret recipe for you and your loved ones, not just for this festive season but for a lifetime of Happiness, Health & Prosperity.

Happy Sankranti

PRM/KA/RERA/1251/446/PR/210312/004002
K R PURAM
Rs. 39.36 - 65.13 Lacs* - Rs. 3,800 / Sq. Ft.*
SKYSHUBHAM 8880 438 000

NEAR GARDEN CITY UNIVERSITY, BDA APPROVED, 2 & 3-BHK APARTMENTS

APARTMENTS FOR SALE IN VARIOUS LOCATIONS

PRM/KA/RERA/1251/308/PR/201201/003733	PRM/KA/RERA/1251/309/PR/211209/004576	PRM/KA/RERA/1251/308/PR/290122/004660	PRM/KA/RERA/1251/308/PR/280222/004739	PRM/KA/RERA/1251/446/PR/110722/005059	PRM/KA/RERA/1251/309/PR/180120/001878	
ELECTRONIC CITY	YELAHANKA	SARJAPURA	CHANDAPURA	BEGUR	THANISANDRA MAIN ROAD	HENNUR ROAD
NEAR BOSCH HOSA ROAD JUNCTION	ISRO LAYOUT PHASE - II	SARJAPURA - ATTIBELE ROAD	10 MINS. NARAYANA HRUDAYALAYA	10 MINS. SILK BOARD (MADIWALA)	10 MINS. FROM MANYATA TECH PARK	DODDAGUBBI NEAR DECATHLON
₹ 35.00 - 39.37 Lacs*	₹ 37.46 - 64.68 Lacs*	₹ 29.04 - 37.35 Lacs*	₹ 27.45 - 37.20 Lacs*	₹ 31.96 - 46.48 Lacs*	₹ 1.20 - 1.49 Crores*	₹ 31.36 - 75.55 Lacs*
2-BHK	2 & 3-BHK	2 & 3-BHK	2 & 3-BHK	1 & 2-BHK	3-BHK	1, 2 & 3-BHK
₹ 3,500 / Sq. Ft.	₹ 4,200 / Sq. Ft.	₹ 3,000 / Sq. Ft.	₹ 3,000 / Sq. Ft.	₹ 4,000 / Sq. Ft.	READY TO OCCUPY	READY TO OCCUPY
9164 045 000	8880 758 758	9164 122 000	8880 013 310	8880 472 472	8088 779 779	8880 465 465

Contents of this advertisement are only for information; This is not an offer for agreement, and interpretation is not allowed. Reach our sales team for precise communication. And we value your independent inquiries before any definite conclusion. The apartment elevation, colour, landscaping or any features shown are indicative and for representation purposes only. All investment schemes, offers and discounts are subject to the management's discretion and subject to availability. All directions, locations, landmarks and travel times are from various sources and may not be of geographical accuracy, and the use of reliable resources is at your discretion, visit: www.rera.karnataka.gov.in

*T & C Apply

www.dsmaxproperties.com
ಡಿಎಸ್ ಮ್ಯಾಕ್ಸ್

ULB Code : 803162

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಒಂದು ಹೆಜ್ಜೆ ಸ್ವಚ್ಛತೆಯೆಡೆಗೆ

ಬಿಬಿಎಂಪಿ

BSWML ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಸ್ವಚ್ಛ ಸರ್ವೇಕ್ಷಣ್

ನಮ್ಮ ನಡೆ ಸ್ವಚ್ಛತೆಯ ಕಡೆ
ಸ್ವಚ್ಛ ಬೆಂಗಳೂರಿಗಾಗಿ ಪಣತೊಡೋಣ

ಸ್ವಚ್ಛತೆ ನಮ್ಮೆಲ್ಲರ ಆದ್ಯತೆ

ಸ್ವಚ್ಛತೆ ನಮ್ಮ ಮನೆಗೆ ಮಾತ್ರವಲ್ಲ, ನಮ್ಮ ಬೀದಿ, ನಮ್ಮ ನೆರೆಹೊರೆಗೂ ಅದು ಬೇಕು. ದೇಶಕ್ಕೂ ಬೇಕು. ಏಕೆಂದರೆ ನಮ್ಮ ಮನೆ ಮತ್ತು ಅಂಗಳ ಮಾತ್ರ ಸ್ವಚ್ಛವಾಗಿಟ್ಟರೆ ಸಾಲದು, ಇಡೀ ದೇಶವೇ ಸ್ವಚ್ಛವಾಗಿರಬೇಕು. ಇದನ್ನು ಗಮನದಲ್ಲಿಟ್ಟುಕೊಂಡು, ಭಾರತ ಸರ್ಕಾರವು ನಡೆಸುತ್ತಿರುವ ಸ್ವಚ್ಛ ಭಾರತ ಅಭಿಯಾನವನ್ನು ನಮ್ಮ ದೇಶದ ಪ್ರತಿಯೊಂದು ಹಳ್ಳಿ ಮತ್ತು ನಗರಗಳಲ್ಲಿ ಪ್ರಾರಂಭಿಸಲಾಗಿದೆ. ಈ ಅಭಿಯಾನದ ಉದ್ದೇಶವು ಶೌಚಾಲಯಗಳನ್ನು ನಿರ್ಮಿಸುವುದು ಮತ್ತು ದೇಶದ ಮೂಲಸೌಕರ್ಯಗಳನ್ನು ಬದಲಾಯಿಸುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಮ್ಮ ನೆಚ್ಚಿನ ಉದ್ಯಾನ ನಗರಿಯನ್ನು ಸ್ವಚ್ಛ ಸರ್ವೇಕ್ಷಣ ಅಭಿಯಾನದಡಿಯಲ್ಲಿ ದೇಶದ ಒಂದು ಸ್ವಚ್ಛ ನಗರವನ್ನಾಗಿಸಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರ ಸಹಭಾಗಿತ್ವವನ್ನೂ ಅಪೇಕ್ಷಿಸುತ್ತಿದೆ.

ಸ್ವಚ್ಛ ಭಾರತ ಅಭಿಯಾನದ ಉದ್ದೇಶಗಳು :

- ಶೌಚಾಲಯಗಳನ್ನು ನಿರ್ಮಿಸಲು ಮತ್ತು ಬಳಸಲು ಜನರಿಗೆ ಅರಿವು ಮೂಡಿಸುವುದು.
- ತ್ಯಾಜ್ಯವಸ್ತುವನ್ನು ಮನೆಯಲ್ಲೇ ಬೇರ್ಪಡಿಸುವುದು.
- ರಸ್ತೆಗಳನ್ನು ಸ್ವಚ್ಛವಾಗಿರಿಸುವುದು.
- ಬೀದಿ ವ್ಯಾಪಾರಿಗಳಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವುದು.
- ಸಮರ್ಪಕ ಸ್ಯಾನಿಟರಿ ನ್ಯಾಪ್ಕಿನ್ ಗಳ ಸಂಗ್ರಹ ಮತ್ತು ವಿಲೇವಾರಿ.
- ಪ್ಲಾಸ್ಟಿಕ್ ಚೀಲಗಳ ಬಹಿಷ್ಕಾರ
- ಸಾರ್ವಜನಿಕ ಸ್ಥಳಗಳಲ್ಲಿ ಉಗಿಯುವುದು, ಮೂತ್ರ ವಿಸರ್ಜನೆಗೆ ಕಡಿವಾಣ ಹಾಕುವುದು.
- ಬಯಲು ಶೌಚ ನಿರ್ಮೂಲನೆ.
- ಸಾರ್ವಜನಿಕರಲ್ಲಿ ನಿರ್ಮಲೀಕರಣಕ್ಕಾಗಿ ಮಾನಸಿಕ ಬದಲಾವಣೆ.
- ಸಂಪೂರ್ಣ ಕೊಳಗೇರಿ ನಿರ್ಮೂಲನೆ.
- ಮಲ ಹೊರುವ ಪದ್ಧತಿಯ ಸಂಪೂರ್ಣ ನಿರ್ಮೂಲನೆ.
- ಸಾರ್ವಜನಿಕರಲ್ಲಿ ನಿರ್ಮಲೀಕರಣ ಮತ್ತು ಸಾಮಾಜಿಕ ಸ್ವಾಸ್ಥ್ಯದ ನಡುವಿರುವ ಸಂಬಂಧದ ಬಗ್ಗೆ ಜನಜಾಗೃತಿ ಮೂಡಿಸುವುದು.
- ಸ್ವಚ್ಛ ಸರ್ವೇಕ್ಷಣ ಅಭಿಯಾನವು ಭಾರತವನ್ನು ಸ್ವಚ್ಛ ಮತ್ತು ಹಸಿರು ಮಾಡಲು ಉತ್ತಮ ಆರಂಭವಾಗಿದೆ. ಎಲ್ಲಾ ನಾಗರಿಕರು ಒಗ್ಗೂಡಿ ಈ ಅಭಿಯಾನದಲ್ಲಿ ಭಾಗವಹಿಸಿದರೆ ಖಂಡಿತವಾಗಿಯೂ ನಮ್ಮ ಉದ್ಯಾನ ನಗರಿಯ ಅದರ ಎಲ್ಲಾ ಗತ ವೈಭವವನ್ನು ಮರು ಸ್ಥಾಪಿಸಬಹುದು ಮತ್ತು ಅದಕ್ಕಿಂತ ಹೆಚ್ಚಿನದನ್ನು ಸಾಧಿಸಬಹುದು.

ಸ್ವಚ್ಛ ಸರ್ವೇಕ್ಷಣ್-2023 - ನಮ್ಮ ನಗರ ನಮ್ಮ ಹೆಮ್ಮೆ

ನಿಮ್ಮ ನಗರಕ್ಕೆ ಮತ ನೀಡಿ

ಸ್ವಚ್ಛ ಬೆಂಗಳೂರು, ಸ್ವಸ್ಥ ಬೆಂಗಳೂರು - ಆಗಲಿ ನಮ್ಮೆಲ್ಲರ ಉಸಿರು

ನಾಡಿನ ನೈಸರ್ಗಿಕ ಪರಿಸರವನ್ನೊಳಗೊಂಡ ಅರಣ್ಯಗಳು, ಸರೋವರಗಳು, ನದಿಗಳು ಹಾಗೂ ವನ್ಯ ಜೀವಿಗಳನ್ನು ಸಂರಕ್ಷಿಸುವುದು ಹಾಗೂ ಉತ್ತಮಗೊಳಿಸುವುದು ಪ್ರತಿಯೊಬ್ಬ ನಾಗರೀಕನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಆಡಳಿತಗಾರರು ಬಿಬಿಎಂಪಿ | ಮುಖ್ಯ ಆಯುಕ್ತರು ಬಿಬಿಎಂಪಿ

ಡಾರ್ಕ್‌ನೆಟ್ 'ಸಿಂಥೆಟಿಕ್' ಡ್ರಗ್ಸ್ ದಂಧೆ

ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಬಿದ್ದ ಪ್ರಮುಖರು

- **2022:** ಡ್ರಗ್ಸ್ ಖರೀದಿಸುವ ವೇಳೆ ಮಾಜಿ ಸಂಸದ ಆದಿಕೇಶವುಲು ಅವರ ಮೊಮ್ಮಗ ಉದ್ಯಮಿ ಆದಿ ಶ್ರೀನಿವಾಸ್ ನಾಯ್ಡು ಅವರನ್ನು ಎನ್‌ಸಿಬಿ (ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ) ಅಧಿಕಾರಿಗಳು ಬಂಧಿಸಿದ್ದರು
- **2020:** ಡ್ರಗ್ಸ್ ಪ್ರಕರಣದಲ್ಲಿ ನಟಿಯರಾದ ರಾಗಿಣಿ ದ್ವಿವೇದಿ, ಸಂಜನಾ ಗಲ್ರಾನಿ ಸೇರಿ ಹಲವರನ್ನು ಬಂಧಿಸಲಾಗಿತ್ತು. ಸದ್ಯ ಇವರಿಗೆ ಜಾಮೀನು ಸಿಕ್ಕಿದೆ
- **2022:** ಒಳ ಉಡುಪಿನಲ್ಲಿ ಡ್ರಗ್ಸ್ ಬಚ್ಚಿಟ್ಟುಕೊಂಡು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದೊಳಗೆ ಸಾಗಿಸುತ್ತಿದ್ದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಗಂಗಾಧರ್ ಅವರನ್ನು ಪೊಲೀಸರು ಸೆರೆ ಹಿಡಿದಿದ್ದರು.
- **2020:** ಕೆಂಪೇಗೌಡ ನಗರ ಠಾಣೆ ಡ್ರಗ್ಸ್ ಪ್ರಕರಣದಲ್ಲಿ ಮಂಗಳೂರಿನ ಪ್ರತೀಕ್ ಶೆಟ್ಟಿ, ಕಾಂಗ್ರೆಸ್ ಮುಖಂಡರೂ ಆಗಿರುವ ಮಾಜಿ ಸಚಿವ ಹಾವೇರಿಯ ರುದ್ರಪ್ಪ ಲಮಾಣಿ ಪುತ್ರ ದರ್ಶನ್ ಅವರನ್ನು ಬಂಧಿಸಲಾಗಿತ್ತು
- **2022:** ಟ್ರಿನಿಟಿ ವೃತ್ತ ಬಳಿಯ 'ದಿ ಪಾರ್ಕ್' ಪಂಚತಾರಾ ಹೋಟೆಲ್ ಐ–ಬಾರ್‌ನಲ್ಲಿ ಡ್ರಗ್ಸ್ ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟ ಶಕ್ತಿ ಕಪೂರ್ ಅವರ ಮಗ ಸಿದ್ಧಾಂತ್ (38) ಅವರನ್ನು ಹಲಸೂರು ಪೊಲೀಸರು ಬಂಧಿಸಿದ್ದರು
- **2022:** ಡ್ರಗ್ಸ್ ಪ್ರಕರಣದಲ್ಲಿ ಮಹಿಳಾ ಉದ್ಯಮಿ ಸೋನಿಯಾ ಅಗರವಾಲ್ ಹಾಗೂ ವೈದ್ಯ ಡಾ. ದಿಲೀಪ್ ಎಂಬುವರನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದರು

ಡ್ರಗ್ಸ್: ಬೆಂಗಳೂರಿನ 2022ರ ಅಂಕಿ–ಅಂಶ

579 ಡ್ರಗ್ಸ್ ಸಾಗಣೆ, ಮಾರಾಟದ ವೇಳೆ ಬಂಧಿತರು

3,448 ಡ್ರಗ್ಸ್ ಸೇವನೆ ವೇಳೆ ಸಿಕ್ಕಿಬಿದ್ದವರು

ವಿದೇಶಿಗರೇ ಮೊದಲು

'ಸಿಂಥೆಟಿಕ್ ಡ್ರಗ್ಸ್ ಮಾರಾಟದಲ್ಲಿ ವಿದೇಶಿಗರೇ ಮುಂಚೂಣಿಯಲ್ಲಿದ್ದಾರೆ. ರಾಜ್ಯದಲ್ಲಿ ನೆಲೆಸಿರುವ ವಿದೇಶಿ ಪ್ರಜೆಗಳ ಪೈಕಿ ಹಲವರು, ಡ್ರಗ್ಸ್ ಮಾರಾಟದಲ್ಲಿ ತೊಡಗಿರುವುದು ಹಲವು ಪ್ರಕರಣಗಳಲ್ಲಿ ಪತ್ತೆಯಾಗಿದೆ' ಎನ್ನುತ್ತಾರೆ ಪೊಲೀಸರು.

'ತಮ್ಮ ದೇಶದಲ್ಲಿ ಕಡಿಮೆ ಬೆಲೆಗೆ ಸಿಗುವ ಡ್ರಗ್ಸ್ ಖರೀದಿಸಿ ರಾಜ್ಯಕ್ಕೆ ತಂದು, ಇಲ್ಲಿಯ ಮಧ್ಯವರ್ತಿಗಳ ಮೂಲಕ ಮಾರುತ್ತಿದ್ದಾರೆ' ಎಂದು ಹೇಳುತ್ತಾರೆ.

'ಗ್ರಾಂ.ಗೆ ಕನಿಷ್ಠ ₹3 ಸಾವಿರದಿಂದ ₹50 ಸಾವಿರವರೆಗೂ ಸಿಂಥೆಟಿಕ್ ಡ್ರಗ್ಸ್ ಮಾರಾಟವಾಗುತ್ತಿದೆ. ಕೆಲ ತಾರೆಯರು, ಗರಿಷ್ಠ ಬೆಲೆಯ ಡ್ರಗ್ಸ್ ಖರೀದಿಸಲು ಇಷ್ಟಪಡುತ್ತಾರೆ. ಉಳಿದಂತೆ, ಕಾಲೇಜು ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳು, ಕನಿಷ್ಠ ಹಾಗೂ ಮಧ್ಯಮ ಬೆಲೆಯ ಡ್ರಗ್ಸ್ ಖರೀದಿಸುತ್ತಾರೆ' ಎಂದು ತಿಳಿಸುತ್ತಾರೆ.

ಒಂದನೇ ಪುಟದಿಂದ...

ಮೈಸೂರಿನಲ್ಲಿ ಕಾನೂನು ವಿದ್ಯಾರ್ಥಿ ಹಾಗೂ ವಕೀಲರೊಬ್ಬರು ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದರು. ಮಂಗಳೂರಿನ ಐದು ವೈದ್ಯಕೀಯ ಕಾಲೇಜುಗಳ ಇಬ್ಬರು ವೈದ್ಯರು, ಎಂಬಿಬಿಎಸ್, ಬಿಡಿಎಸ್ ಹಾಗೂ ಎಂಡಿ ಕಲಿಯುತ್ತಿರುವ 11 ವೈದ್ಯ ವಿದ್ಯಾರ್ಥಿಗಳು ಸೆರೆ ಸಿಕ್ಕಿದ್ದಾರೆ. ಗ್ರಾಹಕರಾಗಿ ಜಾಲದೊಳಗೆ ಪ್ರವೇಶಿಸಿದ್ದ ವೈದ್ಯರು, ಕ್ರಮೇಣ ಪೆಡ್ಲರ್ ಆಗಿ ಮಾರ್ಪಟ್ಟಿದ್ದಾರೆ.

ಡ್ರಗ್ಸ್‌ನಲ್ಲಿ ಮೂರು ವಿಧ: ದೇಶದೊಳಗೆ ಸಾಮಾನ್ಯವಾಗಿ ಸಿಗುವ ಅಫೀಮು, ಗಾಂಜಾ ಹಾಗೂ ಕೋಕಾ.. ಇವು ನೈಸರ್ಗಿಕ ಮಾದಕ ವಸ್ತುಗಳು. ಆಂಧ್ರಪ್ರದೇಶ, ಕೇರಳ, ಅಸ್ಸಾಂ, ಒಡಿಶಾ ಹಾಗೂ ಕರ್ನಾಟಕದ ಕೆಲವೆಡೆ ಈ ಮಾದಕ ವಸ್ತು ದೊರೆಯುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸೆಮಿ ಸಿಂಥೆಟಿಕ್ ಹಾಗೂ ಸಿಂಥೆಟಿಕ್ ಡ್ರಗ್ಸ್ ಉತ್ಪಾದನೆ ಹೇರಳವಾಗಿದ್ದು, ಬೆಲೆಯೂ ದುಬಾರಿ.

'ನೈಸರ್ಗಿಕ ಡ್ರಗ್ಸ್ ಜೊತೆ ರಾಸಾಯನಿಕ ವಸ್ತು ಮಿಶ್ರಣ ಮಾಡಿ ತಯಾರಿಸುವುದೇ ಸೆಮಿ ಸಿಂಥೆಟಿಕ್ ಡ್ರಗ್ಸ್ (ಮಾರ್ಫಿನ್, ಹೆರಾಯಿನ್, ಕೊಡೈನ್). ಶೇ 100ರಷ್ಟು ರಾಸಾಯನಿಕವನ್ನೇ ಬಳಸಿ ಸಿದ್ಧಪಡಿಸುವುದು ಸಿಂಥೆಟಿಕ್ ಡ್ರಗ್ಸ್ (ಆ್ಯಂಫೆಟಮೈನ್, ಮೆಥಾಂಫೆಟಮೈನ್, ಎಂಡಿಎಂಎ, ಎಲ್‌ಎಸ್‌ಡಿ, ಕೆಟಾಮಿನ್, ಸೂಡೊ ಎಫೆಡ್ರೈನ್, ಟ್ರಮಡೋಲ್, ಎಕ್ಸ್‌ಟೆಸಿ, ಕೊಕೇನ್ ಇತರೆ). ಇವುಗಳಿಗೆ ಹೆಚ್ಚಿನ ಬೇಡಿಕೆ ಬಂದಿದ್ದು, ಹಲವು ಪೆಡ್ಲರ್‌ಗಳು ಸಿಂಥೆಟಿಕ್ ಡ್ರಗ್ಸ್ ವ್ಯವಹಾರದಲ್ಲಿ ತೊಡಗಿಕೊಂಡಿದ್ದಾರೆ' ಎಂದು ಹೆಸರು ಹೇಳಲಿಚ್ಛಿಸದ ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಡ್ರಗ್ಸ್ ಜಾಲದಿಂದ ಹರಿದುಬರುವ ಕೋಟಿ ಕೋಟಿ ಹಣ, ಮಧ್ಯವರ್ತಿಗಳು, ಪೆಡ್ಲರ್‌ಗಳು, ಕೆಲ ಪೊಲೀಸರು, ಕೆಲ ರಾಜಕಾರಣಿಗಳು ಹಾಗೂ ಪಾರ್ಟಿ ಆಯೋಜಿಸುವ ಖಾಸಗಿ ಏಜೆನ್ಸಿಗಳ ಕೈ ಸೇರುತ್ತಿರುವ ಮಾಹಿತಿ ಇದೆ.

ಡಾರ್ಕ್‌ನೆಟ್ ಖರೀದಿ, ಕೊರಿಯರ್‌ನಲ್ಲಿ ಸಾಗಣೆ: 'ಬೆಂಗಳೂರು, ಮುಂಬೈ, ದೆಹಲಿ, ಗೋವಾ, ರಾಜಸ್ಥಾನ, ಕೊಲ್ಕತ್ತಾ, ಜೈಪುರ, ಹೈದರಾಬಾದ್... ಹಲವು ನಗರಗಳಲ್ಲಿ ಸಿಂಥೆಟಿಕ್ ಡ್ರಗ್ಸ್ ಮಾರಾಟ ಜೋರಾಗಿದೆ. ಡಾರ್ಕ್‌ನೆಟ್ ಮೂಲಕ ಖರೀದಿ ನಡೆದಿದೆ. ಕ್ರಿಪ್ಟೊ ಕರೆನ್ಸಿ ಮೂಲಕ ನಗದು ವರ್ಗಾವಣೆ ಆಗುತ್ತಿದೆ. ಈ ವ್ಯವಹಾರವನ್ನು ಭೇದಿಸುವುದು ತುಂಬಾ ಕಷ್ಟ' ಎಂದು ಹೇಳಿದರು.

'ಬಟ್ಟೆ, ಪಾತ್ರೆ, ಸೋಪು, ಆಟಿಕೆ, ಕ್ರೀಡಾ ಸಾಮಗ್ರಿ, ಅಲಂಕಾರಿಕ ಸಾಮಗ್ರಿ, ಹೀಗೆ... ವಿವಿಧ ವಸ್ತುಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಅಂತರರಾಷ್ಟ್ರೀಯ ಕೊರಿಯರ್ ಮೂಲಕ ಆಯಾ ದೇಶಗಳಿಗೆ ಕಳುಹಿಸಲಾಗುತ್ತಿದೆ. ಅತ್ಯಾಧುನಿಕ ತಂತ್ರಜ್ಞಾನದ ಅಲಭ್ಯತೆಯಿಂದಾಗಿ ಕೊರಿಯರ್ ಸ್ಕ್ಯಾನಿಂಗ್ ಪ್ರಕ್ರಿಯೆ ಸಮರ್ಪಕವಾಗಿ ನಡೆಯುತ್ತಿಲ್ಲ. ಹೀಗಾಗಿ, ಡ್ರಗ್ಸ್ ಪೊಟ್ಟಣ ಸುಲಭವಾಗಿ ಉಪ ಪೆಡ್ಲರ್‌ಗಳ ಕೈ ಸೇರುತ್ತಿದೆ. ಅಲ್ಲಿಂದ, ಗ್ರಾಹಕರಿಗೆ ತಲುಪುತ್ತಿದೆ' ಎಂದು ಅಧಿಕಾರಿ ವಿವರಿಸಿದರು.

'ಯಾರಾದರೂ ಮಾಹಿತಿ ನೀಡಿದರೆ ಮಾತ್ರ ತನಿಖಾ ತಂಡಗಳು, ಕೊರಿಯರ್ ಕೇಂದ್ರದಲ್ಲಿ ತಪಾಸಣೆ ನಡೆಸಿ ಡ್ರಗ್ಸ್ ಪತ್ತೆ ಮಾಡುತ್ತವೆ. ವಿದೇಶದಿಂದ ಬರುವ ಪ್ರತಿಯೊಂದು ಕೊರಿಯರ್ ಬಿಚ್ಚಿ ನೋಡಲು ಸಾಧ್ಯವಿಲ್ಲ. ಜೊತೆಗೆ, ವಿಮಾನ ನಿಲ್ದಾಣದಲ್ಲೂ ಭದ್ರತಾ ಸಿಬ್ಬಂದಿ ಕಣ್ತಪ್ಪಿಸಿ ಕೊರಿಯರ್ ಹೊರಗೆ ಬರುತ್ತದೆ. ಕೆಲವು ಬಾರಿ ಮಾತ್ರ ಭದ್ರತಾ ಸಿಬ್ಬಂದಿ ಕಣ್ಣಿಗೆ ಡ್ರಗ್ಸ್ ಬೀಳುತ್ತದೆ. ತಪಾಸಣೆ ವೈಫಲ್ಯಗಳಿಂದ ಪೆಡ್ಲರ್‌ಗಳಿಗೆ ಅನುಕೂಲವಾಗಿದೆ. ಇತ್ತೀಚೆಗೆ ಬಂಧಿಸಿದ್ದ ಕೆಲ ಆರೋಪಿಗಳು, ಡಾರ್ಕ್‌ನೆಟ್ ಬಗ್ಗೆ ಮಾಹಿತಿ ನೀಡಿದ್ದರು. ಆದರೆ, ಮುಖ್ಯ ಪೆಡ್ಲರ್‌ಗಳ ಬಗ್ಗೆ ಇದುವರೆಗೂ ಯಾವುದೇ ಸುಳಿವು ಸಿಕ್ಕಿಲ್ಲ' ಎಂದು ಹೇಳಿದರು.

ತಪಾಸಣೆ ಕಡಿಮೆ ಎಂಬ ಕಾರಣಕ್ಕೆ ಕೆಲವೆಡೆ ಇವುಗಳ ಸಾಗಣೆಗಾಗಿ ಯುವತಿಯರನ್ನು ಬಳಸಿಕೊಳ್ಳಲಾಗುತ್ತಿದೆ. ಇಂಥ ಐವರು ಯುವತಿಯರನ್ನು 2022ರ ಮೇ 24ರಂದು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದ ಎನ್‌ಸಿಬಿ ಅಧಿಕಾರಿಗಳು, ₹54.50 ಕೋಟಿ ಮೌಲ್ಯದ 34 ಕೆ.ಜಿ 89 ಗ್ರಾಂ ಹೆರಾಯಿನ್ ಜಪ್ತಿ ಮಾಡಿದ್ದರು. ರೈಲು, ಬಸ್ ಹಾಗೂ ವಾಹನಗಳಲ್ಲೂ ಡ್ರಗ್ಸ್ ಸಾಗಿಸುವವರು ಇದ್ದಾರೆ.

ಕೆಲ ಉದ್ಯಮಿಗಳು, ಸಿನಿ ತಾರೆಯರು ಹಾಗೂ ಗಣ್ಯ ವ್ಯಕ್ತಿಗಳು ಪಾಲ್ಗೊಳ್ಳುತ್ತಿದ್ದ ಪಾರ್ಟಿಗಳಲ್ಲಿ ಸಿಂಥೆಟಿಕ್ ಡ್ರಗ್ಸ್ ಬಳಕೆಯಾಗುತ್ತಿತ್ತು. ಕ್ರಮೇಣ ಇಂಥ ಪಾರ್ಟಿಗಳು ಹಲವೆಡೆ ಆಯೋಜನೆಗೊಂಡು, ಇದೀಗ ವ್ಯಾಪ್ತಿಯನ್ನು ವಿಸ್ತರಿಸಿವೆ. ಸಂಗೀತ ಸೇರಿದಂತೆ ವಿವಿಧ ಕಾರ್ಯಕ್ರಮ ಸಂಘಟಿಸುವ ಸೋಗಿನಲ್ಲಿ ಕೆಲ ಖಾಸಗಿ ಏಜೆನ್ಸಿಗಳು, ಇವುಗಳ ಮಾರಾಟಕ್ಕೆ ವೇದಿಕೆ ಕಲ್ಪಿಸುತ್ತಿವೆ. ಜಾಹೀರಾತು ನೀಡಿ ಯುವಕ–ಯುವತಿಯರನ್ನು ಆಹ್ವಾನಿಸಿ ಮತ್ತಿನಲ್ಲಿ ತೇಲಿಸಲಾಗುತ್ತಿದೆ.

ಸಿಂಥೆಟಿಕ್ ಡ್ರಗ್ಸ್ ತಯಾರಿಸುತ್ತಿದ್ದ ಆರೋಪಿ ಮನೆಯಲ್ಲಿ ಜಪ್ತಿ ಮಾಡಲಾದ ಪ್ರಯೋಗಾಲಯದ ಪರಿಕರಗಳು

ಏನಿದು ಡಾರ್ಕ್‌ನೆಟ್

ಎನ್‌ಕ್ರಿಪ್ಟ್ (ಸಂದೇಶ ಅಥವಾ ಮಾಹಿತಿಯನ್ನು ಕೋಡ್ ಆಗಿ ಪರಿವರ್ತಿಸುವ ಒಂದು ಅಕ್ರಮ ವ್ಯವಸ್ಥೆ. ಇದನ್ನು 'ಕೀ' ಹೊಂದಿರುವವರು ಮಾತ್ರ ಓದಬಹುದು) ಮಾಡಲಾದ ಸರ್ಚ್ ಎಂಜಿನ್‌ಗಳ ಅಕ್ರಮ ತಾಣವೇ ಡಾರ್ಕ್‌ನೆಟ್. ಇದನ್ನು ಡಾರ್ಕ್ ವೆಬ್ ಎಂದು ಸಹ ಕರೆಯುತ್ತಾರೆ.

'ಡಾರ್ಕ್‌ನೆಟ್ ಕತ್ತಲಿನ ಸಾಮ್ರಾಜ್ಯವಾಗಿದ್ದು, ಇಲ್ಲಿ ಕೋಡಿಂಗ್ ಸಂವಹನದಿಂದ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ. ಇಲ್ಲಿ ಒಬ್ಬರ ಮುಖ ಮತ್ತೊಬ್ಬರಿಗೆ ಹಾಗೂ ಒಬ್ಬರ ಮಾಹಿತಿ ಮತ್ತೊಬ್ಬರಿಗೆ ಗೊತ್ತಾಗುವುದಿಲ್ಲ. ಏನು ಬೇಕು? ಎಷ್ಟು ಬೇಕು? ಎಂಬುದಷ್ಟೇ ಮುಖ್ಯ. ಖರೀದಿಸಿದ ವಸ್ತು, ಕೊರಿಯರ್ ಹಾಗೂ ಇತರೆ ಮಾರ್ಗದ ಮೂಲಕ ಡೆಲಿವರಿ ಆಗುತ್ತದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

ಮಿನಿ ಲ್ಯಾಬ್‌ನಲ್ಲಿ ತಯಾರಿ: 'ಕೆಲ ರಾಸಾಯನಿಕಗಳ ವೈಜ್ಞಾನಿಕ ಮಿಶ್ರಣದಿಂದ ಸುಲಭವಾಗಿ ಸಿಂಥೆಟಿಕ್ ಡ್ರಗ್ಸ್ ತಯಾರಿಸಬಹುದು. ಈ ಬಗ್ಗೆ ತಿಳಿದುಕೊಂಡ ಪೆಡ್ಲರ್‌ಗಳು, ಮನೆ ಹಾಗೂ ಕಚೇರಿಯಲ್ಲೇ ಸಣ್ಣದೊಂದು ಲ್ಯಾಬ್ ಸೃಷ್ಟಿಸಿಕೊಂಡು ಡ್ರಗ್ಸ್ ತಯಾರಿಸುತ್ತಿದ್ದಾರೆ' ಎಂದು ಡ್ರಗ್ಸ್ ವಿರುದ್ಧದ ಕಾರ್ಯಾಚರಣೆಯಲ್ಲಿದ್ದ ಹೆಸರು ಹೇಳಲಿಚ್ಛಿಸದ ಪೊಲೀಸ್ ಅಧಿಕಾರಿ ಮಾಹಿತಿ ನೀಡಿದರು.

'ವಿದೇಶದಿಂದ ಡ್ರಗ್ಸ್ ಖರೀದಿಸಿ ತರಲು ಹೆಚ್ಚು ಹಣ ಬೇಕು. ಆಕಸ್ಮಾತ್, ತನಿಖಾ ತಂಡಗಳ ಕೈಗೆ ಡ್ರಗ್ಸ್ ಸಿಕ್ಕರೆ ಹಣ ವ್ಯರ್ಥ. ಇದೇ ಕಾರಣಕ್ಕೆ ಪೆಡ್ಲರ್‌ಗಳು, ಸಣ್ಣ ಲ್ಯಾಬ್ ನಿರ್ಮಿಸಿ ಸಿಂಥೆಟಿಕ್ ಡ್ರಗ್ಸ್ ತಯಾರಿಸುತ್ತಿದ್ದಾರೆ. ಅದನ್ನು ವ್ಯವಸ್ಥಿತ ಜಾಲದ ಮೂಲಕ ಗ್ರಾಹಕರಿಗೆ ತಲುಪಿಸಿ ಹಣ ಗಳಿಸುತ್ತಿದ್ದಾರೆ' ಎಂದು ಅವರು ತಿಳಿಸಿದರು.

'ಬೆಂಗಳೂರಿನ ಸೋಲದೇವನಹಳ್ಳಿಯಲ್ಲಿ ವಾಸವಿದ್ದ ನೈಜೀರಿಯಾ ಪ್ರಜೆಯೊಬ್ಬ ಬಾಡಿಗೆ ಮನೆಯಲ್ಲಿ ಕಿರು ಪ್ರಯೋಗಾಲಯ (ಮಿನಿ ಲ್ಯಾಬ್) ಸ್ಥಾಪಿಸಿದ್ದ. ಕೆಲ ರಾಸಾಯನಿಕ, 10 ಲೀಟರ್ ಸಾಮರ್ಥ್ಯದ ಪ್ರೆಷರ್ ಕುಕ್ಕರ್, ಪ್ಲಾಸ್ಟಿಕ್ ಕೊಳವೆ ಹಾಗೂ ಕಚ್ಚಾ ವಸ್ತು ಬಳಸಿ

ಸಿಂಥೆಟಿಕ್ಸ್ ಡ್ರಗ್ಸ್ ಮಾರುಕಟ್ಟೆ ದರ (1 ಗ್ರಾಂ.ಗೆ)

ಡ್ರಗ್ಸ್	ಸಗಟು	ಬಿಡಿ
ಮಾರ್ಫಿನ್	₹5 ಸಾವಿರ	₹10 ಸಾವಿರ
ಹೆರಾಯಿನ್	₹6 ಸಾವಿರ	₹12 ಸಾವಿರ
ಕೊಡೈನ್	₹7 ಸಾವಿರ	₹7 ಸಾವಿರ
ಆ್ಯಂಫೆಟಮೈನ್	₹2,500	₹8 ಸಾವಿರ
ಮೆಥಾಂಫೆಟಮೈನ್	₹2,500	₹8 ಸಾವಿರ
ಎಂಡಿಎಂಎ	₹4 ಸಾವಿರ	₹10 ಸಾವಿರ
ಎಲ್‌ಎಸ್‌ಡಿ	₹1,500	₹6 ಸಾವಿರ
ಸೂಡೊ ಎಫೆಡ್ರೈನ್	₹5 ಸಾವಿರ	₹10 ಸಾವಿರ
ಟ್ರಮಡೋಲ್	₹2 ಸಾವಿರ	₹5 ಸಾವಿರ
ಎಕ್ಸ್‌ಟೆಸಿ	₹1,500	₹5 ಸಾವಿರ
ಕೊಕೇನ್	₹4 ಸಾವಿರ	₹10 ಸಾವಿರ

ಡ್ರಗ್ಸ್ ತಯಾರಿಸುತ್ತಿದ್ದ. ಮನೆ ಮೇಲೆ ದಾಳಿ ಮಾಡಿ, ₹50 ಲಕ್ಷ ಮೌಲ್ಯದ ಕೊಕೇನ್ ಹಾಗೂ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿತ್ತು' ಎಂದು ಹೇಳಿದರು.

'ಹೈದರಾಬಾದ್ ಬಾಲನಗರದಲ್ಲಿರುವ ಮನೆಯೊಂದರಲ್ಲಿ ಮಿನಿ ಲ್ಯಾಬ್ ಮಾಡಿಕೊಂಡು, ಆಲ್ಪ್ರಝೋಲಮ್ ಡ್ರಗ್ಸ್ ತಯಾರಿಸಲಾಗುತ್ತಿತ್ತು. ಎನ್‌ಸಿಬಿ ಅಧಿಕಾರಿಗಳು ದಾಳಿ ಮಾಡಿ, ₹12.75 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿ ನಾಲ್ವರನ್ನು ಜೈಲಿಗಟ್ಟಿದ್ದರು' ಎಂದು ತಿಳಿಸಿದರು.

'ಕೋಲಾರ ಜಿಲ್ಲೆಯ ಮುಳಬಾಗಿಲು ನಗರದ ಮನೆಯೊಂದರಲ್ಲಿ ಮಿನಿ ಲ್ಯಾಬ್ ನಿರ್ಮಿಸಿ, ಮೆಥಾಂಫೆಟಮೈನ್ ತಯಾರಿಸಲಾಗುತ್ತಿತ್ತು. ಮನೆ ಮೇಲೆ ದಾಳಿ ಮಾಡಿದ್ದ ಪೊಲೀಸರು, ಮುಂಬೈನ ಇಬ್ಬರು ಹಾಗೂ ಅಸ್ಸಾಂನ ನಾಲ್ವರನ್ನು ಬಂಧಿಸಿದ್ದರು' ಎಂದರು.

ಬದಲಾದ ಡೆಲಿವರಿ ಸ್ವರೂಪ: ಗ್ರಾಹಕರಿಗೆ ಡ್ರಗ್ಸ್ ಡೆಲಿವರಿ ಮಾಡುವ ಸ್ವರೂಪ ಬದಲಾಗಿದೆ. ನಿಗದಿತ ಸ್ಥಳಕ್ಕೆ ಹೋಗಿ ಗ್ರಾಹಕರ ಕೈಗೆ ಡ್ರಗ್ಸ್ ಕೊಟ್ಟು ಬರುತ್ತಿದ್ದ ಮಧ್ಯವರ್ತಿಗಳು, ಪೊಲೀಸರು ತಮ್ಮನ್ನು ಬಂಧಿಸಬಹುದೆಂಬ ಭಯದಲ್ಲಿ ನಾನಾ ರೂಪದಲ್ಲಿ ತಲುಪಿಸುತ್ತಿದ್ದರು.

'ಮೊಬೈಲ್ ಆ್ಯಪ್, ಸಾಮಾಜಿಕ ಮಾಧ್ಯಮಗಳಲ್ಲಿ ಕೋಡ್ ವರ್ಡ್ ಮೂಲಕ ಡ್ರಗ್ಸ್ ಖರೀದಿ ನಡೆಯುತ್ತಿದೆ. ಆಹಾರ ಪೂರೈಕೆ ಆ್ಯಪ್ ಕಂಪನಿಗಳ ಪ್ರತಿನಿಧಿಗಳ ಸೋಗಿನಲ್ಲಿ ಡೆಲಿವರಿ ಮಾಡಲಾಗುತ್ತಿದೆ. ಕೆಲವರು, ನಿರ್ಜನ ಪ್ರದೇಶದಲ್ಲಿ ಡ್ರಗ್ಸ್ ಇರಿಸಿ ಅದರ ಲೊಕೇಶನ್‌ಗಳನ್ನು ಗ್ರಾಹಕರಿಗೆ ಕಳುಹಿಸುತ್ತಿದ್ದಾರೆ. ಗ್ರಾಹಕರು ಅಲ್ಲಿಗೆ ಹೋಗಿ ಡ್ರಗ್ಸ್ ಪಡೆಯುತ್ತಿದ್ದಾರೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಕೆಲ ಪೊಲೀಸರೂ ಶಾಮೀಲು: ಈ ದಂಧೆಯ ಆರೋಪಿಗಳ ಜೊತೆ ಕೆಲ ಪೊಲೀಸರು ಶಾಮೀಲಾಗಿರುವ ಪ್ರಕರಣಗಳು ವರದಿಯಾಗುತ್ತಿವೆ. ತಪ್ಪಿತಸ್ಥ ಪೊಲೀಸರ ತಲೆದಂಡವೂ ಆಗುತ್ತಿದೆ. ಕೆಲವೆಡೆ ಪೊಲೀಸರ ಕೃಪಾಕಟಾಕ್ಷದಿಂದ ಡ್ರಗ್ಸ್ ಮಾರಾಟ ಆಗುತ್ತಿರುವುದು ಜಗಜ್ಜಾಹೀರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರ್.ಟಿ.ನಗರ ಮನೆ ಭದ್ರತೆಯಲ್ಲಿದ್ದ ಹೆಡ್ ಕಾನ್‌ಸ್ಟೆಬಲ್ ಸಂತೋಷ್ ಹಾಗೂ ಕಾನ್‌ಸ್ಟೆಬಲ್ ಶಿವಕುಮಾರ್ ಡ್ರಗ್ಸ್ ಹೊಂದಿದ್ದ ಪ್ರಕರಣದಲ್ಲಿ ಸಿಕ್ಕಿಬಿದ್ದು ಅಮಾನತಾಗಿದ್ದರು. ರಾಜಕಾರಣಿ, ವೈದ್ಯ, ಉದ್ಯಮಿ ಸೇರಿದಂತೆ ಹಲವು ಪ್ರಭಾವಿ ವ್ಯಕ್ತಿಗಳ ಮಕ್ಕಳು ಸೇರಿಕೊಂಡು ನಡೆಸುತ್ತಿದ್ದ ಈ ಜಾಲದ ಕೃತ್ಯಕ್ಕೆ ಸಹಕರಿಸಿದ್ದ ಆರೋಪದಡಿ ಸದಾಶಿವನಗರ ಠಾಣೆ ಹೆಡ್ ಕಾನ್‌ಸ್ಟೆಬಲ್ ಪ್ರಭಾಕರ್ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು.

ಡ್ರಗ್ಸ್ ಆರೋಪಿಗಳ ಬಗ್ಗೆ ಮಾಹಿತಿ ಕಲೆಹಾಕಲು ಪೊಲೀಸರು ಕೆಲ ಬಾತ್ಮಿದಾರರನ್ನು ನಂಬಿಕೊಂಡಿದ್ದಾರೆ. ಅಂಥ ಬಾತ್ಮಿದಾರರೂ ಪೆಡ್ಲರ್‌ಗಳ ಜೊತೆ ಕೈ ಜೋಡಿಸಿದ್ದಾರೆ. ಇಂಥ ಭಾತ್ಮಿದಾರರಾದ ರವಿ ಹಾಗೂ ರತನ್ ಲಾಲ್ ಎಂಬುವರನ್ನು ಪೊಲೀಸರು ಸೆರೆಹಿಡಿದು ಜೈಲಿಗಟ್ಟಿದ್ದರು.

ಮಾದಕ ವಸ್ತುಗಳ ವಿರುದ್ಧದ ಕಾರ್ಯಾಚರಣೆ ಬಗ್ಗೆ ಮಾತನಾಡಿದ ಸಿಸಿಬಿ ಜಂಟಿ ಕಮಿಷನರ್ ಎಸ್‌.ಡಿ. ಶರಣಪ್ಪ, 'ಪದೇ ಪದೇ ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಬಿದ್ದ ಎಂಟು ಪೆಡ್ಲರ್‌ಗಳನ್ನು ಮಾದಕ ದ್ರವ್ಯ ಹಾಗೂ ನಿದ್ರಾಜನ್ಯ ವಸ್ತುಗಳ ಅಕ್ರಮ ಸಾಗಾಣಿಕೆ ತಡೆ (ಪಿಐಟಿ–ಎನ್‌ಡಿಪಿಎಸ್)' ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಲಾಗಿದೆ. ಈ ಪೈಕಿ ಇಬ್ಬರು ಪೆಡ್ಲರ್‌ಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಸೇವನೆ ಮಾಡುವವರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

ಸಿಂಥೆಟಿಕ್ ಡ್ರಗ್ಸ್: ಸಿಕ್ಕಿಬಿದ್ದರೆ ಗರಿಷ್ಠ 20 ವರ್ಷ ಶಿಕ್ಷೆ

ಒಂದನೇ ಪುಟದಿಂದ...

ಸಿಂಥೆಟಿಕ್ ಡ್ರಗ್ಸ್ ಸಾಗಣೆ, ಮಾರಾಟಕ್ಕೆ ಸಂಬಂಧಪಟ್ಟಂತೆ ಮಾದಕ ವಸ್ತು ನಿಯಂತ್ರಣ ಕಾಯ್ದೆಯ (ಎನ್‌ಡಿಪಿಎಸ್) ಸೆಕ್ಷನ್ 20, 21, 22, 23ರಲ್ಲಿ ಶಿಕ್ಷೆ ಹಾಗೂ ದಂಡದ ಪ್ರಮಾಣ ಉಲ್ಲೇಖಿಸಲಾಗಿದೆ. ಡ್ರಗ್ಸ್ ಉತ್ಪಾದನೆ, ಮಾರಾಟ, ಖರೀದಿ, ಸಾಗಣೆ, ಅಂತರರಾಜ್ಯ ಸಾಗಣೆ, ಇತರೆ ಚಟುವಟಿಕೆಗಳಿಗೆ ಈ ಶಿಕ್ಷೆ ಅನ್ವಯವಾಗಲಿದೆ. ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣಗಳು, ಜಾಮೀನುರಹಿತವಾಗಿವೆ.

ಜಪ್ತಿ ಮಾಡಲಾಗುವ ಡ್ರಗ್ಸ್ ಮೌಲ್ಯಕ್ಕೆ ತಕ್ಕಂತೆ ಕನಿಷ್ಠ 6 ತಿಂಗಳು ಹಾಗೂ ಗರಿಷ್ಠ 20 ವರ್ಷದವರೆಗೂ ಶಿಕ್ಷೆ ಇದೆ. ಕನಿಷ್ಠ ₹10 ಸಾವಿರ ಹಾಗೂ ಗರಿಷ್ಠ ₹2 ಲಕ್ಷದವರೆಗೂ ದಂಡವಿದೆ.

ಡ್ರಗ್ಸ್ ಸೇವಿಸಿದವರನ್ನೂ ಬಂಧಿಸಲು ಕಾಯ್ದೆಯಲ್ಲಿ ಅವಕಾಶವಿದೆ. ಇವುಗಳ ವಹಿವಾಟು ಮಾಡುವವರಿಗೆ ಹಣಕಾಸಿನ ನೆರವು ನೀಡುವುದು ಹಾಗೂ ಇಂಥ ವಹಿವಾಟನಲ್ಲಿ ಹಣ ತೊಡಗಿಸುವುದು ಅಪರಾಧ.

ರಾಜ್ಯದ 2022ರ ಡ್ರಗ್ಸ್ ಪ್ರಕರಣದ ವಿವರ

ಜಿಲ್ಲೆ	ಪ್ರಕರಣ	ಬಂಧಿತರು	ಡ್ರಗ್ಸ್ ಜಪ್ತಿ (ಕೆ.ಜಿ.ಗಳಲ್ಲಿ)
ಮಂಗಳೂರು	398	511	193
ಬೆಳಗಾವಿ	87	127	833
ಬಾಗಲಕೋಟೆ	7	11	305.4
ಧಾರವಾಡ	10	11	20
ಉತ್ತರ ಕನ್ನಡ	57	109	38.6
ದಾವಣಗೆರೆ	15	31	38
ಚಿತ್ರದುರ್ಗ	18	27	14.11
ಕೊಡಗು	42	49	25
ಚಾಮರಾಜನಗರ	43	43	72
ಹಾಸನ	1	1	5.1
ಮೈಸೂರು ನಗರ	33	61	20
ದಕ್ಷಿಣ ಕನ್ನಡ	33	51	6
ಉಡುಪಿ	261	288	27

'ಕೈ' ಹಿಡಿದ ದತ್ತ, ನಾಗೇಶ್

ಬೆಂಗಳೂರು: ಬಿಜೆಪಿ ಜತೆ ಗುರುತಿಸಿಕೊಂಡು ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆಗಿರುವ ಮುಳಬಾಗಿಲು ಕ್ಷೇತ್ರದ ಪಕ್ಷೇತರ ಶಾಸಕ ಎಚ್. ನಾಗೇಶ್, ಕಡೂರು ಕ್ಷೇತ್ರದ ಮಾಜಿ ಶಾಸಕ ಜೆಡಿಎಸ್‌ನ ವೈ.ಎಸ್‌.ವಿ. ದತ್ತ ಮತ್ತು ಮೈಸೂರಿನ ಬಿಜೆಪಿ ಮುಖಂಡ, 'ಮೂಡಾ'ದ ಮಾಜಿ ಅಧ್ಯಕ್ಷ ಮೋಹನ್ ಕುಮಾರ್ ತಮ್ಮ ಬೆಂಬಲಿಗರ ಜೊತೆ ಶನಿವಾರ ಕಾಂಗ್ರೆಸ್ ಸೇರಿದರು.

ಕೆಪಿಸಿಸಿ ಕಚೇರಿಯಲ್ಲಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಎಲ್ಲರಿಗೂ ಪಕ್ಷದ ಬಾವುಟ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ಇದು ಆರಂಭ ಮಾತ್ರ. ಇನ್ನು ಮುಂದೆ ಪ್ರತಿ ವಾರ ಬೇರೆ ಬೇರೆ ಪಕ್ಷಗಳ ನಾಯಕರು ಕಾಂಗ್ರೆಸ್‌ಗೆ ಸೇರ್ಪಡೆ ಆಗಲಿದ್ದಾರೆ' ಎಂದರು.

ವೈ.ಎಸ್‌.ವಿ. ದತ್ತ ಮಾತನಾಡಿ, 'ಸರ್ವಾಧಿಕಾರಿ ಶಕ್ತಿಗಳಿಗೆ ಸೋಲಾಗಲಿ ಎಂದು ಯಾವುದೇ ಷರತ್ತು ಇಲ್ಲದೆ ಕಾಂಗ್ರೆಸ್ ಸೇರಿದ್ದೇನೆ. ಮೊದಲಿನಿಂದಲೂ ನಾನು ಎಡಪಂಥಿಯ. ಹೀಗಾಗಿ, ನನಗೆ ಅತ್ಯಂತ ಹತ್ತಿರವಾದ ಕಾಂಗ್ರೆಸ್ ಪಕ್ಷ ಸೇರಿದ್ದೇನೆ' ಎಂದರು. 'ಅನಿವಾರ್ಯ ಕಾರಣಗಳಿಂದ ಬಿಜೆಪಿ ಸೇರಿದ್ದೆ. ಪರಿಶಿಷ್ಟ ಜಾತಿ, ಜನಾಂಗಗಳ ರಕ್ಷಣೆ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂದು ತಿಳಿದು ಈ ಪಕ್ಷಕ್ಕೆ ಸೇರುತ್ತಿದ್ದೇನೆ' ಎಂದು ನಾಗೇಶ್ ಹೇಳಿದರು.

ನ್ಯಾಯಾಧೀಶರ ಪರೀಕ್ಷೆ: ರಾಹುಲ್ ಮೊದಲಿಗ

ಮಂಗಳೂರು: ಸಿವಿಲ್ ನ್ಯಾಯಾಧೀಶರ ಆಯ್ಕೆಗಾಗಿ ಈಚೆಗೆ ನಡೆದ ಪರೀಕ್ಷೆಯಲ್ಲಿ ಮಂಗಳೂರಿನ ಯುವ ವಕೀಲ ರಾಹುಲ್ ಶೆಟ್ಟಿಗಾರ್ ಮೊದಲ ಸ್ಥಾನ ಪಡೆದಿದ್ದಾರೆ.

ರಾಹುಲ್ ಶೆಟ್ಟಿಗಾರ್

ಉಡುಪಿ ಜಿಲ್ಲೆಯ ಪರ್ಕಳದವರಾದ ರಾಹುಲ್ ಅವರ ತಂದೆ ಸರ್ವೋದಯ ಶೆಟ್ಟಿಗಾರ್ ಅವರೂ ಜಿಲ್ಲಾ ನ್ಯಾಯಾಧೀಶರಾಗಿ ನಿವೃತ್ತರಾಗಿದ್ದಾರೆ. ತಾಯಿ ಲೀಲಾವತಿ ರೈಲ್ವೆ ಇಲಾಖೆಯ ನಿವೃತ್ತ ಉದ್ಯೋಗಿ.

ರಾಹುಲ್ ಅವರು ಬೆಂಗಳೂರಿನ ಪೂರ್ಣಪ್ರಜ್ಞ ಸಂಸ್ಥೆಯಲ್ಲಿ ಆರಂಭಿಕ ವಿದ್ಯಾಭ್ಯಾಸ ಪಡೆದಿದ್ದರು. ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಎಸ್‌ಡಿಎಂ) ಕಾನೂನು ಕಾಲೇಜಿನಲ್ಲಿ ಎಲ್‌ಎಲ್‌ಬಿ ಪದವಿ ಪಡೆದಿದ್ದರು. ಹೈಕೋರ್ಟ್‌ನ ಹಿರಿಯ ವಕೀಲ ಪಿ.ಪಿ. ಹೆಗ್ಡೆ ಅವರ ಬಳಿ ಕಿರಿಯ ವಕೀಲರಾಗಿ ಕಾರ್ಯ ನಿರ್ವಹಿಸಿದ್ದರು.

ಅಧಿಕಾರಿ ಹತ್ಯೆ: ಅಪರಾಧಿ ಬಿಡುಗಡೆ

ಲಖೀಂಪುರ ಖೀರಿ (ಉತ್ತರ ಪ್ರದೇಶ) (ಪಿಟಿಐ): ಇಂಡಿಯನ್ ಆಯಿಲ್ ಕಾರ್ಪೊರೇಷನ್ ಅಧಿಕಾರಿ ಎಸ್.ಮಂಜುನಾಥ್ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ ಅಪರಾಧಿಗಳ ಪೈಕಿ ಒಬ್ಬನನ್ನು ಸನ್ನಡತೆ ಹಿನ್ನೆಲೆಯಲ್ಲಿ ಬಿಡುಗಡೆ ಮಾಡಲಾಗಿದೆ ಎಂದು ಜೈಲು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ನಕಲಿ ಇಂಧನ ಮಾರಾಟಕ್ಕಾಗಿ ಪೆಟ್ರೋಲ್ ಪಂಪ್‌ನ ಪರವಾನಗಿ ರದ್ದುಗೊಳಿಸುವುದಾಗಿ ಐಐಎಂ ಲಖನೌದ ಹಳೆ ವಿದ್ಯಾರ್ಥಿ ಮಂಜುನಾಥ್ (27) ಅವರು ಬೆದರಿಕೆ ಹಾಕಿದ್ದರು. ನಂತರ ಲಖೀಂಪುರ ಖೀರಿಯ ಗೋಲಾ ಪ್ರದೇಶದಲ್ಲಿ 2005ರ ನ. 19 ರಂದು ಗುಂಡಿಕ್ಕಿ ಕೊಲ್ಲಲಾಗಿತ್ತು.

'ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ ಶಿವಕೇಶ್ ಗಿರಿ ಅಲಿಯಾಸ್ ಲಲ್ಲಾ 16 ವರ್ಷ ಪೂರೈಸಿದ್ದ. ಜ. 8 ರಂದು ಜಿಲ್ಲಾ ಜೈಲಿನಿಂದ ಬಿಡುಗಡೆ ಮಾಡಲಾಯಿತು. ಆತ ಉತ್ತಮ ನಡತೆ ತೋರಿಸಿದ್ದ' ಎಂದು ಲಖೀಂಪುರ ಖೀರಿ ಜಿಲ್ಲಾ ಕಾರಾಗೃಹದ ಜೈಲರ್ ಪಂಕಜ್ ಕುಮಾರ್ ಸಿಂಗ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕರ್ನಾಟಕ ಮೂಲದ ಮಂಜುನಾಥ್ ಹತ್ಯೆ ಪ್ರಕರಣದಲ್ಲಿ ಗಿರಿ ಮತ್ತು ಇತರ ಐವರು ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದರು.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 15-1-1998

● ಎಂ.ಎಸ್. ಸುಬ್ಬಲಕ್ಷ್ಮಿ 'ಭಾರತ ರತ್ನ'

ನವದೆಹಲಿ, ಜ. 14 (ಯುಎನ್‌ಐ)– ಕಾರ್ನಾಟಕ ಸಂಗೀತ ಪರಂಪರೆಯ ವಿಖ್ಯಾತ ವಿದುಷಿ ಎಂ.ಎಸ್. ಸುಬ್ಬಲಕ್ಷ್ಮಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಭಾರತ ರತ್ನ'ದ ಗೌರವವನ್ನು ಇಂದು ಪ್ರಕಟಿಸಲಾಗಿದೆ.

ಸುಬ್ಬಲಕ್ಷ್ಮಿ ಅವರ ಸಂಗೀತ ಕ್ಷೇತ್ರದಲ್ಲಿನ ಕೊಡುಗೆಗಾಗಿ ಅವರಿಗೆ ಪ್ರಸಕ್ತ ಸಾಲಿನ 'ಭಾರತ ರತ್ನ' ನೀಡಲಾಗಿದೆ ಎಂದು ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸಿದೆ. ಈ ಮೊದಲು ಕ್ಷಿಪಣಿ ತಂತ್ರಜ್ಞಾನದ ವಿಜ್ಞಾನಿ ಎ.ಪಿ.ಜೆ. ಅಬ್ದುಲ್ ಕಲಾಮ್ ಅವರಿಗೆ ಈ ಪ್ರತಿಷ್ಠಿತ ಪ್ರಶಸ್ತಿ ನೀಡಲಾಗಿತ್ತು.

50 ವರ್ಷಗಳ ಹಿಂದೆ — ಸೋಮವಾರ, 15-1-1973

● ಶಿವಮೊಗ್ಗದಲ್ಲಿ ಮಲೆನಾಡು ವಿ.ವಿ. ಸ್ಥಾಪನೆಗೆ ಒತ್ತಾಯ

ಶಿವಮೊಗ್ಗ, ಜ. 14– ಶಿವಮೊಗ್ಗದಲ್ಲಿ ಮಲೆನಾಡು ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಶಿವಮೊಗ್ಗದಲ್ಲಿ ನಡೆದ ರಾಜ್ಯ ಶಿಕ್ಷಕರ ಸಮ್ಮೇಳನದಲ್ಲಿ ಇಂದು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಕೇಂದ್ರ ಪ್ರವಾಸೋದ್ಯಮ ಖಾತೆ ಸಚಿವ ಡಾ. ಸರೋಜಿನಿ ಮಹಿಷಿ ಅವರು ಸಮಾರೋಪ ಭಾಷಣ ಮಾಡಿದರು. ವಿದ್ಯಾ ಇಲಾಖೆ ಡೈರೆಕ್ಟರ್ ಮರಿರಾಜ್ ಅವರು ಅಧ್ಯಕ್ಷತೆ ವಹಿಸಿದ್ದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜನವರಿ 15, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಅಷ್ಟಮಿ ಗಂ. 19-46 ನಕ್ಷತ್ರ: ಚಿತ್ತಾ ಗಂ. 19-12 ಯೋಗ: ಸುಕರ್ಮ ಗಂ. 11-50 ಕರಣ: ಬಾಲವ ಗಂ. 07-40, ಮಕರ ಮಾಸದ 01 ನೇ ದಿನ. ರಾಹುಕಾಲ : ಸಾಯಂಕಾಲ 04-30 –06-00
ಸೂರ್ಯೋದಯ : 07-01 ಸೂರ್ಯಾಸ್ತ : 06-19
ಮುಸ್ಲಿಂ ದಿನಾಂಕ : 22 ಜುಮಾದುಸ್ಸಾನಿ
ದಿನ ವಿಶೇಷ : ಮಕರ ಸಂಕ್ರಾಂತಿ, ಉತ್ತರಾಯಣ ಪುಣ್ಯಕಾಲ, ಪೊಂಗಲ್ (ದಕ್ಷಿಣ ಭಾರತ)
ಅದೃಷ್ಟ ಸಂಖ್ಯೆ : 1

ಮೇಷ: ಈ ದಿನ ಪ್ರಾಪಂಚಿಕ ವಿಚಾರವನ್ನು ಬಿಟ್ಟು ಆಧ್ಯಾತ್ಮಿಕ ವಿಚಾರಗಳ ಕಡೆಗೆ ನಿಮ್ಮ ಗಮನ ಹರಿಯಲಿದೆ. ಜೀವನದಲ್ಲಿ ಭಾರಿ ಬದಲಾವಣೆ ಕಾಣಲಿದ್ದೀರಿ. ಪತ್ನಿ ವರ್ಗದವರ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣವಿರುವುದು.

ವೃಷಭ: ವಚನ ಪಾಲನೆಯಿಂದ, ಉನ್ನತ ಅಧಿಕಾರಿಗಳ ಸವಿನುಡಿಯಿಂದ ಮಾನಸಿಕ ಉಲ್ಲಾಸ. ನಿಮ್ಮ ಸಹನೆಯನ್ನು ಪರೀಕ್ಷಿಸುವ ಸಂದರ್ಭ ಎದುರಾಗಬಹುದು. ಕೆಲವೊಂದು ನಿರ್ಧಾರಗಳನ್ನು ಗೌಪ್ಯವಾಗಿಡುವುದು ಉತ್ತಮ.

ಮಿಥುನ: ಮಹಿಳೆಯರಿಗೆ ಮನ್ನಣೆ ಹೆಚ್ಚಲಿದ್ದು, ರಾಜಕೀಯವಾಗಿ ಹೆಚ್ಚಿನ ಲಾಭ ಪಡೆಯುವಿರಿ. ವ್ಯಾಪಾರ ನಿಮಿತ್ತ ಪ್ರಯಾಣ ಕೈಗೊಳ್ಳಬೇಕಾದ ಅನಿವಾರ್ಯತೆ. ಲೇವಾದೇವಿ ವ್ಯವಹಾರದಿಂದ ಸಮಸ್ಯೆ ಉದ್ಭವಿಸಬಹುದು, ಎಚ್ಚರಿಕೆ.

ಕರ್ಕಾಟಕ: ನಿಮ್ಮ ನಿಶ್ಚಿತ ಯೋಜನೆಯೊಂದು ಸಲಭವಾಗಿ ಕಾರ್ಯರೂಪಕ್ಕೆ ಬರಲಿದೆ. ಆಭರಣ ಅಥವಾ ಕಲಾವಸ್ತುಗಳನ್ನು ಖರೀದಿಸುವ ಮನಸ್ಸಾಗುವುದು. ಪೊಲೀಸರಿಗೆ ಕೆಲಸದಲ್ಲಿನ ಒತ್ತಡ ನಿವಾರಣೆಯಾಗಲಿದೆ.

ಸಿಂಹ: ವಿದೇಶಿ ವಸ್ತುಗಳ ಅಥವಾ ಭೋಗ ವಸ್ತುಗಳ ಖರೀದಿಗಾಗಿ ಧನ ವ್ಯಯ ಮಾಡುವಿರಿ. ರಸ ಪದಾರ್ಥಗಳ ವ್ಯಾಪಾರಸ್ಥರಿಗೆ ಲಾಭ-ನಷ್ಟದ ಪರಿಚಯವಾಗಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು.

ಕನ್ಯಾ: ಅಕ್ಕ ಪಕ್ಕದವರಿಗೆ ಅನುಮಾನಕ್ಕೆ ಎಡೆಮಾಡಿಕೊಡುವಂತಹ ಹಲವಾರು ವಿಷಯಗಳು ಈ ದಿನ ನಿಮ್ಮಿಂದ ನಡೆಯಲಿದೆ. ಆದಷ್ಟು ಜಾಗ್ರತೆಯಿಂದ ಕಾರ್ಯ ನಿರ್ವಹಿಸಿ. ವ್ಯಾಪಾರದಲ್ಲಿ ಹಣವನ್ನು ಪಡೆಯಲು ಕಷ್ಟವಾಗಬಹುದು.

ತುಲಾ: ವೈದ್ಯರ ಸಲಹೆಯಂತೆ ದೇಹಾರೋಗ್ಯಕ್ಕಾಗಿ ಪೌಷ್ಟಿಕವಾದ ಆಹಾರ ಸೇವನೆ, ಕೆಲಸದ ತೀವ್ರತೆಯ ಸಡಿಲಿಕೆಯಂತಹ ಬದಲಾವಣೆ ಮಾಡಿಕೊಳ್ಳಬೇಕಾಗಬಹುದು. ನಿಮ್ಮ ಹೆಸರಿಗೆ ಕೇಡನ್ನು ಬಯಸುವವರು ಎದುರಾಗುವವರು.

ವೃಶ್ಚಿಕ: ಎಲೆಕ್ಟ್ರಾನಿಕ್ ಉಪಕರಣಗಳ ಮಾರಾಟಗಾರರು ಹೆಚ್ಚಿನ ಬಂಡವಾಳ ಹೂಡುವುದು ಸರಿಯಲ್ಲ. ಕಲಾವಿದರಿಗೆ, ಪತ್ರಕರ್ತರಿಗೆ ಪ್ರಶಂಸೆಯ ಮಾತುಗಳು ಕೇಳಿ ಬರುವುದು. ಶೀತ ಬಾಧೆಯಿಂದ ಮುಕ್ತರಾಗುವಿರಿ.

ಧನು: ಶುಭ ಕಾರ್ಯ ನಡೆಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸುವಿರಿ. ಚರ್ಮ ಸಂಬಂಧಿತ ಉದ್ಯಮದವರಿಗೆ ರಫ್ತು ವ್ಯಾಪಾರಗಳಿಂದ ಲಾಭ. ಮನೆಗೆ ಹೊಸ ಅಲಂಕಾರಿಕ ವಸ್ತುಗಳನ್ನು ಖರೀದಿಸುವ ಯೋಗವಿದೆ.

ಮಕರ: ನಿರಂತರ ಕೆಲಸ ಕಾರ್ಯಗಳಿಂದ ಹೊರಬರಲು ಪ್ರಯತ್ನಿಸುವಿರಿ. ಷೇರು ವ್ಯವಹಾರಗಳಿಂದ ಹೆಚ್ಚಿನ ಲಾಭಾಂಶವನ್ನು ಪಡೆದುಕೊಳ್ಳುವಿರಿ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಧಿಕ ಮಟ್ಟದಲ್ಲಿ ಹಣ ವ್ಯಯವಾಗುವುದು.

ಕುಂಭ: ಬೇರೆಯವರ ಸಮಸ್ಯೆಗಳಿಗೆ ನೆರವಾಗುವ ಗುಣ ಹೊಂದಿರುವ ನಿಮಗೆ ದೇವರ ಆಶೀರ್ವಾದ ಇರುವುದು. ಸಾಲಗಳಿಂದ ದೂರವಾಗುವ ವಿಚಾರದ ಬಗ್ಗೆ ಗಮನ ನೀಡಿ. ಪಿತ್ರಾರ್ಜಿತ ಆಸ್ತಿಗಳ ಬಗ್ಗೆ ಕಿರಿಕಿರಿ ಉಂಟಾಗಬಹುದು.

ಮೀನ: ಮನಸ್ಸಿಗೆ ಶಾಂತಿ, ಸಂತೋಷ ಇದ್ದು ವಸ್ತ್ರಾಭರಣ ಖರೀದಿ ಮಾಡುವಿರಿ. ಮನೆಯಲ್ಲಿ ನಡೆಯುವ ಶುಭಕಾರ್ಯಗಳ ಬಗ್ಗೆ ಮನೆಯವರೊಂದಿಗೆ ಚರ್ಚೆ ನಡೆಯುವುದು. ಕೆಲಸದ ಮೇಲಿನ ಪ್ರವಾಸ ಮುಂದೆ ಹೋಗುವುದು.

ಪದಬಂಧ 5200 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅತಿಶಯವಾದ ಮಾತಿದು (3)
2.ಬದ್ಧ ದ್ವೇಷವಿದು (4)
4.ನಡುವೆ ತಿರುಗಿ ಹಾರಿ ಆಕ್ರೋಶದಿಂದ ಹೀಗೆ ರೇಗು! (4)
6.ಮೂಗಿನಿಂದ ಸುರಿವ ಶ್ಲೇಷ್ಮ (3)
7.ತಿರುಗಿ ನಿಂತಿರುವ ಆಕಳು (2)
9.ಪಾರಿವಾಳ ಇಲ್ಲಿ ಕಾಣುತ್ತಿದೆ (3)
11.ಹಮ್ಮೀರನಿಗೆ ಶಿವ ಪ್ರತ್ಯಕ್ಷನಾಗಿರುವನಲ್ಲಾ! (2)
13.ಅರ್ಧ ತಿಂದುದನ್ನು ಪುನಃ ನುರಿಸಿ ತಿನ್ನುವಿಕೆ (3)
14.ಈತ ಪರೀಕ್ಷೆ ಮಾಡುವವನು (4)
16.ನಯವಿಲ್ಲದೆ ಒರಟಾದುದು (4)
17.ತರಳೆ ಹಿಡಿದಿರುವ ಹತ್ತಿ! (3)

ಮೇಲಿಂದ ಕೆಳಕ್ಕೆ

1.ಈ ರೀತಿ ದೃಷ್ಟಾಂತವನ್ನು ಕೊಡು (5)
2.ಸುಖ ದುಃಖಕ್ಕೆ ಕಾರಣವಾದ ಪೂರ್ವ ಜನ್ಮದ ಕೃತ್ಯ (2)
3.ಇದು ಲಲಾಟಲಿಖಿತ (5)
5.ಯೌವ್ವನವನ್ನು ಹೊಂದಿದವನು (3)
8.ಗುಲಾಲು ಹಿಡಿದಿರುವ ಈತ ಬಲು ಠಕ್ಕ! (5)
10.ಯಥಾವತ್ತಾದ ರೂಪವಿದು (3)
12.ಯುದ್ಧವನ್ನು ಸಾರುವ ಕಹಳೆ (5)
15.ಭೂಲೋಕದ ಅಮೃತ (2)



5199ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಿಪ್ಪಿಗ 6.ದಂತಮಂಜನ
7.ವಾಲಗ 8.ಸಖ
10.ಕಣ 11.ನಿನಾದ
13.ಅಜ 14.ಪುತ್ರ
18.ಯೋಜಕ 19.ವಾದಸರಣಿ
20.ಶಿಕ್ಷಣ

ಮೇಲಿಂದ ಕೆಳಕ್ಕೆ:
1.ಚಿನಿವಾರ 2.ಗಗನಸ
3.ವದಂತಿ 4.ಆಮಂತ್ರಣ
5.ವನಸ್ಪತಿ 9.ಖನಿಜ
10.ಕದಪು 12.ಅಹವಾಲು
13.ಅವಸರ 15.ತ್ರಯೋದಶಿ
16.ಪ್ರಕರಣ 17.ಹಣಿಗೆ

ಸುಡೊಕು 5586

	2			6	7	4		
3		4					7	2
	7			4	8		6	3
	4			3			8	
8		9		7				
	5		8		4		9	7
2				9		7	3	
		3						
6			4			5		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5585 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ಸ್ಯಾಂಟ್ರೊ' ರವಿಯ ವಾಟ್ಸ್‌ಆ್ಯಪ್ ಸ್ಟೇಟಸ್‌ಗಳ ಸ್ಕ್ರೀನ್ ಶಾಟ್‌ಗಳನ್ನೇ ಪೊಲೀಸರಿಗೆ ನೀಡಿದ ಸಂತ್ರಸ್ತೆ

ಕಂತೆ ಕಂತೆ ಹಣ: ಪ್ರಭಾವಿಗಳ ಜೊತೆ ಪೋಸು

ಪ್ರಜಾವಾಣಿ ವಾರ್ತೆ

ಸ್ಯಾಂಟ್ರೊ ರವಿ

ಬೆಂಗಳೂರು: ವೇಶ್ಯಾವಾಟಿಕೆ ಜಾಲದಲ್ಲಿ ಸಕ್ರಿಯನಾಗಿದ್ದ ಎನ್ನಲಾದ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ (51), ಅಕ್ರಮ ಹಣ ಸಂಪಾದನೆಗಾಗಿ ವರ್ಗಾವಣೆಗೆ ದಂಧೆಗೆ ಇಳಿದಿದ್ದನೆಂಬ ಸಂಗತಿಯನ್ನು ವಾಟ್ಸ್‌ಆ್ಯಪ್ ಪುರಾವೆಗಳು ಬಯಲು ಮಾಡುತ್ತಿವೆ.

ಕೆಲ ಪ್ರಭಾವಿಗಳ ಕೈ- ಮೈ ಬಿಸಿ ಮಾಡಿ ವರ್ಗಾವಣೆ ಮಾಡಿಸುತ್ತಿದ್ದ ಎನ್ನಲಾದ ಸ್ಯಾಂಟ್ರೊ, ಕಂತೆ ಕಂತೆ ಹಣದ ನೋಟು ಎಣಿಸುತ್ತಿದ್ದನೆಂಬುದು ವಾಟ್ಸ್‌ಆ್ಯಪ್ ಸ್ಟೇಟಸ್‌ನಿಂದ ಜಾಹೀರಾಗಿದೆ.

ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ ಹಲ್ಲೆ ಮಾಡಿ ಕೊಲೆ ಬೆದರಿಕೆಯೊಡ್ಡಿದ್ದ ಪ್ರಕರಣದಲ್ಲಿ ಮೈಸೂರು ಕಮಿಷನರೇಟ್ ಪೊಲೀಸರ ಕೈಗೆ ಸಿಕ್ಕಿಬಿದ್ದಿರುವ ಸ್ಯಾಂಟ್ರೊ ರವಿ, ವಿಚಾರಣೆ ಎದುರಿಸುತ್ತಿದ್ದಾನೆ.

ಸಂತ್ರಸ್ತೆ ನೀಡಿರುವ ದೂರಿನ ಅಂಶಗಳಿಗಷ್ಟೇ ಸೀಮಿತವಾಗಿ ತನಿಖೆ ಮುಂದುವರಿಸಿರುವ ಪೊಲೀಸರು, ವೇಶ್ಯಾವಾಟಿಕೆ ಹಾಗೂ ವರ್ಗಾವಣೆ ದಂಧೆಯ ಮುಖ ಕಳಚುವ ಗೋಜಿಗೆ ಹೋಗುತ್ತಿಲ್ಲ. ಆಕಸ್ಮಾತ್ ಈ ಬಗ್ಗೆ ತನಿಖೆ ನಡೆದರೆ, ಸ್ಯಾಂಟ್ರೊ ಜೊತೆಗಿನ ಪ್ರಭಾವಿಗಳ ಗುಟ್ಟಿನ ವ್ಯವಹಾರಗಳೂ ಬಯಲಾಗಬಹುದು ಎಂದು ಪೊಲೀಸ್ ಅಧಿಕಾರಿಗಳೇ ಮಾತನಾಡುತ್ತಿದ್ದಾರೆ.

ಸ್ಯಾಂಟ್ರೊ ರವಿ ಯಾವುದೇ ಕೆಲಸ ಮಾಡಿದರೆ, ಯಾರನ್ನಾದರೂ ಭೇಟಿಯಾದರೆ ಅಥವಾ ಯಾವುದಾದರೂ ವಸ್ತು ಖರೀದಿಸಿದರೆ ಅದನ್ನು ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಹಾಕಿಕೊಳ್ಳುತ್ತಿದ್ದ. ಇಂಥ ವಾಟ್ಸ್‌ಆ್ಯಪ್ ಸ್ಟೇಟಸ್‌ಗಳ ಸ್ಕ್ರೀನ್ ಶಾಟ್‌ಗಳನ್ನೇ ಸಂತ್ರಸ್ತೆ ಪೊಲೀಸರಿಗೆ ನೀಡಿದ್ದಾರೆ. ಹಲವು ಪ್ರಭಾವಿಗಳ ಜೊತೆಗಿನ ಫೋಟೊಗಳು ಸ್ಟೇಟಸ್‌ನಲ್ಲಿವೆ. ರವಿಗೂ ಪ್ರಭಾವಿಗಳಿಗೂ ಏನು ಸಂಬಂಧ ಎಂಬುದು ಮಾತ್ರ ನಿಗೂಢ.

ಪ್ರಭಾವಿಗಳ ಫೋಟೊ ಜೊತೆ ಅಡಿಬರಹ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಗ ಭರತ್ ಜೊತೆಗಿನ ಫೋಟೊವನ್ನು ಸ್ಟೇಟಸ್‌ನಲ್ಲಿ ಹಾಕಿಕೊಂಡಿದ್ದ ರವಿ, 'ಮೈ ಸ್ವೀಟ್ ಬ್ರದರ್ ಭರತ್ ಬೊಮ್ಮಾಯಿ ಹಾಗೂ ನಾನು' ಎಂದು ಬರೆದುಕೊಂಡಿದ್ದ.

ಗೃಹ ಸಚಿವ ಆರಗ ಜ್ಞಾನೇಂದ್ರ ಜೊತೆ ಕುಳಿತುಕೊಂಡಿರುವ ಫೋಟೊ ಹಾಕಿದ್ದ ರವಿ, 'ನನ್ನ ಏಳಿಗೆ ಬಯಸುವ ಗೃಹ ಸಚಿವ ಆರಗ ಜ್ಞಾನೇಂದ್ರ ಸರ್ ಜೊತೆ ಇಂದು ಮಾತುಕತೆ ನಡೆಸಿದೆ' ಎಂಬುದಾಗಿ ಅಡಿಬರಹವಿಟ್ಟಿದ್ದ.

ಮನೆಯೊಂದರ ಸೋಫಾ ಮೇಲೆ ಕುಳಿತಿದ್ದ ಫೋಟೊ ಹಾಕಿ, 'ಮಾಜಿ ಸಚಿವ ಹಾಗೂ ರಾಯಚೂರು ಸಂಸದ ಅಮರೇಶ್ವರ ನಾಯ್ಕ ಜೊತೆ ಮಾತನಾಡುತ್ತಿದ್ದೇನೆ' ಎಂದು ಬರೆದುಕೊಂಡಿದ್ದ.

ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್ ಅವರು ಆನ್‌ಲೈನ್ ಸಭೆಯಲ್ಲಿ ಪಾಲ್ಗೊಂಡಿದ್ದ ಫೋಟೊವನ್ನು ಸ್ಟೇಟಸ್‌ನಲ್ಲಿ ಹಾಕಿಕೊಂಡಿದ್ದ ಸ್ಯಾಂಟ್ರೊ, 'ನನ್ನ ಏಳಿಗೆ ಬಯಸುವ ಐಎಎಸ್ ಅಧಿಕಾರಿ ಮಂಜುನಾಥ್ ಪ್ರಸಾದ್ ಸರ್ ಅವರು ಮುಖ್ಯಮಂತ್ರಿ ಜೊತೆಗೆ ಆನ್‌ಲೈನ್ ಸಭೆ ನಡೆಸುತ್ತಿದ್ದಾರೆ' ಎಂದು ಅಡಿಬರಹ ಹಾಕಿದ್ದ.

ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಜೊತೆಗಿನ ಫೋಟೊವನ್ನೂ ಹಾಕಿ, 'ನನ್ನ ಏಳಿಗೆ ಬಯಸುವ ಸಚಿವ ಎಸ್.ಟಿ. ಸೋಮಶೇಖರ್ ಜೊತೆ ಇಂದು ಮಾತುಕತೆ ನಡೆಸಿದೆ' ಎಂದು ಬರೆದಿದ್ದ.

ಕಂದಾಯ ಸಚಿವ ಆರ್. ಅಶೋಕ ಹಾಗೂ ಅಖಂಡ ಶ್ರೀನಿವಾಸ್ ಮೂರ್ತಿ ಜೊತೆಗೆ ಕುಳಿತುಕೊಂಡಿರುವ ಫೋಟೊವನ್ನು ಸ್ಟೇಟಸ್ ಹಾಕಿದ್ದ ಸ್ಯಾಂಟ್ರೊ ರವಿ, 'ಸಚಿವ ಆರ್. ಅಶೋಕ ಹಾಗೂ ಶಾಸಕ ಅಖಂಡ ಶ್ರೀನಿವಾಸ್ ಜೊತೆ ಮಾತುಕತೆ' ಎಂದು ಬರೆದುಕೊಂಡಿದ್ದ.

ಕಂತೆ ಕಂತೆ ಹಣದ ನೋಟುಗಳ ಫೋಟೊಗಳನ್ನೂ ಸ್ಟೇಟಸ್‌ನಲ್ಲಿ ಹಾಕಿಕೊಂಡು ಸಂಭ್ರಮಿಸಿದ್ದ ರವಿ, 'ಲಕ್ಷ್ಮಿ' ಹಾಗೂ 'ಮಹಾಲಕ್ಷ್ಮಿ' ಎಂಬುದಾಗಿ ಅಡಿಬರಹ ನೀಡಿದ್ದ.

ಬಡ್ತಿ ಪಡೆದ ಐಪಿಎಸ್‌ಗೆ ಶುಭಾಶಯ: ಕರ್ನಾಟಕ ಪೊಲೀಸ್ ಸೇವೆಯಿಂದ ಐಪಿಎಸ್ ಸೇವೆಗೆ ಬಡ್ತಿ ಹೊಂದಿದ್ದ ಎಸ್ಪಿ ಮಲ್ಲಿಕಾರ್ಜುನ್ ಬಾಲದಂಡಿ ಹಾಗೂ ಡಾ. ಶೇಖರ್ ಅವರಿಗೆ ಶುಭಾಶಯ ಎಂದು ಕೋರಿದ್ದ ಸ್ಯಾಂಟ್ರೊ, ಅವರಿಬ್ಬರ ಫೋಟೊವನ್ನು ಸ್ಟೇಟಸ್‌ನಲ್ಲಿ ಹಾಕಿಕೊಂಡಿದ್ದ. ಅವರಿಗೂ ರವಿಗೂ ಇರುವ ಸಂಬಂಧವೇನು ಎಂಬುದು ತನಿಖೆಯಿಂದಲೇ ತಿಳಿಯಬೇಕಿದೆ.

'ನಿಮ್ಮ ಆಶೀರ್ವಾದವಿರಲಿ ಅಪ್ಪಾಜಿ'

'ಬೊಮ್ಮಾಯಿ ಸರ್ ಸಿ.ಎಂ' ಎಂದು ಮೊಬೈಲ್‌ನಲ್ಲಿ ನಮೂದಿಸಿದ್ದ ಸಂಖ್ಯೆಗೆ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದ್ದ ಸ್ಯಾಂಟ್ರೊ ರವಿ, 'ಮಕರ ಸಂಕ್ರಾಂತಿ ಶುಭಾಶಯಗಳು. ನಿಮ್ಮ ಆಶೀರ್ವಾದ ಸದಾ ನನ್ನ ಮೇಲಿರಲಿ ಅಪ್ಪಾಜಿ' ಎಂದಿದ್ದ. ಅದಕ್ಕೆ 'ಒಕೆ' ಎಂದು ಹೆಬ್ಬೆರಳು ಚಿಹ್ನೆಯಿಂದ ಪ್ರತಿಕ್ರಿಯೆ ಬಂದಿತ್ತು.

ನಿವೃತ್ತ ಐಪಿಎಸ್ ಅಧಿಕಾರಿ ಶಂಕರ್ ಬಿದರಿ ಅವರು ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಿದ್ದ ಹೊಸ ವರ್ಷದ ಶುಭಾಶಯ ಸಂದೇಶವನ್ನೂ ಸ್ಟೇಟಸ್ ಹಾಕಿಕೊಂಡಿದ್ದ ರವಿ, 'ನನ್ನ ಏಳಿಗೆ ಬಯಸುವ ಐಪಿಎಸ್ ಶಂಕರ್ ಬಿದರಿ' ಎಂದು ಸಹ ಬರೆದುಕೊಂಡಿದ್ದ.

'ಸ್ಯಾಂಟ್ರೊ ರವಿಯನ್ನು ಗುಜರಾತ್‌ಗೆ ಕರೆಸಿದ್ದು ಯಾರು?'

ಬೆಂಗಳೂರು: ರಾಜ್ಯದಿಂದ ಪರಾರಿಯಾಗಿ ಮಹಾರಾಷ್ಟ್ರದ ಪುಣೆಯಲ್ಲಿ ತಲೆಮರೆಸಿಕೊಂಡಿದ್ದ ಸ್ಯಾಂಟ್ರೊ ರವಿಯನ್ನು ಗುಜರಾತ್‌ಗೆ ಕರೆಸಿಕೊಂಡವರು ಯಾರು? ಬಂಧನಕ್ಕೂ ಮೊದಲು ಆರೋಪಿಗೆ ಯಾವ ಆಶ್ವಾಸನೆ ನೀಡಲಾಗಿತ್ತು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಪ್ರೆಸ್‌ಕ್ಲಬ್‌ನಲ್ಲಿ ಶನಿವಾರ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, 'ರಾಜ್ಯದಿಂದ ಪರಾರಿಯಾಗಿದ್ದ ರವಿಯನ್ನು ಗುಜರಾತ್‌ಗೆ ಕರೆಸಿಕೊಳ್ಳಲಾಗಿದೆ. ಅಲ್ಲಿ ಆತನನ್ನು ಬಂಧಿಸುವ ಪ್ರಕ್ರಿಯೆ ನಡೆದಿದೆ. ಅಲ್ಲಿಗೆ ಆತನನ್ನು ಕರೆದುಕೊಂಡು ಬಂದವರು ಯಾರು? ಎಂಬುದು ಬಹಿರಂಗವಾಗಬೇಕು' ಎಂದರು.

'ರವಿಯನ್ನು ಗುಜರಾತ್‌ನಲ್ಲಿ ಬಂಧಿಸುವ ಮೊದಲು ಗೃಹ ಸಚಿವರು ಅಲ್ಲಿಗೆ ಭೇಟಿ ನೀಡಿದ್ದಾರೆ. ಸಾಬರಮತಿ ಆಶ್ರಮಕ್ಕೆ ಹೋಗಿ ಫೋಟೊ, ವಿಡಿಯೊ ಕಳಿಸಿದ್ದಾರೆ. ಗೃಹ ಸಚಿವರು ಅಲ್ಲಿಗೆ ಏಕೆ ಹೋಗಿದ್ದರು? ಅವರ ಭೇಟಿಯ ಬಗ್ಗೆ ನನಗೆ ಅನುಮಾನಗಳಿವೆ' ಎಂದು ಹೇಳಿದರು.

'ನಮ್ಮ ಆಡಳಿತದ ಅವಧಿಯಲ್ಲಿ ಈ ರೀತಿ ದಂಧೆಕೋರರು, ದಲ್ಲಾಳಿಗಳ ಕೈಗೆ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸುವ ಅಧಿಕಾರ ನೀಡಿರಲಿಲ್ಲ. ಬೆಟ್ಟಿಂಗ್ ದಂಧೆಕೋರರು ಸರ್ಕಾರದ ಮೇಲೆ ಹಿಡಿತ ಸಾಧಿಸಿರಲಿಲ್ಲ. ಅಂತಹವರನ್ನು ಮುಖ್ಯಮಂತ್ರಿ ಕಚೇರಿಯೊಳಕ್ಕೆ ಬಿಟ್ಟುಕೊಂಡಿರಲಿಲ್ಲ' ಎಂದರು.

'ಬಿಜೆಪಿ ಸರ್ಕಾರದ ಸಚಿವರು, ಶಾಸಕರ ವೈಯಕ್ತಿಕ ನಡವಳಿಕೆ ವಿಚಾರದಲ್ಲಿ ನಾವು ಹಸ್ತಕ್ಷೇಪ ಮಾಡಲು ಬಯಸುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಿಮಿಷಾಂಬಾ ದೇವಿಯ ದರ್ಶನ ಪಡೆದ ಎಡಿಜಿಪಿ ಅಲೋಕ್ ಕುಮಾರ್

ನಿಮಿಷಾಂಬಾ ದೇವಿಗೆ ಹರಕೆ ತೀರಿಸಿದ ಅಲೋಕ್ ಕುಮಾರ್

ಪ್ರಜಾವಾಣಿ ವಾರ್ತೆ

ಮಂಡ್ಯ: 'ಸ್ಯಾಂಟ್ರೊ ರವಿ ಬಂಧನಕ್ಕಾಗಿ ನಾನು ನಿಮಿಷಾಂಬಾ ದೇವಿಯಲ್ಲಿ ಹರಕೆ ಹೊತ್ತಿದ್ದೆ. ಆರೋಪಿಯನ್ನು ಬಂಧಿಸಲಾಗಿದ್ದು, ಈಗ ಹರಕೆ ತೀರಿಸಲು ಬಂದಿದ್ದೇನೆ. 12 ವರ್ಷಗಳಿಂದ ನಾನು ದೇವಿಯನ್ನು ಅಪಾರವಾಗಿ ನಂಬುತ್ತೇನೆ' ಎಂದು ಎಡಿಜಿಪಿ ಅಲೋಕ್ ಕುಮಾರ್ ಶನಿವಾರ ಹೇಳಿದರು.

ಶ್ರೀರಂಗಪಟ್ಟಣ ತಾಲ್ಲೂಕಿನ ಗಂಜಾಂನ ನಿಮಿಷಾಂಬಾ ದೇವಿ ದೇವಾಲಯಕ್ಕೆ ಭೇಟಿ ನೀಡಿ, ದರ್ಶನ ಪಡೆದು ಅವರು ಮಾತನಾಡಿದರು.

'ಮಾಧ್ಯಮಗಳಲ್ಲಿ ಹೆಚ್ಚು ಸುದ್ದಿಯಾಗುತ್ತಿದ್ದ ಕಾರಣ ಆರೋಪಿ ಬಂಧನಕ್ಕೆ ಹೆಚ್ಚು ಒತ್ತಡವಿತ್ತು. ಪೊಲೀಸ್ ಇಲಾಖೆ, ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿತ್ತು. ನಾಲ್ಕು ದಿನಗಳ ಹಿಂದೆ ದೇವಾಲಯಕ್ಕೆ ಬಂದಿದ್ದ ನಾನು 'ಅಪಪ್ರಚಾರ ಹೋಗಬೇಕು. ಆರೋಪಿ ಬೇಗ ಸಿಗಬೇಕು' ಎಂದು ದೇವಿಯಲ್ಲಿ ಬೇಡಿಕೊಂಡಿದ್ದೆ' ಎಂದರು.

'2011ರಲ್ಲಿ ಹುಣಸೂರಿನಲ್ಲಿ ಜೋಡಿ ಕೊಲೆಯಾದಾಗಲೂ ನಾನು ಹರಕೆ ಮಾಡಿಕೊಂಡ 5 ತಾಸಿನಲ್ಲಿ ಆರೋಪಿಗಳು ಸಿಕ್ಕಿಬಿದ್ದಿದ್ದರು. ದೇವಾಲಯದಿಂದ ಮೈಸೂರು ತಲುಪುವಷ್ಟರಲ್ಲಿ ಆರೋಪಿಗಳ ಬಂಧನವಾಗಿತ್ತು. ನಿಮಿಷಾಂಬಾ ದೇವಿಯನ್ನು ಅಪಾರ ಜನ ನಂಬುತ್ತಾರೆ. ನಾನು ಕೂಡ ಆರಾಧಿಸುತ್ತೇನೆ' ಎಂದರು.

ಸ್ಯಾಂಟ್ರೊ ರವಿ, ಸಹಚರರಿಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ಪರಿಶಿಷ್ಟ ಮಹಿಳೆ ಮೇಲಿನ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಗೂಂಡಾಗಿರಿ ಆರೋಪದ ಮೇರೆಗೆ ಪೊಲೀಸರು ಗುಜರಾತ್‌ನಲ್ಲಿ ಬಂಧಿಸಿದ್ದ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ಮತ್ತು ಸಹವರ್ತಿಗಳಾದ ಪ್ರೇಮ್‌ಜಿ ಹಾಗೂ ಶ್ರುತೇಶ್ (ಸತೀಶ್) ಅವರಿಗೆ ಇಲ್ಲಿನ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿದರು.

ಶನಿವಾರ ನಸುಕಿನ ಜಾವ ಅಹಮದಾಬಾದ್‌ನಿಂದ ಆರೋಪಿಗಳನ್ನು ನಗರಕ್ಕೆ ಕರೆತಂದ ಬಳಿಕ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ವಿಜಯನಗರ ಠಾಣೆಗೆ ಕರೆದೊಯ್ಯಲಾಯಿತು. ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಅಲೋಕ್ ಕುಮಾರ್ ನೇತೃತ್ವದಲ್ಲಿ ವಿಚಾರಣೆ ನಡೆಸಲಾಯಿತು. ವಿಚಾರಣೆ ಸಲುವಾಗಿ ಠಾಣೆ ಬಳಿ ಬಿಗಿ ಪೊಲೀಸ್ ಭದ್ರತೆ ಏರ್ಪಡಿಸಿ, ವಾಹನ ಸಂಚಾರವನ್ನು ನಿರ್ಬಂಧಿಸಲಾಗಿತ್ತು.

> ಸ್ಯಾಂಟ್ರೊ ರವಿ ನಿರಂತರ ಇನ್ಸುಲಿನ್ ತೆಗೆದುಕೊಳ್ಳುವುದು ವೈದ್ಯಕೀಯ ತಪಾಸಣೆ ವೇಳೆ ಗೊತ್ತಾಗಿದ್ದು, ಅದನ್ನು ಒದಗಿಸಲಾಗುವುದು
> **ಅಲೋಕ್ ಕುಮಾರ್,** ಎಡಿಜಿಪಿ

'ನಗರದ 6ನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ನ್ಯಾಯಾಲಯಕ್ಕೆ ಆರೋಪಿಗಳನ್ನು ಹಾಜರುಪಡಿಸಬೇಕಿತ್ತು. ಎರಡನೇ ಶನಿವಾರ ನ್ಯಾಯಾಲಯ ಕಲಾಪವಿಲ್ಲದೆ ಸಂಜೆ 6 ಗಂಟೆಗೆ ನಗರದ ವಾಲ್ಮೀಕಿ ರಸ್ತೆಯಲ್ಲಿರುವ ನ್ಯಾಯಾಧೀಶರ ನಿವಾಸಕ್ಕೆ ಕರೆದೊಯ್ಯಲಾಯಿತು. ಬಳಿಕ ಕಾರಾಗೃಹಕ್ಕೆ ರವಾನಿಸಲಾಯಿತು' ಎಂದು ತನಿಖಾಧಿಕಾರಿ ಬಿ.ಎಸ್. ರವಿಶಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

ಆರೋಪಿಯ ವಿಚಾರಣೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಎಡಿಜಿಪಿ, 'ಆರೋಪಿಗಳ ಹೇಳಿಕೆಯನ್ನು ಪಡೆಯಲಾಗಿದೆ. ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆ ಕಾಯ್ದೆ, ಲೈಂಗಿಕ ದೌರ್ಜನ್ಯದ ಆರೋಪದ ತನಿಖೆಗೆ ಆದ್ಯತೆ ನೀಡಲಾಗಿದೆ' ಎಂದರು.

'ಮಹಿಳೆಯ ಆರೋಪಗಳ ಕುರಿತ ತನಿಖೆಗೆ ಆರೋಪಿ ಸರಿಯಾಗಿ ಪ್ರತಿಕ್ರಿಯಿಸಿಲ್ಲ. ತನಗಿರುವ ಪ್ರಭಾವಿಗಳ ಸಂಪರ್ಕದ ಕುರಿತು ಗಮನ ಸೆಳೆಯಲು ಯತ್ನಿಸಿದ' ಎಂದು ಮೂಲಗಳು ಹೇಳಿವೆ. ಈಗಾಗಲೇ ಬಂಧನಕ್ಕೊಳಗಾಗಿದ್ದ ಮಧು ಅಲಿಯಾಸ್ ಮಧುಸೂಧನ ನ್ಯಾಯಾಂಗ ಬಂಧನದಲ್ಲಿದ್ದಾನೆ.

ಚೌಡೇಶ್ವರಿ ಜಾತ್ರೆ

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಸಿಗಂದೂರಿನಲ್ಲಿ ಚೌಡೇಶ್ವರಿ ದೇವಿಯ ಸಂಕ್ರಾಂತಿ ಜಾತ್ರೆ ಶನಿವಾರ ಆರಂಭಗೊಂಡಿತು. ದೇವಿಯ ಮೂರ್ತಿಯನ್ನು ಮೂಲ ಸ್ಥಾನದಿಂದ ದೇವಸ್ಥಾನಕ್ಕೆ ರಥದಲ್ಲಿ ಕರೆ ತಂದಾಗ ಸಾವಿರಾರು ಭಕ್ತರು ದರ್ಶನ ಪಡೆದರು

-ಪ್ರಜಾವಾಣಿ ಚಿತ್ರ: ಶಿವಮೊಗ್ಗ ನಾಗರಾಜ್

'ಸುಪ್ರೀಂ' ಮೆಟ್ಟಿಲೇರಿದ ನಿರ್ದೇಶಕಿ ಲೀನಾ

ನವದೆಹಲಿ: ತಾವು ನಿರ್ಮಿಸಿದ ಸಾಕ್ಷ್ಯಚಿತ್ರದ ಪೋಸ್ಟರ್‌ನಲ್ಲಿ ಕಾಳಿ ಮಾತೆ ಕೈಯಲ್ಲಿ ಸಿಗರೆಟ್ ಇರುವಂತೆ ಚಿತ್ರಿಸಿದ್ದನ್ನು ವಿರೋಧಿಸಿ ದಾಖಲಾಗಿರುವ ಹಲವಾರು ಮೊಕದ್ದಮೆಗಳಿಂದ ರಕ್ಷಣೆ ನೀಡುವಂತೆ ಕೋರಿ ಚಿತ್ರ ನಿರ್ದೇಶಕಿ ಲೀನಾ ಮಣಿಮೇಕಲೈ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

'ಕುಟುಂಬ ನಿರ್ವಹಣೆಗೆ ಸ್ತ್ರೀ ಯೋಜನೆ'

ಒಂದನೇ ಪುಟದಿಂದ...

ರೈತರು, ಕಾರ್ಮಿಕರು, ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಜನರು ಸೇರಿದಂತೆ ದುಡಿಯುವ ವರ್ಗಕ್ಕೆ ಅನುಕೂಲವಾಗುವಂತೆ ಬಜೆಟ್‌ನಲ್ಲಿ ಯೋಜನೆಗಳನ್ನು ಘೋಷಿಸಲಾಗುವುದು. ಪ್ರತಿ ಗ್ರಾಮದಲ್ಲಿ ಎರಡು ಸ್ತ್ರೀ ಶಕ್ತಿ ಸಂಘಗಳಿಗೆ ತಲಾ ₹ 5 ಲಕ್ಷದವರೆಗೂ ಸಹಾಯಧನ ನೀಡುವ ಸ್ತ್ರೀ ಸಾಮರ್ಥ್ಯ ಯೋಜನೆಯನ್ನು ಫೆಬ್ರುವರಿ ಅಂತ್ಯದೊಳಗೆ ಅನುಷ್ಠಾನಕ್ಕೆ ತರಲಾಗುವುದು ಎಂದು ಹೇಳಿದರು.

ಅಪೌಷ್ಟಿಕತೆಯಿಂದ ಬಳಲುತ್ತಿರುವ ಜನರು ಹೆಚ್ಚಿನ ಸಂಖ್ಯೆಯಲ್ಲಿರುವ 5- 6 ಜಿಲ್ಲೆಗಳ ಜನರಿಗೆ ಪೌಷ್ಟಿಕ ಆಹಾರ ಒದಗಿಸಲು ವಿಶೇಷ ಯೋಜನೆ ರೂಪಿಸಲಾಗುವುದು ಎಂದರು.

ಫೆಬ್ರುವರಿ 17ಕ್ಕೆ ಬಜೆಟ್ ಸಾಧ್ಯತೆ: ಬೊಮ್ಮಾಯಿ

'ಫೆಬ್ರುವರಿ 17ಕ್ಕೆ ಪ್ರಸಕ್ತ ಸಾಲಿನ ಬಜೆಟ್ ಮಂಡನೆಯಾಗುವ ಸಾಧ್ಯತೆ ಇದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಬಜೆಟ್ ತಯಾರಿ ಆರಂಭವಾಗಿದೆ. ವಿಧಾನ ಮಂಡಲದ ಜಂಟಿ ಅಧಿವೇಶನದ ದಿನಾಂಕವನ್ನು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗುವುದು. ರಾಜ್ಯ ಸರ್ಕಾರದ ಆದಾಯವು ಮೂರು ಪಟ್ಟು ಹೆಚ್ಚಾಗಿದೆ. ಅದನ್ನು ಇನ್ನಷ್ಟು ಹೆಚ್ಚಿಸಲು ಗುರಿ ನಿಗದಿಪಡಿಸಲಾಗುವುದು' ಎಂದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸಾಮಾಜಿಕ ನ್ಯಾಯ ಕೊಟ್ಟೇ ಕೊಡುತ್ತೇವೆ: ಸಮುದಾಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ಹರಜಾತ್ರೆ: 2ಡಿ ಮೀಸಲಿಗೆ ಕಾಣದ ಸ್ವಾಗತ, ವಿರೋಧ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಪಂಚಮಸಾಲಿ ಸಮುದಾಯಕ್ಕೆ ರಾಜ್ಯ ಸರ್ಕಾರ ಘೋಷಿಸಿರುವ 2ಡಿ ಮೀಸಲಾತಿಗೆ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಶನಿವಾರ ಆರಂಭಗೊಂಡ ಹರಜಾತ್ರೆಯಲ್ಲಿ ದೊಡ್ಡ ಮಟ್ಟದ ಪರ ಹಾಗೂ ವಿರೋಧದ ಧ್ವನಿ ಕೇಳಿ ಬರಲಿಲ್ಲ.

2ಎ ಮೀಸಲಾತಿ ಪಡೆಯಲು ಇದು ಮೆಟ್ಟಿಲು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿ ಹಲವು ನಾಯಕರು ಪ್ರತಿಪಾದಿಸಿದರು. ಪ್ರವರ್ಗ 2ಡಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಿದರೆ ಆಗಬಹುದು ಎಂದು ಕೆಲ ನಾಯಕರು ಅಭಿಪ್ರಾಯ ಮಂಡಿಸಿದರು.

ಹರಜಾತ್ರೆಯಲ್ಲಿ ಮೀಸಲಾತಿ ವಿಚಾರವಾಗಿಯೇ ಬೃಹತ್ ಜನಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿತ್ತು.

'ಮೀಸಲಾತಿ' ಕುರಿತು ವಿಚಾರ ಮಂಡಿಸಿದ ವಕೀಲ ಬಿ.ಎಸ್. ಪಾಟೀಲ್, '2ಡಿಗೆ ಶೇ 15ರಷ್ಟು ಮೀಸಲಾತಿ ನೀಡಿದರೆ ಒಪ್ಪಿಕೊಳ್ಳುತ್ತೇವೆ' ಎಂದು ಹೇಳಿದರು.

'ರಾಜಕೀಯ ಮೀಸಲಾತಿ ಇರುವ 2ಎ ಕೇಳುವ ಬದಲು ಸಮಾಜದ ಬಡ ಮಕ್ಕಳಿಗೆ ಶೈಕ್ಷಣಿಕ, ಔದ್ಯೋಗಿಕವಾಗಿ ಮೀಸಲಾತಿ ಸಿಗಬೇಕು. ಅದಕ್ಕಾಗಿ 2ಡಿ, 3ಬಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸಲು ಕೇಳೋಣ' ಎಂದು ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಸಲಹೆ ನೀಡಿದರು.

'ವಾಲ್ಮೀಕಿ ಶ್ರೀಗಳ ಮಾತೇ ನನ್ನದೂ ಆಗಿದೆ' ಎಂದು ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಸಹಮತ ವ್ಯಕ್ತಪಡಿಸಿದರು.

'ನಾವು 2ಡಿ ಮೀಸಲಾತಿಯನ್ನು ಸ್ವಾಗತಿಸುವುದೂ ಇಲ್ಲ, ವಿರೋಧಿಸುವುದೂ ಇಲ್ಲ. ಅದರ ಸಾಧಕ–ಬಾಧಕಗಳನ್ನು ಚರ್ಚಿಸುತ್ತೇವೆ. ನಮ್ಮ ಸಮುದಾಯದ ಮಕ್ಕಳಿಗೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ಸಿಗಬೇಕು' ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಪೀಠಾಧಿಪತಿ ವಚನಾನಂದ ಸ್ವಾಮೀಜಿ ಪ್ರತಿಪಾದಿಸಿದರು.

> ವಿಜಯಪುರ, ಹುನಗುಂದದ ನಾಟಕ ಕಂಪನಿಗಳು ಹಾಗೂ ಕೂಡಲಸಂಗಮದ ಶ್ರೀಗಳ ದೊಂಬರಾಟವು ನಮ್ಮ ಸಮುದಾಯಕ್ಕೆ ಮೀಸಲಾತಿ ಸಿಗುವುದಕ್ಕೆ ಅಡ್ಡಿಯಾಗಿದೆ
>
> **ಮುರುಗೇಶ ಆರ್. ನಿರಾಣಿ,** ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

ಮಧ್ಯಾಹ್ನದ ನಂತರ ನಡೆದ 'ರೈತರತ್ನ' ಸಮಾವೇಶದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಪಂಚಮಸಾಲಿ ಸಮುದಾಯವು ಎಲ್ಲರಿಗೂ ಅನ್ನ ನೀಡುವ ಕೃಷಿಕ ಸಮಾಜ. ನಿಮಗೆ ಸಾಮಾಜಿಕ ನ್ಯಾಯ ಸಿಗಲೇಬೇಕು. ನಿಮ್ಮ ಪಾಲನ್ನು ಕೊಡಲೇಬೇಕು. ಈಗ 2ಡಿ ಮೀಸಲಾತಿ ನೀಡುವ ಮೂಲಕ ಮೊದಲ ಹೆಜ್ಜೆ ಇಟ್ಟಿದ್ದೇವೆ. ಯಾವುದೇ ಸಮುದಾಯಗಳಿಗೆ ಅನ್ಯಾಯವಾಗದಂತೆ ನಿಮಗೆ ನ್ಯಾಯ ಒದಗಿಸುತ್ತೇವೆ' ಎಂದು ಭರವಸೆ ನೀಡಿದರು.

'ನನ್ನ ಬಗ್ಗೆ ಕೆಲವರು ಏನೇನೋ ಮಾತನಾಡುತ್ತಿದ್ದಾರೆ. ಅದಕ್ಕೆಲ್ಲ ಉತ್ತರ ನೀಡುವುದಿಲ್ಲ. ಯಾವುದು ಸರಿ, ಯಾವುದು ತಪ್ಪು ಎನ್ನುವುದು ಕೆಲವೇ ಸಮಯದಲ್ಲಿ ಅವರಿಗೆ ಮನವರಿಕೆಯಾಗಲಿದೆ. ಪಂಚಮಸಾಲಿ ಸಮುದಾಯದ ಇಬ್ಬರು ಸ್ವಾಮೀಜಿಗಳೂ ನನಗೆ ಒಂದೇ. ಈ ಸಮುದಾಯದ ಸಂಕಷ್ಟಗಳ ಬಗ್ಗೆ ಇಬ್ಬರೂ ನನಗೆ ಮನವರಿಕೆ ಮಾಡಿದ್ದಾರೆ. ಅದಕ್ಕೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆ' ಎಂದು ತಿಳಿಸಿದರು.

ದಾವಣಗೆರೆ ಜಿಲ್ಲೆಯ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಆವರಣದಲ್ಲಿ ಶನಿವಾರ ನಡೆದ ಹರಜಾತ್ರೆಯಲ್ಲಿ ಮಕರ ಸಂಕ್ರಾಂತಿಯ ಅಂಗವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಚನಾನಂದ ಸ್ವಾಮೀಜಿ ಎಳ್ಳುಬೆಲ್ಲ ತಿನ್ನಿಸಿದರು. ಸಚಿವರಾದ ಸಿ.ಸಿ. ಪಾಟೀಲ, ಮುರುಗೇಶ ನಿರಾಣಿ, ಸಂಸದ ಜಿ.ಎಂ. ಸಿದ್ದೇಶ್ವರ ಇದ್ದಾರೆ —ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಕೂಡಲಸಂಗಮ ಶ್ರೀಗಳಿಂದ ರಾಜಕಾರಣ: ಮುರುಗೇಶ ನಿರಾಣಿ

ದಾವಣಗೆರೆ: 'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ನಡೆಸುತ್ತಿರುವ ಹೋರಾಟದಲ್ಲಿ ಕೂಡಲಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ರಾಜಕಾರಣ ಮಾಡುತ್ತಿದ್ದಾರೆ' ಎಂದು ಸಚಿವ ಮುರುಗೇಶ ನಿರಾಣಿ ಆರೋಪಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಾಲ್ಮೀಕಿ ಪೀಠದ ಪ್ರಸನ್ನಾನಂದ ಸ್ವಾಮೀಜಿ, ಆದಿ ಚುಂಚನಗಿರಿ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಶಾಂತಿಯುತವಾಗಿ ಮನವಿ ಸಲ್ಲಿಸಿ ಮೀಸಲಾತಿ ಪಡೆದುಕೊಂಡಿದ್ದಾರೆ. ಆದರೆ, ನಮ್ಮ ಸಮಾಜದ ಸ್ವಾಮೀಜಿ ಬಾರುಕೋಲು ಚಳವಳಿ, ವಿಧಾನಸೌಧ ಮುತ್ತಿಗೆ, ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕುತ್ತಿದ್ದಾರೆ. ಸಚಿವರ ಬಗ್ಗೆ ಹಗುರವಾಗಿ ಮಾತನಾಡುತ್ತಿದ್ದಾರೆ. ಈ ವ್ಯತ್ಯಾಸಗಳನ್ನು ನೋಡಿದರೆ ಕೂಡಲಸಂಗಮದ ಸ್ವಾಮೀಜಿ ಶೇಕಡ 100ರಷ್ಟು ರಾಜಕಾರಣ ಮಾಡುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ' ಎಂದು ಟೀಕಿಸಿದರು.

'ಕಾಂಗ್ರೆಸ್ ಸರ್ಕಾರ ಇದ್ದಾಗ, ಹಿಂದುಳಿದ ವರ್ಗಗಳ ಆಯೋಗದ ಅಂದಿನ ಅಧ್ಯಕ್ಷ ಕಾಂತರಾಜ ಅವರು 2ಎ ಮೀಸಲಾತಿ ನಿರಾಕರಿಸಿದ್ದರು. ಆಗ ಈ ಸ್ವಾಮೀಜಿ ಏನು ಮಾಡುತ್ತಿದ್ದರು? ಈಗ ನಾವು ಮೀಸಲಾತಿ ಬಗ್ಗೆ ಹಂತಹಂತವಾಗಿ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತಿದ್ದೇವೆ. ಹೀಗಿದ್ದರೂ ಸ್ವಾಮೀಜಿ ಹಗುರವಾಗಿ ಮಾತನಾಡುತ್ತಿದ್ದಾರೆ' ಎಂದು ಅಸಮಾಧಾನ ಹೊರಹಾಕಿದರು.

ಕಣ್ಣೀರು ಹಾಕಿದ ನಿರಾಣಿ: ಬಸನಗೌಡ ಪಾಟೀಲ ಯತ್ನಾಳ ಅವರು ತಮ್ಮ ಬಗ್ಗೆ ಅಸಾಂವಿಧಾನಿಕ ಪದಗಳನ್ನು ಆಡಿದ್ದರಿಂದ ಭಾವುಕರಾದ ನಿರಾಣಿ, 'ಬಿಜೆಪಿಯಲ್ಲಿ ಗೌರವ ಇಲ್ಲ ಎಂದರೆ, ಯಾಕೆ ಇದ್ದೀರಿ? ಪಕ್ಷದಿಂದ ಹೊರಗೆ ಹೋಗಿ' ಎಂದು ಕಿಡಿಕಾರಿದರು.

ಹೊರಗಿನವರ ಕಪಿಮುಷ್ಟಿಯಲ್ಲಿ ಸರ್ಕಾರ: ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಿಜೆಪಿ ಸರ್ಕಾರ ಹೊರಗಿನವರ ಕಪಿಮುಷ್ಟಿಯಲ್ಲಿದೆ. ಅದಕ್ಕಾಗಿಯೇ ಅಭಿವೃದ್ಧಿ ವಿಚಾರ ಬಿಟ್ಟು, ಲವ್ ಜಿಹಾದ್ ಕುರಿತು ಮಾತನಾಡುತ್ತಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ನಗರದ ಪ್ರೆಸ್ ಕ್ಲಬ್‌ನಲ್ಲಿ ಶನಿವಾರ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, 'ರಸ್ತೆ, ಚರಂಡಿ ಬಗ್ಗೆ ಮಾತನಾಡಬೇಡಿ, ಲವ್ ಜಿಹಾದ್ ಬಗ್ಗೆ ಯೋಚಿಸಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ. ಇವರೆಲ್ಲರೂ ಕರ್ನಾಟಕದ ಯುವಜನರ ಭವಿಷ್ಯ ನಾಶಮಾಡಲು ಹೊರಟಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

ಅನೇಕ ಮಹನೀಯರ ದುಡಿಮೆಯಿಂದ ಈ ರಾಜ್ಯ ಅಭಿವೃದ್ಧಿ ಹೊಂದಿದೆ. ಎಚ್.ಡಿ. ದೇವೇಗೌಡ, ಎಸ್.ಎಂ. ಕೃಷ್ಣ ಅವರ ದೂರದೃಷ್ಟಿಯ ಯೋಜನೆಗಳಿಂದ ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಉದ್ಯಮ ಬೆಳೆದಿದೆ. ಅದರಿಂದ ಹತ್ತಾರು ಸಾವಿರ ಕೋಟಿ ರೂಪಾಯಿ ವರಮಾನ ಬರುತ್ತಿದೆ. ಆದರೆ, ಈಗಿನ ಸರ್ಕಾರ ಕರ್ನಾಟಕವನ್ನು ಉತ್ತರ ಪ್ರದೇಶ, ಬಿಹಾರ ಮಾಡಲು ಹೊರಟಿದೆ ಎಂದು ವಾಗ್ದಾಳಿ ನಡೆಸಿದರು.

ಮೈತ್ರಿ ಕುರಿತು ತೀರ್ಮಾನಿಸಿಲ್ಲ: ಯಾವುದೇ ಪಕ್ಷದ ಜತೆಗೂ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳುವ ಕುರಿತು ಈವರೆಗೆ ತೀರ್ಮಾನಿಸಿಲ್ಲ. ಸಮಾನ ಮನಸ್ಕ ಪಕ್ಷಗಳು ಬಯಸಿದರೆ 15ರಿಂದ 20 ಸ್ಥಾನಗಳನ್ನು ಬಿಟ್ಟುಕೊಡಲು ಜೆಡಿಎಸ್ ಸಿದ್ಧವಿದೆ. ಆದರೆ, ಈವರೆಗೆ ಅಂತಹ ಯಾವುದೇ ಪ್ರಸ್ತಾವಗಳೂ ತಮ್ಮ ಮುಂದೆ ಬಂದಿಲ್ಲ ಎಂದರು.

'ಜನಾರ್ದನ ರೆಡ್ಡಿ ನೇತೃತ್ವದ ಪಕ್ಷದ ಜತೆಗೆ ಮೈತ್ರಿ ಕುರಿತು ಚರ್ಚೆಯೇ ನಡೆದಿಲ್ಲ. ನಮ್ಮ ಕೈ– ಅವರ ಕೈ ದೂರ ದೂರ ಇವೆ. ಹೀಗಾಗಿ ಕೈಜೋಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪಂಚರತ್ನ ಯಾತ್ರೆಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ. 45 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿದ್ದು, 40 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ವಿಶ್ವಾಸ ಮೂಡಿದೆ ಎಂದರು.

ರೇವಣ್ಣಗೆ ಜವಾಬ್ದಾರಿ: ಹಾಸನದಲ್ಲಿ ಪಕ್ಷದ ಸಂಪೂರ್ಣ ಜವಾಬ್ದಾರಿಯನ್ನು ಸಹೋದರ ಎಚ್.ಡಿ. ರೇವಣ್ಣ ಅವರಿಗೆ ನೀಡಲಾಗಿದೆ. ಅವರ ಅಭಿಪ್ರಾಯ ಆಧರಿಸಿ ಅಲ್ಲಿನ ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಅರಕಲಗೂಡು ಕ್ಷೇತ್ರದ ಶಾಸಕ ಎ.ಟಿ. ರಾಮಸ್ವಾಮಿ, ಅರಸೀಕೆರೆ ಶಾಸಕ ಶಿವಲಿಂಗೇಗೌಡರು ಇನ್ನೂ ತಮ್ಮ ನಿರ್ಧಾರ ತಿಳಿಸಿಲ್ಲ. ಈ ಕಾರಣಕ್ಕಾಗಿ ಅಲ್ಲಿನ ಅಭ್ಯರ್ಥಿಗಳ ಆಯ್ಕೆ ನಡೆದಿಲ್ಲ ಎಂದರು.

'ರಾಜಕೀಯ ಪಕ್ಷಗಳೇ ಎತ್ತಿ ಕಟ್ಟುತ್ತಿವೆ'

'ಮೀಸಲಾತಿ ವಿಚಾರದಲ್ಲಿ ರಾಜಕೀಯ ಪಕ್ಷಗಳೇ ಮಠಾಧೀಶರನ್ನು ಎತ್ತಿ ಕಟ್ಟಿ, ಬೀದಿಗೆ ಇಳಿಸಿವೆ. ಸಂವಿಧಾನದಲ್ಲಿ ಅವಕಾಶಗಳಿಲ್ಲದೇ ಇದ್ದರೂ ರಾಜಕೀಯಕ್ಕಾಗಿ ಹೀಗೆ ಮಾಡುತ್ತಿದ್ದಾರೆ' ಎಂದು ಎಚ್.ಡಿ. ಕುಮಾರಸ್ವಾಮಿ ದೂರಿದರು. 'ಸ್ಪಷ್ಟ ಬಹುಮತ ಬಂದರೆ ಮಾತ್ರ ಒಳ ಮೀಸಲಾತಿ ವಿಷಯದಲ್ಲಿ ಎಲ್ಲರ ಜತೆ ಚರ್ಚಿಸಿ ಪರಿಹಾರ ಒದಗಿಸುವುದಾಗಿ ಸಂಬಂಧಿಸಿದ ಸಂಘಟನೆಗಳ ಮುಖಂಡರಿಗೆ ತಿಳಿಸಿದ್ದೇನೆ' ಎಂದರು.

ಶಬರಿಮಲೆ: ಮಕರ ಜ್ಯೋತಿ ಕಣ್ತುಂಬಿಕೊಂಡ ಭಕ್ತರು

ಶಬರಿಮಲೆ (ಪಿಟಿಐ): ಇಲ್ಲಿನ ಅಯ್ಯಪ್ಪ ದೇಗುಲಕ್ಕೆ ವಿವಿಧ ರಾಜ್ಯಗಳಿಂದ ಭೇಟಿ ನೀಡಿದ್ದ ಸಾವಿರಾರು ಭಕ್ತರು ಶನಿವಾರ ಮಕರಜ್ಯೋತಿ ಕಣ್ತುಂಬಿಕೊಂಡರು.

ಇರುಮುಡಿ ಹೊತ್ತಿದ್ದ ಭಕ್ತರು ದೇವಾಲಯದ ಆವರಣ ಮತ್ತು ಇತರೆಡೆಗಳಲ್ಲಿ ಮಕರಜ್ಯೋತಿ ದರ್ಶನಕ್ಕಾಗಿ ಸಂಜೆಯಿಂದಲೇ ಕಾದು ನಿಂತಿದ್ದು, ಪೊನ್ನಂಬಲಮೇಡು ಬೆಟ್ಟದ ಕಾಡಿನೊಳಗಿನಿಂದ ಮಕರಜ್ಯೋತಿ ಕಾಣಿಸಿಕೊಂಡಾಗ ಪುಳಕಿತರಾದರು.

ಪಂದಳಂ ಅರಮನೆಯಿಂದ ಮೆರವಣಿಗೆಯಲ್ಲಿ ತಂದಿದ್ದ ಆಭರಣಗಳಿಂದ ಅಯ್ಯಪ್ಪ ದೇವರ ಮೂರ್ತಿಯನ್ನು ಅಲಂಕರಿಸಲಾಗಿತ್ತು.

ಜನವರಿ 20ರಂದು ದೇಗುಲದ ಬಾಗಿಲು ಮುಚ್ಚಲಾಗುವುದು ಎಂದು ಮೂಲಗಳು ತಿಳಿಸಿವೆ.

ನಗರಸಭಾ ಕಾರ್ಯಾಲಯ, ಹೂಟಗಳ್ಳಿ
ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ – 570018
Ph:0821-2001737
Web:www.hootagallicity.mrc.gov.in
E. mail :itstaff_ulb_hootagalli@yahoo.com
ಸಂ: ನಸಹೂ/ತಾಂತ್ರಿಕ/ಟೆಂಡರ್/ಸಿ.ಆರ್–19/2022–23
ದಿನಾಂಕ: 12.01.2023

ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮೂಲಕ)

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ನಗರಸಭಾ ಸಾಮಾನ್ಯ ನಿಧಿ ಮತ್ತು ಎಸ್ ಎಫ್ ಸಿ ನಿಧಿಯಲ್ಲಿ ಕೆ.ಟಿ.ಪಿ.ಪಿ ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ–01 ಮತ್ತು 02 ರ ನಿಯಮದಂತೆ ಇ–ಪೋರ್ಟಲ್ ಮೊದಲ ಹಾಗೂ ಎರಡನೇ ಕರೆಯ 22 ಸಂಖ್ಯೆಯ ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದೆ. ಪರಿಶಿಷ್ಟ ಜಾತಿಯ ಗುತ್ತಿಗೆದಾರರಿಗೆ 04 ಕಾಮಗಾರಿಗಳು, ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ 02 ಕಾಮಗಾರಿ ಮೀಸಲಾಗಿಡಲಾಗಿದೆ. ಕಾಮಗಾರಿಗಳ ಕನಿಷ್ಠ ಮೊತ್ತ ರೂ.3.90 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ.50.00 ಲಕ್ಷಗಳಾಗಿದ್ದು. ಲೋಕೋಪಯೋಗಿ ಇಲಾಖೆಯ ಅರ್ಹ ನೋಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು http://eproc.karnataka.gov.in ಇ–ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:27.01.2023 ಸಂಜೆ 5.30 ಗಂಟೆಯವರೆಗೆ ಹಾಗೂ ಟೆಂಡರ್ ತೆರೆಯುವ ದಿನಾಂಕ : 30.01.2023 ಬೆಳಗ್ಗೆ 11.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ತಾಂತ್ರಿಕ ಶಾಖೆ ಹಾಗೂ ಕಛೇರಿ ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ. ಕಾಮಗಾರಿಗಳಿಗೆ ಜಿ.ಎಸ್.ಟಿ ಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.
ಷರತ್ತು : ಪೂರ್ಣಗೊಂಡ ಕಾಮಗಾರಿಗಳಿಗೆ ನಗರಸಭೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಬಿಲ್ ಪಾವತಿಸಲಾಗುವುದು.
ಸಹಿ/– ಪೌರಾಯುಕ್ತರು
DIPR/DDMYS/KSMCA/877/2022-23

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
ಅಧೀಕ್ಷಕ ಅಭಿಯಂತರರು, ಕಾರ್ಯ & ಪಾಲನೆ ವೃತ್ತ, ರಾಯಚೂರು
Email: seraicur@gmail.com Tel No: 08532-226416 Fax No: 08532-226418
ಸಂಖ್ಯೆ: ಜೆಸ್ಕಾಂ/ಅ.ಅ(ವಿ)/ಕಾನಿಅ(ಕ)/ಸಕಾನಿಅ–ಕ/ರಾ/ಬೆಳಕು/22–23/6195–98 ದಿನಾಂಕ:12–01–2023

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)

ಅಧೀಕ್ಷಕ ಅಭಿಯಂತರರು (ವಿ), ಕಾ ಮತ್ತು ಪಾ ವೃತ್ತ, ಜೆಸ್ಕಾಂ, ರಾಯಚೂರು, ವತಿಯಿಂದ ಟೋಟಲ್ ಟರ್ನ್ ಕೀ ಅಡಿಯಲ್ಲಿ ಅರ್ಹ ಬಿಡ್‌ದಾರರಿಂದ ಇ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದೇವದುರ್ಗ ಉಪ–ವಿಭಾಗದ ಜಾಲಹಳ್ಳಿ ಮತ್ತು ಗಬ್ಬೂರು ಶಾಖೆಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಗ್ರಾಮೀಣ ವ್ಯಾಪ್ತಿಯಲ್ಲಿ ಬರುವ ಮನೆಗಳಿಗೆ ಬೆಳಕು ಯೋಜನೆ ಅಡಿಯಲ್ಲಿ ವಿದ್ಯುತ್ ಸಂಪರ್ಕ ಒದಗಿಸಲು ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳಿಗಾಗಿ ದಿನಾಂಕ: 18.01.2023 @ 11:00 ನಂತರ http://eproc.karnataka.gov.in ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9480844213 ಗಳ ಮುಖಾಂತರ ಕಛೇರಿ ಅವಧಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರಾಯಚೂರು ವೃತ್ತ ಕಛೇರಿಯಿಂದ, ಪಡೆಯಬಹುದು.

ಸಹಿ/–ಅಧೀಕ್ಷಕ ಅಭಿಯಂತರರು, (ವಿ)
ಕಾ&ಪಾ ವೃತ್ತ, ಜೆಸ್ಕಾಂ, ರಾಯಚೂರು
ವಾ.ಸಾ.ಸಂ.ಇ/ರಾಯಚೂರು/539/ಎಂ.ಸಿ.ಎ/2022–23

ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು.
CITY MUNICIPAL COUNCIL, CHIKKAMAGALURU.
ಸಂಖ್ಯೆ:ಸಿಎಂಸಿ/ಸಿಕೆಎಂ/15ನೇ ಹಣಕಾಸು/ಸಿಆರ್/04/2022–23 ದಿನಾಂಕ : 12.01.2023

: : ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ : :

ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ಷರತ್ತುಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ ಗಳಲ್ಲಿ)
1	DMA/2022-23/OW/WORK_INDENT142023/CALL-2	85.00	1,43,500/-

ಟೆಂಡರ್ ಫಾರಂ ಬೆಲೆ– ಇ–ಪ್ರೊಕ್ಯೂರ್‌ಮೆಂಟ್‌ನಂತೆ, ಕಾಲಾವಧಿ–06 ತಿಂಗಳು. (ಮಳೆಗಾಲ ಹೊರತುಪಡಿಸಿ)
1. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27.01.2023ರ 17.30ಗಂಟೆಯವರೆಗೆ
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.01.2023ರ 11.00 ಗಂಟೆಗೆ
3. ಆರ್ಥಿಕ ಬಿಡ್ ತೆರೆಯುವ ದಿನಾಂಕ: 01.02.2023ರ 11.00 ಗಂಟೆಗೆ
4. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 23.01.2023ಕ್ಕೆ ಸಂಜೆ 4.00 ಗಂಟೆಗೆ ನಗರಸಭಾ ಕಛೇರಿಯಲ್ಲಿ

ಹೆಚ್ಚಿನ ವಿವರವನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಯಾವುದೇ ಬದಲಾವಣೆಗಳಾದ್ದಲ್ಲಿ. ಇ– ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಶ್ರೀ ವರಸಿದ್ಧಿ ವೇಣುಗೋಪಾಲ್ ಅಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು
ಸಹಿ/– ಶ್ರೀಮತಿ ಸಿ.ಹೆಚ್.ಉಮಾದೇವಿ ಕೃಷ್ಣಪ್ಪ ಉಪಾಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು
ಸಹಿ/– ಬಿ.ಸಿ. ಬಸವರಾಜು ಕೆ.ಎಂ.ಎ.ಎಸ್. ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು

ರಾಜಧಾನಿಯಲ್ಲಿ ಮತ್ತೆ ಹೋರಾಟ ಆರಂಭಿಸಿದ ಬಸವ ಜಯ ಮೃತ್ಯುಂಜಯ ಶ್ರೀ

ಕಣ್ಣಿಲ್ಲದ ಸರ್ಕಾರ: ಸ್ವಾಮೀಜಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸಲು ಒತ್ತಾಯಿಸಿ, ರಾಜಧಾನಿಯಲ್ಲಿ ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಶನಿವಾರದಿಂದ ಮತ್ತೊಂದು ಸುತ್ತಿನ ಹೋರಾಟ ಆರಂಭವಾಗಿದೆ.

ಸ್ವಾಮೀಜಿ ನೇತೃತ್ವದಲ್ಲಿ ಶುಕ್ರವಾರ ಹಾವೇರಿ ಜಿಲ್ಲೆಯ ಶಿಗ್ಗಾವಿ ಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಆಕ್ರೋಶ ಹೊರಹಾಕಿದ್ದ ಪ್ರತಿಭಟನಕಾರರು ಅಲ್ಲಿಂದ ಶನಿವಾರ ಬೆಂಗಳೂರಿಗೆ ಬಂದರು. ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಆರಂಭಿಸಿದ್ದಾರೆ.

'ಮುಖ್ಯಮಂತ್ರಿ ಕ್ಷೇತ್ರದಲ್ಲಿಯೇ ಪಂಚಮಸಾಲಿ ಸಮುದಾಯಕ್ಕೆ ಆಗಿರುವ ಅನ್ಯಾಯ ಖಂಡಿಸಿದ್ದೇವೆ. ಅಂತಿಮ ಆದೇಶ ಬರುವ ತನಕ ಸ್ವಾತಂತ್ರ್ಯ ಉದ್ಯಾನ ಬಿಟ್ಟು ಎಲ್ಲಿಗೂ ಕದಲುವುದಿಲ್ಲ' ಎಂದು ಸ್ವಾಮೀಜಿ ಘೋಷಿಸಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೇಲಿದ್ದ ನಂಬಿಕೆ ಈಗ ಉಳಿದಿಲ್ಲ. 2ಎ ಮೀಸಲು ಕೊಡುತ್ತೇನೆ ಎಂದು ಮುಖ್ಯಮಂತ್ರಿ ಆಣೆ ಮಾಡಿಯೂ ಮೋಸ ಮಾಡಿದ್ದಾರೆ. ರಾಜಧಾನಿಯಲ್ಲಿ ಈ ಹಿಂದೆಯೇ 10 ಲಕ್ಷ ಜನರನ್ನು ಸೇರಿಸಿ ಪಾದಯಾತ್ರೆ ನಡೆಸಲಾಗಿತ್ತು. ಆಗಲೇ ಸರ್ಕಾರದ ಮನಸ್ಸು ಕರಗಬೇಕಿತ್ತು' ಎಂದು ಹೇಳಿದರು.

'ಪೀಠವನ್ನು ಬಿಟ್ಟು ನಿರಂತರವಾಗಿ ಹೋರಾಟ ನಡೆಸುತ್ತಿದ್ದೇನೆ. ಸುದೀರ್ಘವಾದ ಹೋರಾಟ ಯಾರೂ ನಡೆಸಿಲ್ಲ. ಇದು ಕಣ್ಣಿಲ್ಲದ ರಾಜ್ಯ ಸರ್ಕಾರ' ಎಂದು ಸ್ವಾಮೀಜಿ ದೂರಿದರು.

'ಬಿಜೆಪಿ ನೇತೃತ್ವದ ಸರ್ಕಾರ ಪಂಚಮಸಾಲಿ ಸಮುದಾಯವನ್ನು ಮತಕ್ಕಾಗಿ ಮಾತ್ರ ಬಳಸಿಕೊಳ್ಳುತ್ತಿದೆ. ಸಮುದಾಯದ ಪರವಾಗಿ ಕೆಲಸ ಮಾಡುತ್ತಿಲ್ಲ. ಸಮುದಾಯದ ಜನರು ಅಧಿಕಾರ, ಹಣ ಕೇಳುತ್ತಿಲ್ಲ. ಮೀಸಲಾತಿ ಮಾತ್ರ ಕೇಳುತ್ತಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದರೆ 2ಎ ಮೀಸಲಾತಿ ಕಲ್ಪಿಸುತ್ತೇವೆಂದು ಈ ಸರ್ಕಾರವೇ ಸಮುದಾಯಕ್ಕೆ ಭರವಸೆ ನೀಡಿತ್ತು. ಅದರಂತೆ ನಡೆದುಕೊಳ್ಳಬೇಕು. ಕೊಟ್ಟ ಮಾತು ತಪ್ಪುವುದು ಬೇಡ' ಎಂದು ಸ್ವಾಮೀಜಿ ಆಗ್ರಹಿಸಿದರು.

'ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರೂ ಸಮುದಾಯದ ಕೈಹಿಡಿಯಲಿಲ್ಲ. ನೀವೂ (ಬಸವರಾಜ ಬೊಮ್ಮಾಯಿ) ಮುಖ್ಯಮಂತ್ರಿಯಾಗಿ 18 ತಿಂಗಳು ಕಳೆದಿದೆ. ಪದೇ ಪದೇ ಸುಳ್ಳು ಹೇಳಿಕೊಂಡು ಸಮುದಾಯದ ಮುಖಂಡರ ದಾರಿ ತಪ್ಪಿಸುತ್ತಿದ್ದೀರಿ. ಬೆಳಗಾವಿಗೆ ಪ್ರತಿಭಟನೆಗೆ ತೆರಳಿದ್ದಾಗಲೂ ಸುಳ್ಳು ಹೇಳಿ ದಾರಿ ತಪ್ಪಿಸಲಾಯಿತು' ಎಂದು ಆಕ್ರೋಶ ಹೊರಹಾಕಿದರು.

'ಸಾಕಷ್ಟು ಗಡುವುಗಳು ಮುಕ್ತಾಯವಾಗಿವೆ. ಅಂತಿಮ ಆದೇಶದ ಬರುವ ತನಕ ಏಕಾಂಗಿ ಹೋರಾಟ ನಡೆಸುತ್ತೇನೆ' ಎಂದು ಹೇಳಿದರು.

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸಲು ಆಗ್ರಹಿಸಿ ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ಸಮುದಾಯದ ಮುಖಂಡರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು

ಜತೆಗಿರುವವರನ್ನು ಸ್ವಾಮೀಜಿ ಪ್ರಶ್ನಿಸಲಿ: ಬೊಮ್ಮಾಯಿ

ಜಾತಿ ರಾಜಕಾರಣದಲ್ಲಿ ರಾಜಕೀಯ ರೊಟ್ಟಿ ಬೇಯಿಸಿಕೊಳ್ಳುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಆ ಪಕ್ಷದವರು ಅಧಿಕಾರದಲ್ಲಿ ಇದ್ದಾಗ ಏನು ಮಾಡಿದರು ಎಂದು ಸ್ವಾಮೀಜಿ ಅವರು ತಮ್ಮ ಅಕ್ಕಪಕ್ಕ ಇರುವವರಿಗೆ ಪ್ರಶ್ನೆ ಕೇಳಬೇಕು. ಈ ರೀತಿಯ ವಿಷಮ ವಾತಾವರಣ ಸೃಷ್ಟಿಸುವುದು ಸರಿಯಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

ವೈಯಕ್ತಿಕ ನಿಂದನೆ ಮಾಡುವುದು ಕರ್ನಾಟಕದ ರಾಜಕೀಯ ಸಂಸ್ಕೃತಿಯಲ್ಲ. ವಿಷಯಾಧಾರಿತ ಭಿನ್ನಾಭಿಪ್ರಾಯ ಇರಬೇಕು. ವೈಯಕ್ತಿಕವಾಗಿ ಮಾತನಾಡುವುದು ಸಲ್ಲದು, ಅದಕ್ಕೆ ಹೊರತಾಗಿ ಮಾತನಾಡುವುದು ಅವರ ಸಂಸ್ಕೃತಿ ತೋರಿಸುತ್ತದೆ. ಸರ್ಕಾರ ಹಾಗೂ ಪಕ್ಷಕ್ಕೆ ಮುಜುಗರವಾಗುವ ರೀತಿ ಮಾತನಾಡುವವರ ವಿರುದ್ಧ ಪಕ್ಷ ಸರಿಯಾದ ನಿರ್ಧಾರ ಕೈಗೊಳ್ಳಲಿದೆ ಎಂದರು.

'ಸರ್ಕಾರದ ಮೇಲೆ ದೊಡ್ಡ ಜವಾಬ್ದಾರಿ ಇದೆ. ಯಾವುದೇ ಸಮುದಾಯಕ್ಕೆ ಅನ್ಯಾಯ ಮಾಡುವುದಿಲ್ಲ. ವಿಜಯಾನಂದ ಕಾಶಪ್ಪನವರ ಶಾಸಕರಿದ್ದರು, ಅವರ ತಂದೆ ಸಚಿವರಿದ್ದಾಗ ಕಾಂಗ್ರೆಸ್ ಯಾಕೆ ಮಾಡಿಲ್ಲ? 2016ರಲ್ಲಿ ಅವರದೇ ಸರ್ಕಾರ ಇತ್ತು, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದರು. ಪಂಚಮಸಾಲಿ ಸಮುದಾಯದವರ ಬೇಡಿಕೆಯನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜ ನೇತೃತ್ವ ಸಮಿತಿ ತಿರಸ್ಕರಿಸಿತು. 2ಎ ನೀಡಲಾಗುವುದಿಲ್ಲ, 3ಬಿನಲ್ಲೇ ಇರಬೇಕು ಎಂಬ ಆದೇಶವಾಗಿತ್ತು. ಈಗ ಅವರಿಗೆ ಯಾವ ನೈತಿಕತೆ ಇದೆ' ಎಂದು ಪ್ರಶ್ನಿಸಿದರು.

'ಅಮಿತ್ ಶಾ ಅವರದ್ದು ಒಂಥರಾ ರೌಡಿಸಂ...'

ಒಂದನೇ ಪುಟದಿಂದ

ಗುಂಪೊಂದರ ಜೊತೆ ಹಲವಾರು ನಿಮಿಷ ನಡೆದ ಲೋಕಾಭಿರಾಮ ಮಾತುಕತೆ ವೇಳೆ ಬಿಜೆಪಿ ನಾಯಕರು ಹಾಗೂ ರಾಜ್ಯ ರಾಜಕಾರಣದ ಬಗ್ಗೆ ಪ್ರಸ್ತಾಪಿಸಲಾಗಿದೆ. ಈ ಧ್ವನಿ ಶಾಸಕ ಯೋಗೇಶ್ವರ್ ಅವರ ಧ್ವನಿಯನ್ನೇ ಹೋಲುತ್ತದೆ. ಬಿಜೆಪಿ ಹಾಗೂ ಇತರ ರಾಜಕೀಯ ಪಕ್ಷಗಳ ಒಳಸುಳಿ, ಹೊಂದಾಣಿಕೆ ರಾಜಕಾರಣ, ಆಪರೇಷನ್ ಕಮಲ, ಪ್ರಮುಖ ರಾಜಕಾರಣಿಗಳ ಭವಿಷ್ಯ ಕುರಿತ ಮಾತು ಕೊನೆಗೆ ರಾಮನಗರದ ರಾಜಕಾರಣದತ್ತ ಹೊರಳುತ್ತದೆ.

ಆಡಿಯೊದಲ್ಲಿ ಏನಿದೆ?: 'ಹೊಂದಾಣಿಕೆ ರಾಜಕಾರಣ ಬೇಡ, ಅದು ತಾಯಿಗೆ ದ್ರೋಹ ಮಾಡಿದ ಹಾಗೆ ಎಂದು ಅಮಿತ್ ಶಾ ಈಗಾಗಲೇ ನಮ್ಮನ್ನು ಎಚ್ಚರಿಸಿದ್ದಾರೆ. ಅವರದ್ದು ಒಂಥರ ರೌಡಿಸಂ. ಆ ವ್ಯಕ್ತಿ ಮೇಲ್ನೋಟಕ್ಕೆ ಇರುವುದೇ ಬೇರೆ. ಮಾತನಾಡುವುದೇ ಬೇರೆ. ಬೇರೆ ಯಾವ ಪಕ್ಷದವರ ಜೊತೆ ಒಪ್ಪಂದ ಮಾಡಿಕೊಂಡಿದ್ದು ಕಂಡು ಬಂದರೆ ಅವರು ಬಿಡುವುದಿಲ್ಲ' ಎಂದು ಅವರು ಹೇಳುತ್ತಾರೆ.

'ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಜನಾಭಿಪ್ರಾಯದಿಂದ ಬಿಜೆಪಿ ಸರ್ಕಾರ ಬರುವುದಿಲ್ಲ. ಆದರೆ, ನಾವು ಸರ್ಕಾರ ಮಾಡುತ್ತೇವೆ. ಮಾವಿನಹಣ್ಣು ಮರದಲ್ಲಿ ಹಣ್ಣಾಗುವುದಕ್ಕೂ, ರಾಸಾಯನಿಕ ಹಾಕಿ ಹಣ್ಣು ಮಾಡುವುದಕ್ಕೂ ವ್ಯತ್ಯಾಸ ಇದೆ. ಚುನಾವಣೆಯಲ್ಲಿ ಗೆದ್ದ ನಂತರ ಆಪ ರೇಷನ್ ಕಮಲ ಮಾಡಿದರೆ ನಮಗೆ ಕೆಟ್ಟ ಹೆಸರು. ಹೀಗಾಗಿ ಈ ಬಾರಿ ಮುಂಚಿತ ವಾಗಿಯೇ ಮಾಡುತ್ತೇವೆ

'ಹಳೆ ಮೈಸೂರು ಭಾಗದಲ್ಲಿ ಜೆಡಿಎಸ್ 12ಕ್ಕೂ ಹೆಚ್ಚು ಕ್ಷೇತ್ರಗಳನ್ನು ಕಳೆದುಕೊಳ್ಳಲಿದೆ. ಕಳೆದ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಹೊಂದಾಣಿಕೆ ರಾಜಕಾರಣದ ಕಾರಣ ಸಾ.ರಾ.ಮಹೇಶ್ ಗೆದ್ದಿದ್ದರು. ಈ ಬಾರಿ ಸೋಲುತ್ತಾರೆ. ಹಾಗೆಯೇ ಉತ್ತರ ಕರ್ನಾಟಕ ಭಾಗದಲ್ಲಿ ಮೂರು ಸ್ಥಾನ ಸಹ ಹೋಗಲಿವೆ' ಎನ್ನುತ್ತಾರೆ.

ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇಲ್ಲ: 'ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಿಲ್ಲ. ಸಿದ್ದರಾಮಯ್ಯ ಅವರಿಗೆ ಮತ್ತೆ ಪಟ್ಟ ಕಟ್ಟಲು ಅಲ್ಲಿನ ಕೆಲ ನಾಯಕರಿಗೆ ಇಷ್ಟವಿಲ್ಲ. ಶಿವಕುಮಾರ್ ಅವರಿಗೆ ನೇರಸ್ಪರ್ಧಿ. ಅಷ್ಟು ಸುಲಭವಾಗಿ ಅವರು ಬಿಟ್ಟುಕೊಡುವುದಿಲ್ಲ. ಈ ಸಂಕ್ರಾಂತಿ ಆದ ಬಳಿಕ ಮೈಸೂರು ಭಾಗದ ದೊಡ್ಡ ಕಾಂಗ್ರೆಸ್ ನಾಯಕರೊಬ್ಬರು ಬಿಜೆಪಿಗೆ ಬರುತ್ತಾರೆ. ಕೋಲಾರ ಭಾಗದಲ್ಲಿ ಹಲವು ಬಾರಿ ಕೇಂದ್ರ ಸಚಿವರಾಗಿದ್ದ ದೊಡ್ಡ ನಾಯಕರೊಬ್ಬರು ಬಿಜೆಪಿಗೆ ಬರಲು ಸಿದ್ಧರಿದ್ದಾರೆ. ಆದರೆ, ನಮ್ಮವರೇ ಒಪ್ಪುತ್ತಿಲ್ಲ. ಸಿದ್ದರಾಮಯ್ಯ ಕೋಲಾರದಲ್ಲಿ ಗೆಲ್ಲಬಹುದು. ಗೆದ್ದರೆ ಅವರೇ ಮುಖ್ಯಮಂತ್ರಿ ಆಗಬೇಕು. ಏಕೆಂದರೆ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಅವರೇ ಪ್ರಬಲರು.

'ರಾಮನಗರ ಜಿಲ್ಲೆಯ ಮೂರು ಕ್ಷೇತ್ರಗಳ ಪೈಕಿ ಒಂದರಲ್ಲಿ ಮಾತ್ರ ಜೆಡಿಎಸ್ ಗೆಲ್ಲಲಿದೆ. ಚನ್ನಪಟ್ಟಣದಲ್ಲಿ ಕುಮಾರಸ್ವಾಮಿ ಗೆದ್ದರೂ ಗೆಲ್ಲಬಹುದು. ನಾನು ಕುಮಾರಸ್ವಾಮಿ ವಿರುದ್ಧ ಸ್ಪರ್ಧೆ ಮಾಡಲು ಒಪ್ಪಿಕೊಂಡಿದ್ದೇನೆ. ಅದೇ ರೀತಿ ಕನಕಪುರದಲ್ಲಿ ಶಿವಕುಮಾರ್ ವಿರುದ್ಧ ಅಶೋಕ ಮತ್ತು ರಾಮನಗರ ದಲ್ಲಿ ನಿಖಿಲ್ ಕುಮಾರಸ್ವಾಮಿ ವಿರುದ್ಧ ಅಶ್ವತ್ಥನಾರಾಯಣ ಸ್ಪರ್ಧೆ ಮಾಡಲಿ. ಆಗ ಪಕ್ಷ ನಮ್ಮ ರಕ್ಷಣೆಗೆ ಬಂದೇ ಬರುತ್ತದೆ. ನಾನು ಹಿಂದಿನ ಚುನಾವಣೆಯಲ್ಲಿ ಸೋತಿದ್ದರೂ ಪಕ್ಷ ನನ್ನ ರಕ್ಷಣೆಗೆ ಬಂದಿಲ್ಲವ? ಅದನ್ನೇ ನಮ್ಮ ಹೈಕಮಾಂಡ್ ಮುಂದೆ ಹೇಳುತ್ತೇನೆ' ಎಂದು ಹೇಳುತ್ತಾರೆ.

ಧ್ವನಿ ನನ್ನದಲ್ಲ: ಯೋಗೇಶ್ವರ್

'ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಆ ಆಡಿಯೊದಲ್ಲಿ ಇರುವ ಧ್ವನಿ ನನ್ನದಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಬೆಂಗಳೂರಿನಲ್ಲಿ ಸ್ಪಷ್ಟನೆ ನೀಡಿದ್ದಾರೆ.

'ನನ್ನ ವಿರುದ್ಧ ಸಾಕಷ್ಟು ಮಂದಿ ಷಡ್ಯಂತ್ರ ನಡೆಸಿದ್ದು, ನಕಲಿ ಆಡಿಯೊ ಬಿಟ್ಟಿದ್ದಾರೆ. ನನಗೆ ಈ ವಿಷಯಗಳೇ ಗೊತ್ತಿಲ್ಲ. ನಾನು ಸ್ವಂತ ಬಲದ ಮೇಲೆ ಪ್ರಬಲರ ವಿರುದ್ಧ ಸ್ಪರ್ಧೆ ಮಾಡುತ್ತಿದ್ದೇನೆ. ರಾಜ್ಯದಲ್ಲಿ ಸ್ವಂತ ಬಲದ ಮೇಲೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ನನಗೆ ಆ ವಿಶ್ವಾಸ ಇದೆ. ಇದರಿಂದ ನನ್ನ ರಾಜಕೀಯ ಜೀವನಕ್ಕೆ ಯಾವುದೇ ತೊಂದರೆ ಆಗದು' ಎಂದು ಹೇಳಿದ್ದಾರೆ.

'ಯಾರು ಏನೇ ಹೇಳಿದರೂ ಅಂತಿಮವಾಗಿ ನಮ್ಮ ಮತದಾರರು ತೀರ್ಮಾನಿಸುತ್ತಾರೆ. ನಾನು ಕುಮಾರಸ್ವಾಮಿ ವಿರುದ್ಧ ಸ್ಪರ್ಧೆಗೆ ಸಿದ್ಧನಿದ್ದೇನೆ. ಪಕ್ಷ ಟಿಕೆಟ್ ಕೊಟ್ಟರೆ ಸ್ಪರ್ಧಿಸುತ್ತೇನೆ' ಎಂದಿದ್ದಾರೆ.

ತ್ರಿಚೂರಿನ ರಾಮಚಂದ್ರನ್‌ಗೆ 'ಶ್ರೀಕಂಠಶಂಕರ' ಬಿರುದು ಪ್ರದಾನ

'ಪ್ರಾದೇಶಿಕ ಭೇದದಿಂದಾಗಿ ಸಂಗೀತದ ಕವಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಮತ್ತು ಉತ್ತರದ ಭೇದದಿಂದಾಗಿ ಹಿಂದೂಸ್ತಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತಗಳ ಕವಲು ಸೃಷ್ಟಿಯಾಗಿವೆ. ದಕ್ಷಿಣದಲ್ಲಿ ಕರ್ನಾಟಕ ಸಂಗೀತವೇ ಪ್ರಧಾನವಾಗಲು ಒಂದು ಸಾವಿರ ವರ್ಷಗಳ ಅವಧಿಯ ಕನ್ನಡಿಗರ ಶ್ರಮವಿದೆ ಎಂದು ವಿದ್ವಾನ್ ಪಾವಗಡ ಪ್ರಕಾಶ್ ರಾವ್ ಹೇಳಿದರು.

'ವಿದ್ವಾನ್ ಆರ್.ಕೆ. ಶ್ರೀಕಂಠನ್ ಟ್ರಸ್ಟ್' ಶನಿವಾರ ಹಮ್ಮಿ ಕೊಂಡಿದ್ದ ವಾರ್ಷಿಕ ಸಂಕ್ರಾಂತಿ ಸಂಗೀತ ಉತ್ಸವ, ಸಂಗೀತ ಕಲಾನಿಧಿ ಆರ್.ಕೆ. ಶ್ರೀಕಂಠನ್ ಅವರ 103ನೇ ಜನ್ಮ ದಿನಾಚರಣೆ ಹಾಗೂ ಬಿರುದು ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕರ್ನಾಟಕದ್ದು ಗಂಧರ್ವ ಗಾಯನ 12ನೇ ಶತಮಾನದ ನಂತರದ ಮಾತಂಗ, ಶಾಂಗದೇವ, ವಿದ್ಯಾರಣ್ಯ, ಗೋಪಾಲ ಗಾಯಕ, ಪುಂಡಲೀಕ ವಿಠಲ ಮೊದಲಾದವರು ಕರ್ನಾಟಕ ಸಂಗೀತಕ್ಕೆ ಅಸ್ಮಿತೆ ದೊರಕಿಸಿಕೊಟ್ಟಿದ್ದಾರೆ. ಸಂಗೀತ ರತ್ನಾಕರ, ಸಂಗೀತ ಸಾರ, ಸಂಗೀತ ಕಲಾನಿಧಿ, ಕವಿರಾಜ ಮಾರ್ಗ ಕೃತಿಗಳು ಸಂಗೀತದ ಆಕರ ಗ್ರಂಥ ಗಳಾಗಿವೆ ಎಂದು ವಿವರಿಸಿದರು.

ಮಾಧ್ವಮಠಗಳು ಅಪಾರ ಶಿಷ್ಯರನ್ನು ತಯಾರಿಸಿ, ಧರ್ಮ ಪ್ರಚಾರ ಮಾಡುತ್ತಿವೆ. ಅದ್ವೈತಿ ಗಳಲ್ಲಿ ಈ ಪರಿಪಾಟ ಕಡಿಮೆ. ಶಂಕರಾಚಾರ್ಯರು ಸರ್ವಸಮಾನ ಸಿದ್ಧಾಂತ ಬೋಧಿಸಿದರು. ಎಲ್ಲರಲ್ಲೂ ಬ್ರಹ್ಮ ಇದ್ದಾನೆ. ಅದಕ್ಕಾಗಿಯೇ ಅವರು 'ಅಹಂ ಬ್ರಹ್ಮಾಸ್ಮಿ' ಎಂದರು.

ತ್ರಿಚೂರ್‌ನ ವಿ. ರಾಮಚಂದ್ರನ್ ಅವರಿಗೆ 'ಶ್ರೀಕಂಠಶಂಕರ' ಹಾಗೂ ಶಿವಮೊಗ್ಗ ಜಿಲ್ಲೆಯ ಮತ್ತೂರಿನ ಅಕ್ಷರಾನಂದೇಂದ್ರ ಸರಸ್ವತಿ ಸ್ವಾಮೀಜಿ ಅವರಿಗೆ 'ಶಂಕರಾದ್ವೈತ ತತ್ವಜ್ಞ' ಬಿರುದು ಪ್ರದಾನ ಮಾಡಲಾಯಿತು. ಭಂಡಾರಕೇರಿ ಮಠದ ವಿದ್ಯೇಶತೀರ್ಥ ಸ್ವಾಮೀಜಿ, ಗಾಯಕರಾದ ರತ್ನಮಾಲಾ ಪ್ರಕಾಶ್, ಬಿ.ಎಸ್. ಮಂಜುಳಾ, ಆರ್.ಎಸ್.ಕುಮಾರ್, ರುದ್ರಪಟ್ಟಂ ಎಸ್. ರಮಾಕಾಂತ್ ಉಪಸ್ಥಿತರಿದ್ದರು.

ತ್ರಿಚೂರ್ ವಿ. ರಾಮಚಂದ್ರನ್, ಗಾಯಕ ಎಸ್.ರಮಾಕಾಂತ್ ಸಂಗೀತೋತ್ಸವ ನಡೆಸಿಕೊಟ್ಟರು. ಸಿ.ಎನ್. ಚಂದ್ರಶೇಖರ್ (ಪಿಟೀಲು), ವಿ. ಪ್ರವೀಣ್ (ಮೃದಂಗ), ರಂಗನಾಥ ಚಕ್ರವರ್ತಿ (ಘಟ) ಸಾಥ್ ನೀಡಿದರು.

ವಿದ್ವಾನ್ ಆರ್‌.ಕೆ. ಶ್ರೀಕಂಠನ್ ಟ್ರಸ್ಟ್ ಆಯೋಜಿಸಿದ್ದ ಸಂಕ್ರಾಂತಿ ಸಂಗೀತ ಉತ್ಸವದಲ್ಲಿ ತ್ರಿಚೂರ್ ವಿ. ರಾಮಚಂದ್ರನ್ ಅವರಿಗೆ (ಕುಳಿತವರಲ್ಲಿ ಎಡದಿಂದ ಎರಡನೆಯವರು) 'ಶ್ರೀಕಂಠಶಂಕರ', ಅಕ್ಷರಾನಂದೇಂದ್ರ ಸರಸ್ವತಿ ಸ್ವಾಮೀಜಿಗೆ (ಮೂರನೆಯವರು) 'ಶಂಕರಾದ್ವೈತ ತತ್ವಜ್ಞ' ಬಿರುದು ಪ್ರದಾನ ಮಾಡಲಾಯಿತು. ವಿದ್ಯೇಶತೀರ್ಥ ಸ್ವಾಮೀಜಿ,(ಕುಳಿತವರು) ಬಿ.ಎಸ್ ಮಂಜುಳಾ, ರತ್ನಮಾಲಾ ಪ್ರಕಾಶ್, ಆರ್.ಎಸ್.ಕುಮಾರ್, ಪಾವಗಡ ಪ್ರಕಾಶ ರಾವ್, ರುದ್ರಪಟ್ಟಂ ಎಸ್. ರಮಾಕಾಂತ್ ಇದ್ದಾರೆ —ಪ್ರಜಾವಾಣಿ ಚಿತ್ರ

ನಾಲಿಗೆ ಕತ್ತರಿಸಬೇಕಾಗುತ್ತದೆ: ಯತ್ನಾಳಗೆ ನಿರಾಣಿ ಎಚ್ಚರಿಕೆ

ಒಂದನೇ ಪುಟದಿಂದ...

'ಬಿಜೆಪಿಗೆ ಬಂದ ಮೇಲೆ ಮುಸ್ಲಿಮರ ವಿರುದ್ಧ, ಹಿಂದುತ್ವದ ಬಗ್ಗೆ ಮಾತನಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ.ಜೆಡಿಎಸ್‌ಗೆ ಹೋದಾಗ ಟಿಪ್ಪು ಟೋಪಿ ಹಾಕುತ್ತಾರೆ. ಬಿಜೆಪಿಗೆ ಬಂದಾಗ ಅದೇ ಟೋಪಿ ವಿರೋಧಿಸುತ್ತಾರೆ. ಇವರಿಗೆ ಯಾವ ಬದ್ಧತೆ ಇದೆ. ಇಂಥವರಿಂದ ನಾವು ನೈತಿಕತೆ ಪಾಠ ಕಲಿಯಬೇಕೆ' ಎಂದು ಪ್ರಶ್ನಿಸಿದರು.

'ನಾವು ಪಕ್ಷದ ನಿಯಮ ಮೀರಿ ಮಾತನಾಡಬಾರದು. ಪಕ್ಷ ತಾಯಿ ಸಮಾನ. ಎಷ್ಟೇ ಅಸಮಾಧಾನವಿದ್ದರೂ ಬಾಯಿ ಮುಚ್ಚಿಕೊಂಡು ಇರಬೇಕು ಎಂದು ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಒಂದು ವೇಳೆ ಪಕ್ಷದಲ್ಲಿರಲು ಸಾಧ್ಯವಿಲ್ಲ ಎಂದಾದರೆ ರಾಜೀನಾಮೆ ಕೊಟ್ಟು ಹೊರಗೆ ಹೋಗಿ ಪ್ರತಿಭಟನೆ ಮಾಡಲಿ' ಎಂದರು.

ಇನ್ನೊಬ್ಬರ ಚಾರಿತ್ರ್ಯದ ಬಗ್ಗೆ ಮಾತನಾಡುವ ಅವರು ನ್ಯಾಯಾಲಯ ದಲ್ಲಿ ಏಕೆ ತಡೆಯಾಜ್ಞೆ ತಂದಿದ್ದಾರೆ? ತಾಕತ್ತಿದ್ದರೆ ಮೊದಲು ತಡೆಯಾಜ್ಞೆ ತೆರವುಗೊಳಿಸಲಿ. ಅವರಿಗೆ ವಿಜಯಪುರ ಕ್ಷೇತ್ರದ ಜನ ಈ ಬಾರಿ ತಕ್ಕ ಉತ್ತರ ಕೊಡುತ್ತಾರೆ ಎಂದರು.

ಕಾರು ಚಾಲಕ ಮೃತಪಟ್ಟಿದ್ದು ಹೇಗೆ?

ಬಸನಗೌಡ ಪಾಟೀಲ ಯತ್ನಾಳ ಅವರ ಕಾರು ಚಾಲಕ ಕುಮಾರ್ ಹೇಗೆ ಮೃತಪಟ್ಟ ಎಂದು ಬಹಿರಂಗಪಡಿಸುವಂತೆ ಸಚಿವ ಮರುಗೇಶ ನಿರಾಣಿ ಒತ್ತಾಯಿಸಿದರು. ಹಿಂದೆ ಮೃತಪಟ್ಟ ಚಾಲಕ ಈಗಿರುವ ಚಾಲಕನ ಸಂಬಂಧಿ. ಈ ಕುರಿತು ಮಾಧ್ಯಮಗಳು ವಿವರ ಪಡೆದು ಬೆಳಕು ಚೆಲ್ಲಬೇಕು ಎಂದರು.

ತಪೋವನ ವಿಷ್ಣುಗಢ ಜಲವಿದ್ಯುತ್ ಯೋಜನೆಯಿಂದ ನಿರಂತರ ದುರಂತ: ಜನರ ಆಕ್ರೋಶ

ಎನ್‌ಟಿಪಿಸಿ ವಿರುದ್ಧ ನಿವಾಸಿಗಳ ಸಮರ

ಸಾಕ್ಷಾತ್ ವರದಿ
ಮಂಜುನಾಥ ಹೆಬ್ಬಾರ್

ಜೋಶಿಮಠ (ಉತ್ತರಾಖಂಡ): ಹಿಮಾಲಯದ ತಪ್ಪಲಿನಲ್ಲಿರುವ ಪಟ್ಟಣದ ಪ್ರತಿ ಕಟ್ಟಡದ ಗೋಡೆ ಮೇಲೆ 'ಎನ್‌ಟಿಪಿಸಿ ಗೋ ಬ್ಯಾಕ್' ಕರಪತ್ರ ಕಾಣಸಿಗುತ್ತದೆ. ಜೋಶಿಮಠದ ಈಗಿನ ದುರಂತಮಯ ಪರಿಸ್ಥಿತಿಗೆ ಎನ್‌ಟಿಪಿಸಿಯ ಜಲವಿದ್ಯುತ್ ಯೋಜನೆಯೇ ಮೂಲ ಕಾರಣ ಎಂದು ಇಲ್ಲಿನ ನಿವಾಸಿಗಳು ಬೊಟ್ಟು ಮಾಡಿ ಹೇಳುತ್ತಾರೆ.

ತಪೋವನ ವಿಷ್ಣುಗಢದಲ್ಲಿ ಎನ್‌ಟಿಪಿಸಿ ಕೈಗೆತ್ತಿಕೊಂಡಿರುವ 540 ಮೆಗಾವ್ಯಾಟ್ ಸಾಮರ್ಥ್ಯದ ಜಲವಿದ್ಯುತ್ ಯೋಜನೆಯಿಂದಾಗಿ ಹಲವು ದುರಂತಗಳು ಸಂಭವಿಸಿವೆ. ಆದರೂ, ಆಡಳಿತ ವ್ಯವಸ್ಥೆ ಬುದ್ಧಿ ಕಲಿತಿಲ್ಲ ಎಂದು ಇಲ್ಲಿನ ಜನರು ದೂರುತ್ತಾರೆ.

ಈ ಯೋಜನೆಗೆ ಚಾಲನೆ ನೀಡಿದ್ದು 2006ರಲ್ಲಿ. ಆಗ ಯೋಜನಾ ಮೊತ್ತ ₹2980 ಕೋಟಿ ಇತ್ತು. 2013ರಲ್ಲಿ ಈ ಯೋಜನೆ ಪೂರ್ಣಗೊಳ್ಳಬೇಕಿತ್ತು. ಹಲವು ಗಡುವುಗಳನ್ನು ಮೀರಿದರೂ ಜಲವಿದ್ಯುತ್ ಉತ್ಪಾದನೆ ಶುರುವಾಗಿಲ್ಲ. ಈಗ ಯೋಜನಾ ಮೊತ್ತ ₹7,105 ಕೋಟಿಗೆ ಜಿಗಿದಿದೆ. ಈಗಲೂ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಎನ್‌ಟಿಪಿಸಿ ಅಧಿಕಾರಿಗಳು ಹೇಳುತ್ತಾರೆ.

ಎನ್‌ಟಿಪಿಸಿ ಜಲವಿದ್ಯುತ್ತಿಗೆಂದು ಸುರಂಗ ಕೊರೆದಿದೆ. ಅದಕ್ಕೆಂದು ಧೌಲಿಗಂಗಾ ಮತ್ತು ರಿಷಿಗಂಗಾ ಉಪನದಿಗಳಿಗೆ ಅಣೆಕಟ್ಟು ನಿರ್ಮಿಸಲಾಗಿದೆ. ಇಲ್ಲಿ ಸಂಗ್ರಹವಾದ ನೀರನ್ನು ಸುರಂಗದ ಮೂಲಕ ಅಲಕ್‌ನಂದಾ ನದಿಗೆ ಹರಿಸಲಾಗುತ್ತದೆ. ಈ ಯೋಜನೆಯ ಸುರಂಗವು ಜೋಶಿಮಠದ ಸಮೀಪದಲ್ಲಿ ಸಾಗುತ್ತದೆ. ಸುರಂಗದ ನಿರ್ಗಮನ ದ್ವಾರದಲ್ಲಿರುವ ಟರ್ಬೈನ್‌ಗಳ ಮೂಲಕ ನೀರನ್ನು ಹಾಯಿಸಿ ಜಲವಿದ್ಯುತ್ ಉತ್ಪಾದಿಸಲಾಗುತ್ತದೆ. ಎಲ್ಲ ಮುನ್ನೆಚ್ಚರಿಕೆಗಳನ್ನು ನಿರ್ಲಕ್ಷ್ಯಿಸಿ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಸುರಂಗ ಕೊರೆದಿದ್ದರಿಂದ ಮನೆಗಳಿಗೆ ಹಾನಿಯಾಗಿದೆ ಎಂಬುದು ಜೋಶಿಮಠದ ನಿವಾಸಿಗಳ ಆರೋಪ.

ಈ ಯೋಜನೆಯ ವಿರುದ್ಧ ಇಲ್ಲಿನ ನಿವಾಸಿಗಳು ಸರಣಿ ಪ್ರತಿಭಟನೆಗಳನ್ನು ನಡೆಸಿದ್ದಾರೆ. 'ಇಲ್ಲಿ ಅಧ್ಯಯನ ನಡೆಸಿದ ವಿಜ್ಞಾನಿಗಳು ಈ ವಿಷಯದ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ವಿಸ್ತೃತ ಅಧ್ಯಯನದ ಅವಶ್ಯಕತೆ ಇದೆ ಎಂದು ಸಲಹೆ ನೀಡಿದ್ದಾರೆ. ವಿಜ್ಞಾನಿಗಳ ಸಲಹೆಯನ್ನು ಪಕ್ಕಕ್ಕಿಟ್ಟು ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ' ಎಂದು ಅವರು ಆರೋಪಿಸುತ್ತಾರೆ.

ಜೋಶಿಮಠದ ಅಂಗಡಿಯೊಂದರ ಗೋಡೆಯಲ್ಲಿ ಕರಪತ್ರ ಅಂಟಿಸಿರುವುದು

'ಯೋಜನೆಯನ್ನು ಸಂಪರ್ಕಿಸುವ 12 ಕಿ.ಮೀ. ಉದ್ದದ ಸುರಂಗವು ಜೋಶಿಮಠದಿಂದ 1 ಕಿ.ಮೀ. ದೂರದಲ್ಲಿದೆ. ಪಟ್ಟಣ ಕುಸಿಯುತ್ತಿರುವುದಕ್ಕೂ ಇದಕ್ಕೂ ಸಂಬಂಧ ಇಲ್ಲ. ಈ ಸುರಂಗವು ನೆಲ ಮಟ್ಟದಿಂದ ಕನಿಷ್ಠ ಒಂದು ಕಿ.ಮೀ. ಆಳದಲ್ಲಿದೆ. ಸುರಂಗವು ಜೋಶಿಮಠದ ಅಡಿಯಲ್ಲಿ ಸಾಗಿಲ್ಲ. ಜತೆಗೆ ಈಗ ಸುರಂಗ ಕಾಮಗಾರಿ ನಡೆಯುತ್ತಿಲ್ಲ' ಎಂದು ಎನ್‌ಟಿಪಿಸಿ ಸಮಜಾಯಿಷಿ ನೀಡಿದರೂ ಇಲ್ಲಿನ ಜನರು ಒಪ್ಪಲು ತಯಾರಿಲ್ಲ. 'ಒಂದೂವರೆ ದಶಕಗಳಿಂದ ಎನ್‌ಟಿಪಿಸಿ ಹೇಳಿರುವ ಹಲವು ಕಥೆಗಳನ್ನು ಕೇಳಿದ್ದೇವೆ. ಈಗಿನ ಹೊಸ ಕಥೆಯನ್ನು ಕೇಳಲು ತಯಾರಿಲ್ಲ. ಈ ಯೋಜನೆಯಿಂದ ಸಾಕಷ್ಟು ನೋವು ಅನುಭವಿಸಿದ್ದೇವೆ. ಇದು ಇಲ್ಲಿಗೆ ಕೊನೆಗೊಳ್ಳಬೇಕು' ಎಂದು ಅವರು ಕೋಪದಿಂದ ಹೇಳುತ್ತಾರೆ.

'ಯೋಜನೆಯ ಸುರಂಗವು ಜೋಶಿಮಠದ ಅಡಿಯಲ್ಲಿಯೇ ಹಾದು ಹೋಗುತ್ತದೆ. ಹೀಗಾಗಿ ಜೋಶಿಮಠದ ತಳಭಾಗವು ಸಡಿಲ ಮತ್ತು ಅಸ್ಥಿರವಾಗುತ್ತಿದೆ. ಆದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಮ್ಮ ಮಾತನ್ನು ಕಿವಿಗೆ ಹಾಕಿಕೊಳ್ಳುತ್ತಿಲ್ಲ' ಎಂದು ಇಲ್ಲಿನ ಜಿಲ್ಲಾ ಪಂಚಾಯಿತಿ ಸದಸ್ಯ ಸೂರಜ್ ಸೈಲಾನಿ ದೂರುತ್ತಾರೆ.

'2021ರಲ್ಲಿ ಅನಿರೀಕ್ಷಿತವಾಗಿ ಮೇಘಸ್ಫೋಟ ಆಗಿದ್ದರಿಂದ ಹಠಾತ್ ಪ್ರವಾಹ ಬಂದು ರಸ್ತೆಗಳು, ಸೇತುವೆಗಳು, ಅಣೆಕಟ್ಟುಗಳು ಕೊಚ್ಚಿಕೊಂಡು ಹೋದವು. ಆ ದುರಂತದಲ್ಲಿ ಸುರಂಗ ನಿರ್ಮಾಣದ ಬೃಹತ್ ಯಂತ್ರಗಳ ಸಮೇತ 190ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿ 35 ಜನರ ಶವ ಸಿಕ್ಕಿತ್ತು. ಇಷ್ಟೆಲ್ಲ ಆದರೂ ಎನ್‌ಟಿಪಿಸಿಯ ಅಧಿಕಾರಿಗಳು ಸತ್ಯವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಈ ಯೋಜನೆ ಇಡೀ ಪಟ್ಟಣವನ್ನೇ ನಾಶ ಮಾಡಲು ಹೊರಟಿದೆ. ಜನರನ್ನು ಬಲಿ ತೆಗೆದುಕೊಳ್ಳುವ ಇಂತಹ ಯೋಜನೆ ಬೇಕೇ' ಎಂದು ಅವರು ಪ್ರಶ್ನಿಸುತ್ತಾರೆ.

'ಸುರಂಗ ನಿರ್ಮಾಣಕ್ಕಾಗಿ ನಿರಂತರ ಸ್ಫೋಟಗಳನ್ನು ಮಾಡಲಾಗಿದೆ. ಸುರಂಗವು ಪರ್ವತದಲ್ಲಿನ ಹಲವು ಅಂತರ್ಜಲ ಮೂಲಗಳಿಗೆ ಧಕ್ಕೆ ಉಂಟುಮಾಡಿದೆ. ಹೀಗಾಗಿ ಅಂತರ್ಜಲ ಮಟ್ಟ ಕುಸಿದಿದೆ. ಇಡೀ ಪ್ರದೇಶವೇ ಟೊಳ್ಳಾಗಿದೆ. ಈ ಯೋಜನೆಗೆ ಪಟ್ಟಣಕ್ಕೆ ಅಪಾಯ ಕಾದಿದೆ ಎಂದು ವರ್ಷದ ಹಿಂದೆಯೇ ಎಚ್ಚರಿಸಿದ್ದೆವು. ಅದರ ಬಗ್ಗೆ ಗಮನ ಹರಿಸಲಿಲ್ಲ. ಅದರ ಫಲವನ್ನು ಈಗ ಉಣ್ಣುತ್ತಿದ್ದೇವೆ. ಇಲ್ಲಿ ನಿವಾಸಿಗಳು ನೆಲೆ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ' ಎಂದು ಜೋಶಿಮಠ ಉಳಿಸಿ ಹೋರಾಟ ಸಮಿತಿಯ ಸಂಚಾಲಕ ಅತುಲ್ ಸಾಥಿ ಹೇಳುತ್ತಾರೆ.

'ಇಲ್ಲಿನ ಶಂಕರಾಚಾರ್ಯ ದೇವಸ್ಥಾನಕ್ಕೂ ಹಾನಿಯಾಗಿದೆ. ದೇವಸ್ಥಾನದ ಹೊರಭಾಗದಲ್ಲಿ ಹಲವು ಕಡೆಗಳಲ್ಲಿ ಬಿರುಕು ಕಾಣಿಸಿಕೊಂಡಿದೆ. ಈ ಪುರಾತನ ಧಾರ್ಮಿಕ ನಗರವನ್ನು ಉಳಿಸಲು ಈಗಲಾದರೂ ಸರ್ಕಾರ ಮುಂದಾಗಬೇಕು' ಎಂದು ಸ್ವಾಮಿ ಅವಿಮುಕ್ತಾನಂದ ಸ್ವಾಮೀಜಿ ಒತ್ತಾಯಿಸಿದರು. ಈ ಪಟ್ಟಣವನ್ನು ಉಳಿಸುವಂತೆ ಒತ್ತಾಯಿಸಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ದಾವೆ ಹೂಡಿದ್ದಾರೆ.

ಸಂಕ್ರಾಂತಿ

ಬಾಂಧವ್ಯದ ಮಹಾಕ್ರಾಂತಿ

● ಎಸ್. ಸೂರ್ಯಪ್ರಕಾಶ ಪಂಡಿತ್

'ಎಳ್ಳು-ಬೆಲ್ಲ ತಿಂದು ಒಳ್ಳೆಯ ಮಾತನಾಡಿ' ಎಂಬುದು ಸಂಕ್ರಾಂತಿಯ ಮಾತು. ಇದು ದಿಟವಾಗಿಯೂ 'ಸಂ-ಕ್ರಾಂತಿ'ಯ ಮಾತು ಆಗಬೇಕಾಗಿದೆಯೆನ್ನಿ!

ಕೋವಿಡ್‌ನ ಕಾರಣದಿಂದ ಸೊಗಸನ್ನು ಕಳೆದುಕೊಂಡಿದ್ದ ನಮ್ಮ ಹಬ್ಬ-ಹರಿದಿನಗಳು ಮತ್ತೆ ಸಹಜ ಸ್ಥಿತಿಗೆ ಮರಳುತ್ತಿವೆ. ಇದರ ಜೊತೆಗೆ ಹಬ್ಬಗಳ ನೈಜ ಅರ್ಥವೂ ಈ ಆಚರಣೆಗಳೊಂದಿಗೆ ಸೇರಿಕೊಂಡರೆ ಆಗ ನಮ್ಮ ಜೀವನ ಇನ್ನಷ್ಟು ಸೊಗಸನ್ನು ಪಡೆದುಕೊಳ್ಳುತ್ತದೆ. ಕೊರೊನಾದ ಹೆದರಿಕೆಯಿಂದ ಬಂಧುಮಿತ್ರರ ಮನೆಗಳ ಸಂಪರ್ಕವನ್ನು ನಾವು ಕಳೆದುಕೊಂಡಿದ್ದೆವು. ಈಗ ಮತ್ತೆ ಅವರ ಮನೆಯ, ಅಷ್ಟೇಕೆ, ಮನದ ಸಂಪರ್ಕವನ್ನೂ ಹೊಂದಲು ಸಂಕ್ರಾಂತಿ ನಮಗೆ ಅವಕಾಶವನ್ನು ಒದಗಿಸಿದೆ.

ಹಬ್ಬಗಳು ಇರುವುದೇ ಆತ್ಮೀಯರೊಂದಿಗೆ ಸಂತೋಷ-ಸಂಭ್ರಮಗಳನ್ನು ಹಂಚಿಕೊಳ್ಳಲು. ಒಂದೊಂದು ಹಬ್ಬದಲ್ಲಿ ಒಂದೊಂದು ರೀತಿಯಲ್ಲಿ ನಲಿವಿಗೆ ಕಾರಣಗಳು ಇರುತ್ತವೆಯಷ್ಟೆ. ಸಂಕ್ರಾಂತಿಯಲ್ಲಿಯ ಸಂತೋಷದ ಕಾರಣವೂ ವಿಶಿಷ್ಟವಾಗಿದೆ. ನಮ್ಮ ಸ್ನೇಹಿತರ ಮತ್ತು ಬಂಧುಗಳ ಮನೆಗೆ ತೆರಳುತ್ತೇವೆ; ಎಳ್ಳು-ಬೆಲ್ಲಗಳನ್ನು ವಿನಿಮಯ ಮಾಡಿಕೊಳ್ಳುತ್ತೇವೆ. 'ಒಳ್ಳೆಯ ಮಾತನಾಡೋಣ' ಎಂದು ಹಾರೈಸುತ್ತವೆ. ಇದೊಂದು ವಿಶಿಷ್ಟ ಸಂಕಲ್ಪವೇ ಹೌದು. ಮಾತು ನಮ್ಮ ಜೀವನದ ಬಹಳ ಮುಖ್ಯ ಸಂಗತಿ; ಮಾತಿನಿಂದ ಬಾಂಧವ್ಯ ಗಟ್ಟಿಯೂ ಆಗುತ್ತದೆ; ಮಾತಿನಿಂದಲೇ ಬಾಂಧವ್ಯ ಮುರಿಯಲೂಬಹುದು. ಅಷ್ಟೇಕೆ, ಇಡಿಯ ನಮ್ಮ ಜಗತ್ತು ನಿಂತಿರುವುದೇ ಮಾತಿನ ಮೇಲೆ. ಆದರೆ ಇಂದು ಮಾತು ತುಂಬ ಅಪಮೌಲ್ಯಗೊಳ್ಳುತ್ತಿದೆ. ಚುನಾವಣೆ ಹತ್ತಿರದಲ್ಲಿರುವ ಸದ್ಯದ ವಾತಾವರಣದಲ್ಲಂತೂ ಮಾತಿನ ದುರ್ಬಳಕೆ ಎದ್ದುಕಾಣುತ್ತದೆಯಲ್ಲವೆ? ಇಂಥ ಸಂದರ್ಭದಲ್ಲಿ ಮಾತು ಎಂಬುದು ನಮ್ಮ ಸಂಬಂಧಗಳ ಸ್ಥಾಪನೆಗೆ ಅಮೃತವಾಗಬೇಕು; ಸಮಾಜದಲ್ಲಿ ಸೌಹಾರ್ದಕ್ಕೆ ಸೇತುವೆಯಾಗಬೇಕು. ಇಂಥದೊಂದು ಸಮ್ಯಕ್ ಕ್ರಾಂತಿಗೆ ಎಂದರೆ, 'ಸಂ-ಕ್ರಾಂತಿ'ಗೆ ಇಂದಿನ ಸಂಕ್ರಾಂತಿ ನಾಂದಿ ಹಾಡಲಿ. ಎಳ್ಳು ಎಂಬುದು ಋಣಾನುಬಂಧಕ್ಕೆ ಸಂಕೇತ ಕೂಡ. ನಮಗೆ ನೆರವಾದವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳಬೇಕೆಂಬ ಕರ್ತವ್ಯಬುದ್ಧಿಯನ್ನು ಋಣದ ಕಲ್ಪನೆಯಲ್ಲಿ ಕಾಣಬಹುದು. ನಮ್ಮ ಜೀವನ ಹಲವರ ಸಹಾಯದಿಂದ, ಸಹಕಾರದಿಂದ ಮಾತ್ರವೇ ಸಾಧ್ಯವಾಗುವುದು. ಹೀಗಾಗಿ ಸಂಕ್ರಾಂತಿಯ ಎಳ್ಳು-ಬೆಲ್ಲಗಳ ವಿತರಣೆ ನಮ್ಮನ್ನೂ ಸಮಾಜವನ್ನೂ ಬಂಧುಗಳನ್ನೂ ಸ್ನೇಹಿತರನ್ನೂ ಬೆಸೆಯುವ ಕಲಾಪವೇ ಹೌದು.

ಸೂರ್ಯ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವುದನ್ನೇ 'ಸಂಕ್ರಾಂತಿ' ಎಂದು ಕರೆಯುವುದು. ಈ ಎಣಿಕೆಯಂತೆ ಹನ್ನೆರಡು ಸಂಕ್ರಾಂತಿಗಳು ಒಂದು ವರ್ಷದಲ್ಲಿ ಉಂಟಾಗುತ್ತವೆ. ಆದರೆ ಮಕರಸಂಕ್ರಾಂತಿಯನ್ನೇ ವಿಶೇಷವಾಗಿ ಆಚರಿಸಲು ಕಾರಣ ಎಂದರೆ, ಸೂರ್ಯನು ತನ್ನ ಸಂಚಾರವನ್ನು ದಕ್ಷಿಣ ದಿಕ್ಕಿನಿಂದ ಉತ್ತರದ ಕಡೆಗೆ ತಿರುಗಿಸಿಕೊಳ್ಳುತ್ತಾನೆ ಎನ್ನುವುದು. ಅವನು ಪಿತೃಗಳ ದಾರಿಯಿಂದ ದೇವತೆಗಳ ದಾರಿಯ ಕಡೆಗೆ ಸೂರ್ಯ ತನ್ನ ಪ್ರಯಾಣವನ್ನು ಇಂದು ಆರಂಭಿಸುತ್ತಾನಂತೆ. ಸೂರ್ಯನಿಗೂ ನಮ್ಮ ಜೀವನಕ್ಕೂ ನೇರ ನಂಟಿದೆ. ಅವನೇ ನಮ್ಮ ಎಲ್ಲ ಚಟುವಟಿಕೆಗಳಿಗೆ ಪ್ರೇರಕ. ಗಾಯತ್ರೀಮಂತ್ರವೂ ಸೂರ್ಯನ ಪ್ರಾರ್ಥನೆಯೇ; ಒಳ್ಳೆಯ ಬುದ್ಧಿಯನ್ನು ನಮ್ಮಲ್ಲಿ ಪ್ರಚೋದಿಸು – ಎಂಬುದು ಅದರ ತಾತ್ಪರ್ಯ. ಬದುಕಿನಲ್ಲಿ ನಮಗೆ ಒದಗಬಹುದಾದ ಎಲ್ಲ ರೀತಿಯ ಸಂಕಷ್ಟಗಳಿಂದ ಪಾರಾಗಲು ನಮ್ಮ ಮನಸ್ಸು-ಬುದ್ಧಿ-ದೇಹಗಳು ಸರಿಯಾದ ಕ್ರಮದಲ್ಲಿ ಕೆಲಸಮಾಡಬೇಕು; ಈ ತಿಳಿವಳಿಕೆ ಹರಳುಗಟ್ಟುವುದೇ ಸೂರ್ಯನ ಅನುಗ್ರಹದಿಂದ. ನಾವು ಮರ್ತ್ಯದ ಮಾರ್ಗದಿಂದ ಅಮೃತದ ಮಾರ್ಗದಲ್ಲಿ ನಡೆಯಲು ಬೇಕಾದ ಬೆಳಕಿನ ಮೂಲವೇ ಅವನು. ಈ ಅಮೃತಯಾನಕ್ಕೆ ಮಾತು ನಮಗೆ ದಾರಿಬುತ್ತಿಯಾಗಲಿ ಎಂಬ ಆಶಯವನ್ನು ಸಂಕ್ರಾಂತಿಯ ಆಚರಣೆಯಲ್ಲಿ ನಾವು ನೋಡಬಹುದಾಗಿದೆ.

ಸಂಕ್ರಾಂತಿಯಂದು ನಮ್ಮ ದನಕರುಗಳನ್ನು ಸಿಂಗರಿಸುತ್ತೇವೆ; ಪೂಜಿಸುತ್ತೇವೆ. ನಮ್ಮ ಮಕ್ಕಳಿಗೆ ಆರತಿ ಎತ್ತುತ್ತೇವೆ; ಹೊಲ-ಗದ್ದೆಗಳಿಗೆ ಕೃತಜ್ಞತೆಯಿಂದ ನಮಿಸುತ್ತೇವೆ. ಒಟ್ಟು ನಮ್ಮ ಜೀವನವೇ ಸಂಕ್ರಾಂತಿಯ ಸಂಭ್ರಮದಲ್ಲಿ ಒಂದಾಗಿರುತ್ತದೆ.

ನಟಿ ಸಾತ್ವಿಕ

ಪ್ರಾದೇಶಿಕ ಪಕ್ಷಗಳಿಗೆ ದೊಡ್ಡ ಪಾತ್ರ: ಅಮರ್ತ್ಯ

2024ರ ಲೋಕಸಭಾ ಚುನಾವಣೆ: 'ಬಿಜೆಪಿಗೆ ಎದುರಾಳಿಯೇ ಇಲ್ಲ ಎಂದು ಭಾವಿಸುವುದು ತಪ್ಪು'

ಕೋಲ್ಕತ್ತ (ಪಿಟಿಐ): ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷಗಳು ಮಹತ್ವದ ಪಾತ್ರ ವಹಿಸಲಿವೆ. ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ ಎದುರಾಳಿಯೇ ಇರುವುದಿಲ್ಲ ಎಂದು ಭಾವಿಸುವುದು ತಪ್ಪಾಗಬಹುದು ಎಂದು ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ಅವರು ಅಭಿಪ್ರಾಯ ಪಟ್ಟಿದ್ದಾರೆ.

'ಪ್ರಾದೇಶಿಕ ಪಕ್ಷಗಳಾದ ಡಿಎಂಕೆ, ಟಿಎಂಸಿ ಈ ಬಾರಿ ಮಹತ್ವದ ಪಾತ್ರ ವಹಿಸಲಿವೆ. ಸಮಾಜವಾದಿ ಪಕ್ಷಕ್ಕೂ ತಕ್ಕಮಟ್ಟಿನ ನೆಲೆ ಇದ್ದು ಅದು ಹಾಗೆಯೇ ಮುಂದುವರಿಯಲಿದೆಯೇ ಎಂಬುದನ್ನು ಹೇಳಲಾಗದು. ಟಿಎಂಸಿಯ ಮಮತಾ, ಟಿಆರ್‌ಎಸ್‌ನ ಕೆ.ಚಂದ್ರಶೇಖರ ರಾವ್, ಎಎಪಿಯ ಅರವಿಂದ ಕೇಜ್ರಿವಾಲ್ ಸೇರಿದಂತೆ ಪ್ರಾದೇಶಿಕ ಪಕ್ಷಗಳ ನಾಯಕರು ಕಳೆದ ಚುನಾವಣೆಯಲ್ಲಿ 'ಫೆಡರಲ್ ಫ್ರಂಟ್' ರಚಿಸಿ ಸಭೆ ನಡೆಸಿದ್ದರು' ಎಂದು 'ಪಿಟಿಐ'ಗೆ ನೀಡಿದ ಸಂದರ್ಶನದಲ್ಲಿ ಸೇನ್ ನೆನಪಿಸಿಕೊಂಡಿದ್ದಾರೆ.

ಹಿಂದೂಗಳ ಪರವಾದ ಪಕ್ಷ ಎಂದು ಬಿಂಬಿಸಿ ಅಧಿಕಾರಕ್ಕೆ ಬಂದ ಬಿಜೆಪಿಯ ಸ್ಥಾನವನ್ನು ಬೇರೊಂದು ಪಕ್ಷದಿಂದ ತುಂಬಲು ಸಾಧ್ಯವಾಗುವುದಿಲ್ಲ ಎಂಬ ಮಾತುಗಳನ್ನು ಒಪ್ಪುವುದು ತಪ್ಪಾಗುತ್ತದೆ. ಎನ್‌ಸಿಪಿ, ಜೆಡಿಯು ಹಾಗೂ ಕಾಂಗ್ರೆಸ್ ಹೊಸ ಮೈತ್ರಿಕೂಟಕ್ಕೆ ಕರೆ ನೀಡಿವೆ. ವಿರೋಧ ಪಕ್ಷಗಳು ಒಟ್ಟಾಗಿ ಸ್ಪರ್ಧಿಸಿದರೆ ಬಿಜೆಪಿಯನ್ನು ಸೋಲಿಸಬಹುದು ಎಂಬುದಕ್ಕೆ ಈ ಪಕ್ಷಗಳು ಒತ್ತು ನೀಡಿವೆ' ಎಂದು ಸೇನ್ ಹೇಳಿದ್ದಾರೆ.

> ಮಮತಾ ಬ್ಯಾನರ್ಜಿಗೆ ಪ್ರಧಾನಿಯಾಗುವ ಅರ್ಹತೆ ಇದ್ದರೂ ಬಿಜೆಪಿ ವಿರುದ್ಧ ಅಸಮಾಧಾನ ಹೊಂದಿರುವ ಪಕ್ಷಗಳನ್ನು ಎಷ್ಟರ ಮಟ್ಟಿಗೆ ಅವರು ಒಗ್ಗೂಡಿಸುತ್ತಾರೆ ಎಂಬುದು ಮುಖ್ಯ
> **ಅಮರ್ತ್ಯ ಸೇನ್,** ಅರ್ಥಶಾಸ್ತ್ರಜ್ಞ

'ಭಾರತದ ದೃಷ್ಟಿಕೋನವನ್ನು ಬಿಜೆಪಿ ಬಹುವಾಗಿ ದುರ್ಬಲಗೊಳಿಸಿದೆ. ಭಾರತ ಎಂದರೆ ಹಿಂದೂಗಳ ದೇಶ ಮತ್ತು ಹಿಂದಿ ಮಾತನಾಡುವವರ ದೇಶ ಎಂಬ ಸಂಕುಚಿತ ಅರ್ಥ ಬರುವಂತೆ ಮಾಡಿದೆ. ದೇಶದಲ್ಲಿ ಇಂದು ಬಿಜೆಪಿಗೆ ಪರ್ಯಾಯ ಇಲ್ಲ ಎಂದಾದರೆ ಅದು ನಿಜಕ್ಕೂ ಬೇಸರ. ಬಿಜೆಪಿಯು ಪ್ರಬಲ ಹಾಗೂ ಶಕ್ತಿಯುತ ಎಂದು ಅನಿಸಿದರೂ, ಅದಕ್ಕೂ ದೌರ್ಬಲ್ಯಗಳಿವೆ. ವಿರೋಧ ಪಕ್ಷಗಳಿಗೆ ಇಚ್ಛಾಶಕ್ತಿ ಬೇಕು' ಎಂದು ಅಮರ್ತ್ಯ ಸೇನ್ ಹೇಳಿದ್ದಾರೆ.

'2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಗೆಲ್ಲುವ ಸಾಮರ್ಥ್ಯವಿದೆಯೇ ಎಂಬುದರ ಕುರಿತು ಸಂದೇಹವಿದೆ. ಆ ಪಕ್ಷವು ದುರ್ಬಲವಾಗಿದೆ. ಕಾಂಗ್ರೆಸ್‌ನ ಮೇಲೆ ಎಷ್ಟರ ಮಟ್ಟಿನ ಭರವಸೆ ಇಡಬಹುದು ಎಂಬುದೂ ಗೊತ್ತಾಗುತ್ತಿಲ್ಲ. ಆದರೆ, ಇಡೀ ಭಾರತದ ದೃಷ್ಟಿಕೋನ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಇದೆ. ಇದನ್ನು ಬೇರೆ ಯಾವ ಪಕ್ಷವೂ ರೂಪಿಸಿಕೊಳ್ಳಲಾಗದು. ಆದರೆ ಪಕ್ಷದೊಳಗೆ ಸಾಕಷ್ಟು ವಿಭಜನೆಗಳು ಆಗಿವೆ' ಎಂದು ಅಮರ್ತ್ಯ ಸೇನ್ ಹೇಳಿದ್ದಾರೆ.

'ಸಿಎಎ ಹಿಂದೆ ಅಲ್ಪಸಂಖ್ಯಾತರ ಕಡೆಗಣನೆ ಉದ್ದೇಶ'

'ಪೌರತ್ವ (ತಿದ್ದುಪಡಿ) ಕಾಯ್ದೆ'ಯ (ಸಿಎಎ) ಜಾರಿಯಿಂದ ದೇಶದ ಆಗುಹೋಗುಗಳಲ್ಲಿ ಅಲ್ಪಸಂಖ್ಯಾತರ ಪಾತ್ರವು ಕುಗ್ಗಬಹುದು ಮತ್ತು ಬಹುಸಂಖ್ಯಾತ ಶಕ್ತಿಗಳಿಗೆ ಇನ್ನೂ ಹೆಚ್ಚಿನ ಉತ್ತೇಜನ ದೊರೆಯಬಹುದು ಎಂದು ಅಮರ್ತ್ಯ ಸೇನ್ ಅವರು ಅಭಿಪ್ರಾಯಪಟ್ಟಿದ್ದಾರೆ.

'ದೇಶದಲ್ಲಿ ಅಲ್ಪಸಂಖ್ಯಾತರಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಮಹತ್ವ ಸಿಗದಂತೆ ನೋಡಿಕೊಳ್ಳುವುದು ಸಿಎಎ ಜಾರಿಗೆ ತಂದ ಬಿಜೆಪಿ ಸರ್ಕಾರದ ಉದ್ದೇಶಗಳಲ್ಲಿ ಒಂದಾಗಿತ್ತು. ಹಿಂದೂ ಬಹುಸಂಖ್ಯಾತರಿಗೆ ಎಷ್ಟು ಮಹತ್ವ ನೀಡಲಾಗಿದೆಯೋ, ಅಲ್ಪಸಂಖ್ಯಾತರ ಪಾತ್ರವನ್ನು ಅಷ್ಟೇ ಕಡೆಗಣಿಸಲಾಗಿದೆ' ಎಂದು ಹೇಳಿದ್ದಾರೆ.

'ಬಾಂಗ್ಲಾದೇಶ ಅಥವಾ ಪಶ್ಚಿಮ ಬಂಗಾಳದ ಅಲ್ಪಸಂಖ್ಯಾತರನ್ನು ಸ್ಥಳೀಯರು ಎಂದು ಪರಿಗಣಿಸುವ ಬದಲು ವಿದೇಶಿಯರು ಎಂದು ಘೋಷಿಸುವ ಮೂಲಕ ತಾರತಮ್ಯದ ಕ್ರಮ ಅನುಸರಿಸುವುದು ದುರದೃಷ್ಟಕರ. ಜಾತ್ಯತೀತ ಹಾಗೂ ಸಮಾನತೆಯ ದೇಶವಾಗಿರುವ ಭಾರತದಲ್ಲಿ ಇಂತಹ ಕ್ರಮಗಳಿಗೆ ಅರ್ಥವೇ ಇಲ್ಲ. ಮೂಲತಃ ಇದೊಂದು ಕೆಟ್ಟ ನಡೆ' ಎಂದು ಸೇನ್ ಹೇಳಿದ್ದಾರೆ.

'ಬಿಜೆಪಿ ಆಡಳಿತ ಸುಧಾರಿಸಿದೆ ಎಂದು ನನಗೆ ಅನಿಸುತ್ತಿಲ್ಲ. ಮಹಾತ್ಮ ಗಾಂಧಿ ಅವರು ಒಂದು ಸಮುದಾಯವನ್ನು ಮತ್ತೊಂದರ ವಿರುದ್ಧ ಎಂದೂ ಎತ್ತಿಕಟ್ಟಿ ರಾಜಕೀಯ ಮಾಡಿರಲಿಲ್ಲ. ಧಾರ್ಮಿಕವಾಗಿ ಅವರು ಹಿಂದೂ ಧರ್ಮಕ್ಕೆ ಬದ್ಧರಾಗಿದ್ದರೂ ಮುಸ್ಲಿಂ ಸಮುದಾಯವನ್ನು ಬೆಂಬಲಿಸುವುದರ ಪರವಾಗಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಇದ್ದುದಕ್ಕಿಂತ ಹೆಚ್ಚು ಬೆಂಬಲವನ್ನು ನೀಡಿದ್ದರು' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಬಾಂಗ್ಲಾದೇಶ, ಪಾಕಿಸ್ತಾನ, ಅಫ್ಗಾನಿಸ್ತಾನದ ಮುಸ್ಲಿಮೇತರ ವಲಸಿಗರಿಗೆ ಭಾರತದ ಪೌರತ್ವ ನೀಡುವುದು ಸಿಎಎ ಉದ್ದೇಶ. 2019ರ ಡಿ.11ರಂದು ಈ ಮಸೂದೆಗೆ ಸಂಸತ್ತು ಒಪ್ಪಿಗೆ ನೀಡಿತ್ತು. ಕಾಯ್ದೆ ಜಾರಿಗೊಳಿಸಲು ನಿಯಮಗಳನ್ನು ಇನ್ನಷ್ಟೇ ರೂಪಿಸಬೇಕಿದೆ.

ಬಿಜೆಪಿಗೆ 50 ಸ್ಥಾನ ನಷ್ಟ: ತರೂರ್

ಕೋಯಿಕ್ಕೋಡ್ (ಪಿಟಿಐ): ಲೋಕಸಭೆಗೆ 2019ರಲ್ಲಿ ನಡೆದ ಚುನಾವಣೆಯಲ್ಲಿ ಸಿಕ್ಕ ಗೆಲುವನ್ನು 2024ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ಪುನರಾವರ್ತಿಸುವುದು ಅಸಾಧ್ಯ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಹೇಳಿದ್ದಾರೆ. ಬಿಜೆಪಿ 50 ಕ್ಷೇತ್ರಗಳನ್ನು ಕಳೆದುಕೊಳ್ಳಬಹುದು ಎಂದೂ ಅವರು ಅಂದಾಜಿಸಿದ್ದಾರೆ.

ಬಿಜೆಪಿಯ ಪ್ರಾಬಲ್ಯ ಇದೆ ಎಂಬುದು ನಿಜ. ಆದರೆ, ಹಲವು ರಾಜ್ಯಗಳಲ್ಲಿ ಆ ಪಕ್ಷವು ಅಧಿಕಾರ ಕಳೆದುಕೊಂಡಿರುವುದೂ ವಾಸ್ತವ. ಹಾಗಾಗಿ, ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಕಳೆದುಕೊಳ್ಳುವುದು ಅಸಾಧ್ಯ ಏನಲ್ಲ. 2019ರ ಚುನಾವಣೆಯಲ್ಲಿ ಹರಿಯಾಣ, ಗುಜರಾತ್, ರಾಜಸ್ಥಾನದ ಎಲ್ಲ ಕ್ಷೇತ್ರಗಳಲ್ಲಿ ಆ ಪಕ್ಷ ಗೆದ್ದಿತ್ತು. ಬಿಹಾರ, ಮಧ್ಯ ಪ್ರದೇಶದಲ್ಲಿ ತಲಾ ಒಂದು ಕ್ಷೇತ್ರ ಬಿಟ್ಟು ಉಳಿದೆಲ್ಲವೂ ಬಿಜೆಪಿ ಪಾಲಾಗಿದ್ದವು. ಪಶ್ಚಿಮ ಬಂಗಾಳದಲ್ಲಿ 18 ಕ್ಷೇತ್ರಗಳಲ್ಲಿ ಗೆದ್ದಿತ್ತು. ಈ ಬಾರಿ ಈ ರೀತಿಯ ಗೆಲುವು ಸಾಧ್ಯವಿಲ್ಲ. ಹಾಗಾಗಿಯೇ ಬಿಜೆಪಿಗೆ ಸರಳ ಬಹುಮತ ಸಾಧ್ಯವಿಲ್ಲ ಎಂದು ಕೇರಳ ಸಾಹಿತ್ಯೋತ್ಸವದ ಗೋಷ್ಠಿಯೊಂದರಲ್ಲಿ ಮಾತನಾಡಿದ ತರೂರ್ ಹೇಳಿದ್ದಾರೆ.

ಪುಲ್ವಾಮಾ ದಾಳಿ ಮತ್ತು ಬಾಲಾಕೋಟ್ ಮೇಲೆ ನಡೆಸಿದ ವಾಯುದಾಳಿಯು ಬಿಜೆಪಿ ಪರವಾಗಿ 'ಭಾರಿ ಅಲೆ' ಏಳುವಂತೆ ಕೊನೆಯ ಕ್ಷಣದಲ್ಲಿ ಮಾಡಿತು. 2024ರಲ್ಲಿ ಅದೇ ರೀತಿ ಆಗಲು ಸಾಧ್ಯವಿಲ್ಲ. ಆದರೆ, ಬಿಜೆಪಿಗೆ ಬಹುಮತ ದೊರೆಯದಂತೆ ಮಾಡುವ ಬಿಜೆಪಿವಿರೋಧಿ ಪಕ್ಷಗಳು ಒಟ್ಟಾಗಿ ನಿಲ್ಲಲಿವೆಯೇ ಎಂಬುದಕ್ಕೆ ಉತ್ತರಿಸಲು ಸಾಧ್ಯವಿಲ್ಲ ಎಂದರು.

'ಬಿಜೆಪಿ 250 ಕ್ಷೇತ್ರಗಳಲ್ಲಷ್ಟೇ ಗೆದ್ದರೆ, 290 ಕ್ಷೇತ್ರಗಳಲ್ಲಿ ಗೆದ್ದವರು ಒಟ್ಟಾಗಿ ನಿಲ್ಲಲಿದ್ದಾರೆಯೇ ಅಥವಾ ಕೇಂದ್ರದಿಂದ ಪ್ರಯೋಜನ ಪಡೆಯಲು ಬಯಸುವ ಕೆಲವು ಪಕ್ಷಗಳ ಬೆಂಬಲವನ್ನು ಪಡೆದುಕೊಂಡು ಬಿಜೆಪಿ ಸರ್ಕಾರ ರಚಿಸಬಹುದೇ ಎಂಬುದನ್ನು ಹೇಳಲಾಗದು' ಎಂದು ವಿವರಿಸಿದ್ದಾರೆ.

ಲೋಕಸಭೆಗೆ 2019ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ 303 ಕ್ಷೇತ್ರಗಳಲ್ಲಿ ಗೆಲುವು ಕಂಡಿತ್ತು. ಕಾಂಗ್ರೆಸ್‌ಗೆ 52 ಕ್ಷೇತ್ರಗಳಲ್ಲಿ ಗೆಲುವು ಸಿಕ್ಕಿತ್ತು.

ಜೋಶಿಮಠ ಪರಿಸ್ಥಿತಿ: ಅನುಮತಿ ಇಲ್ಲದೆ ಹೇಳಿಕೆ ಬೇಡ– ಎನ್‌ಡಿಎಂಎ

ಒಂದನೇ ಪುಟದಿಂದ...

'ಇದೇ 12ರಂದು ಕೇಂದ್ರ ಸರ್ಕಾರ ಹಾಗೂ ಎನ್‌ಡಿಎಂಎ ಪ್ರತ್ಯೇಕ ಸಭೆ ನಡೆಸಿದ್ದವು. ಆ ಸಭೆಗಳಲ್ಲಿ ತಜ್ಞರು ಹಾಗೂ ಸಂಸ್ಥೆಗಳ ವರ್ತನೆ ಕುರಿತು ಗಂಭೀರವಾಗಿ ಚರ್ಚಿಸಲಾಗಿದೆ. ಹೀಗಾಗಿ ಜೋಶಿಮಠದ ವಿಚಾರದಲ್ಲಿ ಸಂವೇದನಾಶೀಲರಾಗಿ ವರ್ತಿಸುವಂತೆ ಎಲ್ಲಾ ಸಂಸ್ಥೆಗಳೂ ತಮ್ಮ ತಜ್ಞರಿಗೆ ತಾಕೀತು ಮಾಡಬೇಕು. ವಸ್ತುಸ್ಥಿತಿಯ ಅಧ್ಯಯನಕ್ಕೆ ವಿಜ್ಞಾನಿಗಳು ಹಾಗೂ ತಾಂತ್ರಿಕ ಪರಿಣತರನ್ನೊಳಗೊಂಡ ತಂಡ ನೇಮಿಸಲಾಗಿದೆ. ಆ ತಂಡ ಸಲ್ಲಿಸುವ ಅಂತಿಮ ವರದಿಯನ್ನು ಎನ್‌ಡಿಎಂಎ ಬಿಡುಗಡೆಗೊಳಿಸಲಿದೆ. ಅಲ್ಲಿಯವರೆಗೂ ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ಮಾಹಿತಿ ಹಂಚಿಕೊಳ್ಳದಂತೆ ತಜ್ಞರ ಮೇಲೆ ನಿರ್ಬಂಧ ವಿಧಿಸಬೇಕು' ಎಂದೂ ಸಂಸ್ಥೆಗಳಿಗೆ ಸೂಚಿಸಿದೆ.

'ಕೆಲ ಇನ್‌ಸ್ಟಿಟ್ಯೂಟ್ ಹಾಗೂ ಏಜೆನ್ಸಿಗಳು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮತಿ ಪಡೆಯದೆಯೇ ಜೋಶಿಮಠದಲ್ಲಿನ ಪರಿಸ್ಥಿತಿ ಕುರಿತ ವರದಿ ಹಾಗೂ ಮಾಹಿತಿ ಪ್ರಕಟಿಸುತ್ತಿವೆ. ಇದರಿಂದ ವಸ್ತುಸ್ಥಿತಿ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಜೊತೆಗೆ ಸಮುದಾಯದಲ್ಲಿ ಭೀತಿಯ ವಾತಾವರಣವೂ ಸೃಷ್ಟಿಯಾಗಲಿದೆ. ಹೀಗಾಗಿ ಇನ್ನು ಮುಂದೆ ಮಾಹಿತಿ ಅಥವಾ ವರದಿ ಪ್ರಕಟಿಸುವ ಮುನ್ನ ಸಂಬಂಧಪಟ್ಟ ಇಲಾಖೆ, ಸಚಿವಾಲಯ ಅಥವಾ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಅನುಮತಿ ಪಡೆಯುವುದು ಕಡ್ಡಾಯ' ಎಂದು ಉತ್ತರಾಖಂಡ ಸರ್ಕಾರ ಹೇಳಿದೆ.

ಜೋಡೊ ಯಾತ್ರೆ: ಸಂಸದ ಸಂತೋಖ್ ನಿಧನ

ಚಂಡೀಗಢ (ಪಿಟಿಐ): ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ ಭಾರತ್ ಜೋಡೊ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಜಲಂಧರ್ ಸಂಸದ ಸಂತೋಖ್ ಸಿಂಗ್ ಚೌಧರಿ (76) ಅವರು ಹೃದಯ ಸ್ತಂಭನದಿಂದಾಗಿ ಶನಿವಾರ ಮೃತಪಟ್ಟರು. ಹೀಗಾಗಿ 24 ಗಂಟೆಗಳ ಕಾಲ ಯಾತ್ರೆಯನ್ನು ಸ್ಥಗಿತಗೊಳಿಸಲಾಯಿತು.

ಸಂತೋಖ್ ಸಿಂಗ್ ಚೌಧರಿ

ಚೌಧರಿ ಅವರು ಜಲಂಧರ್‌ನ ಫಿಲ್ಲೌರ್‌ನಲ್ಲಿ ನಡೆಯುತ್ತಿದ್ದ ಯಾತ್ರೆಯಲ್ಲಿ ರಾಹುಲ್ ಗಾಂಧಿ ಅವರ ಜತೆ ಹೆಜ್ಜೆ ಹಾಕುತ್ತಿದ್ದರು. ಕೆಲ ಸಮಯದ ನಂತರ, ಅಸ್ವಸ್ಥರಾಗಿ ಕುಸಿದರು. ಕೂಡಲೇ ಅವರನ್ನು ಸಮೀಪದ ಖಾಸಗಿ ಆಸ್ಪತ್ರೆ ಕರೆದೊಯ್ಯಲಾಯಿತು. ಆದರೆ, ಅವರು ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಾಗಿ ವೈದ್ಯರು ಘೋಷಿಸಿದರು.

'ಸಂತೋಖ್ ಸಿಂಗ್ ಚೌಧರಿ ಅವರ ನಿಧನದ ಹಿನ್ನೆಲೆಯಲ್ಲಿ 24 ತಾಸುಗಳ ಕಾಲ ಯಾತ್ರೆಯನ್ನು ಮುಂದೂಡಲಾಗಿದೆ. ಜಲಂಧರ್‌ನ ಖಾಲ್ಸಾ ಕಾಲೇಜು ಮೈದಾನದಿಂದ ಭಾನುವಾರ ಮಧ್ಯಾಹ್ನ ಯಾತ್ರೆ ಮತ್ತೆ ಆರಂಭವಾಗಲಿದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ ವಿಭಾಗ) ಜೈರಾಮ್ ರಮೇಶ್ ಹೇಳಿದ್ದಾರೆ. 'ಭಾನುವಾರ ಜಲಂಧರ್‌ನಲ್ಲಿ ನಿಗದಿಯಾಗಿದ್ದ ರಾಹುಲ್ ಗಾಂಧಿ ಅವರ ಪತ್ರಿಕಾಗೋಷ್ಠಿಯನ್ನು ಸಹ ಮುಂದೂಡಲಾಗಿದೆ. ಹೋಷಿಯಾರ್‌ಪುರದಲ್ಲಿ ಇದೇ 17ರಂದು ಅವರು ಪತ್ರಿಕಾಗೋಷ್ಠಿ ನಡೆಸುವರು' ಎಂದು ತಿಳಿಸಿದ್ದಾರೆ.

ದಲಿತ ಸಮುದಾಯದ ನಾಯಕರಾಗಿದ್ದ ಚೌಧರಿ ಅವರು ಎರಡನೇ ಬಾರಿಗೆ ಲೋಕಸಭೆಗೆ ಆಯ್ಕೆಯಾಗಿದ್ದರು. ಅವರು ಜಲಂಧರ್ ಜಿಲ್ಲೆಯ ಕರ್ತಾರಪುರ ಬಳಿಯ ಧಲಿವಾಲ್ ಗ್ರಾಮದವರು.

ಅವರ ತಂದೆ ಗುರ್ಬಂತ್ ಸಿಂಗ್ ಅವರೂ ಕೂಡ ಪ್ರಭಾವಿ ನಾಯಕರಾಗಿದ್ದರು. ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದ ಗುರ್ಬಂತ್ ಸಿಂಗ್ ಅವರು ಪಂಜಾಬ್‌ನ ಕೃಷಿ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು.

ಚೌಧರಿ ಅವರ ಪುತ್ರ ವಿಕ್ರಮಜಿತ್ ಸಿಂಗ್ ಅವರು ಫಿಲ್ಲೌರ್ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರೆ, ಅಣ್ಣ ಚೌಧರಿ ಜಗಜೀತ್ ಸಿಂಗ್ ಅವರು ಪಂಜಾಬ್ ಸರ್ಕಾರದಲ್ಲಿ ಸ್ಥಳೀಯ ಸಂಸ್ಥೆಗಳ ಸಚಿವರಾಗಿದ್ದರು.

ಸಾಂತ್ವನ: ರಾಹುಲ್ ಗಾಂಧಿ ಅವರು ಚೌಧರಿ ಅವರ ನಿವಾಸಕ್ಕೆ ಭೇಟಿ ನೀಡಿ, ಅವರ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದರು. 'ಚೌಧರಿ ಅವರ ಹಠಾತ್ ನಿಧನದಿಂದ ದಿಗ್ಭ್ರಮೆಯಾಗಿದೆ. ಅವರು ಶ್ರಮಜೀವಿಯಾಗಿದ್ದರಲ್ಲದೇ, ಸರಳ ವ್ಯಕ್ತಿಯಾಗಿದ್ದರು. ಕಾಂಗ್ರೆಸ್ ಸಂಘಟನೆಗೆ ಅಪಾರ ಕೊಡುಗೆ ನೀಡಿದ್ದ ಅವರು, ತಮ್ಮ ಜೀವನವನ್ನು ಸಾರ್ವಜನಿಕರ ಸೇವೆಗೆ ಮುಡಿಪಾಗಿಟ್ಟಿದ್ದರು' ಎಂದು ಟ್ವೀಟ್ ಮೂಲಕ ರಾಹುಲ್ ಗಾಂಧಿಯವರು ಗೌರವ ಸಲ್ಲಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಮರಿಂದರ್ ಸಿಂಗ್ ರಾಜಾವಾರಿಂಗ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ಮಾಜಿ ಮುಖ್ಯಮಂತ್ರಿ ಸೇರಿದಂತೆ ಹಲವು ಮುಖಂಡರು ಚೌಧರಿ ನಿಧನಕ್ಕೆ ಶೋಕಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net
LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಅತಿಥಿಗಳು
ಸುಚೇಂದ್ರ ಪ್ರಸಾದ್, ಚಿತ್ರನಟ, ನಿರ್ದೇಶಕ
ಬಿ.ಎಸ್. ಲಿಂಗದೇವರು, ಚಿತ್ರನಟ, ನಿರ್ದೇಶಕ
ಹಾನಗಲ್ ವಿರಾಗಿಗೆ ಬೆಳ್ಳಿತೆರೆ ದೀಕ್ಷೆ
ಬೆಳಿಗ್ಗೆ 8.30ಕ್ಕೆ
ಕನ್ನಡ ಧ್ವನಿ ಪಾಡ್‌ಕಾಸ್ಟ್‌ನಲ್ಲಿ

ಸೆಲೆಬ್ರಿಟಿ PREMIER
ಬೆಳಿಗ್ಗೆ 10 ಕ್ಕೆ Prajavani.net Prajavani Prajavani
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಸ್ಪಾಂಜ್ ಉಕ್ಕು ಉದ್ಯಮಿಗಳ ಮನೆ, ಕಾರ್ಖಾನೆ ಶೋಧ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಜಿಲ್ಲೆಯ ಪ್ರಭಾವಿ ರಾಜಕಾರಣಿಗಳ ಜತೆ ನಿಕಟ ಸಂಬಂಧ ಹೊಂದಿದ್ದಾರೆ ಎನ್ನಲಾದ ಕೆಲ ಗಣಿ ಉದ್ಯಮಿಗಳ ಮನೆ ಹಾಗೂ ಅವರ ಸ್ಪಾಂಜ್ ಉಕ್ಕಿನ ಕಾರ್ಖಾನೆಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ.

ಬೆಂಗಳೂರು, ಬಳ್ಳಾರಿ, ಕೊಪ್ಪಳ ಸೇರಿದಂತೆ ಹಲವು ಸ್ಥಳಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ತಂಡ ಏಕಕಾಲಕ್ಕೆ ದಾಳಿ ನಡೆಸಿದೆ. ಮೂರು ದಿನಗಳಿಂದ ಸತತ ದಾಖಲೆ ಪರಿಶೀಲನೆ ನಡೆಯುತ್ತಿದೆ ಎಂದು ವಿಶ್ವಾಸನೀಯ ಮೂಲಗಳು ತಿಳಿಸಿವೆ.

ಸ್ಪಾಂಜ್ ಉಕ್ಕಿನ ಕಾರ್ಖಾನೆ ನಡೆಸುತ್ತಿರುವ ಗಣಿ ಉದ್ಯಮಿ ಜಿಲ್ಲೆಯ ಪ್ರಭಾವಿ ರಾಜಕಾರಣಿಗಳು ಹಾಗೂ ಅವರ ಹತ್ತಿರದ ಸಂಬಂಧಿ ಜತೆ ಪಾಲುದಾರಿಕೆ ಹೊಂದಿದ್ದಾರೆ ಎನ್ನಲಾಗಿದೆ. ಯಾರ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ಮಾಡಲಾಗಿದೆ ಎಂಬುದನ್ನು ಮೂಲಗಳು ಬಹಿರಂಗ ಮಾಡಿಲ್ಲ.

ಆದರೆ, ಈ ಗಣಿ ಉದ್ಯಮಿಗೆ ಸೆಪ್ಟೆಂಬರ್ ತಿಂಗಳಲ್ಲಿ ಹೈದರಾಬಾದ್‌ನ ಸಿಬಿಐ ಕಚೇರಿಗೆ ಕರೆಸಿ ವಿಚಾರಣೆ ನಡೆಸಲಾಗಿತ್ತು. ಮಾಜಿ ಸಚಿವ ಜನಾರ್ದನ ರೆಡ್ಡಿ ಅಥವಾ ಬೇರೆ ಯಾವುದೇ ರಾಜಕಾರಣಿಗಳ ಜತೆ ವ್ಯಾವಹಾರಿಕ ಸಂಬಂಧವಿದೆಯೇ ಎಂದು ವಿಚಾರಣೆ ನಡೆದಿತ್ತು. ಅಕ್ರಮ ಗಣಿಗಾರಿಕೆ ಸಂಬಂಧ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರ ವರದಿಯಿಂದ ಬಳ್ಳಾರಿ ದೇಶದಾದ್ಯಂತ ಸದ್ದು ಮಾಡಿತ್ತು. ಆ ಆರೋಪ ಸಂಬಂಧ ಮಾಜಿ ಸಚಿವ ಜನಾರ್ದನ ರೆಡ್ಡಿ 2011ರಲ್ಲಿ ಜೈಲು ಸೇರಿದ್ದರು. ಬಳಿಕ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾರೆ.

ಶ್ರೀರಾಮುಲು ನಿರಾಕರಣೆ

ತಮ್ಮ ಪಾಲುದಾರಿಕೆಗೆ ಸೇರಿದ್ದೆನ್ನಲಾದ ಸ್ಪಾಂಜ್ ಉಕ್ಕಿನ ಕಾರ್ಖಾನೆ ಮೇಲೆ ಐ.ಟಿ ದಾಳಿ ನಡೆದಿದೆ ಎಂಬ ಆರೋಪವನ್ನು ಜಿಲ್ಲಾ ಉಸ್ತುವಾರಿ ಸಚಿವ ಬಿ. ಶ್ರೀರಾಮುಲು ನಿರಾಕರಿಸಿದ್ದಾರೆ.

'ನಾನು ಯಾವ ಕಾರ್ಖಾನೆಯಲ್ಲೂ ಪಾಲುದಾರಿಕೆ ಹೊಂದಿಲ್ಲ. ಗಣಿಗಾರಿಕೆ ಉದ್ಯಮ ತುತ್ತ ತುದಿಯಲ್ಲಿದ್ದಾಗಲೇ ಯಾರ ಜತೆ ಪಾಲುದಾರಿಕೆ ಹೊಂದಿರಲಿಲ್ಲ. ಈಗ ಹೇಗೆ ಪಾಲುದಾರಿಕೆ ಹೊಂದುತ್ತೇನೆ' ಎಂದು ಪ್ರಶ್ನಿಸಿದರು.

ಆದಾಯ ತೆರಿಗೆ ತಪ್ಪಿಸಿದ ವೇಳೆ ಇಂಥ ದಾಳಿಗಳು ಸಾಮಾನ್ಯ. ಯಾರ ಮೇಲೆ ದಾಳಿ ನಡೆದರೂ ಕಾನೂನು ತನ್ನದೇ ಕ್ರಮ ಕೈಗೊಳ್ಳಲಿದೆ ಎಂದರು.

ತಿಪಟೂರಿನಲ್ಲಿ ಅದ್ದೂರಿ ಸಿದ್ಧರಾಮೇಶ್ವರ ಜಯಂತಿ

ನೊಳಂಬ ಲಿಂಗಾಯತರ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ತಿಪಟೂರು (ತುಮಕೂರು): ನೊಳಂಬ ಲಿಂಗಾಯತರ ಸಂಘದ ನೇತೃತ್ವದಲ್ಲಿ ಗುರು ಸಿದ್ಧರಾಮೇಶ್ವರರ 850ನೇ ಜಯಂತಿ ಮಹೋತ್ಸವವನ್ನು ನಗರದ ಸಿದ್ಧರಾಮೇಶ್ವರ ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ ಶನಿವಾರ ಅದ್ದೂರಿಯಾಗಿ ಆಚರಿಸುವ ಮೂಲಕ ನೊಳಂಬ ಲಿಂಗಾಯತರು ತಮ್ಮ ಶಕ್ತಿ ಪ್ರದರ್ಶಿಸಿದರು.

ಪ್ರತಿ ವರ್ಷವೂ ಜಯಂತಿಯನ್ನು ಇತರೆಡೆಗಳಲ್ಲಿ ಆಚರಣೆ ಮಾಡಿಕೊಂಡು ಬಂದಿದ್ದು, ಈ ಬಾರಿ ಜಿಲ್ಲೆಯಲ್ಲಿ ಸಮಾವೇಶ ನಡೆಸಿ ಒಗ್ಗಟ್ಟು ತೋರ್ಪಡಿಸಿದರು. ರಾಜ್ಯದ ವಿವಿಧೆಡೆಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಸಮುದಾಯದ ಜನರು ಬಂದಿದ್ದರು.

ಜಯಂತ್ಯುತ್ಸವದ ಅಂಗವಾಗಿ ಕೃಷಿ ಹಾಗೂ ಕೈಗಾರಿಕಾ ವಸ್ತುಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. ವಸ್ತುಪ್ರದರ್ಶನದಲ್ಲಿ ನೂತನ ತಂತ್ರಜ್ಞಾನದ ಬಗ್ಗೆ ರೈತರಿಗೆ ತಿಳಿಸಿಕೊಡಲಾಯಿತು. ಪುಸ್ತಕಗಳ ಪ್ರದರ್ಶನ, ಮಾರಾಟವೂ ಇತ್ತು.

ಎರಡು ದಿನ ನಡೆಯುವ ಮಹೋತ್ಸವಕ್ಕೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಚಾಲನೆ ನೀಡಿದರು. 'ಅಲ್ಲಮಪ್ರಭು, ಅಕ್ಕಮಹಾದೇವಿ ಅವರ ಸಾಲಿನಲ್ಲಿ ಗುರು ಸಿದ್ಧರಾಮೇಶ್ವರರು ನಿಲ್ಲುತ್ತಾರೆ. ಸಾಮಾಜಿಕ ಬದಲಾವಣೆಗೆ ಕಾರಣಕರ್ತರಾಗಿದ್ದು, ಜನರ ನೀರಿನ ದಾಹ ನೀಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು' ಎಂದು ಯಡಿಯೂರಪ್ಪ ಸ್ಮರಿಸಿದರು.

ಕೃಷಿ ಗೋಷ್ಠಿ, ಸಿದ್ಧರಾಮ ಸಾಹಿತ್ಯ ಗೋಷ್ಠಿ, ಅಭಿನಂದನಾ ಕಾರ್ಯಕ್ರಮ ನೆರವೇರಿದವು. ಸಂಶೋಧಕ ಪ್ರೊ.ಬಿ.ರಾಜಶೇಖರಪ್ಪ ಅವರಿಗೆ 'ಸಿದ್ಧರಾಮ ಸಾಹಿತ್ಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಕೆರೆಗೋಡಿ ರಂಗಾಪುರ ಸುಕ್ಷೇತ್ರದ ಗುರುಪರದೇಶೀಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಸಚಿವರಾದ ಗೋವಿಂದ ಕಾರಜೋಳ, ಬಿ.ಸಿ.ನಾಗೇಶ್, ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷ ಎಸ್.ಆರ್.ಪಾಟೀಲ ಸೇರಿದಂತೆ ವಿವಿಧ ಮಠಾಧೀಶರು, ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಭಾನುವಾರ ಮಹಿಳಾ ಗೋಷ್ಠಿ, 'ನೊಳಂಬ ಶ್ರೀ' ಪ್ರಶಸ್ತಿ ಪ್ರದಾನ, ಸಮಾರೋಪ ಸಮಾರಂಭದ ಮೂಲಕ ಸಿದ್ಧರಾಮೇಶ್ವರ ಜಯಂತಿಗೆ ತೆರೆ ಬೀಳಲಿದೆ.

ತಿಪಟೂರಿನಲ್ಲಿ ನಡೆದ ಸಿದ್ಧರಾಮೇಶ್ವರ ಸುವರ್ಣ ಜಯಂತಿ ಮಹೋತ್ಸವವನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್‌ ಯಡಿಯೂರಪ್ಪ ಉದ್ಘಾಟಿಸಿದರು. ವಿವಿಧ ಮಠಾಧೀಶರು ಪಾಲ್ಗೊಂಡಿದ್ದರು

'ರೈತರ ಹೆಸರಿನಲ್ಲಿ ಜಮೀನಿರಲಿ'

'ಕೈಗಾರಿಕೆ ಸೇರಿದಂತೆ ಹಲವಾರು ಯೋಜನೆಗಳಿಗೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ. ರೈತರಿಂದ ಜಮೀನು ಪಡೆದುಕೊಂಡರೂ ಖಾತಾ ರೈತರ ಹೆಸರಿನಲ್ಲೇ ಇರುವಂತೆ ಕಾನೂನು ರೂಪಿಸಬೇಕು' ಎಂದು ಚಿತ್ರದುರ್ಗದ ಸಿರಿಗೆರೆ ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಲಹೆ ಮಾಡಿದರು. ಜಮೀನಿನಲ್ಲಿ ಬೆಳೆಯುತ್ತಿದ್ದ ಬೆಳೆಯ ಆಧಾರದಲ್ಲಿ ಪ್ರತಿ ತಿಂಗಳೂ ಹಣ ನೀಡುವಂತಾಗಬೇಕು. ವಿದೇಶಗಳಲ್ಲಿ ಈಗಾಗಲೇ ಈ ರೀತಿಯಲ್ಲಿ ಭೂಮಿಯ ಬಳಕೆ ಪ್ರಾರಂಭವಾಗಿದೆ. ರಾಜ್ಯದಲ್ಲೂ ಇಂತಹ ಕಾನೂನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಸಂಕ್ಷಿಪ್ತ ಸುದ್ದಿ

ಶಂಕರ್ ಮಿಶ್ರಾ ಮಾತು ಸತ್ಯಕ್ಕೆ ದೂರ: ಸಂತ್ರಸ್ತೆ

ನವದೆಹಲಿ (ಪಿಟಿಐ): 'ಏರ್ ಇಂಡಿಯಾ ವಿಮಾನದ ಬ್ಯುಸಿನೆಸ್ ಕ್ಲಾಸ್‌ನಲ್ಲಿ ಪ್ರಯಾಣಿಸುತ್ತಿದ್ದ ನನ್ನ ಮೇಲೆ ಕುಡಿದ ಅಮಲಿನಲ್ಲಿ ಮೂತ್ರ ವಿಸರ್ಜಿಸಿದ್ದ ಆರೋಪಿ ಶಂಕರ್ ಮಿಶ್ರಾ ಈಗ ತಾನು ಮೂತ್ರ ವಿಸರ್ಜಿಸಿಯೇ ಇಲ್ಲ ಎಂದು ಹೇಳಿದ್ದಾರೆ. ಸ್ವತಃ ನಾನೇ ಮೂತ್ರ ಮಾಡಿಕೊಂಡಿರಬಹುದು ಎಂದೂ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಅವರು ಆಡಿರುವ ಮಾತುಗಳು ಅವಹೇಳನಕಾರಿಯಾಗಿವೆ. ಜೊತೆಗೆ ಸತ್ಯಕ್ಕೆ ದೂರವಾಗಿವೆ' ಎಂದು ಸಂತ್ರಸ್ತ ವೃದ್ಧೆ ಶನಿವಾರ ಕಿಡಿಕಾರಿದ್ದಾರೆ.

'ಶಂಕರ್ ಮಿಶ್ರಾ ಪರ ವಕೀಲರು ಮಾಡಿರುವ ಆರೋಪಗಳು ಸುಳ್ಳಿನಿಂದ ಕೂಡಿವೆ. ಅದೊಂದು ಕಟ್ಟುಕಥೆ. ಆರೋಪಿತರ ಹೇಳಿಕೆಯು ಅವರು ಜಾಮೀನು ಅರ್ಜಿಯಲ್ಲಿ ಉಲ್ಲೇಖಿಸಿರುವ ಅಂಶಗಳಿಗೆ ತದ್ವಿರುದ್ಧವಾಗಿದೆ' ಎಂದು ಸಂತ್ರಸ್ತೆ ಪರ ವಕೀಲ ಅಂಕುರ್ ಮಹಿಂದ್ರೊ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

80 ಲಕ್ಷ ಡೋಸ್ ಉಚಿತ ಲಸಿಕೆ

ನವದೆಹಲಿ (ಪಿಟಿಐ): ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಬೆನ್ನಲ್ಲೇ, ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾವು (ಸಿಐಐ) ಕೇಂದ್ರ ಸರ್ಕಾರಕ್ಕೆ ಉಚಿತವಾಗಿ ಕೋವಿಶೀಲ್ಡ್ ಲಸಿಕೆಗಳನ್ನು ಪೂರೈಸಲು ಪ್ರಾರಂಭಿಸಿದ್ದು, ಮೊದಲ ಹಂತದಲ್ಲಿ 80 ಲಕ್ಷ ಡೋಸ್‌ಗಳನ್ನು ಶನಿವಾರ ಪೂರೈಸಿದೆ.

ಸಂಸದ ಫೈಜಲ್ ಅನರ್ಹಗೊಳಿಸಿ ಅಧಿಸೂಚನೆ

ತಿರುವನಂತಪುರ (ಪಿಟಿಐ): ಕೊಲೆಯತ್ನ ಪ್ರಕರಣವೊಂದರಲ್ಲಿ 10 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಲಕ್ಷದ್ವೀಪ ಸಂಸದ ಮೊಹಮ್ಮದ್ ಫೈಜಲ್ ಅವರನ್ನು ಅನರ್ಹಗೊಳಿಸಿ ಲೋಕಸಭಾ ಸೆಕ್ರೆಟರಿಯೇಟ್ ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ಸಂವಿಧಾನದ 102 (ಎಲ್) (ಇ) ವಿಧಿ ಹಾಗೂ ಪ್ರಜಾ ಪ್ರಾತಿನಿಧ್ಯ ಕಾಯ್ದೆ–1951ರ ಸೆಕ್ಷನ್ 8ರ ಅಡಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸೆಕ್ರೆಟರಿಯೇಟ್ ತಿಳಿಸಿದೆ.

ತ್ರಿಪುರಾ: ಕಾಂಗ್ರೆಸ್–ಸಿಪಿಎಂ ಮೈತ್ರಿ

ಅಗರ್ತಲ (ಪಿಟಿಐ): ಈಶಾನ್ಯ ರಾಜ್ಯ ತ್ರಿಪುರಾದಲ್ಲಿ ಬದ್ಧ ವೈರಿಗಳೆನಿಸಿದ್ದ ಕಾಂಗ್ರೆಸ್ ಮತ್ತು ಸಿಪಿಎಂ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಒಟ್ಟಾಗಿ ಕಣಕ್ಕಿಳಿಯಲು ನಿರ್ಧರಿಸಿವೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಅಜಯ್ ಕುಮಾರ್ ಅವರು ಶುಕ್ರವಾರ ಸಂಜೆ ಸಿಪಿಎಂ ರಾಜ್ಯ ಘಟಕದ ಕಾರ್ಯದರ್ಶಿ ಜಿತೇಂದ್ರ ಚೌಧರಿ ಜೊತೆ ಮಾತುಕತೆ ನಡೆಸಿದ್ದರು. ಬಳಿಕ ಮೈತ್ರಿ ವಿಚಾರ ಬಹಿರಂಗಪಡಿಸಿದ್ದಾರೆ.

'ಕಾಂಗ್ರೆಸ್ ರಾಜ್ಯ ಘಟಕದ ಪದಾಧಿಕಾರಿಗಳು ಸಿಪಿಎಂ ರಾಜ್ಯ ಘಟಕದ ಕಾರ್ಯದರ್ಶಿ ಜೊತೆ ಸೀಟು ಹಂಚಿಕೆ ಕುರಿತು ಚರ್ಚಿಸಲಿದ್ದಾರೆ' ಎಂದು ಅಜಯ್ ಕುಮಾರ್ ಹೇಳಿದ್ದಾರೆ.

ಎಚ್‌ಡಿಎಫ್‌ಸಿ ಬ್ಯಾಂಕ್ ನಿವ್ವಳ ಲಾಭ ಶೇ 18.5ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ/ರಾಯಿಟರ್ಸ್): ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್, ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹12,259 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಲಾಭ ₹10,342 ಕೋಟಿ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 18.5ರಷ್ಟು ಹೆಚ್ಚಾಗಿದೆ.

ಬ್ಯಾಂಕ್‌ನ ವರಮಾನವು ಹಿಂದಿನ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹40,652 ಕೋಟಿ ಇತ್ತು. ಅದು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹51,208 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಬ್ಯಾಂಕ್‌ನ ಆಸ್ತಿ ಗುಣಮಟ್ಟವು ಸುಧಾರಿಸಿದಂತೆ, ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 1.23ರಷ್ಟು ಇದೆ.

ನಿವ್ವಳ ಬಡ್ಡಿ ವರಮಾನವು ಶೇ 24.6ರಷ್ಟು ಹೆಚ್ಚಾಗಿದ್ದು ₹22,988 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹18,443 ಕೋಟಿಯಷ್ಟು ಇತ್ತು. ಬ್ಯಾಂಕ್‌ನ ಮುಂಗಡ ಶೇ 19.5ರಷ್ಟು, ಠೇವಣಿ ಶೇ 21.40ರಷ್ಟು ಬೆಳವಣಿಗೆ ಕಂಡಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು 2022ರ ಡಿಸೆಂಬರ್ 31ರ ಅಂತ್ಯಕ್ಕೆ ₹2,806 ಕೋಟಿಯಷ್ಟು ಇದೆ. 2021ರ ಡಿಸೆಂಬರ್ 31ರ ಅಂತ್ಯದಲ್ಲಿ ₹2,994 ಕೋಟಿಯಷ್ಟು ಇತ್ತು ಎಂದು ಬ್ಯಾಂಕ್ ತಿಳಿಸಿದೆ.

ನಿವ್ವಳ ಎನ್‌ಪಿಎ ಶೇ 0.37 ರಿಂದ ಶೇ 0.33ಕ್ಕೆ ಇಳಿಕೆ ಆಗಿದೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟಾಂಡರ್ಡ್ ಚಿನ್ನ 10ಗ್ರಾಂ	₹58,450
ಒಡವೆ ಚಿನ್ನ ಗ್ರಾಂ	₹5,378
ಬೆಳ್ಳಿ ಕೆ.ಜಿ	₹70,700

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹577

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1230 (1240)
ಸೂರ್ಯಕಾಂತಿ (ರಿಫೈನ್ಡ್)	₹1260 (1280)
ಪಾಮೊಲಿನ್	₹915 (920)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕೆ.ಜಿ)	₹475-666
ದ್ವಿತಳಿ (ಕೆ.ಜಿ)	₹366-802

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹136.50
ಆರ್‌ಎಸ್‌ಎಸ್-5	₹131
ಗುಡ್ ಲಾಟ್	₹124

(ಪ್ರತಿ ಕೆ.ಜಿಗೆ)

ಜಲನ್ ಕಲ್‌ರಾಕ್ ಒಕ್ಕೂಟಕ್ಕೆ ಜೆಟ್ ಏರ್‌ವೇಸ್ ಮಾಲೀಕತ್ವ

ಮುಂಬೈ (ಪಿಟಿಐ): ಆರ್ಥಿಕವಾಗಿ ದಿವಾಳಿ ಆಗಿರುವ ಜೆಟ್ ಏರ್‌ವೇಸ್ ವಿಮಾನಯಾನ ಕಂಪನಿಯ ಮಾಲೀಕತ್ವವನ್ನು ಜಲನ್ ಕಲ್‌ರಾಕ್ ಒಕ್ಕೂಟಕ್ಕೆ ವರ್ಗಾಯಿಸಲು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯು (ಎನ್‌ಸಿಎಲ್‌ಟಿ) ಒಪ್ಪಿಗೆ ನೀಡಿದೆ.

ಜೆಟ್ ಏರ್‌ವೇಸ್ ಕಂಪನಿಗೆ ಸಾಲ ನೀಡಿರುವ ಸಂಸ್ಥೆಗಳಿಗೆ ಬಾಕಿ ಪಾವತಿಸಲು ಒಕ್ಕೂಟಕ್ಕೆ ಆರು ತಿಂಗಳ ಕಾಲಾವಕಾಶವನ್ನು ಸಹ ನ್ಯಾಯಮಂಡಳಿ ನೀಡಿದೆ.

ಬಾಕಿ ಪಾವತಿಸಲು ಈ ಹಿಂದಿನ ಆದೇಶದಲ್ಲಿ 2022ರ ನವೆಂಬರ್ 16ರವರೆಗೆ ಅವಕಾಶ ನೀಡಲಾಗಿತ್ತು. ಕಂಪನಿಯ ಪುನಶ್ಚೇತನ ಯೋಜನೆಯಡಿ ಒಕ್ಕೂಟವು ಈವರೆಗೆ ₹150 ಕೋಟಿ ಮೊತ್ತವನ್ನು ಬ್ಯಾಂಕ್ ಖಾತರಿಯಾಗಿ ಇಟ್ಟಿದೆ.

ಮುಂದುವರಿದ ವಿದೇಶಿ ಸಾಂಸ್ಥಿಕ ಬಂಡವಾಳ ಹೊರಹರಿವು

ಷೇರುಪೇಟೆಗೆ ಹೆಚ್ಚಿದ ದೇಶಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಬಂಡವಾಳ ಹಿಂತೆಗೆದುಕೊಳ್ಳುವುದನ್ನು ಮುಂದುವರಿಸಿದ್ದಾರೆ. ಇದೇ ವೇಳೆ ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ಷೇರುಗಳನ್ನು ಖರೀದಿಸುವ ಮೂಲಕ ವಹಿವಾಟು ಹೆಚ್ಚಿನ ಕುಸಿತ ಕಾಣದಂತೆ ತಡೆಯುತ್ತಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಜನವರಿ 2 ರಿಂದ 13ರವರೆಗೆ ನಡೆದಿರುವ ವಹಿವಾಟಿನಲ್ಲಿ ₹17,418 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದೇ ಅವಧಿಯಲ್ಲಿ ದೇಶಿ ಸಾಂಸ್ಥಿಕ ಹೂಡಿಕೆದಾರರು ₹12,700 ಕೋಟಿಗೂ ಅಧಿಕ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಜಾಗತಿಕ ಆರ್ಥಿಕತೆಯು ಮಂದ ಗತಿಯ ಬೆಳವಣಿಗೆ ಕಾಣುವ ಆತಂಕವು ವಿವಿಧ ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಹೆಚ್ಚಳ ಮಾಡಲು ಕಾರಣವಾಗುತ್ತಿದೆ. ಇದರಿಂದಾಗಿ ಷೇರುಪೇಟೆಗಳಲ್ಲಿ ವಿದೇಶಿ ಹೂಡಿಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ವಿದೇಶಿ ಹೂಡಿಕೆದಾರರು ಲಾಭ ಮಾಡಿಕೊಳ್ಳಲು ಮುಂದಾಗಿರುವುದು ಸಹ ಬಂಡವಾಳ ಹಿಂತೆಗೆತಕ್ಕೆ ಒಂದು ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜನವರಿ ತಿಂಗಳ ಆರಂಭದಿಂದಲೂ ಎಫ್‌ಐಐ ಹೊರಹರಿವು ಮುಂದುವರಿದಿದೆ. ಹೂಡಿಕೆದಾರರು ಭಾರತದಲ್ಲಿ ಷೇರುಗಳನ್ನು ಮಾರಾಟ ಮಾಡುತ್ತಿದ್ದು ಆ ಹಣವನ್ನು ಮಾರುಕಟ್ಟೆ ಮೌಲ್ಯ ಕಡಿಮೆ ಇರುವ ಚೀನಾ, ಹಾಂಗ್‌ಕಾಂಗ್ ಮತ್ತು ದಕ್ಷಿಣ ಕೊರಿಯಾದಂತಹ ದೇಶಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಇನ್ನೂ ಕೆಲವು ದಿನಗಳವರೆಗೆ ಇದೇ ಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು ಪ್ರಜಾವಾಣಿಗೆ ತಿಳಿಸಿದರು.

ದೇಶಿ ಸಾಂಸ್ಥಿಕ ಹೂಡಿಕೆದಾರರು ಮತ್ತು ರಿಟೇಲ್ ಹೂಡಿಕೆದಾರರು ಷೇರುಗಳ ಖರೀದಿಗೆ ಬಂಡವಾಳ ಹೂಡಿಕೆ ಮಾಡುತ್ತಿದ್ದಾರೆ. ಹೀಗಾಗಿ ಅಲ್ಪಾವಧಿಗೆ ಮಾರುಕಟ್ಟೆಯು ದುರ್ಬಲ ಆಗಿರುವಂತೆ ಕಂಡುಬಂದರೂ ಎಫ್‌ಐಐ ಮಾರಾಟದಿಂದ ಹೆಚ್ಚಿನ ಕುಸಿತ ಆಗುವುದನ್ನು ದೇಶಿ ಹೂಡಿಕೆಯು ತಪ್ಪಿಸುತ್ತಿದೆ ಎಂದರು.

ಚಿಲ್ಲರೆ ಹಣದುಬ್ಬರವು ಡಿಸೆಂಬರ್‌ನಲ್ಲಿ ಶೇ 5.72ಕ್ಕೆ ಇಳಿಕೆ ಕಂಡಿದ್ದು, ಕೈಗಾರಿಕಾ ಉತ್ಪಾದನೆಯು ನವೆಂಬರ್‌ನಲ್ಲಿ ಶೇ 7.1ಕ್ಕೆ ಏರಿಕೆ ಆಗಿದೆ. ಈ ಸಕಾರಾತ್ಮಕ ಅಂಶಗಳು ಷೇರುಪೇಟೆಯಲ್ಲಿ ಗೂಳಿ ಓಟಕ್ಕೆ ಉತ್ತೇಜನ ನೀಡುವ ನಿರೀಕ್ಷೆ ಇದೆ ಎಂದೂ ಹೇಳಿದರು.

ಐ.ಟಿ. ವಲಯದಲ್ಲಿ ಪ್ರಮುಖ ಕಂಪನಿಗಳ ತ್ರೈಮಾಸಿಕ ಫಲಿತಾಂಶ ಪ್ರಕಟವಾಗಿದೆ. ಹೀಗಾಗಿ ಹೂಡಿಕೆದಾರರು ಹಣಕಾಸು ವಲಯದ ಕಂಪನಿಗಳ ಆರ್ಥಿಕ ಸಾಧನೆಯ ಬಗ್ಗೆ ಗಮನ ಹರಿಸಲಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದರು.

ವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆಯ ಬಂಡವಾಳ ಮೌಲ್ಯ ₹1.73 ಲಕ್ಷ ಕೋಟಿ ಇಳಿಕೆ ಕಂಡು, ₹281.26 ಲಕ್ಷ ಕೋಟಿಗೆ ತಲುಪಿದೆ.



ಡಿ-ಮಾರ್ಟ್ ಲಾಭ ಶೇ 6.71ರಷ್ಟು ಏರಿಕೆ

ನವದೆಹಲಿ (ಪಿಟಿಐ): ಡಿ-ಮಾರ್ಟ್ ಮಳಿಗೆಗಳನ್ನು ನಿಯಂತ್ರಿಸುತ್ತಿರುವ ಅವೆನ್ಯು ಸೂಪರ್‌ಮಾರ್ಕೆಟ್ಸ್ ಲಿಮಿಟೆಡ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹590 ಕೋಟಿ ಆಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹552 ಕೋಟಿ ಲಾಭ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 6.71ರಷ್ಟು ಹೆಚ್ಚಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಾರ್ಯಾಚರಣಾ ವರಮಾನವು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ25.50ರಷ್ಟು ಹೆಚ್ಚಾಗಿ ₹11,569 ಕೋಟಿಗೆ ತಲುಪಿದೆ. ಒಟ್ಟು ವೆಚ್ಚವು ಶೇ 27ರಷ್ಟು ಹೆಚ್ಚಾಗಿದ್ದು ₹10,789 ಕೋಟಿಗೆ ಏರಿಕೆ ಕಂಡಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಇ-ವಹಿವಾಟನ್ನು (ಡಿಮಾರ್ಟ್ ರೆಡಿ) ನಾಲ್ಕು ನಗರಗಳಿಗೆ ವಿಸ್ತರಿಸಲಾಗಿದೆ. ಇದರಿಂದಾಗಿ ಒಟ್ಟು 22 ನಗರಗಳಿಗೆ 'ಡಿಮಾರ್ಟ್ ರೆಡಿ' ಸೇವೆಯು ವಿಸ್ತರಣೆ ಆಗಿದೆ ಎಂದು ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

14–1-2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1180 (---)
ಪಾಮ್ ವಾರದ ಡೆಲಿವರಿ	913 (918)
ಸೂರ್ಯಕಾಂತಿ ಎಣ್ಣೆ ಕಚ್ಚಾ	1130 (1150)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,600 (56,250)
ಬೆಳ್ಳಿ ಕೆ.ಜಿ 68,850 (68,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕರ್ಣಾಟಕ ಬ್ಯಾಂಕ್; ಕಾರ್ಯನಿರ್ವಾಹಕ ನಿರ್ದೇಶಕರಾಗಿ ಶೇಖರ್ ರಾವ್ ನೇಮಕ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ಣಾಟಕ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಶೇಖರ್ ರಾವ್ ನೇಮಕಗೊಂಡಿದ್ದಾರೆ.

ಶುಕ್ರವಾರ ನಡೆದ ನಿರ್ದೇಶಕ ಮಂಡಳಿ ಸಭೆಯಲ್ಲಿ ಶೇಖರ್ ಅವರನ್ನು ಹೆಚ್ಚುವರಿ ನಿರ್ದೇಶಕರ ನೆಲೆಯಲ್ಲಿ ಮೂರು ವರ್ಷಗಳ ಅವಧಿಗೆ ನೇಮಕ ಮಾಡಲಾಯಿತು. ಬ್ಯಾಂಕಿಂಗ್, ಮಾಹಿತಿ ತಂತ್ರಜ್ಞಾನ, ವ್ಯವಹಾರ ನಿರ್ವಹಣೆ, ಕಾರ್ಯತಂತ್ರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ 29ಕ್ಕೂ ಹೆಚ್ಚು ವರ್ಷಗಳ ಅನುಭವ ಇರುವ ಅವರ ನೇಮಕಕ್ಕೆ ಬ್ಯಾಂಕ್‌ನ ಸಿಇಒ ಮಹಾಬಲೇಶ್ವರ ಎಂ.ಎಸ್ ಹರ್ಷ ವ್ಯಕ್ತಪಡಿಸಿದ್ದಾರೆ.

ಶೇಖರ್ ರಾವ್

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	490

ಕುಂದಾಪುರ

ಹೊಸಚಾಲಿ	30000-37500
ಹಳೆಚಾಲಿ	40000-49500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13750	13700	13700	149.40 ಸೆಂಟ್ಸ್
ಎಸಿ	6720	6700	6000	
ಆರ್‌ಪಿ	8000	8200	7925	ಲಂಡನ್
ಆರ್‌ಸಿ	4440	160 on OT	4200	1881 ಡಾಲರ್ಸ್

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ



ಶ್ರೀ ಕೆ ಎನ್ ಚೌಡಪ್ಪ
Class 1contractor
ನನ್ನ ಪತಿಯವರಾದ ಶ್ರೀ ಕೆ ಎನ್ ಚೌಡಪ್ಪ ಅವರು ದಿನಾಂಕ 13–01–2023 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ 15–01–2023ರ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಹರಿಶ್ಚಂದ್ರ ಘಾಟ್ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು. ಭಗವಂತನು ಇವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತಾ ನಮ್ಮ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ
ಇಂತಿ ದುಃಖತಪ್ತರು
ಸರಸ್ವತಮ್ಮ ಮತ್ತು ಕುಟುಂಬದವರು
ಕೇತಮಾರನಹಳ್ಳಿ ಮಹಾಲಕ್ಷ್ಮಿಪುರ.
ವೆಸ್ಟ್ ಆಫ್ ಕಾರ್ಡ್‌ರೋಡ್
M-9740293915

45ನೇ ವರ್ಷದ ಚಿರಸ್ಮರಣೆ

ಪೂಜ್ಯಶ್ರೀ
ಗಂಗಹನುಮಯ್ಯನವರು
ದೊಡ್ಡಬಳ್ಳಾಪುರ ತಾಲ್ಲೂಕು ಕನಸವಾಡಿ ಚಿಕ್ಕಮದುರೆ, ಶ್ರೀಕ್ಷೇತ್ರದ ಮೂಲ ಸ್ಥಾಪಕರು ಹಾಗೂ ಆರ್ಚಕರಾದ ಪೂಜ್ಯಶ್ರೀ ಗಂಗಹನುಮಯ್ಯನವರು ನಮ್ಮನ್ನಗಲಿ 45 ವರ್ಷಗಳು ಸಂದವು. ಇವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಕೋರುವ
ಧರ್ಮಪತ್ನಿ, ಮಕ್ಕಳು ಹಾಗೂ ಕುಟುಂಬವರ್ಗದವರು

ಚಿರಸ್ಮರಣೆ

ಶ್ರೀ. ವಿ.ಎಂ. ಹೆಗಡೆ
1949 – 2023
ನಗರ ಯೋಜನಾ ನಿರ್ದೇಶಕರು (ನಿವೃತ್ತ), ಕರ್ನಾಟಕ ಸರಕಾರ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಸ್ಟೆಮ್ ಗ್ರೂಪ್, ಬೆಂಗಳೂರು.
ದಿನಾಂಕ: 7.01.2023 ರಂದು ಶ್ರೀ ವಿ.ಎಂ.ಹೆಗಡೆಯವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಸ್ಫೂರ್ತಿದಾಯಕ ಸಮ್ಮುಖ, ಹಸನ್ಮುಖ, ಮಾರ್ಗದರ್ಶನ ಮತ್ತು ಕಾಳಜಿಯನ್ನು ಸ್ಮರಿಸುತ್ತಾ ಅವರ ಭರಿಸಲಾಗದ ಅಗಲಿಕೆಯನ್ನು ಸಂತಾಪಿಸಲು ನಮ್ಮೊಡನೆ ಭಾಗಿಯಾಗಲು ತಮ್ಮಲ್ಲಿ ವಿನಂತಿ. ವೈಕುಂಠ ಸಮಾರಾಧನೆ ಶುಕ್ರವಾರ, 20–01–2023 ರಂದು ಅವರ ಸ್ವಗೃಹ "ಸೀತಾ" ಬರೂರು, ಕಲಗದ್ದೆ, ಸಿರಸಿ ತಾಲ್ಲೂಕು, ಕರ್ನಾಟಕ
ದುಃಖತಪ್ತರು: ಶ್ರೀಮತಿ ಅನಸೂಯ ಹೆಗಡೆ ಮತ್ತು ಕುಟುಂಬ ಹಾಗೂ ಸ್ಟೆಮ್ ಗ್ರೂಪ್, ಬೆಂಗಳೂರು.

ಮ್ಯಾನ್ಮಾರ್ ವೈಮಾನಿಕ ದಾಳಿ: ಐವರ ಸಾವು

ಬ್ಯಾಂಕಾಕ್ (ಎಪಿ): ಕರೆನ್ ಜನಾಂಗದವರೇ ಹೆಚ್ಚಿರುವ ಎರಡು ಗ್ರಾಮಗಳ ಮೇಲೆ ಮ್ಯಾನ್ಮಾರ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ ತಾಯಿ ಮತ್ತು 2 ವರ್ಷದ ಮಗು ಸೇರಿ ಐವರು ಮೃತಪಟ್ಟಿದ್ದಾರೆ.

ದಾಳಿಯಲ್ಲಿ ಎರಡು ಚರ್ಚ್‌ಗಳು ನೆಲಸಮವಾಗಿವೆ ಎಂದು ಸಂತ್ರಸ್ತರಿಗೆ ಔಷಧೋಪಚಾರ ಸೇರಿದಂತೆ ವಿವಿಧ ರೀತಿಯ ಪರಿಹಾರವನ್ನು ಒದಗಿಸುವ 'ಫ್ರೀ ಬರ್ಮಾ ರೇಂಜರ್ಸ್' ಮತ್ತು ಕರೆನ್ ಮಹಿಳೆಯರ ಸಂಘಟನೆಗಳು ತಿಳಿಸಿವೆ.

ಚೀನಾ: ತಿಂಗಳಲ್ಲಿ 60 ಸಾವಿರ ಸಾವು

ಬೀಜಿಂಗ್ (ಪಿಟಿಐ): 'ಕೋವಿಡ್‌ನಿಂದಾಗಿ ದೇಶದಲ್ಲಿ ಕಳೆದ 30 ದಿನಗಳಲ್ಲಿ 59,938 ಮಂದಿ ಸಾವಿಗೀಡಾಗಿದ್ದಾರೆ' ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗವು (ಎನ್‌ಎಚ್‌ಸಿ) ಶನಿವಾರ ಹೇಳಿದೆ.

'ಡಿ.8 ರಿಂದ ಜ.12ರ ಅವಧಿಯಲ್ಲಿ ಆಸ್ಪತ್ರೆಗಳಲ್ಲಿ 59,938 ಮಂದಿ ಅಸುನೀಗಿರುವುದಾಗಿ ರಾಷ್ಟ್ರೀಯ ಆರೋಗ್ಯ ಆಯೋಗ ಮಾಹಿತಿ ನೀಡಿದೆ' ಎಂದು ದೇಶದ ಅಧಿಕೃತ ಮಾಧ್ಯಮ ವರದಿ ಮಾಡಿದೆ. ಇದರೊಂದಿಗೆ ಚೀನಾದಲ್ಲಿ ಈವರೆಗೆ ಮರಣ ಹೊಂದಿದವರ ಸಂಖ್ಯೆಯು 65,210ಕ್ಕೆ ಏರಿಕೆಯಾದಂತಾಗಿದೆ.

'ಉಸಿರಾಟದ ತೊಂದರೆಯಿಂದಾಗಿ 5,503 ಮಂದಿ ಮೃತರಾಗಿದ್ದಾರೆ. ಕೋವಿಡ್‌ನಿಂದಾಗಿ ಮರಣ ಹೊಂದಿರುವ ಇತರ 54,435 ಮಂದಿ ಕ್ಯಾನ್ಸರ್ ಹಾಗೂ ಹೃದ್ರೋಗದ ಸಮಸ್ಯೆಯನ್ನೂ ಎದುರಿಸುತ್ತಿದ್ದರು' ಎಂದು ಎನ್‌ಎಚ್‌ಸಿಯ ವೈದ್ಯಕೀಯ ವಿಭಾಗದ ನಿರ್ದೇಶಕ ಜಿಯಾವೊ ಯಹೂಯಿ ಮಾಹಿತಿ ನೀಡಿದ್ದಾರೆ.

'ಸಾವಿಗೀಡಾದವರ ಪೈಕಿ ಶೇ 90ರಷ್ಟು ಮಂದಿ 65 ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟ ವಯಸ್ಸಿನವರು' ಎಂದು ಹಾಂಕಾಂಗ್ ಮೂಲದ 'ಸೌತ್ ಚೀನಾ ಮಾರ್ನಿಂಗ್ ಪೋಸ್ಟ್' ಪತ್ರಿಕೆಯು ವರದಿ ಮಾಡಿದೆ.

ಶೂನ್ಯ ಕೋವಿಡ್ ನೀತಿಯನ್ನು ಹಿಂಪಡೆದ ಬಳಿಕ ಚೀನಾವು ನಿತ್ಯದ ಕೋವಿಡ್ ಅಂಕಿ ಅಂಶ ಒದಗಿಸುವುದನ್ನು ನಿಲ್ಲಿಸಿತ್ತು. ಜ. 8 ರಂದು ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲಿನ ನಿರ್ಬಂಧವನ್ನೂ ತೆರವುಗೊಳಿಸಿತ್ತು.

'ಚೀನಾವು ಕೋವಿಡ್ ಮೃತರ ಸಂಖ್ಯೆಯನ್ನು ಮರೆಮಾಚುತ್ತಿದೆ' ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಕೆಲ ದಿನಗಳ ಹಿಂದೆ ಆರೋಪಿಸಿತ್ತು.

ಬೊಲ್ಸೊನಾರೊ ವಿರುದ್ಧ ತನಿಖೆಗೆ ಕೋರ್ಟ್ ಅಸ್ತು

ಜೈರ್ ಬೋಲ್ಸನಾರೊ

ರಿಯೊ ಡಿ ಜನೈರೊ (ಎಪಿ): ಜ.8 ರಂದು ರಾಷ್ಟ್ರ ರಾಜಧಾನಿಯಲ್ಲಿ ನಡೆದ ಗಲಭೆಗೆ ಪ್ರಚೋದನೆ ನೀಡಿದವರು ಯಾರು? ಇದರಲ್ಲಿ ಬ್ರೆಜಿಲ್ ಮಾಜಿ ಅಧ್ಯಕ್ಷ ಜೈರ್ ಬೊಲ್ಸೊನಾರೊ ಪಾತ್ರವೇನು ಎಂಬುದೂ ಸೇರಿದಂತೆ ಎಲ್ಲ ಆಯಾಮಗಳಿಂದ ತನಿಖೆ ನಡೆಸಲು ಅಲ್ಲಿನ ಸುಪ್ರೀಂ ಕೋರ್ಟ್ ಶುಕ್ರವಾರ ಅನುಮತಿ ನೀಡಿದೆ.

ಪ್ರಾಸಿಕ್ಯೂಟರ್- ಜನರಲ್ ಕಚೇರಿ ಮನವಿಯನ್ನು ನ್ಯಾಯಮೂರ್ತಿ ಅಲೆಕ್ಸಾಂಡರ್ ಡಿ ಮೊರಾಸ್ ಪುರಸ್ಕರಿಸಿದ್ದಾರೆ.

ಗಲಭೆ ನಡೆದ ಎರಡು ದಿನಗಳ ಬಳಿಕ ಬೊಲ್ಸೊನಾರೊ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದ ವಿಡಿಯೊವನ್ನು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಈ ವಿಡಿಯೊದಲ್ಲಿ, ಅಧ್ಯಕ್ಷ ಲುಯಿಸ್ ಇನಾಸಿಯೊ ಲುಲ ಡ ಸಿಲ್ವ ಅವರನ್ನು ಸುಪ್ರೀಂ ಕೋರ್ಟ್ ಮತ್ತು ಬ್ರೆಜಿಲ್ ಚುನಾವಣಾ ಪ್ರಾಧಿಕಾರ ಆಯ್ಕೆ ಮಾಡಿದೆ ಎಂದು ದೂರಿದ್ದಾರೆ.

'ಗಲಭೆ ನಂತರ ಬೊಲ್ಸೊನಾರೊ ವಿಡಿಯೊ ಪೋಸ್ಟ್ ಮಾಡಿದ್ದರೂ, ಅದರಲ್ಲಿನ ವಿಷಯವು ತನಿಖೆ ಮಾಡುವುದನ್ನು ಸಮರ್ಥಿಸಲು ಸಾಕು' ಎಂದು ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳನ್ನು ಎದುರಿಸಲು ಇತ್ತೀಚೆಗೆ ರಚಿಸಲಾದ ಗುಂಪಿನ ವಕೀಲರು ಶುಕ್ರವಾರ ವಾದಿಸಿದರು. ಬೊಲ್ಸೊನಾರೊ ಅವರು ಪೋಸ್ಟ್ ಮಾಡಿದ ನಂತರ ಬೆಳಿಗ್ಗೆ ಅದನ್ನು ಅಳಿಸಿದ್ದರು.

ಸುಪ್ರೀಂ ಕೋರ್ಟ್ ಆದೇಶದ ಬೆನ್ನಲ್ಲೆ ಬೊಲ್ಸೊನಾರೊ ಪರ ವಕೀಲ ಫ್ರೆಡರಿಕ್ ವಾಸೆಫ್ ಹೇಳಿಕೆ ಬಿಡುಗಡೆ ಮಾಡಿದ್ದು, 'ಜ.8ರ ಗಲಭೆಗೂ ಮಾಜಿ ಅಧ್ಯಕ್ಷರಿಗೂ ಸಂಬಂಧವಿಲ್ಲ. ಸಾಮಾಜಿಕ ಚಳವಳಿಯೊಂದಿಗೆ ಅವರು ಯಾವುದೇ ಸಂಬಂಧ ಹೊಂದಿಲ್ಲ' ಎಂದು ಹೇಳಿದ್ದಾರೆ.

ಭದ್ರತಾ ವಿಭಾಗದ ಮಾಜಿ ಮುಖ್ಯಸ್ಥರ ಬಂಧನಕ್ಕೆ ವಾರಂಟ್:

ಜ.8ರ ಗಲಭೆಗೆ ಸಂಬಂಧಿಸಿದಂತೆ ಭದ್ರತಾ ವಿಭಾಗದ ಮಾಜಿ ಮುಖ್ಯಸ್ಥರಿಗೆ ಬ್ರೆಜಿಲ್‌ನ ಸುಪ್ರೀಂ ಕೋರ್ಟ್ ಬಂಧನದ ವಾರಂಟ್ ಹೊರಡಿಸಿದೆ. ಅಮೆರಿಕದಲ್ಲಿ ಇರುವ ಅಧಿಕಾರಿ ಮೂರು ದಿನಗಳಲ್ಲಿ ಮರಳಬೇಕು. ಇಲ್ಲವಾದರೆ ಅವರನ್ನು ಗಡಿಪಾರು ಮಾಡಲು ಮನವಿ ಮಾಡಲಾಗುವುದು ಎಂದು ಕಾನೂನು ಸಚಿವ ಫ್ಲೇವಿಯೊ ಡಿನೊ ಶುಕ್ರವಾರ ಹೇಳಿದ್ದಾರೆ.

ಕಳೆದ ವರ್ಷ ಬ್ರೆಜಿಲ್‌ನಲ್ಲಿ ನಡೆದ ಚುನಾವಣೆಯಲ್ಲಿ ಬಲಪಂಥೀಯ ಪ್ರತಿಪಾದಕ ಬೊಲ್ಸೊನಾರೊ ಸೋತಿದ್ದರು. ಎಡಪಂಥೀಯ ಒಲವಿರುವ ಲುಯಿಸ್ ಇನಾಸಿಯೊ ಲುಲ ಡ ಸಿಲ್ವ ಗೆಲುವು ಸಾಧಿಸಿದ್ದರು. ಆದರೆ, ಸೋಲನ್ನು ಒಪ್ಪಿಕೊಳ್ಳದ ಬೊಲ್ಸೊನಾರೊ ಬೆಂಬಲಿಗರು ಬ್ರೆಜಿಲ್‌ನ ಸಂಸತ್ತು, ಸುಪ್ರೀಂ ಕೋರ್ಟ್ ಮತ್ತು ಅಧ್ಯಕ್ಷರ ಅರಮನೆಗೆ ಭಾನುವಾರ ನುಗ್ಗಿ ದಾಂದಲೆ ನಡೆಸಿದ್ದರು.

ಯಾದಗಿರಿ ತಾಲ್ಲೂಕಿನ ಮೈಲಾಪುರದ ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಶನಿವಾರ ಅಪಾರ ಸಂಖ್ಯೆ ಭಕ್ತರ ಸಮ್ಮುಖದಲ್ಲಿ ಪಲ್ಲಕ್ಕಿ ಉತ್ಸವ ನಡೆಯಿತು. ನಂತರ ಹೊನ್ನಕೆರೆಯಲ್ಲಿ ಭಕ್ತರು ಪುಣ್ಯಸ್ನಾನ ಮಾಡಿದರು. ಪ್ರಜಾವಾಣಿ ಚಿತ್ರ/ರಾಜಕುಮಾರ ನಳ್ಳಿಕರ

ಸಚಿವ ಸುಧಾಕರ್ ಚಿತ್ರಕ್ಕೆ ಸ್ಟಿಕ್ಕರ್!

ಚಿಕ್ಕಬಳ್ಳಾಪುರ: 'ಚಿಕ್ಕಬಳ್ಳಾಪುರ ಉತ್ಸವ'ದ ಅಂಗವಾಗಿ ನಗರ ಹೊರವಲಯದ ಚದುಲಪುರ ಗೇಟ್ ಬಳಿ ಅಳವಡಿಸಿರುವ ಸ್ವಾಗತ ಕಮಾನಿನಲ್ಲಿರುವ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್ ಅವರ ಭಾವಚಿತ್ರಕ್ಕೆ ಅಪರಿಚಿತರು ಸ್ಟಿಕ್ಕರ್ ಅಂಟಿಸಿದ್ದಾರೆ.

ಏನಿದೆ ಸ್ಟಿಕ್ಕರ್‌ನಲ್ಲಿ?: ಸಚಿವ ಸುಧಾಕರ್ ಭಾವಚಿತ್ರದ ಮುಖದ ಮೇಲೆ ಶುಕ್ರವಾರ ರಾತ್ರಿ ಈ ಪೋಸ್ಟರ್ ಅಂಟಿಸಲಾಗಿದೆ. 'ಚಾಮರಾಜನಗರ ಆಕ್ಸಿಜನ್ ದುರಂತ 24 ಜನ ಸಾವು. ಮಹಾಜನಗಳೇ ನಮ್ಮನ್ನು ನಂಬಿದರೆ ಕಳೆದ ಬಾರಿಯ ಹಾಗೆಯೇ ನಿಮಗೆ ಬೆಡ್ ಆಗಲಿ, ಆಕ್ಸಿಜನ್ ಆಗಲಿ ಸಿಗುವುದಿಲ್ಲ. ಪ್ರಾಣ ಉಳಿಸಿಕೊಳ್ಳುವ ಆಸೆ ಇದ್ದರೆ ಮಾಸ್ಕ್ ಧರಿಸಿ' ಎಂಬ ಬರಹವಿದೆ. ಸ್ಟಿಕ್ಕರ್ ಅಂಟಿಸಿರುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಸಚಿವ ಡಾ.ಸುಧಾಕರ್ ಭಾವಚಿತ್ರದ ಮೇಲೆ ಸ್ಟಿಕ್ಕರ್ ಅಂಟಿಸಿರುವುದು

ಶರದ್ ಯಾದವ್ ಅಂತ್ಯಕ್ರಿಯೆ

ಭೋಪಾಲ್ (ಪಿಟಿಐ): ಹಿರಿಯ ಸಮಾಜವಾದಿ ನಾಯಕ ಹಾಗೂ ಜೆಡಿಯು ಮಾಜಿ ಅಧ್ಯಕ್ಷ ಶರದ್ ಯಾದವ್ ಅವರ ಅಂತ್ಯಕ್ರಿಯೆ ಮಧ್ಯಪ್ರದೇಶದ ನರ್ಮದಾಪುರಂ ಜಿಲ್ಲೆಯ ಅವರ ಪೂರ್ವಜರ ಗ್ರಾಮ ಅಂಖ್‌ಮವುದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಶನಿವಾರ ನೆರವೇರಿತು.

ಯಾದವ್ ಅವರ ಪುತ್ರ ಶಂತನು ಬುಂದೇಲಾ ಹಾಗೂ ಪುತ್ರಿ ಸುಭಾಷಿಣಿ ಅವರು ಅಂತ್ಯಕ್ರಿಯೆಯ ವಿಧಿ- ವಿಧಾನಗಳನ್ನು ನೆರವೇರಿಸಿದರು. ಶರದ್ ಯಾದವ್ ಗುರುಗ್ರಾಮದ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು.

ಗೂಢಚರ್ಯೆ: ಅಲಿರೆಜಾ ಅಕ್ಬರಿ ಗಲ್ಲಿಗೇರಿಸಿದ ಇರಾನ್

ದುಬೈ (ಎಪಿ): 'ಬೇಹುಗಾರಿಕೆ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಅಲಿರೆಜಾ ಅಕ್ಬರಿ ಎಂಬುವವರನ್ನು ಗಲ್ಲಿಗೇರಿಸಲಾಗಿದೆ. ಇರಾನ್ ಮತ್ತು ಬ್ರಿಟನ್‌ನ ಪೌರತ್ವ ಹೊಂದಿದ್ದ ಇವರು ದೇಶದ ರಕ್ಷಣಾ ಸಚಿವಾಲಯದಲ್ಲಿ ಈ ಹಿಂದೆ ಉನ್ನತ ಹುದ್ದೆಯೊಂದನ್ನು ಅಲಂಕರಿಸಿದ್ದರು' ಎಂದು ಇರಾನ್ ಸರ್ಕಾರ ಶನಿವಾರ ಹೇಳಿದೆ.

ಅಕ್ಬರಿಗೆ ವಿಧಿಸಲಾಗಿರುವ ಗಲ್ಲು ಶಿಕ್ಷೆಯನ್ನು ರದ್ದುಪಡಿಸಬೇಕೆಂದು ವಿವಿಧ ದೇಶಗಳು ಒತ್ತಾಯಿಸಿದ್ದವು. ಈ ಸಂಬಂಧ ಬ್ರಿಟನ್ ಮತ್ತು ಅಮೆರಿಕ ಎಚ್ಚರಿಕೆಯನ್ನೂ ನೀಡಿದ್ದವು. ಆದರೆ ಇರಾನ್ ಸರ್ಕಾರ ಇದಕ್ಕೆ ಕಿವಿಗೊಟ್ಟಿಲ್ಲ.

ಅಕ್ಬರಿ ಅವರು ಇರಾನ್‌ನ ಸರ್ವೋಚ್ಚ ನಾಯಕ ಅಯತ್‌ಉಲ್ಲಾ ಅಲಿ ಖಾಮೇನಿ ಅವರ ಆಪ್ತರಾಗಿದ್ದರು. ಅವರನ್ನು ಗಲ್ಲಿಗೇರಿಸಿರುವುದನ್ನು ಖಂಡಿಸಿ ಬ್ರಿಟನ್, ಅಮೆರಿಕ ಸೇರಿದಂತೆ ಕೆಲ ದೇಶಗಳು ರಾಜತಾಂತ್ರಿಕ ಮಾರ್ಗದಲ್ಲಿ ಇರಾನ್ ಎದುರು ಪ್ರತಿಭಟನೆ ದಾಖಲಿಸಿವೆ.

'ಬ್ರಿಟನ್ ಮತ್ತು ಇರಾನ್‌ನ ಪೌರತ್ವ ಹೊಂದಿದ್ದ ಅಲಿರೆಜಾ ಅಕ್ಬರಿ ಅವರನ್ನು ಗಲ್ಲಿಗೇರಿಸಿದ್ದು ಬರ್ಬರವಾದ ಕೃತ್ಯ. ಇದು ಖಂಡಿಸಲೇಬೇಕಾದ ನಡೆ' ಎಂದು ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಜೇಮ್ಸ್ ಕ್ಲೆವರ್ಲಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಈ ತೀರ್ಮಾನವು ರಾಜಕೀಯ ಪ್ರೇರಿತವಾದುದು. ಇರಾನ್‌ನಲ್ಲಿ ಮನುಷ್ಯತ್ವ ಹಾಗೂ ನಾಗರಿಕರ ಜೀವಕ್ಕೆ ಬೆಲೆಯೇ ಇಲ್ಲ ಎಂಬುದನ್ನು ಇದು ತೋರ್ಪಡಿಸುತ್ತದೆ' ಎಂದು ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಶಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

Grooms Wanted
Christian
GROOM WANTED for 27 yo Christian BE Girl from Bangalore 5.5' Father Retired Govt Employee.RC/Protestants Acceptable (080-69074944)

ಪ್ರವಾಸ
Travel
ಏಪ್ರಿಲ್ ತಿಂಗಳಲ್ಲಿ ದೆಹಲಿ ವೈಷ್ಣೋದೇವಿ,ಅಮೃತ್‌ಸರ್ 10 ದಿನಗಳು. ಮೇ ತಿಂಗಳಲ್ಲಿ ಕಾಶಿ,ಗಯಾ,ಕಲ್ಕತ್ತ ಪೂರಿ ಜಗನ್ನಾಥ್ ಕೊನಾರ್ಕ್ ಸೂರ್ಯಾ ದೇವಾಲಯ ಯಾತ್ರಾ 9 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

ಉದ್ಯೋಗಾವಕಾಶ
General
ರಾಹುಲ್ ಫೆಸಿಲಿಟಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಡಿಪ್ಲೋಮಾ ಮತ್ತು ಎಎಂಪಿ; ಬಿ.ಇ (ಮೆಕ್ಯಾನಿಕಲ್, ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್), (ಪುರುಷ) ಅಭ್ಯರ್ಥಿಗಳು ಬೇಕಾಗಿದ್ದಾರೆ. ವೇತನ ರೂ.15,000 ರಿಂದ 25,000/- ಮತ್ತು ಎಎಂಪಿ; 2 ಟೂ ವ್ಹೀಲರ್, 4 ವ್ಹೀಲರ್ ಮತ್ತು ಎಎಂಪಿ; ಕಾರ್ ಮೆಕ್ಯಾನಿಕ್ ಬೇಕಾಗಿದ್ದಾರೆ. ವೇತನ ರೂ. 15,000 ದಿಂದ 30,000/- (ಫ್ರೆಶರ್ & ಎಎಂಪಿ; ಅನುಭವಿ). ಕೆಲಸದ ಸ್ಥಳ: ದೇವನಹಳ್ಳಿ ಬೆಂಗಳೂರು ಸಂಪರ್ಕಿಸಿ:9611354734, 9361282450, 9600333441, 9715541512

REQUIRED
Required Huge number of Staff for leading Cash Management Services at Bangalore. Salary as per Industry Standards with all benefits included. Freshers are Welcome. Walk in Interview 16th to 21st January 2023 Between 11.00 AM to 05.00 PM Interview Address - Writer Business Services Pvt Ltd, #28/A, Krishna Reddy Colony, Domlur Layout, Bangalore - 560071, Karnataka. Designation-Trainee ATM Operator, Cash Sorters & Vault Officers, Age: 18-34yrs, Gender : Male, Education : SSC/Inter/ Degree/Diploma.https://www.writercorporation.com/cash-management/about-us.aspx.
8086093200
9980901328
ramu.nair@writercorporation.com

ವಾಹನ
Four Wheelers Selling
Others

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ವೈವಾಹಿಕ
Brides Wanted
Christian
ALLIANCE INVITED for Professionally Qualified 38year old Christian boy MCA/ SR.Business Analyst/ 40LPA. Father- AGM In an MNC (080-69074944)

Muslim
WELL ESTABLISHED, cultured Sunni Muslim Family is looking for an alliance for their 24y.o only son having own Business in Bangalore (080-69074951)

ವೈಯಕ್ತಿಕ
Change of Name
I, MUMTAZ Begum @ Mumtaz Begum Ahmed W/o S. Ayaz Ahmed aged about 55years residing at No399/1. Sri M.V Nagar BEML Nagar Post KGF 563115, Bangarpet Taluk Kolar Dist. Declare that Mumtaz Begum and Mumtaz Begum Ahmed belongs to me only vide affidavit dated 13.01.2023 before Notary Thangaraj S KGF

Wanted
ಮನೆಕೆಲಸ(11,000–14,000) / ಹೋಂನರ್ಸ್ (15,000–18,000), ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. ಊಟ–ವಸತಿ ಉಚಿತ. ಉಡುಪಿ: 9845276452

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮೂರು ಬಾರಿಯ ಚಾಂಪಿಯನ್ನರಿಗೆ ಮಲೇಷ್ಯಾ ಸುಲಭ ತುತ್ತು
ನೆದರ್ಲೆಂಡ್ಸ್, ಬೆಲ್ಜಿಯಂಗೆ ಜಯ

ಕೊರಿಯಾ ವಿರುದ್ಧದ ಪಂದ್ಯದಲ್ಲಿ ಬೆಲ್ಜಿಯಂ ತಂಡದ ಆಟಗಾರರು ಗೋಲು ಗಳಿಸಲು ಪ್ರಯತ್ನಿಸಿದರು –ಪಿಟಿಐ ಚಿತ್ರ

ರೂರ್ಕೆಲಾ (ಪಿಟಿಐ): ಮೂರು ಬಾರಿಯ ಚಾಂಪಿಯನ್ ನೆದರ್ಲೆಂಡ್ಸ್ ಮತ್ತು ಕಳೆದ ಬಾರಿಯ ಪ್ರಶಸ್ತಿ ವಿಜೇತ ಬೆಲ್ಜಿಯಂ ತಂಡಗಳು ಎಫ್‌ಐಎಚ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಶುಭಾರಂಭ ಮಾಡಿದವು.

ರೂರ್ಕೆಲಾದ ಬಿರ್ಸಾ ಮುಂಡಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ನೆದರ್ಲೆಂಡ್ಸ್ 4–0 ಗೋಲುಗಳಿಂದ ಮಲೇಷ್ಯಾ ತಂಡವನ್ನು ಮಣಿಸಿತು.

ಆಕ್ರಮಣಕಾರಿ ಆಟವಾಡಿದ ನೆದರ್ಲೆಂಡ್ಸ್ ತಂಡಕ್ಕೆ ಥೈಸ್ ವಾನ್ ಡ್ಯಾಮ್ ಅವರು 19ನೇ ನಿಮಿಷದಲ್ಲಿ ಫೀಲ್ಡ್ ಗೋಲು ಮೂಲಕ ಮುನ್ನಡೆ ತಂದಿತ್ತರು. ನಾಲ್ಕು ನಿಮಿಷಗಳ ಬಳಿಕ ದೊರೆತ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಜಿಪ್ ಯಾನ್ಸೆನ್ ಗೋಲಾಗಿ ಪರಿವರ್ತಿಸಿದರು.

ಟ್ಯುನ್ ಬೈನ್ಸ್ (46ನೇ ನಿ.) ಮತ್ತು ಯೋರಿಟ್ ಕ್ರೂನ್ (59 ನೇ ನಿ.) ಅವರು ಕ್ರಮವಾಗಿ ಪೆನಾಲ್ಟಿ ಕಾರ್ನರ್ ಹಾಗೂ ಫೀಲ್ಡ್ ಗೋಲು ಮೂಲಕ ಚೆಂಡನ್ನು ಗುರಿ ಸೇರಿಸಿ ಗೆಲುವಿನ ಅಂತರ ಹೆಚ್ಚಿಸಿದರು.

ಇನ್ನೊಂದು ಪಂದ್ಯದಲ್ಲಿ ಬೆಲ್ಜಿಯಂ 5–0 ಗೋಲುಗಳಿಂದ ಕೊರಿಯಾ ತಂಡವನ್ನು ಸೋಲಿಸಿತು. ಕೊರಿಯಾ ಮೊದಲ 30 ನಿಮಿಷ ಪ್ರಬಲ ಪೈಪೋಟಿ ನೀಡಿ ಎದುರಾಳಿ ತಂಡಕ್ಕೆ ಯಾವುದೇ ಗೋಲು ಬಿಟ್ಟುಕೊಡಲಿಲ್ಲ. ಆ ಬಳಿಕ ಬೆಲ್ಜಿಯಂ ಪೂರ್ಣ ಪ್ರಭುತ್ವ ಸಾಧಿಸಿತು.

ಅಲೆಕ್ಸಾಂಡರ್ ಹೆಂಡ್ರಿಕ್ಸ್ 30ನೇ ನಿಮಿಷದಲ್ಲಿ ಗೋಲಿನ ಖಾತೆ ತೆರೆದರು. ಇತರ ಗೋಲುಗಳನ್ನು ಟಾಂಗುಯ್ ಕೊಸಿನ್ಸ್ (42), ಫ್ಲಾರೆಂಟ್ ವಾನ್ ಆಬೆಲ್ (49), ಸೆಬಾಸ್ಟಿಯನ್ ಡಾಕಿಯೆರ್ (51) ಮತ್ತು ಆರ್ಥರ್ ಡಿ ಸ್ಲೂವೆರ್ (57) ತಂದುಕೊಟ್ಟರು. ಇದರಲ್ಲಿ ಎರಡು ಗೋಲುಗಳು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಬಂದವು.

ನ್ಯೂಜಿಲೆಂಡ್‌ಗೆ ಗೆಲುವು: ದಿನದ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ 3–1 ಗೋಲುಗಳಿಂದ ಚಿಲಿ ವಿರುದ್ಧ ಗೆದ್ದಿತು. ಸ್ಯಾಮ್ ಲೇನ್ (9ನೇ ನಿ.), ಸ್ಯಾಮ್ ಹೈಹ (11 ಮತ್ತು 18ನೇ ನಿ.) ನ್ಯೂಜಿಲೆಂಡ್ ಪರ ಗೋಲು ಗಳಿಸಿದರು. ಚಿಲಿ ತಂಡದ ಗೋಲನ್ನು ಇಗ್ನೆಸಿಯೊ ಕೊಂಟಾರ್ಡೊ (49) ತಂದುಕೊಟ್ಟರು.

ಇನ್ನೊಂದು ಪಂದ್ಯದಲ್ಲಿ ಜರ್ಮನಿ 3–0 ರಲ್ಲಿ ಜಪಾನ್ ವಿರುದ್ಧ ಗೆದ್ದಿತು.

ಅತಿದೊಡ್ಡ ಕ್ರೀಡಾಂಗಣ: ಎಫ್‌ಐಎಚ್

ರೂರ್ಕೆಲಾ (ಪಿಟಿಐ): ವಿಶ್ವಕಪ್ ಟೂರ್ನಿಯ ಪಂದ್ಯಗಳಿಗೆ ಆತಿಥ್ಯ ವಹಿಸಿರುವ ಬಿರ್ಸಾ ಮುಂಡಾ ಕ್ರೀಡಾಂಗಣ, ಆಸನಗಳ ಸಾಮರ್ಥ್ಯದಲ್ಲಿ ವಿಶ್ವದಲ್ಲೇ ಅತಿದೊಡ್ಡ ಹಾಕಿ ಕ್ರೀಡಾಂಗಣ ಎಂದು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಹೇಳಿದೆ.

'ಈ ಕ್ರೀಡಾಂಗಣ ವಾಸ್ತುಶಿಲ್ಪದ ವಿಷಯದಲ್ಲಿ ಗಮನ ಸೆಳೆಯುವುದು ಮಾತ್ರವಲ್ಲದೆ, ಹಾಕಿ ಕ್ರೀಡೆಗೆ ಮಾತ್ರ ಮೀಸಲಾಗಿರುವ ಕ್ರೀಡಾಂಗಣಗಳಲ್ಲಿ ವಿಶ್ವದಲ್ಲೇ ಅತಿದೊಡ್ಡದು' ಎಂದು ಎಫ್‌ಐಎಚ್ ತಿಳಿಸಿದೆ. ಬಿರ್ಸಾ ಮುಂಡಾ ಕ್ರೀಡಾಂಗಣ 21 ಸಾವಿರ ಆಸನ ಸಾಮರ್ಥ್ಯ ಹೊಂದಿದೆ.

ಭಾರತಕ್ಕೆ ಇಂಗ್ಲೆಂಡ್ ಸವಾಲು
ಹಾಕಿ ವಿಶ್ವಕಪ್: ಗೆಲುವಿನ ವಿಶ್ವಾಸದಲ್ಲಿ ಹರ್ಮನ್ ಬಳಗ

ಭಾರತ ತಂಡದ ಆಟಗಾರರು– ಪಿಟಿಐ ಚಿತ್ರ

ರೂರ್ಕೆಲಾ (ಪಿಟಿಐ): ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಗೆಲುವಿನ ಆರಂಭ ಮಾಡಿರುವ ಭಾರತವು ಭಾನುವಾರ ಬಲಿಷ್ಠ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಡಿ ಗುಂಪಿನ ಈ ಪಂದ್ಯಕ್ಕೆ ರೂರ್ಕೆಲಾದ ಬಿರ್ಸಾ ಮುಂಡಾ ಕ್ರೀಡಾಂಗಣ ಸಜ್ಜಾಗಿದೆ. ಶುಕ್ರವಾರ ನಡೆದ ಮೊದಲ ಪಂದ್ಯದಲ್ಲಿ ಭಾರತ 2–0ಯಿಂದ ಸ್ಪೇನ್ ತಂಡವನ್ನು ಪರಾಭವಗೊಳಿಸಿತ್ತು. ಅದೇ ಲಯವನ್ನು ಮುಂದುವರಿಸುವ ತವಕದಲ್ಲಿ ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಬಳಗವಿದೆ.

ಸ್ಪೇನ್ ಎದುರಿನ ಹಣಾಹಣಿಯಲ್ಲಿ ಭಾರತ ತಂಡವು ಅಟ್ಯಾಕಿಂಗ್ ಹಾಗೂ ಡಿಫೆನ್ಸ್‌ನಲ್ಲಿ ತೋರಿದ ಉತ್ತಮ ಪ್ರದರ್ಶನವು ಕೋಚ್ ಗ್ರಹಾಂ ರೀಡ್ ಅವರಿಗೆ ಸಂತಸ ತಂದಿದೆ.

'ಮೊದಲ ಪಂದ್ಯ ನಮ್ಮದಾಗಿಸಿಕೊಂಡಿದ್ದು ಸಂತಸದ ಸಂಗತಿ. ಆ ಪಂದ್ಯದಲ್ಲಿ ನಮ್ಮ ಡಿಫೆನ್ಸ್ ವಿಭಾಗವು ಚೆಂಡನ್ನು ಚೆನ್ನಾಗಿ ನಿಯಂತ್ರಿಸಿತು. ವಿಶ್ವಕಪ್ ಗೆಲುವಿಗೆ ಬೇಕಾಗಿರುವುದು ಇದೇ ತಂತ್ರ. ಮುಂದಿನ ಪಂದ್ಯದಲ್ಲೂ ಉತ್ತಮ ಲಯ ಮುಂದುವರಿಸುವೆವು' ಎಂದು ಗ್ರಹಾಂ ರೀಡ್ ಹೇಳಿದ್ದಾರೆ.

ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಿನಲ್ಲಿ ಪರಿವರ್ತಿಸುವಲ್ಲಿ ಎಡವುತ್ತಿರುವ ಭಾರತದ ಆಟಗಾರರು ಆ ವಿಭಾಗದಲ್ಲಿ ಸುಧಾರಿಸಬೇಕಿದೆ. ಕ್ವಾರ್ಟರ್‌ಫೈನಲ್ ಹಂತಕ್ಕೆ ಸಾಗಲು ಭಾರತಕ್ಕೆ ಈ ಪಂದ್ಯದ ಗೆಲುವು ಮಹತ್ವದ್ದೆನಿಸಿದೆ.

ತನ್ನ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ 5–0 ಅಂತರದಿಂದ ವೇಲ್ಸ್ ತಂಡವನ್ನು ಪರಾಭವಗೊಳಿಸಿದ್ದು, ಆತ್ಮವಿಶ್ವಾಸದಲ್ಲಿದೆ.

ವೇಲ್ಸ್ ಎದುರಿನ ಪಂದ್ಯದಲ್ಲಿ ಇಂಗ್ಲೆಂಡ್‌ನ ಗೋಲ್‌ಕೀಪರ್ ಆಲಿವರ್ ಪೇನ್ ಭದ್ರಕೋಟೆಯಾಗಿ ಎದುರಾಳಿಯ ಪ್ರಯತ್ನಗಳನ್ನು ವಿಫಲಗೊಳಿಸಿದ್ದರು. ಅವರ ಸವಾಲು ಮೀರಿ ಭಾರತದ ಆಟಗಾರರು ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಬೇಕು.

ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದಾಗ ಪಂದ್ಯವು 4–4ರಿಂದ ಡ್ರಾ ಆಗಿತ್ತು. ಕಳೆದ ವರ್ಷ ಉಭಯ ತಂಡಗಳು ಮೂರು ಪಂದ್ಯಗಳಲ್ಲಿ ಮುಖಾಮುಖಿಯಾಗಿದ್ದು ಎರಡು ಡ್ರಾ ಆಗಿದ್ದರೆ, ಒಂದರಲ್ಲಿ ಭಾರತ ಜಯ ಸಾಧಿಸಿತ್ತು.

'ಡಿ' ಗುಂಪಿನ ಇನ್ನೊಂದು ಪಂದ್ಯದಲ್ಲಿ ಸ್ಪೇನ್ ಮತ್ತು ವೇಲ್ಸ್ ತಂಡಗಳು ಸೆಣಸಲಿವೆ.

ಇಂದಿನ ಪಂದ್ಯಗಳು
ಸ್ಪೇನ್–ವೇಲ್ಸ್
ಆರಂಭ: ಸಂಜೆ 5
ಭಾರತ–ಇಂಗ್ಲೆಂಡ್
ಆರಂಭ: ಸಂಜೆ 7
ಲೈವ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಆಸ್ಟ್ರೇಲಿಯಾ ಓಪನ್: ಕ್ರಿಶ್ ತ್ಯಾಗಿಗೆ ಅವಕಾಶ

ಬೆಂಗಳೂರು: 18 ವರ್ಷದೊಳಗಿನವರ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿರುವ ಬೆಂಗಳೂರಿನ ಕ್ರಿಶ್ ಅಜಯ್ ತ್ಯಾಗಿ ಅವರು ಆಸ್ಟ್ರೇಲಿಯಾ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಜೂನಿಯರ್ ವಿಭಾಗದಲ್ಲಿ ಆಡಲಿದ್ದಾರೆ.

ಮೆಲ್ಬರ್ನ್‌ನಲ್ಲಿ ಸೋಮವಾರ ಆರಂಭವಾಗುವ ಟೂರ್ನಿಯಲ್ಲಿ 15 ವರ್ಷದ ಅವರು ಅರ್ಹತಾ ಸುತ್ತಿನಲ್ಲಿ ಆಡುವ ಮೂಲಕ ಅಭಿಯಾನ ಆರಂಭಿಸಲಿದ್ದಾರೆ. ಈ ಬಾರಿ ಜೂನಿಯರ್ ವಿಭಾಗದಲ್ಲಿ ಭಾರತದ ಐವರು ಬಾಲಕರು ಮತ್ತು ಒಬ್ಬ ಬಾಲಕಿಗೆ ಆಡುವ ಅವಕಾಶ ದೊರೆತಿದೆ.

ಹರ್ಷ ಲಿಂಗಪ್ಪ ಟೆನಿಸ್ ಅಕಾಡೆಮಿಯಲ್ಲಿ ಕೋಚ್ ಹರ್ಷ ಲಿಂಗಪ್ಪ ಅವರಿಂದ ತರಬೇತಿ ಪಡೆಯುತ್ತಿರುವ ಕ್ರಿಶ್, 2022ರ ಋತುವಿನಲ್ಲಿ ಒಟ್ಟು ಎಂಟು ಪ್ರಶಸ್ತಿ ಜಯಿಸಿದ್ದರು.

'ಹೆತ್ತವರಾದ ಅಜಯ್ ತ್ಯಾಗಿ ಮತ್ತು ಸಪ್ನಾ ತ್ಯಾಗಿ ಅವರ ಉತ್ತೇಜನ, ಕೋಚ್ ಹರ್ಷ ಲಿಂಗಪ್ಪ ಅವರ ಮಾರ್ಗದರ್ಶನದಿಂದ ಈ ಹಂತಕ್ಕೇರಲು ಸಾಧ್ಯವಾಗಿದೆ. ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸವಿದೆ' ಎಂದು ಕ್ರಿಶ್ ಪ್ರತಿಕ್ರಿಯಿಸಿದ್ದಾರೆ.

ಕ್ರಿಶ್ ತ್ಯಾಗಿ

ತಿರುವನಂತಪುರದ ಅನಂತಪದ್ಮನಾಭ ಸ್ವಾಮಿ ದೇವಸ್ಥಾನಕ್ಕೆ ಶನಿವಾರ ಭೇಟಿ ನೀಡಿದ ಭಾರತ ಕ್ರಿಕೆಟ್ ತಂಡದ ಆಟಗಾರರು, ಸಿಬ್ಬಂದಿ – ಟ್ವಿಟರ್ ಚಿತ್ರ

ಭಾರತಕ್ಕೆ ಕ್ಲೀನ್‌ಸ್ವೀಪ್ ಕನಸು
ಶ್ರೀಲಂಕಾ ವಿರುದ್ಧದ ಮೂರನೇ ಏಕದಿನ ಪಂದ್ಯ ಇಂದು

ತಿರುವನಂತಪುರ (ಪಿಟಿಐ): ಸರಣಿಯಲ್ಲಿ ಕ್ಲೀನ್‌ಸ್ವೀಪ್ ಮಾಡುವತ್ತ ಚಿತ್ತ ನೆಟ್ಟಿರುವ ಭಾರತ ತಂಡದಲ್ಲಿ ಭಾನುವಾರ ಶ್ರೀಲಂಕಾ ಎದುರಿನ ಮೂರನೇ ಏಕದಿನ ಪಂದ್ಯದಲ್ಲಿ ಕೆಲವು ಬದಲಾವಣೆಗಳಾಗುವ ಸಾಧ್ಯತೆ ಇದೆ.

ಮೂರು ಪಂದ್ಯಗಳ ಸರಣಿಯಲ್ಲಿ ಆತಿಥೇಯ ತಂಡ 2–0ಯಿಂದ ಮುಂದಿದೆ. ಇದರಿಂದಾಗಿ ಬೆಂಚ್ ಕಾದಿರುವ ಆಟಗಾರರಿಗೆ ಅವಕಾಶ ಕೊಟ್ಟು ಎರಡೂ ಪಂದ್ಯಗಳಲ್ಲಿ ಆಡಿದ ಕೆಲವರಿಗೆ ವಿಶ್ರಾಂತಿ ನೀಡಬಹುದು.

ಬೌಲಿಂಗ್ ವಿಭಾಗದಲ್ಲಿ ಪ್ರಮುಖವಾಗಿ ಮೊಹಮ್ಮದ್ ಶಮಿಗೆ ಬಿಡುವು ಕೊಡಬಹುದು. ಮುಂದಿನ ತಿಂಗಳು ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಸರಣಿ ನಡೆಯಲಿದ್ದು, ಬೂಮ್ರಾ ಇನ್ನೂ ಫಿಟ್ ಆಗದ ಕಾರಣ ಶಮಿ ಅವರ ದೈಹಿಕ ಕ್ಷಮತೆ ಕಾಪಾಡುವ ಉದ್ದೇಶದಿಂದ ಈ ಕ್ರಮಕ್ಕೆ ತಂಡವು ಮುಂದಾಗಬಹುದು.

ಕಳೆದ ಪಂದ್ಯದಲ್ಲಿ ಉತ್ತಮವಾಗಿ ಆಡಿದ್ದ ಸ್ಪಿನ್ನರ್ ಕುಲದೀಪ್ ಯಾದವ್, ಸಿರಾಜ್ ಮತ್ತು ಉಮ್ರಾನ್ ಅವರಿಗೆ ಮತ್ತೊಂದು ಅವಕಾಶ ಸಿಗಬಹುದು. ಪಂದ್ಯ ನಡೆಯಲಿರುವ ಗ್ರೀನ್‌ಫೀಲ್ಡ್ ಪಿಚ್ ಗುಣಲಕ್ಷಣಕ್ಕೆ ಅಗತ್ಯವಾದರೆ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರನ್ನು ಉಳಿಸಿಕೊಳ್ಳಬಹುದು.

ಕಳೆದ ಸರಣಿಯಲ್ಲಿ ಉತ್ತಮವಾಗಿ ಆಡಿದ್ದ ಸೂರ್ಯಕುಮಾರ್ ಯಾದವ್ ಮತ್ತು ಇಶಾನ್ ಕಿಶನ್ ಅವರಿಗೆ ಎರಡೂ ಪಂದ್ಯಗಳಲ್ಲಿ ವಿಶ್ರಾಂತಿ ಕೊಡಲಾಗಿತ್ತು. 'ವರ್ಕ್‌ಲೋಡ್ ನಿರ್ವಹಣೆ' ವ್ಯವಸ್ಥೆಯ ಅನುಸಾರ ಈ ಪಂದ್ಯಕ್ಕೂ ಅವರಿಗೆ ಅವಕಾಶ ಸಿಗುವುದು ಅನುಮಾನ.

ಲಂಕಾ ತಂಡದ ನಾಯಕ ದಸುನ್ ಶನಕಾ ಹಾಗೂ ಬೌಲರ್‌ಗಳು ಉತ್ತಮ ಲಯದಲ್ಲಿದ್ದಾರೆ. ಟಿ20 ಸರಣಿಯನ್ನು ಭಾರತವು ಕ್ಲೀನ್‌ಸ್ವೀಪ್ ಮಾಡಿಕೊಳ್ಳಲು ಬಿಟ್ಟಿರಲಿಲ್ಲ. ಈ ಸರಣಿಯಲ್ಲಿಯೂ ಕೊನೆಯ ಪಂದ್ಯವನ್ನು ಜಯಿಸಿದ ಸಮಾಧಾನದೊಂದಿಗೆ ತವರಿಗೆ ಮರಳುವ ಇರಾದೆಯಲ್ಲಿದೆ.

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ಇಶಾನ್ ಕಿಶನ್ (ವಿಕೆಟ್‌ಕೀಪರ್), ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮ್ರಾನ್ ಮಲಿಕ್, ಅರ್ಷದೀಪ್.

ಶ್ರೀಲಂಕಾ: ದಸುನ್ ಶನಕಾ (ನಾಯಕ), ಕುಶಾಲ ಮೆಂಡಿಸ್ (ಉಪನಾಯಕ), ಪಥುಮ್ ನಿಸಾಂಕ, ಅವಿಷ್ಕಾ ಫರ್ನಾಂಡೊ, ಸದೀರಾ ಸಮರವಿಕ್ರಂ, ಚರಿತಾ ಅಸಲಂಕಾ, ಧನಂಜಯ್ ಡಿ ಸಿಲ್ವಾ, ವಣಿಂದು ಹಸರಂಗಾ, ಆಶನ್ ಭಂಡಾರ, ಮಹೀಶ್ ತೀಕ್ಷಣ, ಚಮಿಕಾ ಕರುಣಾರತ್ನೆ, ದಿಲ್ಶಾನ್ ಮಧುಶಂಕಾ, ಕಸುನ್ ರಜಿತಾ, ನುವಾನಿದು ಫರ್ನಾಂಡೊ, ದುನಿತ್ ವೆಳಾಲಗೆ, ಮಧುಶಾನ್, ಲಹೀರು ಕುಮಾರ.

ಪಂದ್ಯ ಆರಂಭ: ಮಧ್ಯಾಹ್ನ 1.30

ವಿಶ್ವಕಪ್ ಕ್ರಿಕೆಟ್: ಶ್ವೇತಾ, ಶಫಾಲಿ ಅಬ್ಬರ; ಭಾರತಕ್ಕೆ ಒಲಿದ ಗೆಲುವು

ಶಫಾಲಿ ವರ್ಮಾ

ಬೆನೊನಿ (ಪಿಟಿಐ): ಆರಂಭಿಕ ಬ್ಯಾಟರ್ ಶ್ವೇತಾ ಶೆರಾವತ್ ಅಬ್ಬರದ ಬ್ಯಾಟಿಂಗ್ ಮತ್ತು ನಾಯಕಿ ಶಫಾಲಿ ವರ್ಮಾ ಅವರ ಆಲ್‌ರೌಂಡ್ ಆಟದಿಂದ ಭಾರತದ ಯುವಪಡೆಯು 19 ವರ್ಷದೊಳಗಿನ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಶ್ವೇತಾ (ಔಟಾಗದೆ 92; 57ಎ, 4X20) ಮತ್ತು ಶಫಾಲಿ (45; 16ಎ, 4X9, 6X1 ಹಾಗೂ 31ಕ್ಕೆ2) ನೆರವಿನಿಂದ ಭಾರತ ತಂಡವು ಡಿ ಗುಂಪಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು 7 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಸಿಮೊನ್ ಲಾರೆನ್ಸ್ (61; 44ಎ) ಮತ್ತು ಎಲಾಂದ್ರಿ ರೆನ್ಸ್‌ಬರ್ಗ್ (23) ಉತ್ತಮ ಆರಂಭ ನೀಡಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 166 ರನ್ ಗಳಿಸಿತು.

ಈ ಜೋಡಿಯು ಕೇವಲ ನಾಲ್ಕು ಓವರ್‌ಗಳಲ್ಲಿ 56 ರನ್ ಸೇರಿಸಿತು. ಈ ಅಡಿಪಾಯದ ಮೇಲೆ ದೊಡ್ಡ ಮೊತ್ತ ಕಟ್ಟುವ ಅವಕಾಶ ತಂಡಕ್ಕೆ ಇತ್ತು. ಶಫಾಲಿ ಅವರು ಮಧ್ಯಮ ಕ್ರಮಾಂಕದ ಪ್ರಮುಖ ಇಬ್ಬರು ಬ್ಯಾಟರ್‌ಗಳ ವಿಕೆಟ್ ಗಳಿಸಿದ್ದರಿಂದ ರನ್ ಕುಂಠಿತವಾಯಿತು.

ಬ್ಯಾಟಿಂಗ್‌ನಲ್ಲಿಯೂ ಮಿಂಚಿದ ಶಫಾಲಿ ಅವರು ಶ್ವೇತಾ ಜೊತೆಗೂಡಿ ಮೊದಲ ವಿಕೆಟ್‌ಗೆ ಏಳು ಓವರ್‌ಗಳಲ್ಲಿ 77 ರನ್ ಗಳಿಸಿದರು. ಶಫಾಲಿ ಔಟಾದ ನಂತರ ಇನಿಂಗ್ಸ್‌ನ ಸಂಪೂರ್ಣ ಹೊಣೆ ಹೊತ್ತ ಶ್ವೇತಾ ತಂಡವನ್ನು ಗೆಲುವಿನ ಗಡಿ ಮುಟ್ಟಿಸಿದರು. ಭಾರತ ತಂಡವು 16.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 170 ರನ್ ಗಳಿಸಿತು. ಎರಡು ಅಂಕಗಳನ್ನು ಗಳಿಸಿತು. ಸೋಮವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: (ಡಿ ಗುಂಪು), ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 166 (ಎಲಾಂದ್ರಿ ರೆನ್ಸ್‌ಬರ್ಗ್ 23, ಸಿಮೊನ್ ಲಾರೆನ್ಸ್ 61, ಮ್ಯಾಡಿಸನ್ ಲ್ಯಾಂಡ್ಸ್‌ಮನ್ 32, ಶಫಾಲಿ ವರ್ಮಾ 31ಕ್ಕೆ2) ಭಾರತ: 16.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 170 (ಶ್ವೇತಾ ಶೆರಾವತ್ ಔಟಾಗದೆ 92, ಶಫಾಲಿ ವರ್ಮಾ 45, ಶೇಷನಿ ನಾಯ್ಡು 32ಕ್ಕೆ1, ಮಿಯಾನಿ ಸ್ಮಿತ್ 15ಕ್ಕೆ1) ಫಲಿತಾಂಶ: ಭಾರತ ತಂಡಕ್ಕೆ 7 ವಿಕೆಟ್‌ಗಳ ಜಯ.

ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 9ಕ್ಕೆ 99 (ಎಮಾ ವಾಲಸಿಂಗಮ್ 37, ಇಂದುಜಾ ನಂದಕುಮಾರ್ 20ಕ್ಕೆ2, ವೈಷ್ಣವಿ ಮಹೇಶ್ 19ಕ್ಕೆ2, ಸಮೈರಾ 22ಕ್ಕೆ2) ಯುಎಇ: 16.2 ಓವರ್‌ಗಳಲ್ಲಿ 4ಕ್ಕೆ100 (ತೀರ್ಥ ಸತೀಶ್ 27, ಸಮೈರಾ ಧರಣಿದರ್ಕಾ 23, ಮಹಿಕಾ ಗೌರ್ ಔಟಾಗದೆ 33, ಮೈಸಿ ಮೆಸೀರಾ 7ಕ್ಕೆ2) ಫಲಿತಾಂಶ: ಯುಎಇಗೆ 6 ವಿಕೆಟ್ ಜಯ.

ಅಖಿಲ ಭಾರತ ಅಂತರ ವಿವಿ ಬಾಲ್ ಬ್ಯಾಡ್ಮಿಂಟನ್
ಕರ್ನಾಟಕದ ವಿವಿಗಳ ಶುಭಾರಂಭ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಕರ್ನಾಟಕದ ವಿಶ್ವವಿದ್ಯಾಲಯಗಳು ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆರಂಭಗೊಂಡ ಪುರುಷರ ಅಖಿಲ ಭಾರತ ಅಂತರ ವಿವಿ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿವೆ.

ಬೆಳಿಗ್ಗೆ ನಡೆದ ನಾಕೌಟ್ ಪಂದ್ಯಗಳಲ್ಲಿ ಬೆಂಗಳೂರು ವಿವಿ 35-07, 35-14ರಲ್ಲಿ ಮೌಲಾನಾ ಆಜಾದ್ ವಿವಿಯನ್ನು ಮಣಿಸಿತು. ಬೆಳಗಾವಿಯ ವಿಶ್ವೇಶ್ವರಯ್ಯ ವಿವಿ 32-35, 35-29, 35-27ರಲ್ಲಿ ಕುವೆಂಪು ವಿವಿ ವಿರುದ್ಧ ಜಯ ಗಳಿಸಿತು. ಹೈದರಾಬಾದ್‌ನ ಜೆಎನ್‌ಟಿಯು ವಿವಿಯನ್ನು ಮೈಸೂರು ವಿವಿ 35-32, 35-24ರಲ್ಲಿ ಸೋಲಿಸಿತು. ಮಧ್ಯಾಹ್ನದ ನಂತರ ನಡೆದ ಪಂದ್ಯದಲ್ಲಿ ಬೆಂಗಳೂರು ನಗರ ವಿವಿಯನ್ನು ವಿಶ್ವೇಶ್ವರಯ್ಯ ವಿವಿ 35-31, 35-22ರಲ್ಲಿ ಮಣಿಸಿತು. ಬೆಳಿಗ್ಗೆ 35-28, 35-31ರಲ್ಲಿ ರವಿಶಂಕರ್ ಶುಕ್ಲಾ ವಿವಿಯನ್ನು ಮಣಿಸಿದ ದಾವಣಗೆರೆ ವಿವಿ ಸಂಜೆ ಕೆಎಸ್‌ಎನ್‌ಯುಎಎಚ್‌ಎಸ್ ಎದುರಿನ ಪಂದ್ಯದಲ್ಲಿ 28–35, 35–20, 31–35ರಲ್ಲಿ ಸೋತಿತು.

ಇತರ ಪಂದ್ಯಗಳ ಫಲಿತಾಂಶಗಳು: ರಾಜಸ್ಥಾನದ ಜೆಆರ್‌ಎನ್‌ಗೆ ವಿಕ್ರಮ ಸಿಂಹಪುರಿ ವಿರುದ್ಧ 35-11, 35-10ರಲ್ಲಿ, ಟಿ.ಎಂ ಬಗಲ್‌ಪುರ್‌ಗೆ ಒಸ್ಮಾನಿಯಾ ವಿವಿ ವಿರುದ್ಧ 35-28, 35-22ರಲ್ಲಿ, ಎಸ್‌ವಿ ವಿವಿಗೆ ಅನಂತಪುರದ ಜೆಎನ್‌ಟಿಯುವಿರುದ್ಧ 35-12, 35-21ರಲ್ಲಿ, ಕಾಕಿನಾಡದ ಜೆಎನ್‌ಟಿಯುಗೆ ಶ್ರೀ ಕುಶಾಲ್‌ದಾಸ್ ವಿವಿ ವಿರುದ್ಧ 35-11, 35-10ರಲ್ಲಿ, ಉತ್ಕಲ್ ವಿವಿಗೆ ಹೇಮಚಂದ್ರ ವಿವಿ ವಿರುದ್ಧ 35-21, 35-22ರಲ್ಲಿ, ಮುಂಬೈ ವಿವಿಗೆ ರಾಣಿ ಚನ್ನಮ್ಮ ವಿವಿ ವಿರುದ್ಧ 35-28, 35-29ರಲ್ಲಿ, ಆರ್‌ಟಿಎಂ ವಿವಿಗೆ ಬೆಹ್ರಾಂಪುರ್ ವಿವಿ ವಿರುದ್ಧ 38-36, 35-22ರಲ್ಲಿ, ಕೇರಳ ವಿವಿಗೆ ಡಾ.ವೈಎಸ್‌ಆರ್ ವಿವಿ ವಿರುದ್ಧ 35-13, 35-18ರಲ್ಲಿ ಗೆಲುವು.

ಆಚಾರ್ಯ ನಾಗಾರ್ಜುನ ವಿವಿಗೆ ಅಟಲ್ ಬಿಹಾರಿ ವಿವಿ ವಿರುದ್ಧ 35-19, 35-22ರಲ್ಲಿ, ಭಾರತಿದಾಸನ್ ವಿವಿಗೆ ಭರ್ಕತ್ ಉಲ್ಲಾ ವಿವಿ ವಿರುದ್ಧ 35-19, 35-14ರಲ್ಲಿ, ಕೃಷ್ಣ ವಿವಿಗೆ ಪುದುಚೇರಿ ವಿವಿ ವಿರುದ್ಧ 35-21, 35-30ರಲ್ಲಿ, ಕ್ಯಾಲಿಕಟ್ ವಿವಿಗೆ ಬೆಂಗಳೂರು ಉತ್ತರ ವಿವಿ ವಿರುದ್ಧ 35-15, 35-21ರಲ್ಲಿ, ಪೆರಿಯಾರ್ ವಿವಿಗೆ ಕರ್ನಾಟಕ ವಿವಿ ವಿರುದ್ಧ 35-16, 35-21ರಲ್ಲಿ ಗೆಲುವು.

ಸಂಕ್ಷಿಪ್ತ ಸುದ್ದಿ

ಲಲಿತ್ ಮೋದಿಗೆ ಅನಾರೋಗ್ಯ

ನವದೆಹಲಿ (ಪಿಟಿಐ): ಐಪಿಎಲ್ ಕ್ರಿಕೆಟ್ ಟೂರ್ನಿಯ ಮಾಜಿ ಮುಖ್ಯಸ್ಥ ಲಲಿತ್ ಮೋದಿ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ಲಂಡನ್‌ನಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕೋವಿಡ್ ಬಳಿಕ ನ್ಯುಮೋನಿಯಾದಿಂದ ಬಳಲುತ್ತಿರುವ ಅವರಿಗೆ ಕೃತಕ ಆಮ್ಲಜನಕ ಅಳವಡಿಸಲಾಗಿದೆ. ತಮ್ಮ ಅನಾರೋಗ್ಯದ ಮಾಹಿತಿಯನ್ನು ಮೋದಿ ಇನ್‌ಸ್ಟಾಗ್ರಾಮ್‌ನಲ್ಲಿ ತಿಳಿಸಿದ್ದಾರೆ.

ಎರಡು ವಾರಗಳ ಅವಧಿಯಲ್ಲಿ ವಾರದಲ್ಲಿ ಎರಡು ಬಾರಿ ಕೋವಿಡ್‌ಗೆ ತುತ್ತಾದೆ. ಆಸ್ಪತ್ರೆಗೆ ದಾಖಲಾದ ಬಳಿಕ ನ್ಯುಮೋನಿಯಾ ಕೂಡ ಇರುವುದು ಗೊತ್ತಾಯಿತು. ಕೊನೆಗೂ ಏರ್ ಆ್ಯಂಬುಲೆನ್ಸ್ ಮೂಲಕ ಬಂದಿಳಿದೆ' ಎಂದು ಹೇಳಿದ್ದಾರೆ. ಮೆಕ್ಸಿಕೊದಲ್ಲಿದ್ದ ಅವರು ಅಲ್ಲಿಂದ ಲಂಡನ್‌ಗೆ ಏರ್ ಆ್ಯಂಬುಲೆನ್ಸ್ ಮೂಲಕ ತೆರಳಿದ್ದಾರೆ.

ಚೆನ್ನೈ ಹೀಟ್‌ಗೆ ಜಯ

ಬೆಂಗಳೂರು: ಚೆನ್ನೈ ಹೀಟ್ ತಂಡದವರು ಐಎನ್‌ಬಿಎಲ್ ಬ್ಯಾಸ್ಕೆಟ್‌ಬಾಲ್ ಲೀಗ್ ಪಂದ್ಯದಲ್ಲಿ ಶನಿವಾರ 92–77 ರಲ್ಲಿ ಬೆಂಗಳೂರು ಕಿಂಗ್ಸ್ ತಂಡವನ್ನು ಮಣಿಸಿದರು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯಲ್ಲಿ ಮುಯಿನ್ ಬೆಕ್ (18), ವಿಷ್ಣು ಪ್ರಸಾದ್ (10) ಅವರು ಚೆನ್ನೈ ಪರ ಉತ್ತಮ ಆಟವಾಡಿದರು.

ಚಂಡೀಗಢ ವಾರಿಯರ್ಸ್ 75– 48 ರಲ್ಲಿ ಡೆಲ್ಲಿ ಡ್ರಿಬ್ಲರ್ಸ್ ವಿರುದ್ಧ ಗೆದ್ದಿತು.

ನಾಪತ್ತೆಯಾಗಿದ್ದ ಕ್ರಿಕೆಟ್ ಆಟಗಾರ್ತಿಯ ಶವ ಪತ್ತೆ

ಕಟಕ್ (ಪಿಟಿಐ): ಒಡಿಶಾದ ಕ್ರಿಕೆಟ್ ಆಟಗಾರ್ತಿ ರಾಜಶ್ರೀ ಸ್ವೇನ್ ಅವರ ಮೃತದೇಹ ಮರಕ್ಕೆ ನೇಣು ಹಾಕಿದ ಸ್ಥಿತಿಯಲ್ಲಿ ಅರಣ್ಯದಲ್ಲಿ ಪತ್ತೆಯಾಗಿದೆ. 26 ವರ್ಷದ ರಾಜಶ್ರೀ ಅವರು ಜ.11 ರಂದು ನಾಪತ್ತೆಯಾಗಿದ್ದರು.

'ಈ ಘಟನೆಗೆ ಸಂಬಂಧಿಸಿದಂತೆ ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಟಕ್ ಜಿಲ್ಲೆಯ ಗುರೂದಿಜಟಿಯಾ ಅರಣ್ಯದಲ್ಲಿ ನೇಣು ಹಾಕಿದ ಸ್ಥಿತಿಯಲ್ಲಿ ಶವ ದೊರೆತಿದೆ. ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುವುದು' ಎಂದು ಕಟಕ್ ಡಿಸಿಪಿ ಪಿನಾಕ್ ಮಿಶ್ರಾ ಹೇಳಿದ್ದಾರೆ.

ಪುರಿ ಜಿಲ್ಲೆಯ ರಾಜಶ್ರೀ ಅವರು ಒಡಿಶಾ ಕ್ರಿಕೆಟ್ ಸಂಸ್ಥೆ ಆಯೋಜಿಸಿದ್ದ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಬಂದಿದ್ದರು. ಆದರೆ ಪುದುಚೇರಿಯಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಟೂರ್ನಿಯಲ್ಲಿ ಭಾಗವಹಿಸುವ 16 ಸದಸ್ಯರ ಒಡಿಶಾ ತಂಡದಲ್ಲಿ ಅವರಿಗೆ ಸ್ಥಾನ ಸಿಕ್ಕಿರಲಿಲ್ಲ.

ರಾಜಶ್ರೀ ನಾಪತ್ತೆಯಾಗಿರುವ ಬಗ್ಗೆ ಕೋಚ್ ಪುಷ್ಪಾಂಜಲಿ ಬ್ಯಾನರ್ಜಿ ಅವರು ಕಟಕ್‌ನ ಮಂಗಲಬಾಗ್ ಠಾಣೆಯಲ್ಲಿ ದೂರು ನೀಡಿದ್ದರು.

ಟೆನಿಸ್: ಯೂಕಿ ಭಾಂಬ್ರಿ– ಸಾಕೇತ್‌ಗೆ ಪ್ರಶಸ್ತಿ

ಯೂಕಿ ಹಾಗೂ ಸಾಕೇತ್

ನೊಂತಬುರಿ, ಥಾಯ್ಲೆಂಡ್ (ಪಿಟಿಐ): ಭಾರತದ ಯೂಕಿ ಭಾಂಬ್ರಿ ಮತ್ತು ಸಾಕೇತ್ ಮೈನೇನಿ ಜೋಡಿ ಶನಿವಾರ ಇಲ್ಲಿ ಕೊನೆಗೊಂಡ ಬ್ಯಾಂಕಾಕ್ ಓಪನ್ ಎಟಿಪಿ ಚಾಲೆಂಜರ್ ಟೂರ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ಅಗ್ರಶ್ರೇಯಾಂಕ ಪಡೆದಿದ್ದ ಭಾರತದ ಜೋಡಿ ಫೈನಲ್‌ನಲ್ಲಿ 2-6, 7-6, 14-12 ರಲ್ಲಿ ಇಂಡೊನೇಷ್ಯಾದ ಕ್ರಿಸ್ಟೋಫರ್ ರುಂಗ್‌ಕಟ್ ಹಾಗೂ ಆಸ್ಟ್ರೇಲಿಯಾದ ಅಕಿರ ಸಂಟಿಲನ್ ಎದುರು ಗೆದ್ದಿತು.

ಯೂಕಿ ಮತ್ತು ಸಾಕೇತ್ ಜೋಡಿ ಎಟಿಪಿ ಚಾಲೆಂಜರ್ ಟೂರ್‌ನಲ್ಲಿ ಜತೆಯಾಗಿ ಗೆದ್ದ ಆರನೇ ಪ್ರಶಸ್ತಿ ಇದು. ಫೈನಲ್ ಪಂದ್ಯ ಒಂದು ಗಂಟೆ 50 ನಿಮಿಷ ನಡೆಯಿತು.

ಇವರಿಬ್ಬರು ಕಳೆದ ವರ್ಷದಿಂದ ಜತೆಯಾಗಿ ಆಡುತ್ತಿದ್ದು, 2022ರ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ಆರು ಚಾಲೆಂಜರ್ ಟೂರ್ನಿಗಳಲ್ಲಿ ಫೈನಲ್ ಪ್ರವೇಶಿಸಿದ ಸಾಧನೆ ಮಾಡಿದ್ದರು. ಐದರಲ್ಲಿ ಚಾಂಪಿಯನ್ ಆಗಿದ್ದರು.

ಈ ಗೆಲುವಿನ ಮೂಲಕ ಯೂಕಿ ಅವರು ಡಬಲ್ಸ್ ವಿಭಾಗದ ರ್‍ಯಾಂಕಿಂಗ್‌ನಲ್ಲಿ 90ನೇ ಸ್ಥಾನಕ್ಕೆ ಹಾಗೂ ಮೈನೇನಿ ಅವರು 74ನೇ ಸ್ಥಾನಕ್ಕೆ ಏರಲಿದ್ದಾರೆ.

ಸಾತ್ವಿಕ್– ಚಿರಾಗ್ ಜೋಡಿಗೆ ಸೋಲು

ಕ್ವಾಲಾಲಂಪುರ (ಪಿಟಿಐ): ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಗೆಲುವಿನ ಓಟಕ್ಕೆ ತಡೆಬಿದ್ದಿದೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಡಬಲ್ಸ್ ಸೆಮಿಫೈನಲ್ ಪಂದ್ಯದಲ್ಲಿ ಶನಿವಾರ ಭಾರತದ ಆಟಗಾರರು 16–21, 21–11, 15–21ರಿಂದ ಚೀನಾದ ಲಿಯಾಂಗ್ ವೇ ಕೆಂಗ್ ಮತ್ತು ವಾಂಗ್ ಚಾಂಗ್ ಎದುರು ಸೋತರು.

ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲಿಗೆ ತೆರೆಬಿತ್ತು.

ಐಎಸ್‌ಎಲ್: ಬಿಎಫ್‌ಸಿ ಪ್ಲೇಆಫ್ ಆಸೆಗೆ ಬಲ

ಒಡಿಶಾ ಎಫ್‌ಸಿಯ ನರೇಂದರ್ ಗೆಹ್ಲೋಟ್ (ಎಡ) ಮತ್ತು ಬಿಎಫ್‌ಸಿಯ ಪ್ಯಾಬ್ಲೊ ಪೆರೆಜ್ ನಡುವೆ ಚೆಂಡಿಗಾಗಿ ಪೈಪೋಟಿ–ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

• ಬಸವರಾಜ ದಳವಾಯಿ

ಬೆಂಗಳೂರು: ಚಾಕಚಕ್ಯತೆಯ ಆಟವಾಡಿದ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡದವರಿಗೆ ಗೆಲುವು ಒಲಿಯಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಪಂದ್ಯದಲ್ಲಿ ಬಿಎಫ್‌ಸಿ 3–1ರಿಂದ ಒಡಿಶಾ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ಟೂರ್ನಿಯಲ್ಲಿ ಸತತ ಎರಡನೇ ಜಯ ಸಂಪಾದಿಸಿತು. ಇದರೊಂದಿಗೆ ಪ್ಲೇ ಆಫ್ ಹಂತದ ಸ್ಪರ್ಧೆಗೆ ಇನ್ನಷ್ಟು ಮೆರುಗು ಬಂದಿತು.

ಈ ಋತುವಿನಲ್ಲಿ ಬಿಎಫ್‌ಸಿ ಮೊದಲ ಬಾರಿಗೆ ಪಂದ್ಯವೊಂದರಲ್ಲಿ ಎರಡಕ್ಕಿಂತ ಹೆಚ್ಚು ಗೋಲು ಗಳಿಸಿತು. ಈ ಗೆಲುವಿನೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲೇ ಉಳಿದಿದೆ. ಆದರೆ ಏಳನೇ ಸ್ಥಾನದಲ್ಲಿರುವ ಚೆನ್ನೈಯಿನ್ ಎಫ್‌ಸಿ ಮತ್ತು ಬಿಎಫ್‌ಸಿ ಬಳಿ ತಲಾ 16 ಪಾಯಿಂಟ್‌ಗಳಿವೆ. ಬೆಂಗಳೂರು ಇನ್ನೂ ಆರು ಪಂದ್ಯಗಳನ್ನು ಆಡಬೇಕಿರುವುದರಿಂದ ಪ್ಲೇ ಆಫ್ ಅರ್ಹತೆಯ ಆಸೆಗೆ ಗರಿ ಮೂಡಿದೆ.

ಪಾಯಿಂಟ್ಸ್ ಪಟ್ಟಿಯಲ್ಲಿ ಒಡಿಶಾ ಐದನೇ ಸ್ಥಾನದಲ್ಲಿದೆ.

ನಿಧಾನಗತಿಯಲ್ಲಿ ಆರಂಭಗೊಂಡ ಹಣಾಹಣಿಯಲ್ಲಿ ಬಿಎಫ್‌ಸಿ ಪರ ರೋಹಿತ್ ಕುಮಾರ್ ಮೊದಲ ಗೋಲು ದಾಖಲಿಸಿದರು. 25ನೇ ನಿಮಿಷದಲ್ಲಿ ಜೆವಿ ಹೆರ್ನಾಂಡೆಜ್ ಬಲಭಾಗದಿಂದ ನೀಡಿದ ಕ್ರಾಸ್‌ನಲ್ಲಿ ಅಲನ್ ಕೋಸ್ಟಾ ಚೆಂಡನ್ನು ರೋಹಿತ್ ಕುಮಾರ್ ಅವರತ್ತ ಸಾಗಿಸಿದರು. ಅತ್ಯಂತ ಸುಲಭದಲ್ಲಿ ಚೆಂಡನ್ನು ಗುರಿ ಸೇರಿಸಿದ ರೋಹಿತ್ ಅವರು ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರು ಅಭಿಮಾನಿಗಳನ್ನು ಸಂಭ್ರಮದಲ್ಲಿ ಕುಣಿಸಿದರು.

ಇದೇ ಉತ್ಸಾಹದಿಂದ ಮುನ್ನುಗ್ಗಿದ ಬಿಎಫ್‌ಸಿ 28ನೇ ನಿಮಿಷದಲ್ಲೇ ಮತ್ತೊಂದು ಅವಕಾಶ ಸೃಷ್ಟಿಸಿಕೊಂಡಿತು. ಶಿವಶಕ್ತಿ ನಾರಾಯಣನ್ ಡ್ರಿಬಲ್ ಮಾಡುತ್ತ ತಂದ ಚೆಂಡನ್ನು ರಾಯ್‌ಕೃಷ್ಣ ಸೊಗಸಾಗಿ ಗೋಲ್‌ಪೋಸ್ಟ್‌ಗೆ ಸೇರಿಸಿದರು. ಇದರೊಂದಿಗೆ ಫಿಜಿ ದೇಶದ ಆಟಗಾರ 10 ಪಂದ್ಯಗಳ ಗೋಲು ಬರವನ್ನು ನೀಗಿಸಿಕೊಂಡರು.

ಮೊದಲಾರ್ಧವನ್ನು ಬಿಎಫ್‌ಸಿ 2–0 ಗೋಲುಗಳ ಮುನ್ನಡೆಯೊಂದಿಗೆ ಕೊನೆಗೊಳಿಸಿತು. 48ನೇ ನಿಮಿಷದಲ್ಲಿ ಒಡಿಶಾದ ಡಿಗೊ ಮೌರಿಸಿಯೊ ಪೆನಾಲ್ಟಿ ಅವಕಾಶದಲ್ಲಿ ಗೋಲು ಗಳಿಸಿ ತಮ್ಮ ತಂಡದ ಹಿನ್ನಡೆ ತಗ್ಗಿಸಿದರು. ಗುರುಪ್ರೀತ್ ಸಿಂಗ್ ಅವರಿಗೆ ಡಿಕ್ಕಿ ಹೊಡೆದು ಮೌರಿಸಿಯೊ ಕೆಳಗೆ ಬಿದ್ದರು. ಇದರಿಂದ ರೆಫರಿ ಪೆನಾಲ್ಟಿ ನೀಡಿದ್ದರು.

ಬದಲಿ ಆಟಗಾರನಾಗಿ ಬಂದ ಉದಾಂತ ಸಿಂಗ್, ಇಂಜುರಿ ಅವಧಿಯಲ್ಲಿ ಪ್ಯಾಬ್ಲೊ ಪೆರೆಜ್ ಅವರಿಗೆ ಪಾಸ್ ನೀಡಿ ಗೋಲು ಗಳಿಸುವಂತೆ ಮಾಡಿದರು. ತವರು ತಂಡದ ಅಭಿಮಾನಿಗಳ ಸಂತಸ ಮುಗಿಲು ಮುಟ್ಟಿತು.

ಬಿಎಫ್‌ಸಿ ತನ್ನ ಮುಂದಿನ ಪಂದ್ಯದಲ್ಲಿ ಜ. 18ರಂದು ಜಮ್ಶೆಡ್‌ಪುರ ತಂಡವನ್ನು ಎದುರಿಸಲಿದೆ.

ಗುರುಪ್ರೀತ್ ಸಿಂಗ್ ಹಂಗಾಮಿ ನಾಯಕ: ಬಿಎಫ್‌ಸಿಯು ಆಡುವ ಆರಂಭದ 11ರ ಬಳಗದಲ್ಲಿ ನಾಯಕ ಸುನಿಲ್ ಚೆಟ್ರಿ ಅವರಿಗೆ ಅವಕಾಶ ನೀಡಿರಲಿಲ್ಲ. ಹೀಗಾಗಿ ಗೋಲ್‌ಕೀಪರ್ ಗುರುಪ್ರೀತ್ ಹಂಗಾಮಿಯಾಗಿ ನಾಯಕತ್ವ ನಿಭಾಯಿಸಿದರು. 73ನೇ ನಿಮಿಷದಲ್ಲಿ ಶಿವಶಕ್ತಿ ಸ್ಥಾನದಲ್ಲಿ ಚೆಟ್ರಿ ಅವರು ಬದಲಿ ಆಟಗಾರನಾಗಿ ಕಣಕ್ಕಿಳಿದರು.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 15 ಜನವರಿ 2023

ನೋಡಿದ್ರಾ, ಕತ್ತೆ ಸಂಚಾರದ ಈದ್ರಾ?

ಗ್ರೀಸ್ ದೇಶದ ಈದ್ರಾ ದ್ವೀಪದಲ್ಲಿ ಹೇಳಿಕೊಳ್ಳುವಂಥ ಐಶಾರಾಮಿ ಸೌಲಭ್ಯಗಳಿಲ್ಲ. ಹೋಟೆಲಿನಿಂದ ಸಾಗರತೀರ ತಲುಪಲು ಕಾರು, ಬೈಕುಗಳೂ ಇಲ್ಲ. ಅದರೂ ಆ ತಾಣ ಪ್ರವಾಸಿಗರಿಗೆ ಅಚ್ಚುಮೆಚ್ಚು. ಕತ್ತೆಗಳಿಗೆ ಬೇಡಿಕೆಯೂ ಹೆಚ್ಚು...

ಆನಂದತೀರ್ಥ ಪ್ಯಾಟಿ

ಬೆಳಕು ಮೂಡುತ್ತಲೇ ಈ ದ್ವೀಪದಲ್ಲಿ ಚಟುವಟಿಕೆಗಳು ಶುರುವಾಗುತ್ತವೆ. ಪ್ರವಾಸಿಗರು ಚಹಾ, ಕಾಫಿ ಗುಟುಕರಿಸಿ ಸಾಗರ ತಟದತ್ತ ಹೊರಡಲು ಸಿದ್ಧರಾದರೆ, ಮನೆಯ ಒಂದು ಭಾಗವನ್ನು ಹೋಟೆಲ್ ಆಗಿ ರೂಪಾಂತರಿಸಿ ಅವರನ್ನು ಉಪಚರಿಸುವ ಸ್ಥಳೀಯರಿಗೆ ಮುಂದಿನ ಆತಿಥ್ಯದ ಯೋಚನೆ. ಪ್ರವಾಸಿಗರ ಅಗತ್ಯಗಳನ್ನು ಈಡೇರಿಸುವ ಹೋಟೆಲ್, ಬಾರ್ ಇತರ ಮಳಿಗೆಗಳ ಮಾಲೀಕರು ಅವತ್ತಿನ ಸಿದ್ಧತೆಗಳ ತವಕ. ಆದರೆ ಮೂರೂ ವರ್ಗದವರಿಗೆ ಒಂದೇ ಚಿಂತೆ: 'ಕತ್ತೆ ಅಥವಾ ಹೇಸರಗತ್ತೆಗಳು ನಮ್ಮ ಸಮಯಕ್ಕೆ ಲಭ್ಯ ಇವೆಯೇ'?!

ಇತ್ತ ಕತ್ತೆಗಳ ಮಾಲೀಕರು ನಸುಕಿನಲ್ಲಿ ಎದ್ದು ತಮ್ಮ ಪ್ರಾಣಿಗಳನ್ನು ಶುಭ್ರಗೊಳಿಸಿ, ಥಡಿ ಹಾಕಿ ರೆಡಿಯಾಗಿರುತ್ತಾರೆ. ಅವರಿಗೂ ಇವತ್ತು ಬಾಡಿಗೆ ಎಷ್ಟು ದಕ್ಕೀತು ಎಂಬ ಚಿಂತೆ! ಆದರೆ, ಅವರಲ್ಲಿ ಒಂದು ಸಮಾಧಾನವೆಂದರೆ- ತಮ್ಮನ್ನು ಬಿಟ್ಟು, ಈ ದ್ವೀಪದಲ್ಲಿ ಜನರ ಸಂಚಾರ ಅಸಾಧ್ಯವೇ ಸೈ ಎನ್ನುವುದು!

ಯೂರೋಪ್ ಅಂಚಿನಲ್ಲಿರುವ ಗ್ರೀಸ್ ದೇಶದ ತುದಿಯಲ್ಲಿದೆ- ಈದ್ರಾ ದ್ವೀಪ (Hydra). ಗ್ರೀಕ್ ಭಾಷೆಯಲ್ಲಿ 'ಈದರ್' ಅಂದರೆ 'ನೀರಿನ ಬುಗ್ಗೆ' ಎಂಬರ್ಥವಿದೆಯಂತೆ. ಇಪ್ಪತ್ತು ಚದರ ಮೈಲುಗಳ ವಿಸ್ತೀರ್ಣದ ಈ ದ್ವೀಪದಲ್ಲಿನ ವಾಸಿಗಳ ಸಂಖ್ಯೆ ಎರಡು ಸಾವಿರ ಮಾತ್ರ. ಆದರೆ ಪ್ರತಿವರ್ಷ ಬಂದು ಹೋಗುವವರ ಸಂಖ್ಯೆ ಇದರ ನೂರು ಪಟ್ಟು! ಹಾಗೆಂದು ಇಲ್ಲಿ ಹೇಳಿಕೊಳ್ಳುವಂಥ ಐಶಾರಾಮಿ ಸೌಲಭ್ಯವಾಗಲೀ, ಪ್ರೇಕ್ಷಣೀಯ ತಾಣಗಳಾಗಲೀ ಇಲ್ಲ. ಕನಿಷ್ಠ ಹೋಟೆಲುಗಳಿಂದ ಸಮುದ್ರದಂಡೆಗೆ ಹೋಗಬೇಕೆಂದರೆ ಕಾರು, ಬೈಕುಗಳೂ ಇಲ್ಲ. ಅಲ್ಲಿಗೆ ಹೋಗಲು ಕಾಯುತ್ತ ನಿಂತಾಗ, ಬೇಗನೇ ಕತ್ತೆ ಅಥವಾ ಹೇಸರಗತ್ತೆ ಸಿಕ್ಕರೆ ಅದೇ ಅದೃಷ್ಟ!

ಹೌದು! ಯೂರೋಪಿನ ಪ್ರವಾಸೋದ್ಯಮದ ನೆಚ್ಚಿನ ತಾಣ ಎಂಬ ಆಯ್ಕೆ ಪಟ್ಟಿಯಲ್ಲಿ 'ಫೈವ್ ಸ್ಟಾರ್' ಪಟ್ಟ ಗಿಟ್ಟಿಸಿಕೊಂಡ ಈದ್ರಾ, ಒಂದರ್ಥದಲ್ಲಿ ಕಷ್ಟಕರ ಅನುಭವ ಕೊಡುವ ಪ್ರವಾಸಿ ದ್ವೀಪ. ಚಾರಣ, ನಡಿಗೆಯನ್ನು ಪ್ರೀತಿಸುವ ಪ್ರವಾಸಿಗರಿಗೆ ಮಾತ್ರ ಈದ್ರಾ ಅಚ್ಚುಮೆಚ್ಚು.

ಮನಮೋಹಕ... ಮತ್ತು ನಿಷೇಧ

ಈದ್ರಾ ದ್ವೀಪದ ಆಕರ್ಷಣೆಯೆಂದರೆ, ಮನಮೋಹಕ ಕಡಲತೀರ ಹಾಗೂ ಸ್ಫಟಿಕಶುಭ್ರ ನೀರು. ಬೆಟ್ಟಗುಡ್ಡಗಳ ಮಧ್ಯೆ ನೆಲೆನಿಂತ ಈ ದ್ವೀಪದಲ್ಲಿ ಪ್ರವಾಸೋದ್ಯಮವೇ ಮುಖ್ಯ ವಹಿವಾಟಿನ ಮೂಲ. ಯೂರೋಪಿನ 'ಪಾರಂಪರಿಕ ತಾಣ'ಗಳ ಪಟ್ಟಿಯಲ್ಲಿ ಪ್ರಮುಖ ಸ್ಥಾನ ಪಡೆದಿರುವ ಈದ್ರಾಕ್ಕೆ ಅಥೆನ್ಸ್ ಮೂಲಕ ಬರಬಹುದು. ಸ್ಥಳವೊಂದರ ಪರಂಪರೆಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಈದ್ರಾ ದ್ವೀಪಕ್ಕೆ ಸಾಕಷ್ಟು ನಿಬಂಧನೆ ವಿಧಿಸಲಾಗಿದೆ. ಜಗತ್ತಿನ ವಿವಿಧೆಡೆಯಿಂದ ದಾಂಗುಡಿಯಿಡುವ ಲಕ್ಷಗಟ್ಟಲೇ ಪ್ರವಾಸಿಗರ ದಟ್ಟಣೆಯ ಮಧ್ಯೆಯೂ ಪಟ್ಟುಬಿಡದೇ ಆ ನಿಯಮಾವಳಿ ಪಾಲಿಸುತ್ತಿರುವುದು ಸುಲಭವೇನಲ್ಲ.

ಪ್ರವಾಸಿಗರ ಅನುಕೂಲಕ್ಕಾಗಿ ಪ್ರವಾಸಿ ತಾಣಗಳ ಆಡಳಿತಗಳು ತರಹೇವಾರಿ ಸೌಲಭ್ಯ ಕಲ್ಪಿಸುತ್ತವೆ. ಸುಗಮ ಸಂಚಾರಕ್ಕಾಗಿ ಸಪಾಟಾದ ರಸ್ತೆಗಳು, ಡಿಲಕ್ಸ್ ಅನುಭವ ಕೊಡುವ ಕಾರುಗಳು, ಪ್ರವಾಸಿಗರು ಕೇಳಿದ ಸ್ಥಳಕ್ಕೆ ವಾಹನ ಕಳಿಸುವ ಟ್ಯಾಕ್ಸಿ ಏಜೆನ್ಸಿಗಳು, ಪಾರ್ಕಿಂಗ್‌ಗೆ ವಿಶಾಲ ಸ್ಥಳಾವಕಾಶ, ವಿಹಾರಕ್ಕಾಗಿ ಉದ್ಯಾನ... ಹೀಗೆಲ್ಲ. ಇವಾವೂ ಈದ್ರಾದಲ್ಲಿ ಇಲ್ಲ ಎಂಬುದೇ ವಿಶೇಷ.

ಈದ್ರಾದಲ್ಲಿ ಕಾರು, ಬೈಕ್‌ಗಳಿಗೆ ನಿಷೇಧ ವಿಧಿಸಲಾಗಿದೆ! ಹಾಗಾದರೆ, ಪ್ರವಾಸಿಗರ ಗತಿ? ಅದಕ್ಕಾಗಿಯೇ ಮಾಲಿನ್ಯರಹಿತ ಸಂಚಾರಕ್ಕೆ ಆದ್ಯತೆ ಕೊಡಲಾಗಿದೆ. ಅದೆಂದರೆ- ಕತ್ತೆ, ಹೇಸರಗತ್ತೆಗಳ ಓಡಾಟ. ಇದು ಅನಿವಾರ್ಯವೂ ಹೌದು.

3ನೇ ಪುಟಕ್ಕೆ...

ಕಥಾ ಕಣಜದ 'ದಳವಾಯಿ'!

ಎತ್ತಪ್ಪನ ಕಾವ್ಯ, ಜುಂಜಪ್ಪನ ಕಾವ್ಯ, ಚಿತ್ತಯ್ಯನ ಕಾವ್ಯದ 'ನಿಧಿ' ದಳವಾಯಿ ಚಿತ್ತಪ್ಪ. ವಯೋಸಹಜ ಕಾರಣದಿಂದ ಈಚಿನ ದಿನಗಳಲ್ಲಿ ಹೆಚ್ಚು ಮೌನಿಯಾಗಿದ್ದಾರೆ. ಈ ಜನಪದ ಸಿರಿಯನ್ನು ದಾಖಲಿಸುವ ಕೆಲಸ ಆಗುತ್ತಲೇ ಇಲ್ಲವಲ್ಲ?!

ಕೆ.ಎಂ. ಸಂತೋಷ್‌ಕುಮಾರ್

ಎಲೆಮರೆ ಕಾಯಿಯಂತೆ ಉಳಿದಿರುವ ಬಯಲುಸೀಮೆಯ ಜಾನಪದ ಗಾಯಕ, ಬಂಡ್ರಿಗೊಲ್ಲರ ಹಟ್ಟಿಯ ದಳವಾಯಿ ಚಿತ್ತಪ್ಪನವರ ದೇಹಕ್ಕೆ ವಯಸ್ಸಾಗಿದೆ. ಆದರೆ, ಅವರ ಕಂಠಸಿರಿಗೆ ಯಾವ ಮುಪ್ಪೂ ಆವರಿಸಿಲ್ಲ. ಕಥೆ ಹೇಳುವ ಶೈಲಿಗೆ ಸಹ ಆಯಾಸವಾಗಿಲ್ಲ. ಅವರ ಎದುರು ಕುಳಿತವರಿಗೆ ಸಮಯ ಸರಿದಿದ್ದೇ ಗೊತ್ತಾಗುವುದಿಲ್ಲ.

ದಳವಾಯಿ ಚಿತ್ತಪ್ಪ, ವಿಜಯನಗರ ಜಿಲ್ಲೆಯ ಸಂಡೂರು ತಾಲ್ಲೂಕಿನ ಬಂಡ್ರಿ ಗೊಲ್ಲರಹಟ್ಟಿಯವರು. ಅವರ ತಂದೆ ಮಾರನೋರ ದಳವಾಯಿ ದೊಡ್ಡಯ್ಯ. ದೊಡ್ಡಯ್ಯನವರಿಗೆ ಇಬ್ಬರು ಪತ್ನಿಯರು. ದೊಡ್ಡ ಈರಮ್ಮ ಮತ್ತು ಸಣ್ಣ ಈರಮ್ಮ. ಚಿತ್ತಪ್ಪನವರು ಸಣ್ಣ ಈರಮ್ಮನವರ ಮಗ. ಅವರಿಗೆ ಇಬ್ಬರು ತಂಗಿಯರೂ ಇದ್ದಾರೆ. ತಮ್ಮ ಇಪ್ಪತ್ತನೇ ವಯಸ್ಸಿಗೆ ತಾಯಿ ಕಳೆದುಕೊಂಡ ಚಿತ್ತಪ್ಪನವರನ್ನು ಸಾಕಿ ಸಲಹಿದ್ದು ಅವರ ದೊಡ್ಡಮ್ಮನೇ. ತಂದೆಯೂ ಬೇಗ ತೀರಿಕೊಂಡಿದ್ದರಿಂದ ಎಳವೆಯಲ್ಲೇ ಕುಟುಂಬದ ಹೊಣೆ ಇವರ ಹೆಗಲಿಗೆ ಬಿತ್ತು.

ದೇವರಿಗೆ ಜಾಡಿ ಹಾಸುವುದು, ಹಿರೇ ಜಾಡಿ ಹಾಸುವುದು ಇವರ ಕುಟುಂಬದ ಕೆಲಸ. ಬಂಡ್ರಿಗೊಲ್ಲರ ಹಟ್ಟಿಯಲ್ಲಿ ಈಗಲೂ ಇವರೇ ಜಾಡಿ ಹಾಸುತ್ತಾರೆ. ಐದು ಜನ ಗಂಡುಮಕ್ಕಳು ಮತ್ತು ಮೂರು ಜನ ಹೆಣ್ಣುಮಕ್ಕಳ ದೊಡ್ಡ ಸಂಸಾರ ಚಿತ್ತಪ್ಪನವರದು. ಕಾಡುಗೊಲ್ಲರ ಜಾನಪದ ಕಲೆಯನ್ನು ಕಾಪಿಟ್ಟುಕೊಂಡು ಬಂದವರಲ್ಲಿ ಇವರು ಹಿರೀಕರೇ.

ಚಿತ್ತಪ್ಪನವರಿಗೆ ಎತ್ತಪ್ಪನ ಕಾವ್ಯ, ಜುಂಜಪ್ಪನ ಕಾವ್ಯ, ಚಿತ್ತಯ್ಯನ ಕಾವ್ಯ, ಸಿದ್ದಯ್ಯ, ರಂಗಪ್ಪ ಹಾಗೂ ಗೌರಸಂದ್ರದ ಮಾರಕ್ಕನ ಪದಗಳನ್ನು ಕಲಿಸಿದವರು ದೊಡ್ಡ ಈರಮ್ಮನವರು. 'ನನಗೆ ಹಾಡಲು ಕಲಿಸಿದ್ದು ನನ್ನ ದೊಡ್ಡಮ್ಮ, ತಾಯಿ ಇಲ್ಲದ ನಮ್ಮನ್ನು ಆಕೆ ತಾಯಿಯಂತೆ ಸಾಕಿದರು. ನಮ್ಮ ಸೋದರ ಮಾವಂದಿರಾದ ಈರಪ್ಪ, ದೊಡ್ಡೀರಪ್ಪ ಮತ್ತು ಬಾಲಪ್ಪ ಇವರೂ ನನಗೆ ಪದಗಳನ್ನು, ಸೋಬಾನೆ ಹಾಡುವುದನ್ನು ಕಲಿಸಿದರು. ಇವರೇ ನನ್ನ ಗುರುಗಳು' ಎಂದು ಚಿತ್ತಪ್ಪನವರು ತಮ್ಮೊಳಗೆ ಒಬ್ಬ ಜಾನಪದ ಕಲಾವಿದನನ್ನು ಕಡೆದ ಶಿಲ್ಪಿಗಳನ್ನು ನೆನೆಯುತ್ತಾರೆ.

ದಳವಾಯಿ ಅವರು ನೋಡಲು ಎತ್ತರದ ಆಳು. ಅವರು ತೊಟ್ಟಿದ್ದ ಬಟ್ಟೆಯಂತೆಯೇ ಬೆಳ್ಳಗಿನ ಹುರಿಮೀಸೆ, ಎರಡೂ ಮುಂಗೈಯಲ್ಲಿ ಎದ್ದುಕಾಣುವ ಬೆಳ್ಳಿ ಕಡಗಗಳಿಂದ ಭೂಷಿತರಾದ ವ್ಯಕ್ತಿ ಅವರು. ಕಿವಿಯಲ್ಲಿ ಮಿಂಚುವ ಒಂಟಿ (ಕಿವಿಯೋಲೆ) ಬೇರೆ. ಅವರು ಕೈಯಲ್ಲಿ ಬಿದಿರು ಕೋಲು ಹಿಡಿದು ನಡೆದುಬರುತ್ತಿದ್ದರೆ, ಕಾಡುಗೊಲ್ಲರ ಪೂರ್ವಿಕರಂತೆಯೇ ಸತ್ಯಪಥದಲ್ಲಿ ಸಾಗುತ್ತಿರುವ ವಿನಮ್ರ ವ್ಯಕ್ತಿಯಂತೆ ಕಾಣುತ್ತಾರೆ.

ಸಂಡೂರು ಪರ್ವತ ಶ್ರೇಣಿಯ ತಪ್ಪಲಲ್ಲಿರುವ ಬಂಡ್ರಿಗೊಲ್ಲರ ಹಟ್ಟಿಯಲ್ಲಿ ಮಾರನೋರ ಗೊಲ್ಲರು, ಕಂಬೇರ ಗೊಲ್ಲರು, ಜೋಗೇರ ಗೊಲ್ಲರು, ಬೊಮ್ಮನೋರ ಗೊಲ್ಲರು ನೆಲೆಸಿದ್ದಾರೆ. ಕಾಡುಗೊಲ್ಲರು ಸಂಡೂರಿನ ಪರ್ವತ ಶ್ರೇಣಿಯನ್ನು 'ಕರಿಮಲೆ' ಎಂದೂ, 'ಎತ್ತಪ್ಪನ ಹಾಸಿಗೆ' ಎಂದೂ ಕರೆಯುತ್ತಾರೆ. ಈ ಪರ್ವತ ಶ್ರೇಣಿಯಲ್ಲಿಯೇ ಚಿತ್ತಯ್ಯ ಬೇಟೆಯಾಡಿದನೆಂದು ಹೇಳುವ ಅವರು, ಆತನ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ. ಇದೇ ಬೆಟ್ಟಗಳ ಮೇಲೆ ಎತ್ತಪ್ಪ ತನ್ನ ಎತ್ತು, ದನಗಳನ್ನು ಮೇಯಿಸುತ್ತಿದ್ದ. ಸಂಜೆಯ ಹೊತ್ತಿಗೆ ಚದುರಿ ಹೋಗಿದ್ದ ಆವುಗಳನ್ನು 'ಪೂಗೊಳವೆ' (ಕೊಳಲು) ಊದಿ ಕರೆಯುತ್ತಿದ್ದ ಎಂದು ಹೇಳುತ್ತಾರೆ.

'ನಗರ'ದಲ್ಲಿದ್ದ (ಸಂಡೂರಿನ ಪಕ್ಕದಲ್ಲಿರುವ ಈಗಿನ ಕೃಷ್ಣಾನಗರ) ಬೋರಿಯು ಎತ್ತಪ್ಪನಿಗೆ ಮರುಳಾಗಿ ಅವನ ಬೆನ್ನುಹತ್ತುತ್ತಾಳೆ. ಎಷ್ಟೇ ಪ್ರಯತ್ನ ಮಾಡಿದರೂ ಕೊನೆಗೆ ಎತ್ತಪ್ಪ ತನಗೆ ದಕ್ಕದಿದ್ದಾಗ ಅವಳನ್ನು ತನ್ನ ಬಂಟರಿಂದ ಇರಿದು ಕೊಲ್ಲುವಂತೆ ಮಾಡುತ್ತಾಳೆ. ಬೋರಿಯು ಹಾಕಿದ್ದ ಪಾರುಗಾವಲನ್ನು ಹೇಗೋ ದಾಟಿದ ಎತ್ತಪ್ಪನು, ತನ್ನ ಕರುಳು ಹೊರಬರದಂತೆ ಕಾಸಿದಟ್ಟಿ ಉಟ್ಟು ಅಲ್ಲಿಂದ ತಳುಕಿಗೆ ಬಂದು ಬೋರಿಗೆ 'ಕರುವುಗಲ್ಲಾಗುವಂತೆ' ಶಾಪವಿತ್ತು ದೇಹ ತ್ಯಜಿಸುತ್ತಾನೆ. ಎತ್ತಪ್ಪನನ್ನು ಕುರಿತು ಕಾಡುಗೊಲ್ಲರು ನಂಬಿರುವ ಐತಿಹ್ಯವಿದು.

ಚಳ್ಳಕೆರೆ ಸಮೀಪದ ತಳುಕಿನ ಗುಡ್ಡದಲ್ಲಿರುವ ಎತ್ತಪ್ಪನ ಸಮಾಧಿಯ ಮುಂದೆ ಈಗಲೂ ಕರುವುಗಲ್ಲಾಗಿ ಬೋರಿ ನಿಂತಿದ್ದಾಳಂತೆ. ಈ ಕಾರಣಕ್ಕಾಗಿಯೇ ಕರಿಮಲೆ ಮತ್ತು ತಳುಕಿನಗುಡ್ಡ ಕಾಡುಗೊಲ್ಲರಿಗೆ ಪವಿತ್ರ ತಾಣ. ಅದೊಂದು ಕಾಡುಗೊಲ್ಲರ ಸಾಂಸ್ಕೃತಿಕ ಅಸ್ಮಿತೆ. ಇದನ್ನೇ ದಳವಾಯಿ ಚಿತ್ತಪ್ಪನವರು 'ಚಿತ್ತಯ್ಯನಂಥ ದೇವರಿಲ್ಲ; ಎತ್ತಪ್ಪನಂಥ ಗೌಡ ಯಾರೂ ಇಲ್ಲ' ಎನ್ನುತ್ತಾರೆ. ಕರಿಮಲೆ ಭಾಗದ ಕಾಡುಗೊಲ್ಲರ ದೈನಂದಿನ ಬದುಕಿನಲ್ಲಿ, ಅವರ ನಂಬುಗೆಯಲ್ಲಿ ಚಿತ್ತಯ್ಯ ಮತ್ತು ಎತ್ತಪ್ಪನವರಿಗೇ ಮೊದಲ ಆದ್ಯತೆ.

2ನೇ ಪುಟಕ್ಕೆ...

ದಳವಾಯಿ ಚಿತ್ತಪ್ಪ
ಚಿತ್ರ: ನಿಸರ್ಗ ಗೋವಿಂದರಾಜು

ಬನ್ನಿ, ದೀವರ ಸಂಕ್ರಾಂತಿಗೆ

ಅಣ್ಣಪ್ಪ ಎಂ.ಜಿ. ಕಾಗೋಡು

ಎಲ್ಲ ಕಡೆಗಳಲ್ಲಿ ಸಾಮಾನ್ಯವಾಗಿ ಸುಗ್ಗಿಯ ಹಬ್ಬವಾಗಿ ಆಚರಿಸಲ್ಪಡುವ ಸಂಕ್ರಾಂತಿಗೆ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಹೆಸರಿದೆ. ಒಕ್ಕಲು ಮುಗಿದು ಬೆಳೆದ ಫಸಲು ಮನೆ ತುಂಬಿದ ಸಡಗರವೇ ಹಬ್ಬದ ಬಹುಮುಖ್ಯ ಆಶಯ. ಸಂಕ್ರಾಂತಿಯನ್ನು ವಿಭಿನ್ನವಾಗಿ ಆಚರಿಸುವ ಮಲೆನಾಡಿನ ದೀವರು ಸುಗ್ಗಿ ಹಬ್ಬಕ್ಕೆ ಪೂರ್ವದಲ್ಲಿ ಭತ್ತದ ತೆನೆ ಕಟ್ಟುವ ಸಮಯದಲ್ಲಿಯೇ ಭೂಮಣ್ಣಿ ಹಬ್ಬದ ಮೂಲಕ ಭೂತಾಯಿಯ ಫಲವಂತಿಕೆಯ ಪ್ರತೀಕವಾಗಿ ಸೀಮಂತವನ್ನು ವಿಭಿನ್ನವಾಗಿ ಆಚರಿಸುತ್ತಾರೆ. ಹಾಗಾಗಿ ಸಂಕ್ರಾಂತಿ ಮಲೆನಾಡಿನ ದೀವರಲ್ಲಿ ವಿಶೇಷ ಎನಿಸದಿದ್ದರೂ ವಿಭಿನ್ನವಾಗಿ ಆಚರಣೆಗಳನ್ನು ನೋಡಬಹುದು.

ನೆಲಮೂಲದ ದೇಶಿ ಸಂಸ್ಕೃತಿಯ ಆರಾಧಕರಾದ ಇವರಿಗೆ ಬಾವಿ, ಕೆರೆ, ನದಿ, ಭೂಮಿ, ಮರ, ಗಿಡ ಎಲ್ಲವೂ ದೈವದ ಸ್ವರೂಪ. ಮೂಲತಃ ಅರಣ್ಯವಾಸಿಗಳಾದ ಇವರು ಕೃಷಿಯೊಂದಿಗೆ ಯೋಧರಾಗಿ, ಸೇನಾ ನಾಯಕರಾಗಿ ವಿಜಯನಗರ ಹಾಗೂ ಮೈಸೂರು ಅರಸರ ಸೈನ್ಯವನ್ನು ಮುನ್ನಡೆಸಿದವರು.

ತಮ್ಮ ಸಾಂಪ್ರದಾಯಿಕ ಹಬ್ಬ ಹರಿದಿನ, ದೈವ, ದೇವರು ಪೂಜೆಗಳಲ್ಲಿ ಅವರು ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ಸಂಕ್ರಾಂತಿ ಹಬ್ಬ ಆರಂಭವಾಗುವುದೇ ಬೆಳ್ಳಂಬೆಳಗ್ಗೆ ತಾಯಂದಿರು ತಮ್ಮ ಮಕ್ಕಳಿಗೆ 'ಅಪೀ ಗದ್ದಿಗೆ ಹೋಗಿ ಗೊಣಬೆ ಸುತ್ತ ಬೂರೆಬೂದಿ ಬಿಟ್ಟು, ಗೊಣಬೆ ಮೇಲಿಕ್ಕೆ ನಿಧಾನುಕ್ಕೆ ಹತ್ತ್ಯೋಗಿ ಬೆನಪ್ಪುಗೆ ಮಾಯ್ನತೊಳಲು ಕಟ್ಟಿ ಅಳ್ಳಾಳು ಚಪ್ಪೆರೊಟ್ಟಿ ಬೀರಿ ಬರೇಳು' ಎಂಬುವುದರೊಂದಿಗೆ. ಉಪ್ಪು ಹಾಕದ ಅಕ್ಕಿ ಹಿಟ್ಟಿನಿಂದ ಮಾಡಿದ ಪುಟ್ಟ ಪುಟ್ಟ ರೊಟ್ಟಿಗಳೇ ಚಪ್ಪೆರೊಟ್ಟಿ, ಭತ್ತವನ್ನು ಹುರಿದು ತಯಾರಿಸಿದ್ದೇ ಅರಳು.

ದೀಪಾವಳಿ ಹಬ್ಬಕ್ಕೆ ಎರಡು ದಿನ ಮುಂಚಿತವಾಗಿ ಬರುವ ಬೂರೆ ಹಬ್ಬದಂದು ಅಡುಗೆ ಮಾಡುವಾಗ ಐದು ರೀತಿಯ ಮರದ (ಹಲಸು, ಮಾವು, ಆಲ, ಅರಳಿ, ಬೇವು) ಸೌದೆ ಬಳಸುವುದು ರೂಢಿ. ಆ ದಿನದ ಸೌದೆಯ ಬೂದಿಯನ್ನು ಹಾಗೇ ಎತ್ತಿಟ್ಟಿರುತ್ತಾರೆ. ಹಾಗೆ ಎತ್ತಿಟ್ಟ ಬೂದಿಗೆ ಬೂರೆಬೂದಿ ಎಂದು ಕರೆಯುತ್ತಾರೆ. ಆ ಬೂದಿಗೆ ಕುಣ, ಗುಬ್ಬಿ, ಗುಡ್ಡೆಗೇರು ಮರದ ಕಾಯಿ ಹಾಕಿ ಅದನ್ನು ಭತ್ತದ ಗೊಣಬೆಯ ಸುತ್ತ, ಮನೆಯ ಸುತ್ತ, ಕಣಜದ ಸುತ್ತ ಬಿಡುತ್ತಾರೆ. ಬಹುಶಃ ಐದು ಬೇರೆ ಬೇರೆ ಔಷಧಿಯ ಸಸ್ಯಗಳ ಸೌದೆಯಿಂದ ಆದ ಬೂದಿಯಲ್ಲಿ ಕ್ರಿಮಿಕೀಟಗಳ ನಿಯಂತ್ರಣ, ಬೇಸಿಗೆಯಲ್ಲಿ ಇಲಿಗಳ ನಿಯಂತ್ರಣಕ್ಕೆ ಬಳಸುತ್ತಿರಬೇಕು ಎನಿಸುತ್ತದೆ.

ಗೊಣಬೆಯನ್ನು ಹಾಕಿದ ಮೇಲೆ ಅದರ ತುದಿಯಲ್ಲಿ ವಿರಾಜಮಾನವಾಗುವುದು ದೀವರ ಬೆನವ. ಗದ್ದೆಯಲ್ಲಿ ಚಚೌಕದ ಆಕಾರದಲ್ಲಿ ಮಣ್ಣಿನಲ್ಲಿ ಕೊಯ್ದು ಎತ್ತಿದ ಮಣ್ಣು ಹೆಂಟೆಯೇ ದೀವರ ಬೆನವ, ಬೆನಪ್ಪ. ಅದು ದೀವರ ಗೊಣಬೆಯನ್ನು ಕಾಯುವ ದೈವ. ಒಕ್ಕಲು ಮುಗಿದು ಕಣಬ್ಬದವರೆಗೆ ಜೊತೆಯಲ್ಲಿರುವ ಈ ದೈವವನ್ನು ಕೊನೆಯ ದಿನ ನೀರಿಗೆ ಬಿಡುತ್ತಾರೆ. ಗಣೇಶನನ್ನು ಪೂಜೆಯ ನಂತರ ನೀರಿಗೆ ಬಿಡುವ ಪರಿಪಾಟ ಇದೆ. ಈ ಗಣೇಶನೇ ಮೂಲದಲ್ಲಿ ಬೆನವ, ಬೆನಪ್ಪನಾಗಿರಬಹುದು. ಮನೆಯಲ್ಲಿ ದೋಸೆ, ತರಕಾರಿ ಸಾರು, ಪಾಯಸ ಮಾಡಿ ಮನೆಯ ಇಡುಕಲಿಗೆ ಎಡೆ ಇಟ್ಟು ಊಟ ಮಾಡುತ್ತಾರೆ. ಸಂಕ್ರಾಂತಿಯ ದಿನದಂದು ಮಾವಿನ ತೋರಣವನ್ನು ಎತ್ತುಗಳ ಕೊಂಬು, ನೊಗ, ನೇಗಿಲು, ಈಸಿಗೆ ಕಟ್ಟಿ, ಅರಿಸಿಣ ಕುಂಕುಮ ಹಚ್ಚಿ, ನೇಗಿಲು ಕಟ್ಟಿ ಹ್ವಾಕೆ ಹೂಡಲು ಕಟ್ಟುವ (ಹ್ವಾಕೆ-ಮೊದಲ ಉಳುಮೆ) ಸಂಪ್ರದಾಯವಿದೆ.

ಆಗಷ್ಟೇ ನೆಲದ ತೇವವೆಲ್ಲ ಒಣಗಲು ಆರಂಭವಾಗಿ ಹೂಡಲು ಸರಿಯಾದ ಹದ ಇರುತ್ತದೆ. ಚಳಿಗಾಲ ಕಳೆಯುತ್ತಾ ಬೇಸಿಗೆ ಆರಂಭವಾಗುವ ಕಾಲ. ಭೂಮಿಯನ್ನು ಉಳುಮೆ ಮಾಡುವುದರಿಂದ ಮಣ್ಣು ಗಾಳಿಗೆ ತೆರೆದುಕೊಳ್ಳುತ್ತದೆ. ಮುಂದಿನ ಇಚ್ಚಾಲು (ಎರಡನೇ ಉಳುಮೆ) ಸಮಯಕ್ಕೆ ಬಿಸಿಲಿಗೆ ಕಾದ ಮಣ್ಣು ಸಡಿಲಗೊಳ್ಳುತ್ತದೆ. ಕ್ರಿಮಿಕೀಟಗಳು ಮೇಲಕ್ಕೆ ಬರುವುದರಿಂದ ಅವುಗಳನ್ನು ಪಕ್ಷಿಗಳು ಹಿಡಿದು ತಿನ್ನುತ್ತವೆ. ಪಕ್ಷಿಗಳಿಗೆ ಆಹಾರ ಸಿಕ್ಕರೆ ರೈತನಿಗೆ ತನ್ನ ಹೊಲವು ಕೀಟಮುಕ್ತವಾಗುತ್ತದೆ. ಕೆಲವು ಊರುಗಳಲ್ಲಿ ತಮ್ಮ ಊರು ಬಿಟ್ಟು ಪರ ಊರುಗಳಿಗೆ ಹೋಗಬಾರದೆನ್ನುವ ನಂಬಿಕೆ ಇದೆಯಾದರೂ ಇದನ್ನು ಯಾರೂ ಅಷ್ಟಾಗಿ ಪಾಲಿಸುವುದಿಲ್ಲ.

ಸಂಕ್ರಾಂತಿ ಮುಗಿದ ನಂತರವೇ ಒಕ್ಕಲು ಆರಂಭಿಸುತ್ತಾರೆ. ಭತ್ತರಾಶಿ, ಹುತ್ರಿ, ಬೆನವನನ್ನು ಪೂಜಿಸಿ ಕಣಬ್ಬ ಮಾಡುವುದರೊಂದಿಗೆ ಅವರ ಸುಗ್ಗಿಯು ಮುಗಿಯುತ್ತದೆ. ಕೆಲವು ಕಡೆ ಸಂಕ್ರಾಂತಿ ಬಂದಿದೆ ಎಂದು ಮೂರು ದೋಸೆಯನ್ನು ಎಡೆ ಇಟ್ಟು ಪೂಜೆ ಮಾಡುವ ಪದ್ಧತಿಯೂ ಇದೆ.

ಸಂಕ್ರಾಂತಿ ಆಚರಣೆ ಇತ್ತೀಚೆಗೆ ಇಲ್ಲಿಯೂ ಬದಲಾಗಿದೆ. ನಗರದ ಅಂಗಡಿಯಲ್ಲಿ ಸಿಗುವ ಬಣ್ಣ ಬಣ್ಣದ ಎಳ್ಳಿನ ಕಾಳುಗಳನ್ನು ಹಂಚುವ ಹೊಸ ಪದ್ಧತಿಯೂ ಆರಂಭವಾಗಿದೆ. ಹೀಗೆ ಹಳತದರ ಜೊತೆ ಹೊಸತು ಸೇರಿ ಸಂಕ್ರಾಂತಿಯ ಸೊಬಗನ್ನು ಹೆಚ್ಚಿಸಿದೆ.

‘ಅನುವಾದಕರಿಗೆ ಗೌರವ ಕಡಿಮೆ...’

ತಮಿಳುನಾಡು ಸರ್ಕಾರದ ‘ಶ್ರೇಷ್ಠ ಅನುವಾದಕರು ಪ್ರಶಸ್ತಿ’ಗೆ ಪಾತ್ರರಾಗಿರುವ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕಿ ಪ್ರೊ.ತಮಿಳ್ ಸೆಲ್ವಿ, ನಾಡಿನ ಹೊರಗೆ ಕನ್ನಡ ಕಟ್ಟುವ ಕೆಲಸದಲ್ಲಿ ನಿರತರಾದವರು. ಕನ್ನಡದ ಹಲವು ಮಹತ್ವದ ಕೃತಿಗಳನ್ನು ತಮಿಳು ಓದುಗರಿಗೂ ದಕ್ಕುವಂತೆ ಮಾಡಿದವರು. ಪ್ರಶಸ್ತಿಗೆ ಭಾಜನರಾದ ನೆಪದಲ್ಲಿ ಅವರೊಡನೆ ಒಂದು ಮಾತುಕತೆ...

ಚಿದಾನಂದ ಸಾಲಿ

• ಅನುವಾದವನ್ನೇ ನಿಮ್ಮ ಆಯ್ಕೆಯ ಪ್ರಕಾರವಾಗಿ ಪರಿಗಣಿಸಬೇಕೆಂಬ ಆಲೋಚನೆ ನಿಮಗೆ ಬಂದದ್ದು ಹೇಗೆ?

ನಾನು ಅನುವಾದಕ್ಕಿಂತ ಮುಖ್ಯವಾಗಿ ಹಳಗನ್ನಡ ಕಾವ್ಯ, ಶಾಸನಾಧ್ಯಯನ, ಸಂಶೋಧನೆ, ಸಾಹಿತ್ಯ ವಿಮರ್ಶೆ ಇತ್ಯಾದಿ ಪ್ರಕಾರಗಳ ಬಗೆಗೇ ಹೆಚ್ಚು ಆಸಕ್ತಿ ಹೊಂದಿರುವುದು. ಕನ್ನಡ ಪ್ರಾಧ್ಯಾಪಕಿಯಾಗಿ ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಬಲ್ಲೆ. ನನಗೆ ಪ್ರಶಸ್ತಿ ದೊರಕಿರುವುದು ಅನುವಾದಕ್ಕೆ ಎಂಬ ಕಾರಣದಿಂದ ಬಹಳ ಜನರು ನನ್ನನ್ನು ಅನುವಾದಕಿ ಎಂದು ಮಾತ್ರವೇ ಗುರುತಿಸುತ್ತಿದ್ದಾರೆ.

• ಹೊರನಾಡಿನಲ್ಲಿದ್ದು ಕನ್ನಡದ ಚಟುವಟಿಕೆಗಳನ್ನು ಗಮನಿಸುತ್ತಿರುವ ನಿಮಗೆ, ಕರ್ನಾಟಕ ಮತ್ತು ಕನ್ನಡದಲ್ಲಿ ಅನುವಾದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇನ್ನೂ ಏನೆಲ್ಲಾ ಕೆಲಸಗಳು ಆಗುವ ಅಗತ್ಯವಿದೆ ಅನ್ನಿಸುತ್ತೆ?

ತಮಿಳು ಜನ ಮತ್ತು ಆಡಳಿತಗಾರರು ಇಬ್ಬರೂ ಸಾಹಿತ್ಯ ಪ್ರಸಾರ ಹಾಗೂ ಭಾಷಾಭಿವೃದ್ಧಿಯ ಕಡೆ ತುಂಬ ಗಮನಹರಿಸಿ ಜಾಗರೂಕತೆಯಿಂದ ಕಾರ್ಯಪ್ರವೃತ್ತರಾಗಿದ್ದಾರೆ. ತಮಿಳು ಸಾಹಿತ್ಯವನ್ನು ಜಗತ್ತಿನ ಭಾಷೆಗಳಲ್ಲಿ ಸಾಧ್ಯವಾದಷ್ಟೂ ಪ್ರಚಾರ ಮಾಡುವ ಕಡೆ ಅವರ ಯೋಜನೆಗಳು ಇರುತ್ತವೆ. ತಮಿಳಿನ ಪ್ರಾಚೀನ ಸಾಹಿತ್ಯವಾದ ಕ್ರಿ.ಶ. 1ನೇ ಶತಮಾನಕ್ಕೆ ಸೇರಿದ ತೊಲ್ಕಾಪ್ಪಿಯಂ, 2ರಿಂದ 4ನೇ ಶತಮಾನದ ಸಂಗಂ ಸಾಹಿತ್ಯ ಮೊದಲಾದ ಪ್ರಾಚೀನ ಕೃತಿಗಳನ್ನು ಇಂಗ್ಲಿಷನ್ನೂ ಒಳಗೊಂಡಂತೆ ಇತರ ಭಾಷೆಗಳಿಗೆ ಅನುವಾದಿಸುವ ಮೂಲಕ ತಮಿಳು ಸಂಸ್ಕೃತಿ ಹಾಗೂ ಸಾಹಿತ್ಯವನ್ನು ಎಲ್ಲರಿಗೂ ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ತಿರುಕ್ಕುರಳ್ ಕೃತಿಯಂತೂ ಸುಮಾರು 80 ಭಾಷೆಗಳಿಗೆ ಅನುವಾದವಾಗಿದೆಯೆಂದು ನಾನು ಓದಿದ್ದೇನೆ. ಆದರೆ ಕನ್ನಡದ ಪ್ರಾಚೀನ ಕೃತಿಗಳನ್ನು ಹೀಗೆ ಬೇರೆ ಭಾಷೆಗಳಿಗೆ ಅನುವಾದಿಸುವ ಮೂಲಕ, ಜಗತ್ತಿಗೆ ಪರಿಚಯಿಸಬೇಕೆನ್ನುವ ನಿಟ್ಟಿನಲ್ಲಿ ಕನ್ನಡಿಗರು ಇನ್ನೂ ಯೋಚಿಸಿಯೇ ಇಲ್ಲ. ಇತ್ತೀಚೆಗೆ ಡಾ.ಆರ್.ವಿ.ಎಸ್.ಸುಂದರಂ ಅವರು ಕವಿರಾಜಮಾರ್ಗ, ವಡ್ಡಾರಾಧನೆ, ಗದಾಯುದ್ಧಗಳನ್ನು ಇಂಗ್ಲಿಷಿಗೆ ತಂದಿರುವುದು ಈ ನಿಟ್ಟಿನಲ್ಲಿ ಒಂದು ಮೈಲುಗಲ್ಲು. ಆದರೆ ಉಳಿದ ಭಾಷೆಗಳಿಗೂ, ಕನ್ನಡದ ಪ್ರಮುಖ ಕೃತಿಗಳನ್ನೂ ಅನುವಾದಿಸುವ ಮೂಲಕ ಕನ್ನಡ ಸಂಸ್ಕೃತಿ, ಸಾಹಿತ್ಯವನ್ನು ಇತರರಿಗೂ ಅರ್ಥ ಮಾಡಿಸಬೇಕಾಗಿದೆ.

ಪ್ರಾಚೀನ ಸಾಹಿತ್ಯ ಕೃತಿಗಳಿರಲಿ, ಜ್ಞಾನಪೀಠ ಪ್ರಶಸ್ತಿ ವಿಜೇತರ ಕೃತಿಗಳನ್ನೂ ಎಲ್ಲಾ ಭಾರತೀಯ ಭಾಷೆಗಳಿಗೆ ಅನುವಾದಿಸಿಲ್ಲ.

• ತಮಿಳಿನಲ್ಲಿ ಅನುವಾದಕ್ಕೆ ಸಂಬಂಧಿಸಿದ ವಾತಾವರಣ ಹೇಗಿದೆ?

ಓದುಗರ ವಲಯದಲ್ಲೂ, ಮುಖ್ಯ ಬರಹಗಾರರಲ್ಲೂ ಅನುವಾದಕರ ಬಗ್ಗೆ ಹೆಚ್ಚಿನ ಗೌರವ ಭಾರತೀಯ ವಾತಾವರಣದಲ್ಲೇ ಇಲ್ಲ. ಇದಕ್ಕೆ ಯಾವ ಭಾಷೆಯೂ ಹೊರತಲ್ಲ. ಸಾಕಷ್ಟು ಬರಹಗಾರರು ನಮ್ಮ ಕೃತಿಯನ್ನೂ ಅನುವಾದಿಸಿ ಎಂದು ಕೇಳುತ್ತಾರೆ. ಹಾಗೆ ನೋಡಿದರೆ ಸುಮಾರು ಮೂರು ಸಾವಿರದಷ್ಟು ಹಿರಿ-ಕಿರಿಯ ತಮಿಳು-ಕನ್ನಡಗಳ ಲೇಖಕರು ತಮ್ಮ ಕೃತಿಗಳನ್ನು ಅನುವಾದಿಸಲು ಸಾಧ್ಯವೇ ಎಂದು ನನ್ನನ್ನು ಕೇಳಿರುವುದುಂಟು. ತಮ್ಮ ಕೃತಿ ಮತ್ತೊಂದು ಭಾಷೆಗೂ ಹೋಗಬೇಕು ಎಂಬ ಅಪೇಕ್ಷೆ ಅಲ್ಲಿ ಮುಖ್ಯವೇ ಹೊರತು ಅನುವಾದ ಕಾರ್ಯಕ್ಕೆ ಹೆಚ್ಚಿನ ಗೌರವವೇನೂ ಕಾಣಿಸುತ್ತಿಲ್ಲ.

• ನೀವು ಗದ್ಯ ಮತ್ತು ಪದ್ಯ ಎರಡನ್ನೂ ಅನುವಾದಿಸಿದ್ದೀರಿ. ಯಾವುದು ನಿಮಗೆ ಹೆಚ್ಚು ಸವಾಲಿನದು ಎನಿಸುತ್ತದೆ ಮತ್ತು ಯಾಕೆ?

ಸಹಜವಾಗಿಯೇ ಪದ್ಯದ ಅನುವಾದವೇ ಹೆಚ್ಚು ಸವಾಲಿನದು. ಪದ್ಯದ ಭಾವ ಬದಲಾಗದೆ, ಭಾಷಾಶೈಲಿ ಬದಲಾಗದೆ, ಪದಲಾಲಿತ್ಯವನ್ನೂ ಉಳಿಸಿಕೊಂಡು ಕಾವ್ಯ ಬಂಧದಲ್ಲಿ ಅದನ್ನು ನಿರೂಪಿಸುವುದು ಶ್ರಮದಾಯಕವಾದ ಕಾರ್ಯ. ಹಾಗೆಂದ ಮಾತ್ರಕ್ಕೆ ಗದ್ಯದ ಅನುವಾದ ಸುಲಭವೆಂದು ಅರ್ಥವಲ್ಲ. ಪ್ರಾದೇಶಿಕ ವೈಶಿಷ್ಟ್ಯಗಳಿಂದ ಕೂಡಿರುವ ದೇವನೂರ ಮಹಾದೇವ, ವೈದೇಹಿ, ಕುಂ.ವೀ.ಯವರಂತಹ ಲೇಖಕರ ಗದ್ಯವನ್ನು ಇನ್ನೊಂದು ಭಾಷೆಗೆ ತರುವಾಗ, ಆ ಭಾಷೆಯಲ್ಲಿರುವ ಪ್ರಾದೇಶಿಕ ಭಿನ್ನತೆಗಳಲ್ಲಿ ಯಾವುದನ್ನು ಬಳಸಿಕೊಳ್ಳಬೇಕು ಎಂಬ ಗೊಂದಲ ಮೂಡುತ್ತದೆ.

• ತಮಿಳಿನ ಕತೆಗಾರ ಅಶೋಕ ಮಿತ್ರನ್ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬರಬೇಕಿತ್ತೆಂದು ನೀವು ಒಂದು ಸಂದರ್ಶನದಲ್ಲಿ ಹೇಳಿದ್ದಿರಿ. ಅತಿ ಶ್ರೀಮಂತ ಮತ್ತು ಪ್ರಾಚೀನ ಸಾಹಿತ್ಯಿಕ ಪರಂಪರೆಯ ತಮಿಳಿಗೆ ಅತಿ ಕಡಿಮೆ ಜ್ಞಾನಪೀಠ ಪ್ರಶಸ್ತಿಗಳು ಸಂದಿವೆ. ತಮಿಳು ಸಾಹಿತ್ಯವನ್ನು ಬಲ್ಲ ನೀವು ಇದನ್ನು ಹೇಗೆ ವಿವರಿಸುತ್ತೀರಿ?

ಹೌದು! ದಕ್ಷಿಣ ಭಾರತೀಯ ಭಾಷೆಗಳಲ್ಲಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ದೊರಕಿರುವುದು ಕನ್ನಡಕ್ಕೇ! ಅದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ತಮಿಳು ಕೂಡ ಸಮೃದ್ಧ ಸಾಹಿತ್ಯವನ್ನು ಹೊಂದಿದೆ. ಅದರಲ್ಲೂ ಆಧುನಿಕ ತಮಿಳು ಸಾಹಿತ್ಯ ಲೋಕ ಹಲವು ಹೊಸತನಗಳಿಗೆ ತನ್ನನ್ನು ತೆರೆದುಕೊಂಡಿದೆ. ಹೊಸ ಸಿದ್ಧಾಂತಗಳನ್ನು ತನ್ನೊಳಗು ಮಾಡಿಕೊಂಡಿದೆ. ನವೀನ ತಂತ್ರಗಳು, ಪ್ರಯೋಗಗಳು, ಭಾಷಾಶೈಲಿಗಳನ್ನೂ ಕಾಣಬಹುದು. ಆದರೂ ಹೆಚ್ಚು ಜ್ಞಾನಪೀಠಗಳು ದೊರಕಿಲ್ಲ, ಅದನ್ನು ಪಡೆದುಕೊಳ್ಳುವ ಅರ್ಹತೆಯಿರುವ ಹಲವು ಬರಹಗಾರರಿದ್ದೂ!

• ತಮಿಳುನಾಡಿನಲ್ಲಿ ಇದ್ದುಕೊಂಡು ಕನ್ನಡದ ಕೆಲಸ ಮಾಡುತ್ತಿದ್ದೀರಿ. ಹೊರನಾಡಿನಲ್ಲಿರುವವರ ತಾಯ್ನುಡಿಯ ಸೇವೆಯ ಸ್ವರೂಪ, ಸವಾಲು ಮತ್ತು ಸಾಧ್ಯತೆಗಳ ಬಗ್ಗೆ ಹೇಳಿ.

ಹಿಂದೆ ರಾಜರ ಆಳ್ವಿಕೆಗಳ ಕಾಲದಲ್ಲಿ, ಯುದ್ಧ, ವ್ಯಾಪಾರ ಇತ್ಯಾದಿ ಕಾರಣಗಳಿಂದ ತಮಿಳುನಾಡಿಗೆ ಬಂದು ಇಲ್ಲಿಯೇ ನೆಲೆಸಿರುವ ಸಾವಿರಾರು ಕುಟುಂಬಗಳು ಇಲ್ಲಿವೆ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕೂಡ ಸಾಕಷ್ಟು ಜನ ತಮಿಳುನಾಡಿಗೆ ಬಂದು ನೆಲೆ ನಿಂತಿದ್ದಾರೆ. ಕರ್ನಾಟಕದ ಹಲವು ಪ್ರಾಂತ್ಯಗಳು ಮದ್ರಾಸ್ ಪ್ರೆಸಿಡೆನ್ಸಿಯ ಅಧೀನದಲ್ಲಿದ್ದುದರಿಂದ ಸಹಜವಾಗಿಯೇ ತಮಿಳುನಾಡಿನ ಹಲವೆಡೆಗಳಲ್ಲಿ ಕನ್ನಡಿಗರು ನೆಲೆಸಿದ್ದಾರೆ. ಮದ್ರಾಸಿಗೆ ಸಮೀಪದಲ್ಲೇ ಎರಡು ‘ಕನ್ನಡ ಪಾಳ್ಯ’ಗಳಿವೆ, ಒಂದು ‘ಕನ್ನಡ ಹಳ್ಳಿ’ಯೂ ಇದೆ. ಆದರೀಗ ಅಲ್ಲಿ ನೆಲೆಸಿರುವ ಕನ್ನಡಿಗರು ಸ್ಥಳೀಯ ಸಂಸ್ಕೃತಿಯೊಳಗೆ ಬೆರೆತು ಹೋಗಿದ್ದಾರೆ. ಹಲವರು ಮಾತನಾಡುವ ಕನ್ನಡದಲ್ಲಿ ಸಾಕಷ್ಟು ತಮಿಳು ಪದಗಳು ಬೆರೆತು ಹೋಗಿ, ಅದೇ ಒಂದು ಪ್ರತ್ಯೇಕ ಭಾಷೆಯಾಗಿ ಬಳಕೆಯಲ್ಲಿರುವುದು ಭಾಷಾ ವೈವಿಧ್ಯದ ಸ್ವರೂಪಕ್ಕೆ ಕನ್ನಡಿ ಹಿಡಿಯುತ್ತದೆ. ಇತ್ತೀಚಿನ ವರ್ಷಗಳಲ್ಲಿ ಇಲ್ಲಿಗೆ ಬಂದು ನೆಲೆಸುತ್ತಿರುವವರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕಲಿಸುವುದಕ್ಕೇ ಆಸಕ್ತಿ ತೋರಿಸುತ್ತಿದ್ದಾರಾದರೂ, ಮನೆಗಳಲ್ಲಿ ಮಕ್ಕಳಿಗೆ ಕನ್ನಡವನ್ನು ಕಲಿಸುವುದನ್ನು ಮರೆಯುತ್ತಿಲ್ಲ. ಇದು ನಿಜಕ್ಕೂ ಆಶಾದಾಯಕ ಸಂಗತಿಯಾಗಿದೆ.

ತಮಿಳುನಾಡಿನಲ್ಲಿ ನೆಲೆಸಿರುವ ಕನ್ನಡಿಗರು ಒಟ್ಟುಗೂಡಿ ಕನ್ನಡ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಕನ್ನಡ ಭಾಷೆ, ಸಂಸ್ಕೃತಿಯನ್ನು ಹರಡುವ, ಬೆಳೆಸುವ ಕಾರ್ಯಗಳಲ್ಲಿ ಇಂದಿಗೂ ಆಸಕ್ತಿ ಹೊಂದಿದ್ದಾರೆ.

• ರಾಜಕೀಯ ನೇತಾರರಾಗಿರುವ ಲೇಖಕರಾದ-ವೀರಪ್ಪ ಮೊಯಿಲಿ ಅವರ ಕೃತಿಯನ್ನು ತಮಿಳಿಗೂ ಹಾಗೂ ಎಂ.ಕೆ.ಕನಿಮೊಳಿ ಅವರ ಕೃತಿಯನ್ನು ಕನ್ನಡಕ್ಕೂ ಅನುವಾದಿಸಿದ್ದೀರಿ. ಈ ಹಿನ್ನೆಲೆಯಲ್ಲಿ ಪ್ರಭುತ್ವ ಮತ್ತು ಸಾಹಿತ್ಯಗಳ ಸಂಬಂಧದ ಸ್ವರೂಪವು ಹೇಗಿರಬೇಕೆಂದು ನೀವು ಬಯಸುತ್ತೀರಿ?

ಸಾಹಿತ್ಯ ಮತ್ತು ರಾಜಕೀಯ ಹಿಂದಿನಿಂದಲೂ ಪರಸ್ಪರ ಪೂರಕ, ಪ್ರೇರಕ ಹಾಗೂ ಪೋಷಕಗಳಾಗಿವೆ. ಸಾಹಿತ್ಯ ಮತ್ತು ಪ್ರಭುತ್ವದ ನಡುವಿನ ಸಂಬಂಧ ಸೂಕ್ಷ್ಮವಾದುದು. ಕನ್ನಡ ಸಾಹಿತ್ಯವನ್ನು ಗಮನಿಸಿದರೆ ಅದು ಪ್ರಭುತ್ವವನ್ನು ಬಿಟ್ಟು ಇರಲಿಲ್ಲ. ಇವೆರಡರ ನಡುವಿನ ಸಂಬಂಧವನ್ನು ಗಮನಿಸುವ ಮುನ್ನ ಸಾಹಿತ್ಯದ ಉದ್ದೇಶದ ಬಗ್ಗೆ ಮೊದಲು ನಮಗೆ ಸ್ಪಷ್ಟತೆ ಇರಬೇಕು. ಸಾಹಿತ್ಯ ಸಮಾಜಮುಖಿಯಾದುದು. ಪ್ರಭುತ್ವವೂ ಜನರಿಗಾಗಿಯೇ ರೂಪುಗೊಂಡಿರುವುದು. ರಾಜಕೀಯ ವಲಯದಲ್ಲಿರುವವರು ಸಾಹಿತ್ಯದಲ್ಲೂ ಆಸಕ್ತರಾಗಿದ್ದರೆ ಅವರು ಸಮಾಜಮುಖಿಗಳಾಗಿ ಯೋಚಿಸುವ ಬದ್ಧತೆಯನ್ನು ಇಟ್ಟುಕೊಳ್ಳಲು ಸಾಧ್ಯವಾಗುತ್ತದೆ.

• ಡಿಎಸ್‌ಸಿ, ಬೂಕರ್‌ಗಳಂಥ ಸಾಹಿತ್ಯ ಪ್ರಶಸ್ತಿಗಳ ಮೊತ್ತವನ್ನು ಲೇಖಕ ಮತ್ತು ಅನುವಾದಕರಿಗೆ ಸಮನಾಗಿ ಹಂಚುವ ಪರಿಪಾಠವಿದೆ. ಆದರೆ ನೀವು ಈ ಹಿಂದೆ ಪಡೆದುಕೊಂಡಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಂತರ ಪ್ರಶಸ್ತಿಯ ಮೊತ್ತವು ಅದೇ ಸಂಸ್ಥೆ ನೀಡುವ ಮುಖ್ಯ ಪ್ರಶಸ್ತಿಯ ಮೊತ್ತದ ಅರ್ಧದಷ್ಟಿದೆ. ಇದನ್ನು ನೀವು ಹೇಗೆ ನೋಡುತ್ತೀರಿ?

ಭಾರತೀಯ ಮನೋಧರ್ಮ ಹಿಂದಿನಿಂದಲೂ ಅನುವಾದವನ್ನು ಎರಡನೆಯ ದರ್ಜೆಯ ಕ್ರಿಯೆಯೆಂದೇ ನೋಡುತ್ತಿದೆ. ವಾಸ್ತವವಾಗಿ ಒಬ್ಬ ಲೇಖಕ ಒಂದು ಭಾಷೆಯಲ್ಲಿ ಮಾತ್ರವೇ ಯೋಚಿಸಿ ಬರೆದರೆ, ಅನುವಾದಕ ಎರಡೂ ಭಾಷೆಗಳಲ್ಲೂ ಅದನ್ನು ಯೋಚಿಸಬೇಕು. ಮೂಲ ಭಾಷೆಯ ಭಾವ ಬಂಧ, ವಿಚಾರಗಳು ಅನುವಾದಿತ ಭಾಷೆಯಲ್ಲೂ ಯಾವುದೇ ಚ್ಯುತಿಯಿಲ್ಲದೆ ಹಾಗೆಯೇ ಮೂಡಿ ಬರಬೇಕಾದರೆ, ಆ ಭಾಷೆಯಲ್ಲೂ ಅಷ್ಟೇ ಪರಿಣತಿ ಇರಬೇಕು. ಮೂಲಕ್ಕೆ ಯಾವುದೇ ರೀತಿಯಲ್ಲೂ ಅನುವಾದ ಭಿನ್ನವಾಗಿರಬಾರದು.

ಇಷ್ಟೆಲ್ಲ ಶ್ರಮಪಟ್ಟು ಒಂದು ಕೃತಿಯನ್ನು ಅನುವಾದಿಸಿದರೂ ಭಾರತೀಯ ಮನೋಧರ್ಮ ಅದನ್ನು ಮುಖ್ಯ ಧಾರೆಯೊಳಗೆ ಸ್ವೀಕರಿಸುತ್ತಿಲ್ಲ. ಕೇಂದ್ರ ಸಾಹಿತ್ಯ ಅಕಾಡೆಮಿ ಮೂಲ ಕೃತಿಗೆ ನೀಡುವ ಅರ್ಧದಷ್ಟು ಮೊತ್ತವನ್ನು ಮಾತ್ರವೇ ಅನುವಾದಕ್ಕೆ ನೀಡುವ ಪರಿಪಾಠವನ್ನು ಬದಲಿಸಿಕೊಳ್ಳಬೇಕು. ಹಾಗೆ ನೋಡಿದರೆ ತಮಿಳುನಾಡು ಸರ್ಕಾರ ಅನುವಾದಕ್ಕಾಗಿ ಎರಡು ಲಕ್ಷ ರೂಪಾಯಿ ನೀಡುತ್ತಿದೆ ಮತ್ತು ಇದು ಕೇಂದ್ರ ಸಾಹಿತ್ಯ ಅಕಾಡೆಮಿಯು ಅನುವಾದಕ್ಕಾಗಿ ನೀಡುವ ಪ್ರಶಸ್ತಿಯ ಮೊತ್ತದ ನಾಲ್ಕು ಪಟ್ಟು ಇರುವುದು ಶ್ಲಾಘನೀಯ.

• ಅನುವಾದಕ್ಕಾಗಿ ಕೃತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ನಿಮ್ಮ ಆಯ್ಕೆಯ ಹಿಂದಿನ ಪ್ರೇರಣೆ ಮುಖ್ಯವಾಗಿ ಯಾವ ಬಗೆಯದಾಗಿರುತ್ತದೆ?

ಎಲ್ಲಾ ಸಂದರ್ಭಗಳಲ್ಲೂ ಒಂದೇ ಮಾನದಂಡ ಇರುತ್ತದೆ ಎಂದೇನಿಲ್ಲ. ಕೆಲವೊಮ್ಮೆ ಇಷ್ಟದ ಲೇಖಕರನ್ನು ಆಯ್ಕೆ ಮಾಡಿಕೊಳ್ಳುತ್ತೇನೆ. ಅಶೋಕ ಮಿತ್ರನ್, ಮ.ರಂಗನಾಥನ್, ಜಯಕಾಂತನ್ ಮೊದಲಾದವರ ಕೃತಿಗಳನ್ನು ಮೆಚ್ಚಿ ಆಯ್ಕೆ ಮಾಡಿಕೊಂಡದ್ದು. ‘ನಾನು ಅವನಲ್ಲ, ಅವಳು’ ಕೃತಿಯನ್ನು ಆಯ್ಕೆ ಮಾಡಿಕೊಂಡದ್ದು ಸಾಮಾಜಿಕ ನ್ಯಾಯಕ್ಕಾಗಿ. ಈ ಕೃತಿ ಬಂದ ನಂತರ ಕರ್ನಾಟಕದೊಳಗೆ ತೃತೀಯ ಲಿಂಗಿಗಳ ಬಗೆಗೆ ಜನರ ಮನೋಭಾವ ಬದಲಾದದ್ದು ನನಗೆ ತುಂಬಾ ಸಂತಸ ನೀಡಿದೆ. ಅವರಿಗೆ ದೊರಕಬೇಕಾದ ಹಲವು ಸವಲತ್ತುಗಳೂ ಈ ಮೂಲಕ ದೊರಕಿವೆ. ಕನಿಮೊಳಿಯಂತಹವರ ಕೃತಿಗಳನ್ನು ಜನಪ್ರಿಯತೆಯ ಹಿನ್ನೆಲೆಯಲ್ಲೂ, ಅವರ ಕಾವ್ಯ ಹೇಗಿರಬಹುದು ಎಂಬ ಕುತೂಹಲದ ಕಣ್ಣೋಟವಿದ್ದವರನ್ನು ತಣಿಸುವುದಕ್ಕಾಗಿಯೂ ಅನುವಾದಿಸಿದೆ. ಯಾವುದೇ ಕಾರಣವಾಗಿರಲಿ ಅದರಲ್ಲಿ ಸಾಹಿತ್ಯಿಕ ಸತ್ವ ಇದ್ದರೆ ಮಾತ್ರವೇ ಆಯ್ಕೆ ಮಾಡಿಕೊಳ್ಳುತ್ತೇನೆ.

ಲೈಂಗಿಕ ರಾಜಕಾರಣದ ಕೇಡಿತನ ಬಯಲು

ಎಚ್. ದಂಡಪ್ಪ

ವಿಮರ್ಶೆ

ಅಮೆರಿಕದ ಕೇಟ್ ಮಿಲೆಟ್ ಅವರ ‘Sexual politics’ ಎಂಬ ಕೃತಿಯನ್ನು, ಎಚ್.ಎಸ್. ಶ್ರೀಮತಿ ಅವರು ‘ಅಧಿಕಾರ ಮತ್ತು ಅಧೀನತೆ: ಕೇಟ್ ಮಿಲೆಟ್ ಅವರ ವಿಚಾರಗಳು’ ಎಂಬ ಶೀರ್ಷಿಕೆಯಡಿಯಲ್ಲಿ ನಿರೂಪಣೆ ಮಾಡಿದ್ದಾರೆ. ಕೇಟ್ ಅವರ ಈ ಕೃತಿಯು ಎರಡನೇ ಹಂತದ ಸ್ತ್ರೀವಾದದ ಚಿಂತನೆಗಳಿಗೆ ತಳಪಾಯವನ್ನು ಹಾಕಿದ ಪ್ರಮುಖ ಕೃತಿ, ಹೀಗಾಗಿ ಇದೊಂದು ಪ್ರಮುಖವಾದ ಮೈಲಿಗಲ್ಲು ಎಂದೇ ಹೆಸರಾಗಿದೆ.

ಮಿಲೆಟ್ ಅವರು ಶಿಕ್ಷಣತಜ್ಞೆ, ಕಲಾವಿದೆ, ಕಾರ್ಯಕರ್ತೆ ಮತ್ತು ಲೇಖಕಿಯಾದ್ದರಿಂದ ಈ ಕೃತಿಯಲ್ಲಿ, ಸ್ತ್ರೀವಾದವನ್ನು ವಿವಿಧ ಆಯಾಮಗಳಲ್ಲಿ ವಿಶ್ಲೇಷಣೆ ಮಾಡಲು ಸಾಧ್ಯವಾಗಿದೆ. ಇವರು ಪಿತೃಪ್ರಧಾನ ಸಮಾಜ, ಸಂಸ್ಕೃತಿಯ ಅಧಿಕಾರದಲ್ಲಿ ಮಹಿಳೆಯರ ಅಧೀನತೆಯ ಸ್ವರೂಪವನ್ನು ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ವಿಜ್ಞಾನ, ಮಾನವಿಕ, ಮನಃಶಾಸ್ತ್ರ, ಮುಂತಾದ ಜ್ಞಾನ ವಿಜ್ಞಾನಗಳ ನೆರವಿನಿಂದ ವಿವರಿಸಿದ ಮೊದಲ ಲೇಖಕಿಯೂ ಆಗಿದ್ದಾರೆ.

ಅಧ್ಯಾಯ ಒಂದರಲ್ಲಿ ಲೈಂಗಿಕ ರಾಜಕಾರಣದ ಕೆಲವು ಸನ್ನಿವೇಶಗಳನ್ನು ಮತ್ತು ಲೈಂಗಿಕ ರಾಜಕಾರಣದ ಸಿದ್ಧಾಂತಗಳನ್ನು - ತಾತ್ವಿಕ, ಜೈವಿಕ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ನೆಲೆಗಟ್ಟಲ್ಲಿ ಮಾತ್ರವಲ್ಲದೆ ಬಲಪ್ರಯೋಗ, ಮಾನವಶಾಸ್ತ್ರ, ಮಿಥ್ ಮತ್ತು ಧರ್ಮ ಹಾಗೂ ಮಾನಸಿಕ ನೆಲೆಗಟ್ಟುಗಳ ನೆಲೆಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಈ ಕೃತಿಯಲ್ಲಿ ಇದೊಂದು ಪ್ರಧಾನವಾದ ಭಾಗ.

ಲೈಂಗಿಕ ರಾಜಕಾರಣವು ಪ್ರಮುಖವಾಗಿ ಪುರುಷ ಕೇಂದ್ರಿತವಾದದ್ದು. ಮಹಿಳೆಯರು ಸಾಂಸ್ಥಿಕ ನೆಲೆಗಳಲ್ಲಿ ಮತ್ತು ವೈಯಕ್ತಿಕ ನೆಲೆಗಳಲ್ಲಿ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಯಾವ ಯಾವ ಬಗೆಯಲ್ಲಿ ಶೋಷಣೆಗೆ ಒಳಗಾಗುತ್ತಾರೆ ಎಂಬುದನ್ನು, ಅದರ ವಲಯಗಳನ್ನು ಗುರುತಿಸುತ್ತ, ಪಟ್ಟಿ ಮಾಡುತ್ತ ವಿಶ್ಲೇಷಣೆ ಮಾಡುವುದರಿಂದ ಲೈಂಗಿಕ ರಾಜಕಾರಣದ ಸ್ವರೂಪ ಅನಾವರಣಗೊಳ್ಳುತ್ತ ಹೋಗುತ್ತದೆ.

‘ರಾಜಕಾರಣ’ ಎಂಬ ಪರಿಕಲ್ಪನೆಯನ್ನು ವಿಸ್ತರಿಸಿ ಸಮಾಜದ ಎಲ್ಲಾ ವಲಯಗಳಲ್ಲಿ ವ್ಯಾಪಿಸಿರುವ ಅಧಿಕಾರ ಸಂರಚನೆಗಳೆಲ್ಲವಕ್ಕೂ ಯಾವ ಯಾವ ಬಗೆಗಳಲ್ಲಿ ಅನ್ವಯವಾಗುತ್ತದೆ ಎಂಬುವುದನ್ನು ಕೇಟ್ ಸೋದಾಹರಣವಾಗಿ ವಿವರಿಸಿರುವುದರಿಂದ ಅವರ ಬರಹ ಬೇರೆ ಬೇರೆ ಆಯಾಮಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಅಧಿಕಾರದ ಸಂರಚನೆಯಲ್ಲಿ ಒಂದು ಗುಂಪಿನ ವ್ಯಕ್ತಿಗಳಿಂದ ಮತ್ತೊಂದು ಗುಂಪಿನ ವ್ಯಕ್ತಿಗಳು ಕೆಲವು ನಿರ್ಬಂಧಗಳಿಗೆ ಒಳಗಾಗುವುದನ್ನು ‘ರಾಜಕಾರಣ’ ಎಂದು ಈ ಕೃತಿಯ ಸಂದರ್ಭದಲ್ಲಿ ಮಿಲೆಟ್ ವ್ಯಾಖ್ಯಾನಿಸುತ್ತಾರೆ.

ಪ್ರಬಲ ವ್ಯಕ್ತಿಗಳು ದುರ್ಬಲ ವ್ಯಕ್ತಿಗಳನ್ನು ನಿರ್ಬಂಧದಲ್ಲಿಡುವುದು ಸಾಮಾಜಿಕ ರಚನೆಯಲ್ಲಿದೆ. ಜಾತಿ, ವರ್ಗ, ವರ್ಣ, ಜನಾಂಗ, ಲಿಂಗತ್ವ ಮೊದಲಾದ ಶ್ರೇಣೀಕೃತ ಗುಂಪುಗಳಿವೆ. ಈ ಶ್ರೇಣೀಕೃತ ಗುಂಪುಗಳಲ್ಲಿ ಲಿಂಗತ್ವದ ಒಳಗೇ ಗಂಡು-ಹೆಣ್ಣೆಂಬ ಪ್ರಧಾನ-ಅಧೀನ ಶ್ರೇಣೀಕರಣ ಇದೆ. ಈ ಬಗೆಯ ಸಂಕೀರ್ಣ ಸ್ವರೂಪದ ರಾಜಕಾರಣದೊಂದಿಗೆ ಹೆಣ್ಣು ಸೆಣಸಬೇಕಾಗಿದೆ. ಪುರುಷನಿಂದ ಪುರುಷನಿಗಾಗಿ ಪುರುಷನೇ ರೂಪಿಸಿಕೊಂಡಿರುವ ರಾಜಕಾರಣವು ಪುರುಷನ ಅಗತ್ಯಗಳಿಗೆ ಒಂದು ಸಾಧನವಾಗಿ ಸ್ತ್ರೀಯನ್ನು ರೂಪಿಸಿದೆ. ಇದನ್ನು ಸ್ತ್ರೀವಾದ ಪ್ರಶ್ನಿಸುತ್ತದೆ ಮತ್ತು ಅದು ವ್ಯಕ್ತಿಕೇಂದ್ರಿತ ರಾಜಕಾರಣವನ್ನು ಆಯ್ಕೆ ಮಾಡಿಕೊಳ್ಳುತ್ತದೆ.

ಅಧ್ಯಾಯ ಎರಡರ ಭಾಗ ಒಂದರಲ್ಲಿ ಲೈಂಗಿಕ ಕ್ರಾಂತಿಯ ಸ್ವರೂಪದಲ್ಲಿರುವ ವಿವಾದಗಳನ್ನು ಅದರ ಎಲ್ಲಾ ವೈರುಧ್ಯಗಳೊಂದಿಗೆ ವಿವರಿಸಲಾಗಿದೆ. ರಸ್ಕಿನ್, ಮಿಲ್ ಮತ್ತು ಎಂಗೆಲ್ಸ್ ಅವರು ಮಂಡಿಸಿರುವ ಸ್ತ್ರೀಯರ ಬಗೆಗಿನ ಚಿಂತನೆಗಳ ಸ್ವರೂಪ ಮತ್ತು ಕ್ರಾಂತಿಯ ಬಗೆಗಿನ ಚಿಂತನೆಗಳ ವಿಶ್ಲೇಷಣೆ ಇವೆ. ಭಾಗ ಎರಡರಲ್ಲಿ ಫ್ರಾಯ್ಡ್ ಮತ್ತು ಅವನ ನಂತರದ ಮನೋವಿಜ್ಞಾನಿಗಳು ಸ್ತ್ರೀಯರ ಬಗೆಗಿನ ಚಿಂತನೆಗಳನ್ನು ಮಂಡಿಸಿ ಅವುಗಳಲ್ಲಿರುವ ಸ್ತ್ರೀ ವಿರೋಧಿ ವಿಚಾರಗಳನ್ನು ವಿವರವಾಗಿ ಚರ್ಚೆಗೆ ಒಳಪಡಿಸಲಾಗಿದೆ.

ಮಿಲ್, ರಸ್ಕಿನ್ ಅವರ ವಿಚಾರಗಳನ್ನು ಚರ್ಚಿಸುತ್ತಾ ರಸ್ಕಿನ್ ಯಥಾಸ್ಥಿತಿವಾದಿ ಹಾಗೂ ಮಿಲ್ ಪ್ರಗತಿಪರ ಚಿಂತಕನೆಂದು ಗುರುತಿಸುವ ಕೇಟ್ ಅವರ ವಾದಸರಣಿಯಿಂದ ಓದುಗರಿಗೆ ಅಪಾರವಾದ ಒಳನೋಟಗಳು ದೊರೆಯುತ್ತವೆ. ಹಾಗೆಯೇ ಸ್ತ್ರೀಯರನ್ನು ಕುರಿತ ಎಂಗೆಲ್ಸ್ ಅವರ ವಿಚಾರಗಳು ಹೆಚ್ಚು ತರ್ಕಬದ್ಧವೂ ಕ್ರಾಂತಿಕಾರಕವೂ ಆಗಿರುವುದನ್ನು ಸೋದಾಹರಣವಾಗಿ ವಿಶ್ಲೇಷಿಸುತ್ತ, ವಿವರಿಸುತ್ತ ಸ್ತ್ರೀವಾದವು ಎಂಗೆಲ್ಸ್ ಮತ್ತು ಮಿಲ್ ಅವರ ಚಿಂತನೆಗಳನ್ನು ಒಳಗೊಳ್ಳಬೇಕಾಗಿದೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಅಧ್ಯಾಯ ಮೂರರಲ್ಲಿ, ಸಾಹಿತ್ಯದಲ್ಲಿ ಲೈಂಗಿಕ ರಾಜಕಾರಣದ ಪ್ರತಿಫಲನಗಳ ಸ್ವರೂಪವನ್ನು ಡಿ.ಎಚ್. ಲಾರೆನ್ಸ್, ಹೆನ್ರಿ ಮಿಲ್ಲರ್, ನಾರ್ಮನ್ ಮೆಯ್ಲರ್ ಮತ್ತು ಜೀನ್ ಜೀನೆ ಇವರ ಕೃತಿಗಳನ್ನು ಅಧ್ಯಯನ ಮಾಡುವುದರ ಮೂಲಕ ಗುರುತಿಸಲಾಗಿದೆ. ಜಗತ್ತಿನ ಎಲ್ಲ ಕಾಲ ಘಟ್ಟಗಳ ಸಾಹಿತ್ಯ ಚಳವಳಿಗಳಲ್ಲಿ ಗಂಡು-ಹೆಣ್ಣು ಎಂಬ ಲೈಂಗಿಕ ಗುಂಪುಗಳ ಸ್ಥಾನಮಾನಗಳನ್ನು ನೆನಪಿಸುತ್ತ ಅವುಗಳನ್ನು ಮುಂದುವರಿಯುವಂತೆ ಮಾಡುತ್ತ ಬರಲಾಗಿದೆ. ಇದನ್ನು ಕೃತಿ ಬಲವಾಗಿ ಪ್ರಶ್ನಿಸುತ್ತದೆ.

ಮಿಲೆಟ್, ಲಾರೆನ್ಸ್, ಹೆನ್ರಿ ಮಿಲ್ಲರ್ ಅವರ ಕೃತಿಗಳಲ್ಲಿನ ಪುರುಷ ಪ್ರಾಧಾನ್ಯ ಮತ್ತು ಸ್ತ್ರೀವಿರೋಧಿ ಧೋರಣೆಗಳನ್ನು ವಿಶ್ಲೇಷಣೆ ಮಾಡುವ ಕ್ರಮ ಮಹತ್ವದ ಒಳನೋಟಗಳನ್ನು ಒದಗಿಸುತ್ತದೆ. ಕೇಟ್ ಅವರ ‘Sex politics’ ಅನ್ನು ಕನ್ನಡದ ಓದುಗರಿಗೆ ಸುಲಭಗ್ರಾಹ್ಯವಾಗುವಂತೆ ಶ್ರೀಮತಿ ಅವರು ನಿರೂಪಣೆ ಮಾಡಿಕೊಟ್ಟಿದ್ದಾರೆ.



ಅಧಿಕಾರ ಮತ್ತು ಅಧೀನತೆ
ಲೇ: ಶ್ರೀಮತಿ ಎಚ್.ಎಸ್.
ಪ್ರ: ಆಕಾರ ಪ್ರಕಾಶನ
ಸಂ: 8073397463
ಪು: 592 ₹650

ಕಥೆ

ಶಂಕರ್ ಸಿಹಿಮೊಗೆ ಅವರ ವಿಜಾತಿ

ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ನಿಂಗಪ್ಪ ಮುದೇನೂರು ಅವರ ಎರೆ ಮಣ್ಣಿನ ಎರೆ ಬಣ್ಣದ ನೂರು ಕನಸಿನ ತೇರು...

ಕವನ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಕಥಾಕಣಜದ ‘ದಳವಾಯಿ’!

1ನೇ ಪುಟದಿಂದ...

ಚಿತ್ತಯ್ಯನ ಮದುವೆ ಪ್ರಸಂಗವನ್ನು ಹೇಳುವಾಗಲಂತೂ ಅವರ ಕೊರಳು ತಾರಕಕ್ಕೆ ಏರುತ್ತದೆ. ಗುಡ್ಡದ ಬೋರಿಯ ಬಂಟರು ಎತ್ತಪ್ಪನನ್ನು ಇರಿಯುವಾಗ, ಅವನನ್ನು ಕೋಟೆಯೊಳಗೆ ಬಂಧಿಸಿದ್ದಾಗ ಹಾಗೂ ತಲುಕಿನ ಗುಡ್ಡಕ್ಕೆ ಹೋಗಿ ದೇಹ ತ್ಯಜಿಸುವಾಗ ಚಿತ್ತಪ್ಪನವರ ಧ್ವನಿ ನೋವಿನಲ್ಲೇ ಮುಳುಗೆದ್ದು ಕಥೆ ದಾಟಿಸುತ್ತದೆ. ‘ಒಂದುನೂರು ಮೇಕೆ, ಎರಡುನೂರು ಕುರಿಗಳನ್ನು ಸಾಕಿದ್ದೆ’, ‘ಮಳೆ ಹೋದಾಗಲೆಲ್ಲಾ ಗಣೆ ಊದುತ್ತಾ ಕುಳಿತು ಒಬ್ಬನೇ ಹಾಡಿಕೊಳ್ಳುತ್ತಿದ್ದೆ’ ಎಂದೂ ಬಾಲ್ಯದ ನೆನಪಿಗೆ ಕ್ಷಣಹೊತ್ತು ಜಾರುತ್ತಾರೆ ದಳವಾಯಿ.

ದಳವಾಯಿ ಚಿತ್ತಪ್ಪ ಹಾಡುವ ಚಿತ್ತಯ್ಯನ ಮದುವೆ ಸಂದರ್ಭದ ಸೋಬಾನೆ ಮೈಮರೆಸುತ್ತದೆ. ‘ಹರಿಯೋ ನೀರಿನಾಗೆ ಹವಳದುಂಗುರ ಹಾಕಿ, ಎಳೆ ಬೆಳುದಿಂಗಳಲ್ಲಿ ಎರೆದಾರೆ ಧಾರೆಯಾ..’, ‘ನುಗ್ಗೆ ಮರದಡಿ ಬಗ್ಗಿ ಹೋದಾನು, ಬಾಳೆಗಿಡದ ಮರದಡಿ ಬಾಗಿಕೊಂಡು ಹೋದಾನು...’ ಈ ಸಾಲುಗಳನ್ನು ಹೇಳುವಾಗ ಅವರ ನುಡಿಗಳು ಸಂಗೀತದೊಂದಿಗೆ ಸಂಯೋಜಿತವಾಗಿ ಹದತಪ್ಪದಂತೆ ಕೇಳುಗರ ಕರ್ಣಗಳನ್ನು ತಣಿಸುತ್ತವೆ.

ಚಿತ್ತಪ್ಪನವರು ಶಾಲೆಯ ಮೆಟ್ಟಲು ತುಳಿದವರಲ್ಲ! ಆದರೆ, ಕಾಡುಗೊಲ್ಲರ ಸಮಗ್ರ ಕಾವ್ಯವೇ ಅವರ ಕಂಠದಲ್ಲಿದೆ. ಅವರ ಮಾತಿನಲ್ಲಿ ಇಡೀ ಕಾಡುಗೊಲ್ಲರು ಕಟ್ಟಿಕೊಂಡಿರುವ ಲೋಕದೃಷ್ಟಿ, ಲೌಕಿಕ ಬದುಕು, ಮೌಖಿಕ ಸಾಹಿತ್ಯ, ದೈವಸಂಬಂಧಿ ಆಚರಣೆ, ಕಾಡುಗೊಲ್ಲರ ಪಶುಪಾಲನೆ, ಕೃಷಿಜ್ಞಾನ ಎಲ್ಲವೂ ಕಣ್ಣಮುಂದೆ ಸುಳಿಯುತ್ತದೆ. ಅವರ ಕನ್ನಡ ಭಾಷಾ ಸಂಪತ್ತು ಕಾವ್ಯಾತ್ಮಕತೆ ಹಾಗೂ ಧ್ವನಿಪೂರ್ಣತೆಯಿಂದ ಕೂಡಿದೆ.

ಚಿತ್ತಪ್ಪನವರಲ್ಲಿ ಹುದುಗಿರುವ ಜಾನಪದ ಕತೆ, ಸೋಬಾನೆ ಪದಗಳನ್ನು ಸಂಗ್ರಹಿಸುವ ಕೆಲಸ ಆಗಬೇಕಿತ್ತು. ವಯೋಮಾನದ ಕಾರಣಕ್ಕೆ ಚಿತ್ತಪ್ಪನವರ ನೆನಪುಗಳು ಸ್ವಲ್ಪ ಸ್ವಲ್ಪವೇ ಮಾಸಲಾರಂಭಿಸಿವೆ. ಕತೆ, ಕಾವ್ಯಗಳ ಆದಿ, ಅಂತ್ಯಗಳು ಹಿಂದು ಮುಂದಾಗುತ್ತಿವೆ. ಅವರೀಗ ಹೆಚ್ಚು ಮೌನಿ. ಅವರು ಹೆಚ್ಚು ಹೆಚ್ಚು ಮೌನಕ್ಕೆ ಜಾರಿದಷ್ಟೂ ನಮ್ಮ ಜಾನಪದ ಅಷ್ಟಷ್ಟೇ ಸಾಂಸ್ಕೃತಿಕ ಸಂಪತ್ತನ್ನು ಕಳೆದುಕೊಳ್ಳುತ್ತಾ ಹೋಗುತ್ತದೆ.

‘ಮಾರ್ಗ’ಕಾರನ ಬದುಕಿನ ಪಕ್ಷಿನೋಟ

ಸಂಶೋಧಕ, ಚಿಂತಕ ಡಾ.ಎಂ.ಎಂ.ಕಲಬುರ್ಗಿ ಅವರ ಬದುಕು–ಬರೆಹ ಕುರಿತ ಕೃತಿ ಇದು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಲೇಖಕರ ಪರಿಚಯಾತ್ಮಕ ಗ್ರಂಥಮಾಲೆಯ ಭಾಗವಾಗಿ ಈ ಕೃತಿಯನ್ನು ನವಕರ್ನಾಟಕ ಪ್ರಕಾಶನ ಹೊರತಂದಿದೆ.

2001ರಲ್ಲಿ, ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ ಈ ಮಾಲೆಯ ಮೊದಲ ಕಂತಿನ 12 ಕೃತಿಗಳನ್ನು ಕಲಬುರ್ಗಿಯವರೇ ಲೋಕಾರ್ಪಣೆ ಮಾಡಿದ್ದರು. ಕಲಬುರ್ಗಿಯವರ ಸಮಗ್ರ ಲೇಖನಗಳ ಸಂಗ್ರಹಗಳಾದ ಎಂಟು ಮಾರ್ಗ ಸಂಪುಟಗಳಲ್ಲಿನ ‘ಮಾರ್ಗ–4’ ಸಂಪುಟವು 2006ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾಯಿತು. ಈ ಕೃತಿಗೆ ಇಲ್ಲಿ ವಿಶೇಷವಾದ ಗಮನ ನೀಡಲಾಗಿದೆ. ‘ಕಲಬುರ್ಗಿಯವರ ಬರಹಕ್ಕೆ ನಾನು ಬರಹಾರಣ್ಯ ಎಂದು ಕರೆಯುತ್ತೇನೆ. ಕಾರಣ, ಇಲ್ಲಿ ಹಲವಾರು ಸಾಹಿತ್ಯ, ಸಂಶೋಧನಾ ಪ್ರಕಾರದ ವೈವಿಧ್ಯಮಯ ಬರಹಗಳಿವೆ. ಅವೆಲ್ಲವನ್ನೂ ವಿಶ್ಲೇಷಿಸುವುದು, ವ್ಯಾಖ್ಯಾನಿಸುವುದು ಈ ಕೃತಿಯ ಉದ್ದೇಶವಲ್ಲ. ಅವರ ಬದುಕು, ಬರಹಗಳ ಮೇಲೆ ಒಂದು ಪಕ್ಷಿನೋಟವಷ್ಟೇ ಇಲ್ಲಿನ ಪ್ರಯತ್ನ’ ಎಂದಿದ್ದಾರೆ ಕೃತಿ ಕಟ್ಟಿಕೊಟ್ಟಿರುವ ಸಿದ್ದನಗೌಡ ಪಾಟೀಲ.

‘ಮೊಗ್ಗು ಹೂವಾದ ಪರಿ’ಯಲ್ಲಿ ಕಲಬುರ್ಗಿಯವರ ಬದುಕಿನ ಹೆಜ್ಜೆಗಳಿವೆ. ಅವರ ದಣಿವರಿಯದ ಕಾಯಕವನ್ನೂ ಪ್ರತ್ಯೇಕ ಅಧ್ಯಾಯದಲ್ಲಿ ಕಟ್ಟಿಕೊಡಲಾಗಿದೆ. ಜೊತೆಗೆ ಕಲಬುರ್ಗಿಯವರ ಬದುಕಿನ ರೂಪಕವಾಗಿರುವ ‘ಮಾರ್ಗ’ದ ವಿಶ್ಲೇಷಣೆಯೂ ಇಲ್ಲಿದೆ. ಅದು ಅವರೇ ನಡೆ ನಡೆದು ನಿರ್ಮಿಸಿದ ‘ಮಾರ್ಗ’ವಾಗಿದೆ. ‘ಮಿತಿಗಳಾಚೆಯೂ ಅವರು ಪ್ರತಿಪಾದಿಸಿದ ತತ್ವ, ತತ್ವಮಂಡನೆಯ ವಿಧಾನ ಮಹತ್ವದ್ದು. ಅವರು ತಾತ್ವಿಕ ಕಾರಣಕ್ಕಾಗಿಯೇ ಪ್ರಾಣತೆತ್ತಿದ್ದರಿಂದ ಆ ತಾತ್ವಿಕ ಹಿನ್ನೆಲೆಯನ್ನು ಪ್ರಧಾನವಾಗಿ ಈ ಕೃತಿಯಲ್ಲಿ ಗುರುತಿಸಲು ಪ್ರಯತ್ನಿಸಿದ್ದೇನೆ’ ಎನ್ನುವ ಸಿದ್ದನಗೌಡ ಅವರು, ‘ಮುಸ್ಸಂಜೆಯಾದ ಮುಂಜಾವು’ ಅಧ್ಯಾಯದಲ್ಲಿ ‘ಇದು ವ್ಯಕ್ತಿಗಳ ಹತ್ಯೆಯೇ ಹೊರತು ವ್ಯಕ್ತಿತ್ವದ ಹತ್ಯೆಯಲ್ಲ. ಜೀವಪರ, ಜನಪರ ಚಿಂತಕರಿಗೆ ಸಾವಿಲ್ಲ’ ಎಂದು ವ್ಯಾಖ್ಯಾನಿಸಿದ್ದಾರೆ. ಕರುಳ ಭಾಷೆಯ ಗುರುವಿನ ಮಹತ್ವವನ್ನೂ ದಾಖಲಿಸುವ ಕೆಲಸ ಮಾಡಿದ್ದಾರೆ. ಗಾತ್ರದಲ್ಲಿ ಈ ಕೃತಿ ಚಿಕ್ಕದಾದರೂ ಕಲಬುರ್ಗಿ ಎಂಬ ವಿಶಾಲವಾಗಿ ರೆಂಬೆ ಕೊಂಬೆಗಳನ್ನು ಹರಡಿದ, ಫಲಭರಿತ ಮರದ ಪಕ್ಷಿನೋಟವೊಂದು ಈ ಕೃತಿಯಿಂದ ದಕ್ಕುತ್ತದೆ ಎನ್ನುವುದು ಉತ್ಪ್ರೇಕ್ಷೆಯ ಮಾತಲ್ಲ.



ಎಂ.ಎಂ.ಕಲಬುರ್ಗಿ
ಲೇ: ಡಾ.ಸಿದ್ದನಗೌಡ ಪಾಟೀಲ
ಸಂ: ಪ್ರಧಾನ್ ಗುರುದತ್ತ
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080-22161900
ಪು: 125 ₹125

ನಮ್ಮ ನೆಲ, ನಮ್ಮತನದ ಗಟ್ಟಿ ದನಿ

ಜಗತ್ತು ಸುತ್ತಿದರೂ ವಾಪಸ್ ನಮ್ಮ ತಾಯ್ನೆಲದ ಮಣ್ಣನ್ನೇ ನಂಬಿ ಬದುಕು ಕಟ್ಟಿಕೊಳ್ಳಬೇಕು, ಸಾರ್ಥಕವಾಗಬೇಕು ಎಂಬ ಆಶಯವೇ ‘ಭೂಮಿಯ ಋಣ’. ಈ ಕಥೆಗಳ ಗುಚ್ಛದಲ್ಲಿ ಇದೇ ಪ್ರಧಾನ ವಸ್ತು. ಎಲ್ಲ ಕಥೆಗಳೂ ಅಷ್ಟೆ. ನಮ್ಮ ನೆಲ, ನಮ್ಮತನ, ಸೊಗಡಿನ ಬಗ್ಗೆ ಮಾತನಾಡಿವೆ. ಕುಟುಂಬ, ಸಂಬಂಧಗಳ ಮೌಲ್ಯವನ್ನು ತಿಳಿಹೇಳಿವೆ. ಗ್ರಾಮೀಣ ಹೆಣ್ಣುಮಕ್ಕಳ ಬದುಕು– ಬವಣೆಯನ್ನು ತೆರೆದಿಟ್ಟಿವೆ. ದೇವರು– ನಂಬಿಕೆ– ಮೂಢನಂಬಿಕೆಗಳ ಬಗೆಗೂ ಚರ್ಚೆಗಳಿವೆ. ದೇವದಾಸಿ ಪದ್ಧತಿಯ ದರ್ಶನವೂ ಇದೆ. ಮಾತುಗಳಲ್ಲಿ ಪ್ರಾದೇಶಿಕ ಪದಗಳ ನುಡಿಗಟ್ಟುಗಳ ಬಳಕೆ, ಗಾದೆಗಳ ಉಲ್ಲೇಖ, ಮಾತಿನ ಕಸುವು ಇದೆ. ಪ್ರತಿರೋಧದ ಧ್ವನಿ, ಗ್ರಾಮೀಣ ಮಹಿಳೆಯರ ಕ್ಷೀಣ ಒಳದನಿಗಳಿಗೆ ಅಕ್ಷರ ರೂಪ ಕೊಟ್ಟಿದ್ದಾರೆ ಕಥೆಗಾರ್ತಿ.

ಮುನ್ನುಡಿಯಲ್ಲಿ ಎಂ.ಎಸ್. ಆಶಾದೇವಿ ಅವರು ಉಲ್ಲೇಖಿಸಿದಂತೆ, ‘ಬದುಕಿನ ಬಿಕ್ಕಟ್ಟುಗಳನ್ನು ಹೆಣ್ಣು ಎದುರಿಸುವಷ್ಟು ಸ್ಥೈರ್ಯದಿಂದ ಗಂಡು ಆ ಸವಾಲುಗಳನ್ನು ಎದುರಿಸುವುದು ಕಷ್ಟ’. ಅಂಥ ನೋಟಗಳೇ ಈ ಕಥೆಗಳಲ್ಲಿ ಹೆಚ್ಚು ಇವೆ. ಒಂಬತ್ತು ಕಥೆಗಳು ಸರಾಗವಾಗಿ ಓದಿಸಿಕೊಂಡು ಹೋಗುತ್ತವೆ. ವಿಜಯಪುರದ ಈ ಗೃಹಿಣಿ ಓದಿದ್ದು ಕೇವಲ ಒಂಬತ್ತನೇ ತರಗತಿವರೆಗೆ. ಬರವಣಿಗೆಯ ಕೃಷಿಯಲ್ಲಿ ತೊಡಗಿದ್ದು ಇತ್ತೀಚೆಗಷ್ಟೆ. ಇದು ಅವರ ಚೊಚ್ಚಿಲ ಕಥಾಸಂಕಲನ. ಆದರೆ, ಅವರ ಕಥೆಗಳನ್ನು ಓದಿದಾಗ ಅವರು ಕಥಾಜಗತ್ತಿಗೆ ಹೊಸಬರು ಎನಿಸುವುದಿಲ್ಲ. ಶೋಭಾ ಅವರ ಜೀವನಾನುಭವವೇ ಅವರ ಕಥೆಗಳ ಕೈ ಹಿಡಿದು ಮುನ್ನಡೆಸಿದೆ.

ಭೂಮಿಯ ಋಣ
ಲೇ: ಶೋಭಾ ಗುನ್ನಾಪೂರ
ಪ್ರ: ವೈಷ್ಣವಿ ಪ್ರಕಾಶನ ಕೆ. ಗುಡದಿನ್ನಿ
ಸಂ: 9620170027
ಪು: 110 ₹100

ಮೊದಲ ಓದು

ಅಡಿಕೆ ಇತಿಹಾಸದ ಮೇಲೆ ಬೆಳಕು

ವಾಣಿಜ್ಯ ಬೆಳೆ ಅಡಿಕೆಯ ಇತಿಹಾಸ, ಸಾಂಸ್ಕೃತಿಕ ಮಹತ್ವ ಏನು ಅನ್ನುವುದರ ಬಗ್ಗೆ ವಿಸ್ತಾರವಾಗಿ ಚರ್ಚಿಸಿದೆ ಈ ಕೃತಿ. ಇದು ಕೇವಲ ಆಕರ ಗ್ರಂಥಗಳ ಉಲ್ಲೇಖಿತ ಕೃತಿ ಅಲ್ಲ. ಬದಲಾಗಿ ಸ್ವತಃ ಅಡಿಕೆ ಬೆಳೆಗಾರರಾಗಿ, ವ್ಯಾಪಾರಿಯಾಗಿ, ಇದೇ ಕ್ಷೇತ್ರದ ಅಧ್ಯಯನ, ವಿಚಾರ ವಿನಿಮಯಕ್ಕಾಗಿ ಜಗತ್ತು ಸುತ್ತಿ ಬರೆದ ಅನುಭವದ ಬುತ್ತಿ.

ಬೆಳೆಗಾರರ, ಪ್ರಮುಖ ರೈತರ, ಸಂಶೋಧಕರ ವಿಚಾರ ವಿನಿಮಯದ ಸಂಗತಿಗಳು ಇಲ್ಲಿವೆ. ಅಡಿಕೆಯ ಮೌಲ್ಯವರ್ಧನೆ ಬಗ್ಗೆ ಚರ್ಚೆ ಇದೆ. ಅಡಿಕೆ ಮಾರುಕಟ್ಟೆಯಲ್ಲಿ ಆಗಬೇಕಾದ ಪ್ರಗತಿ, ಆಮದು– ರಫ್ತು ನೀತಿಯಲ್ಲಾಗಬೇಕಾದ ಬದಲಾವಣೆ ಬಗ್ಗೆ ಸಾಕಷ್ಟು ಚರ್ಚೆಗಳು, ವಿವರಣೆ, ಸಲಹೆಗಳು ಇಲ್ಲಿವೆ. ಅಡಿಕೆ ಬೆಳೆ ಕುರಿತು ಪ್ರಮುಖ ಮಾರುಕಟ್ಟೆಗಳ ವರ್ಷವಾರು ದರಪಟ್ಟಿ, ರಾಜ್ಯದಲ್ಲಿರುವ ಅಡಿಕೆ ಬೆಳೆಯ ವಿಸ್ತೀರ್ಣವಾರು ವಿವರ, ಬೆಳೆಗೆ ತಗಲುವ ರೋಗಗಳ ಮಾಹಿತಿಗಳನ್ನು ಕೃತಿ ಹೊಂದಿದೆ.

ಲೇಖಕರೇ ಹೇಳಿಕೊಂಡಿರುವಂತೆ ಭಾರತದಲ್ಲಿ ಅಡಿಕೆ ಕೃಷಿಯ ಬಗ್ಗೆ ಬರೆದ ಮೊದಲ ಸಂಶೋಧನಾ ಪ್ರಬಂಧ ಇದಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಸಿಕ್ಕಿದೆ. ಅಡಿಕೆ ಕೃಷಿ ಆಸಕ್ತರಿಗೆ ಅನುಕೂಲವಾಗಬಲ್ಲ ಕೃತಿ ಇದಾಗಿದೆ. ಕೃತಿಯ ಕೊನೆಯಲ್ಲಿ ಕೃಷಿ ಕ್ಷೇತ್ರದ ಕುರಿತ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಮಾತುಗಳು ಇಂದಿಗೂ ಪ್ರಸ್ತುತ.

ಕರ್ನಾಟಕದಲ್ಲಿ ಅಡಿಕೆ ಕೃಷಿ
ಲೇ: ಡಾ.ಕಡಿದಾಳ್ ಗೋಪಾಲ್
ಪ್ರ: ಸಹ್ಯಾದ್ರಿ ಪ್ರಕಾಶನ, ಶಿವಮೊಗ್ಗ
ಸಂ. 9845537070
ಪು: 298 ₹250

ಕಾಡುವ, ನಾಟುವ ಕವನಲೋಕ

‘ಕಾವ್ಯವೆನ್ನುವುದು ಅಮೃತಕ್ಕೆ ಹಾರುವ ಗರುಡ’ ಎಂದಿದ್ದಾರೆ ದ.ರಾ. ಬೇಂದ್ರೆ. ಕಾವ್ಯ ಅಷ್ಟು ಸುಲಭವಾಗಿ ದಕ್ಕುವುದೂ ಇಲ್ಲ. ಹಾಗೆ ಕಾವ್ಯದ ಮೂಲಕ ಓದುಗರನ್ನು ತಣಿಸುವುದೂ ಒಂದು ಸವಾಲಿನ ವಿಷಯ. ಈ ಸವಾಲಿನ ಸಮುದ್ರದಲ್ಲಿ ಈಜಿದ್ದಾರೆ ಸಂತೆಬೆನ್ನೂರು ಫೈಜ್ನಟ್ರಾಜ್.

ಶಿಕ್ಷಕ ವೃತ್ತಿಯಲ್ಲಿದ್ದುಕೊಂಡು ಕವಿ,ಕಥೆಗಾರನೊಬ್ಬನನ್ನು ತನ್ನೊಳಗೆ ಸೃಷ್ಟಿಸಿಕೊಂಡ ಫೈಜ್ನಟ್ರಾಜ್ ಅವರು ಓದುಗರ ನಾಡಿ ಮಿಡಿತವನ್ನು ಅರ್ಥೈಸಿಕೊಂಡು ‘ಮತ್ತೆ ಮತ್ತೆ ಹೇಗೆ ಹಾಡಲಿ’ ಎಂಬ ನಲವತ್ತು ಕವಿತೆಗಳ ಗುಚ್ಛದೊಂದಿಗೆ ಬಂದಿದ್ದಾರೆ. ಈಗಾಗಲೇ ‘ಬುದ್ಧನಾಗ ಹೊರಟು’, ‘ಹಬ್ಬಿದಾ ಮಲೆ ಮಧ್ಯದೊಳಗೆ’ ಸೇರಿದಂತೆ ಆರೇಳು ಕೃತಿಗಳನ್ನು ರಚಿಸಿ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವ ಅವರ ಕವಿತಾ ಲೋಕವೂ ರಮ್ಯವಾಗಿದೆ.

ಫೈಜ್ನಟ್ರಾಜ್ ಅವರೊಳಗಿನ ಕವಿ, ಕವಿತೆಗಳ ಮುಖೇನ ಹೃದಯ ಹಿಗ್ಗಿಸಿದ್ದಾನೆ. ಮಾನವೀಯತೆ ಸಾರಿದ್ದಾನೆ. ಅಲ್ಲಲ್ಲಿ ನಿಡುಸುಯ್ದಿದ್ದಾನೆ. ಎಲ್ಲರೊಳಗೊಂದಾಗಿ ಬದುಕುವ ಇರಾದೆ ತೋರಿದ್ದಾನೆ. ಇಲ್ಲಿನ ಕವನಗಳು ಮತ್ತೆ ಮತ್ತೆ ಕಾಡುತ್ತವೆ. ಒಂದು ಕವಿತೆ ಮತ್ತೊಂದು ಕವಿತೆಯೊಂದಿಗೆ ಪೈಪೋಟಿಗೆ ನಿಲ್ಲುವಂತೆ ಪ್ರಬುದ್ಧವಾಗಿವೆ. ಕವಿತೆಗಳಲ್ಲಿ ಬಳಸಿರುವ ಪದಗಳು, ಹರಿ ಬಿಟ್ಟಿರುವ ಭಾವನೆಗಳು ಎದೆಯನ್ನು ನಾಟುತ್ತವೆ. ಬಹುಮುಖ್ಯವಾಗಿ ಕವನ ಸಂಕಲನದೊಳಗಿನ ಕವಿತೆಗಳು ಕವಿಯ ಕವಿತೆಗಳಲ್ಲ; ಓದುಗನ ಆಪ್ತ ಕವಿತೆಗಳು. ಕವನ ಸಂಕಲನದೊಳಗಿನ ಪ್ರತೀ ಕವಿತೆ ಹದಬೆರೆತ ಕವಿತೆ. ಇಲ್ಲಿರುವುದು ಓದಿ ಇತರರ ಕಿವಿಗೂ ಉಸುರಬಹುದಾದ ಕವಿತೆಗಳು. ಪದೇಪದೇ ಧೇನಿಸುವಂತೆ ಮಾಡುವ ಕವಿತೆಗಳು.

ಮತ್ತೆ ಮತ್ತೆ ಹೇಗೆ ಹಾಡಲಿ
ಲೇ: ಸಂತೆಬೆನ್ನೂರು ಫೈಜ್ನಟ್ರಾಜ್
ಪ್ರ: ಅಕ್ಷರ ಮಂಟಪ, ಬೆಂಗಳೂರು
ಸಂ: 9902935999
ಪು: 112 ₹120

ಜೋಶಿಮಠದಲ್ಲಿ ಒಂದು ದಿನ...

ಪರ್ವತಗಳಿಗೆ ಚಲಿಸಲಾರದ್ದು, ದೃಢವಾದುದು ಎಂಬರ್ಥದಲ್ಲಿ 'ಅಚಲ' ಎನ್ನಲಾಗುತ್ತದೆ. ಈಗ ಈ ಅಚಲಗಳೂ ಚಲಿಸುವ ಅಚಲ ನಿರ್ಧಾರ ಮಾಡಿದಂತೆ ಜೋಶಿಮಠದ ವಾತಾವರಣ ಭಾಸವಾಗುತ್ತಿದೆ. ಕುಸಿಯುವ ಭೀತಿಯೊಳಗೆ ದಿನದೂಡುತ್ತಿರುವ ಈ ಪ್ರದೇಶದಲ್ಲೊಂದು ಸುತ್ತು....

ನರಸಿಂಹ ಗುಡಿಯ ಹಿನ್ನೆಲೆಯಲ್ಲಿ ಜೋಶಿಮಠ

ಕುಸಿಯುವ ಊರಿನಲ್ಲಿ

ದನಗಳಿಗೆ ದೂರದಿಂದ ಹುಲ್ಲು ಹೊತ್ತು ತರುವುದೇ ದೊಡ್ಡ ಕಾಯಕ...

ರಹಮತ್ ತರೀಕೆರೆ

ಹಿಮಾಲಯದ ಪರ್ವತಾಗ್ರದಲ್ಲಿ ನೆಲೆಸಿರುವ ಜೋಶಿಮಠ ಎಂಬ ಪಟ್ಟಣದಿಂದ ದುರಂತದ ಸುದ್ದಿಗಳು ಬರುತ್ತಿವೆ. ಊರ ಕೆಳಗಿನ ನೆಲ ಕುಸಿಯುತ್ತಿದೆ. ಮನೆಗಳು ಸೀಳೊಡೆಯುತ್ತಿವೆ. ಜನರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ದೊಡ್ಡ ಹೋಟೆಲುಗಳನ್ನು ಕೆಡವಲಾಗುತ್ತಿದೆ. ಈ ಹೊತ್ತಲ್ಲಿ ಜೋಶಿಮಠದಲ್ಲಿದ್ದಾಗ ಕಂಡ ಕಲಾತ್ಮಕ ಮನೆಗಳು ನೆನಪಾದವು. ಆಪ್ತವಾಗಿ ಮಾತಾಡುವ ಮಂದಿ ಮುಂದೆ ಸುಳಿದರು.

ಜೋಶಿಮಠವು 10 ಸಾವಿರ ಅಡಿಗಿಂತಲೂ ಮೇಲಿರುವ ಬದರಿನಾಥ, ಭಾರತದ ಕೊನೇಹಳ್ಳಿ ಮಾನಾ, ಹೂವಿನಕಣಿವೆ, ಗುರುದ್ವಾರ ಹೇಮಕುಂಡಸಾಹೇಬ್ ಮೊದಲಾದ ಪ್ರಸಿದ್ಧ ತಾಣಗಳಿಗೆ ಹೋಗುವ ಎಡೆಯಲ್ಲಿ ಕೈಕಂಬದಂತೆ ಸಿಗುವ ಊರು. ಕೆಳಹಿಮಾಲಯದ ಬಯಲು ಪ್ರದೇಶಗಳಿಂದ ಘಾಟಿ ಹತ್ತಿಕೊಂಡು ಏದುಸಿರು ಬಿಡುತ್ತ ಬರುವ ವಾಹನಗಳು ಇಲ್ಲಿ ದಣಿವಾರಿಸಿಕೊಳ್ಳುತ್ತವೆ. ಪ್ರವಾಸಿಗಳಿಗೂ ಯಾತ್ರಾರ್ಥಿಗಳಿಗೂ ಚಾರಣ ಮಾಡುವವರಿಗೂ ಪಾದಯಾತ್ರೆಯಲ್ಲಿ ಬರುವ ಸಾಧುಗಳಿಗೂ ಇದೊಂದು ಬಿಡಾರದ ಜಾಗ.

ಜೋಶಿಮಠವು ಮತ್ತೊಂದು ಕಾರಣಕ್ಕೆ ಮುಖ್ಯ. ಉಪರಿ ಹಿಮಾಲಯದಲ್ಲಿರುವ ಬದರಿ, ಮಾನಾ ಮುಂತಾದ ಊರಿನವರು ಚಳಿಗಾಲದಲ್ಲಿ ಕೆಳಗೆ ಬಂದು ನೆಲೆಸುವ ಸ್ಥಳ ಕೂಡ. ಬದರಿನಾಥನನ್ನೂ ಕೆಳಗೆ ತಂದು ಪೂಜಿಸುವರು. ಸ್ಥಳಾಂತರ ಜೋಶಿಮಠಕ್ಕೆ ಹೊಸತಲ್ಲ. ಆದರೆ ಈಗಿನ ಸ್ಥಳಾಂತರ ಬೇರೆಯೇ ಬಗೆಯದು. ದಿಕ್ಕೆಟ್ಟಿದ್ದು.

ನಮ್ಮ ತಂಡ ಹೂವಿನಕಣಿವೆ ಮತ್ತು ಹೇಮಕುಂಡಸಾಹೇಬ್‌ಗೆ ಚಾರಣಕ್ಕೆಂದು ಹೋದಾಗ ಜೋಶಿಮಠದಲ್ಲಿ ಇಳಿಕೆ ಮಾಡಿತ್ತು. ಹಿಮಾಲಯದ ತಪೋಭಂಗಕ್ಕೆ ಕಾರಣವಾದ ಸಾವಿರಾರು ಕಾಮಗಾರಿಗಳನ್ನು ರಸ್ತೆಯುದ್ದಕ್ಕೂ ನೋಡಿಕೊಂಡು ಜೋಶಿಮಠ ಮುಟ್ಟುವಾಗ ರಾತ್ರಿಯಾಗಿತ್ತು. ನಮ್ಮ ಬಿಡಾರ ಪರ್ವತದ ಕೋಡಿನ ಅಂಚಿನಲ್ಲಿದ್ದು, ಎಲ್ಲೊ ಆಗಸದಲ್ಲಿದ್ದೇವೆಂಬ ಭಾವನೆ ಬರುತ್ತಿತ್ತು.

ಬೆಳಿಗ್ಗೆ ಎದ್ದು ನೋಡಿದರೆ ಇಡೀ ಕಣಿವೆಯಲ್ಲಿ ಬೆಣ್ಣೆಯಂತೆ ತುಂಬಿದ ಮಂಜು. ಅದನ್ನೇ ನಿಟ್ಟಿಸುತ್ತ ಕೂತಿರುವಾಗ ಸೂರ್ಯ ಸೆಣಸಾಟ ಮಾಡಿ ತುಸುವೇ ಹೊರಬಂದ. ಮಂಜು ಸರಿಯುತ್ತ ಮೆಲ್ಲಮೆಲ್ಲನೆ ಪರ್ವತಗಳು ಆಗಸಕ್ಕೇರಿದ ಕೋಡುಗಳನ್ನೂ ಬೃಹದಾಕಾರದ ಮೈಯನ್ನೂ ಕಾಣಿಸಿದವು. ಅಲ್ಲಿದ್ದವರಿಗೆ ಪರ್ವತಗಳ ಹೆಸರು ಕೇಳಿದೆ. ಒಂದರ ಹೆಸರು ಹಾತಿಪಹಾಡ್. ಆನೆಯೊಂದರ ತಲೆಯ ಭಾಗ, ಕಣ್ಣು, ಕಿವಿ ಎಲ್ಲವೂ ಕಾಣುತ್ತದೆ ನೋಡಿ ಎಂದು ವಿವರಿಸಿದರು. ಆನೆನಾಡಿನಿಂದ ಹೋದ ನನಗದು ಆನೆಯಂತೆ ತೋರಲಿಲ್ಲ.

ಜೋಶಿಮಠ ಚೂಪಾಗಿ ಮೇಲೇರಿರುವ ಬೃಹದಾಕಾರದ ಪರ್ವತವೊಂದರ ಇಳಿಜಾರು ಬೆನ್ನಿನ ಮೇಲೆ ಕೂಸುಮರಿಯಂತೆ ನೆಲೆಸಿದೆ. ಪರ್ವತದ ಹೊಟ್ಟೆಗೆ ಹಗ್ಗಸುತ್ತಿದಂತೆ ರಸ್ತೆಗಳು. ಎದುರಿನ ವಾಹನ ಬಂದರೆ ಹಿಂಜರಿದೊ ಮುಂಜರಿದೊ ಜಾಗ ಕೊಡಬೇಕಾದ ಇಕ್ಕಟ್ಟು. ಎದುರಾ ಎದುರು ಮತ್ತೂ ನೀಳವಾದ ಚೂಪಾದ ಪರ್ವತಗಳು. ಇವೆರಡರ ನಡುವೆ ಆಳದಲ್ಲಿ ಬದರಿಯಿಂದ ಬಂದ ಅಲಕನಂದಾ ಹರಿಯುತ್ತದೆ.

ಊರೊಳಗೆ ಅಡ್ಡಾಡಲು ಹೋದೆವು. ರಸ್ತೆಬದಿ ಕಳೆಯೋಪಾದಿಯಲ್ಲಿ ಯಥೇಚ್ಛ ಬೆಳೆದ ಭಂಗಿಗಿಡ. ಭೂಚೆಂಡನ್ನು ಅಂಗೈಯಲ್ಲಿ ಹಿಡಿದು ರಕ್ಷಿಸುವ ಚಿಹ್ನೆಯುಳ್ಳ ನಿರಂಕಾರಿ ಅಖಾಡದ ಬೋರ್ಡು. ಅದರ ಮೇಲೆ 'ಧರಮ್ ತೋಡತಾ ನಹಿ ಜೋಡತಾ ಹೈ, ಖೂನ್ ನಾಡಿಯೋಂ ಬಹೆ, ನಾಲಿಯೋಮೆ ನಹಿ' (ಧರ್ಮ ವಿಭಜಿಸುವುದಿಲ್ಲ, ಜೋಡಿಸುತ್ತದೆ. ನೆತ್ತರು ನಾಡಿಗಳಲ್ಲಿ ಹರಿಯಲಿ, ನಾಲೆಗಳಲ್ಲಿ ಅಲ್ಲ) ಎಂದು ಬರೆದಿತ್ತು. ಜನ ರಸ್ತೆಬದಿ ಹಿತ್ತಲಿಂದ ಕಿತ್ತುತಂದ ತಾಜಾ ಸೇಬು, ಹಸಿಬದಾಮಿ, ಸೊಪ್ಪು, ತರಕಾರಿಯನ್ನು ಬಿಕರಿಗೆ ಇರಿಸಿದ್ದರು. ಕೆಲವರು ಹುಲ್ಲುಹೊರೆ ತರುತ್ತಿದ್ದರು. ಆತಂಕ ಹುಟ್ಟಿಸುವಂತೆ ಕಪ್ಪುಗೂಳಿಯೊಂದು ರಸ್ತೆಗೆ ಅಡ್ಡನಿಂತಿತ್ತು.



ಬದರಿಯತ್ತ ಹೊರಟ ಸಾಧು

ಹಲಗೆ ಗೋಡೆಯ ಹಗುರ ಮನೆ (ಮೇಲಿನ ಚಿತ್ರ) ಕಲಾತ್ಮಕ ಕೆತ್ತನೆಯ ಕಿಟಕಿಗಳ ಸಾಲು (ಕೆಳಗಿನ ಚಿತ್ರ)

ಒಂದು ಮನೆಯ ತಾರಸಿಗೆ ಮತ್ತೊಂದು ಮನೆಯ ಬಾಗಿಲು ಇರುವಂತೆ ಏಣೀಕರಣದ ಬೀದಿಗಳು. ರಸ್ತೆಯ ಸಮಕ್ಕಿರುವ ಚಾವಣಿ ಮೇಲೆ ನಿಂತು ಬಿಸಿಲು ಕಾಸುತ್ತಿದ್ದ ಒಬ್ಬಳು 'ಕಹಾಂಕೆ ಹೋ?' ಎಂದಳು. 'ಕರ್ನಾಟಕ್' ಎಂದೆ. 'ಯಹ್ಲಾಂಕ ಪಾನಿ, ಹವಾ, ಸಬ್ಜಿ, ಫಲ್, ಫೂಲ್ ಸಬ್ ಶುಧ್ ಹೈ' ಎಂದು ಹೆಮ್ಮೆಯಿಂದ ನಕ್ಕಳು. ಪರ್ವತ ಪ್ರದೇಶದ ಜನ ಬಯಲುನಾಡಿನ ಪ್ರವಾಸಿಗಳ ಮುಂದೆ ಈ ಹೇಳಿಕೆಯನ್ನು ಜಂಬದಿಂದ ಮಾಡುವುದು ಸಾಮಾನ್ಯ. ಕೊಂಚ ಆಪ್ತರಾಗಿ ಹತ್ತಿರ ಸರಿದರೆ ನಿಧಾನಕ್ಕೆ ಹಿಮಪಾತ, ಥಂಡಿ, ಭೂಕಂಪ, ಮಳೆ, ಅನಾರೋಗ್ಯದ ಸಂಚಿ ಬಿಚ್ಚುವರು. ಚಿಕ್ಕವಯಸ್ಸಿಗೆ ಆಕೆಯ ಹಲ್ಲು ಕಪ್ಪಾಗಿದ್ದವು. ಕೆಲವು ಬಿದ್ದುಹೋಗಿದ್ದವು. ವಿನೋದದಿಂದ ಹೇಳಿದೆ: 'ನಮ್ಮಲ್ಲಿ ಗಾಳಿ, ನೀರು ಇಲ್ಲಿನಷ್ಟು ತಾಜಾ ಇಲ್ಲ ನಿಜ. ಆದರೆ ನಿಮ್ಮಲ್ಲಿರುವಂತೆ ಭೂಕಂಪ ಮತ್ತು ಹಲ್ಲುಗಳ ಸಮಸ್ಯೆ ಕಡಿಮೆ' ಎಂದೆ. ಆಕೆ ನಗಲಿಲ್ಲ.

ನಮ್ಮ ಸಹಚಾರಣಿಗ ವೈದ್ಯಮಿತ್ರರು ಹಿಮಾಲಯದ ಜನರಿಗೆ ದಂತ ಮತ್ತು ಕೀಲುಗಳ ಸಮಸ್ಯೆಗೆ ಕಾರಣವನ್ನು ವಿವರಿಸಿದರು. ಹಿಮಾಲಯದ ಚಾರಣದಲ್ಲಿ ಹಳ್ಳಿಯ ಜನ 'ಔಷಧಿಯಿದ್ದರೆ ಕೊಟ್ಟುಹೋಗಿ' ಎಂದು ಕೇಳುತ್ತಿದ್ದುದು ನೆನಪಾಯಿತು. ನಗರೀಕರಣದ ಕಾಯಿಲೆಗಳಿಂದ ಚೇತರಿಸಿಕೊಳ್ಳಲು ಹಿಮಾಲಯಕ್ಕೆ ಹೋಗುವ ನಾವು; ನಮ್ಮಿಂದ ತಮ್ಮ ಬೇನೆಗೆ ಮದ್ದುಬೇಡುವ ಪರ್ವತವಾಸಿಗಳು. ವೈರುಧ್ಯ.

ಜೋಶಿಮಠದ ನರಸಿಂಗ ಗುಡಿಯ ಆಸುಪಾಸು ಹಳಗಾಲದ ಕಲಾತ್ಮಕ ಮನೆಗಳು ಕಂಡವು. ದೇವದಾರು ಚೇಗಿನ ತೊಲೆ ಮತ್ತು ಕಲ್ಲುಗಳನ್ನು ಅಳವಡಿಸಿ ಮಣ್ಣುಮೆತ್ತಿದ ಗೋಡೆಗಳು; ಕಲ್ಲುಚಪ್ಪಡಿಯ ಚಾವಣಿ. ಚಳಿಗೆ ಬಾಗಿಲು ತೆಗೆಯದೆ ವ್ಯವಹರಿಸುವುದಕ್ಕೊ ಅಥವಾ ಉಸಿರಾಟಕ್ಕೆ ಬೇಕಾದ ಗಾಳಿಯಾಟಕ್ಕೊ ಗೋಡೆಗಳಲ್ಲಿ ಅವಳವಡಿಸಿರುವ ಕಿರುಗಿಂಡಿಗಳು.

ಕಬ್ಬಿಣ-ಸಿಮೆಂಟಿಲ್ಲದೆ ಸ್ಥಳೀಯ ಕಲ್ಲು-ಮಣ್ಣು-ಕಟ್ಟಿಗೆಗಳಿಂದ ಮನೆಕಟ್ಟುವ ವಾಸ್ತುಶಿಲ್ಪದ ಅಪೂರ್ವ ಈ ಪಳೆಯುಳಿಕೆಗಳು, ಬೆಚಿರಾಗ್ ಹಳ್ಳಿಯನ್ನು ನೆನಪಿಸಿದವು. ಜನವಾಸವಿರುವ ಕೆಲವು ಮನೆಗಳ ಗೋಡೆಗಳಲ್ಲೂ ಸೀಳು ಕಂಡಿತು. ಆದರೆ ಕಲ್ಲಿನಲ್ಲಿ ಗೇದಿರುವ ಪ್ರಾಚೀನ ಗುಡಿಯ ಗೋಪುರ ಅಲುಗಿರಲಿಲ್ಲ. ಶಿಥಿಲವಾಗಿರುವ ಈ ಕಲಾತ್ಮಕ ಮನೆಗಳನ್ನು ಪಾಳುಬಿಟ್ಟು, ಜನ ಪಕ್ಕದಲ್ಲೇ ಭದ್ರವಾದ ಕಾಂಕ್ರೀಟ್ ಮನೆಗಳನ್ನು ಕಟ್ಟಿಕೊಂಡಿದ್ದರು.

ಜೋಶಿಮಠ ಭೂಕಂಪನದ ಪ್ರದೇಶ. ಒಳಗೆ ಟೊಳ್ಳಾಗಿರುವ ಹಿಮಾಲಯದ ರಚನೆಯೊಳಗೇ ಸಡಿಲತನವಿದೆ. ಅದರ ಮೇಲೆ ಕಟ್ಟಿಗೆಗೋಡೆ ಮಾಡಿನ ಹಗುರ ಮನೆಗಳನ್ನು ಬಿಟ್ಟುಕೊಟ್ಟು, ಸೌಂದರ್ಯವಿಲ್ಲದ ಕಾಂಕ್ರೀಟ್ ಕಟ್ಟಡಗಳ ಒಜ್ಜೆಯನ್ನು ಹೇರಲಾಗಿದೆ. ಮನೆಗೆ, ರಸ್ತೆಗೆ ಮಾಡುವ ಅಗೆತ ಬಗೆತಗಳಿಂದಾದ ಬಿರುಕುಗಳಿಂದ ಹೊಟ್ಟೆಯೊಳಗೆ ಸೇರಿದ ನೀರು, ಊರಿನ ಸಮೇತ ಪರ್ವತವನ್ನೇ ಕುಸಿತಕ್ಕೆ ಈಡುಮಾಡಿದೆ. ಮಡಿಕೇರಿಯ ಭೂಕುಸಿತಕ್ಕೂ ಇಂಥಹುದೇ ಕಾರಣ ಕೊಡಲಾಗಿತ್ತು. ಪರ್ವತಗಳಿಗೆ ಚಲಿಸಲಾರದ್ದು, ದೃಢವಾದುದು ಎಂಬರ್ಥದಲ್ಲಿ 'ಅಚಲ' ಎನ್ನಲಾಗುತ್ತದೆ. ಈಗ ಈ ಅಚಲಗಳೂ ಚಲಿಸುವ ಅಚಲ ನಿರ್ಧಾರ ಮಾಡಿದಂತಿವೆ.

ತಪೋವನದ ವಿದ್ಯುದಾಗಾರಕ್ಕಾಗಿ ಕೊರೆದ ಸುರಂಗವೇ ಇದಕ್ಕೆಲ್ಲ ಕಾರಣ ಎನ್ನುತ್ತಿದ್ದಾರೆ ಸ್ಥಳೀಯರು. ನಿಸರ್ಗದ ಸಹಜ ಲಯವನ್ನು ಅರಿತು, ಅದನ್ನು ಹೆಚ್ಚು ಭಂಗಗೊಳಿಸದೆ ಬಾಳುವ ಕಲೆಯನ್ನು ಕಳೆದುಕೊಂಡ 'ಅಭಿವೃದ್ಧಿ' ಕಾಮಗಾರಿಯ ಫಲವನ್ನು ಎಲ್ಲರೂ ಅನುಭವಿಸಬೇಕಾಗಿದೆ. ಹಿಮಪಾತಕ್ಕೆ ಹೆದರಿ ಸುರಕ್ಷಿತ ತಾಣವೆಂದು ಮೇಲ್ ಹಿಮಾಲಯದ ಜನರಿಗೆ ಆಶ್ರಯಕೊಟ್ಟಿದ್ದ ಊರೀಗ, ತಾನೇ ನಿರಾಶ್ರಿತವಾಗಿದೆ. ನಾವು ನೋಡಿದ ಪ್ರಾಚೀನ ಮನೆಗಳು ಈಗ ಉಳಿದಿದ್ದಾವೋ ಇಲ್ಲವೋ?

ಕತ್ತೆ ಸಂಚಾರ...

1ನೇ ಪುಟದಿಂದ...

ಶತಮಾನಗಳಿಂದಲೂ ಜನವಸತಿ ಪ್ರದೇಶವಾಗಿರುವ ಈದ್ರಾದಲ್ಲಿ ಬೆಟ್ಟಗುಡ್ಡಗಳೇ ಪ್ರಮುಖ. ಕಲ್ಲುಬಂಡೆಗಳ ನಡುವಿನ ಜಾಗವನ್ನು ಹುಡುಕಿ, ಮನೆ ಕಟ್ಟಿಕೊಂಡವರು ಇಲ್ಲಿನ ಜನ. ಈ ದ್ವೀಪಕ್ಕೆ ಶತಮಾನಗಳ ಇತಿಹಾಸ ಇರುವುದರಿಂದ, 'ಪರಂಪರೆ' ಪಟ್ಟವೂ ಅಂಟಿಕೊಂಡಿದೆ. ಇದನ್ನು ಹಾಗೇ ಉಳಿಸಲು ಸ್ಥಳೀಯ ಆಡಳಿತ ವಿಧಿಸಿದ ನಿಯಮಗಳಲ್ಲಿ ವಾಹನ ಸಂಚಾರ ನಿಷೇಧವೂ ಒಂದು.

ಪಟ್ಟಣದಲ್ಲಿನ ರಸ್ತೆಗಳು ತೀರಾ ಇಕ್ಕಟ್ಟು ಹಾಗೂ ಏರಿಳಿತದಿಂದ ಕೂಡಿವೆ. ಕಲ್ಲು ದಾರಿಯಲ್ಲಿ ಸಾಗುವುದು ವಾಹನಗಳಿದ್ದರೂ ಅಸಾಧ್ಯ. ಇದಕ್ಕಾಗಿ ಕತ್ತೆ, ಕುದುರೆ ಹಾಗೂ ಹೇಸರಗತ್ತೆಗಳೇ ಸಂಚಾರಕ್ಕೆ ಮುಖ್ಯ ಆಧಾರ. ಕೆಲವೊಂದಷ್ಟು ಭವ್ಯ ಮಹಲುಗಳು, ಆಕರ್ಷಕ ಕಟ್ಟಡಗಳ ಎದುರಿನ ರಸ್ತೆಗಳಲ್ಲಿ ಕತ್ತೆಗಳಷ್ಟೇ ರಾಜಗಾಂಭೀರ್ಯದಿಂದ ಸಾಗುವುದನ್ನು ನೋಡುವುದೇ ಚೆಂದ.

ಪ್ರವಾಸೋದ್ಯಮ, ಈದ್ರಾದ ಆದಾಯ ಮೂಲ. ಅಥೆನ್ಸ್‌ಗೆ ಬಂದವರು ಒಂದು ದಿನದ ಪ್ರವಾಸಕ್ಕೆಂದು ಈದ್ರಾಕ್ಕೆ ಭೇಟಿ ಕೊಡುವುದು ಸಾಮಾನ್ಯ. ಮೋಟರ್ ಬೋಟ್‌ಗಳು ಅಥೆನ್ಸ್‌ನಿಂದ ಒಂದೂವರೆ ತಾಸಿನಲ್ಲಿ ಈ ತಾಣ ತಲುಪುತ್ತವೆ. ಇನ್ನು, ದಿನಗಟ್ಟಲೇ ಇಲ್ಲಿ ಇರುವ ಪ್ರವಾಸಿಗರಿಗೆ ಹೋಟೆಲ್ ಸೌಲಭ್ಯವೂ ಇದೆ. ಆದರೆ, ಕಡಿಮೆ ಸಂಖ್ಯೆಯಲ್ಲಿರುವ ಹೋಟೆಲ್‌ಗಳ ದರ ದುಬಾರಿ ಎಂಬುದೂ ನಿಜ.

ನಿಗದಿತ ಬೆಲೆ ತೆತ್ತು, ಹೋಟೆಲ್ ರೂಮ್ ಕಾಯ್ದಿರಿಸಿ ಈದ್ರಾ ಬಂದರಿಗೆ ಬಂದರೆ ಅಲ್ಲಿಂದ ಹೋಟೆಲ್ ತಲುಪುವಷ್ಟರಲ್ಲಿ ಸುಸ್ತಾಗಿರುತ್ತದೆ. ಕಾರಣ- ಲಗೇಜ್ ಒಯ್ಯಲು ಕತ್ತೆ, ಕುದುರೆಗಳಿಗೆ ಕೊಡಬೇಕಾದ ಬಾಡಿಗೆ ಮತ್ತು ನಡೆಯುತ್ತ ಹೋಟೆಲ್ ತಲುಪುವ ಆಯಾಸ. ಉಳ್ಳವರು ಇನ್ನಷ್ಟು ಶುಲ್ಕ ತೆತ್ತು, ತಾವೂ ಕುದುರೆ, ಹೇಸರಗತ್ತೆ ಮೇಲೆ ಕೂತು ರೂಮು ತಲುಪುತ್ತಾರೆ. ಚಾರಣದ ರೂಢಿಯಿದ್ದವರಿಗೆ ಇದೇನೂ ಕಷ್ಟವಲ್ಲ.

ಬೆಳಿಗ್ಗೆ ಮತ್ತು ಸಂಜೆ ಹೊತ್ತು ಸಾಗರ ತಟದ ಮರಳಿನಲ್ಲಿ ಆಟೋಟ, ಸ್ನಾನ, ವಿರಾಮ, ಮದ್ಯದ ಸಮಾರಾಧನೆಯಂಥ ಚಟುವಟಿಕೆಗಳು ಕಾಣುತ್ತವೆ; ಆದರೆ ಮಧ್ಯಾಹ್ನದ ಅವಧಿಯಲ್ಲಿ ಈದ್ರಾ ಬಿಕೋ ಎನ್ನುತ್ತಿರುತ್ತದೆ. ಚಾರಣ ಮಾಡುವವರು ಕಲ್ಲುಗಳ ದಾರಿಯಲ್ಲಿ ಹೆಜ್ಜೆ ಮೇಲೆ ಹೆಜ್ಜೆಯಿಟ್ಟು ಬೆಟ್ಟದ ತುದಿ ತಲುಪಿ, ಮತ್ತೆ ವಾಪಾಸಾಗಲು ಆರೆಂಟು ತಾಸುಗಳೇ ಬೇಕಂತೆ. 'ನಿಧಾನವಾಗಿ ನಡೆಯುತ್ತ ಹಳೆಯ ಮಹಲುಗಳನ್ನು ನೋಡುತ್ತ ಮುಂದೆ ಸಾಗುವ ಅನುಭವ ಮುದ ನೀಡುತ್ತದೆ' ಎನ್ನುತ್ತಾರೆ, ಯೂರೋಪ್ ಪ್ರವಾಸಿಗ ಇರ್ವಿನ್. ಇಲ್ಲಿಗೆ ಎರಡು ವರ್ಷಕ್ಕೊಮ್ಮೆ ಬಂದು ತಿಂಗಳ ಕಾಲ ಇರುವ ಇವರಿಗೆ, ಕಡಲದಂಡೆಯಷ್ಟೇ ಆಕರ್ಷಣೆ ಮಹಲುಗಳ ಮೇಲೂ ಇದೆಯಂತೆ!

ಪರಂಪರೆಯನ್ನು ಜತನದಿಂದ ಕಾಪಾಡುವ ಈದ್ರಾದ ಜನತೆಗೆ ತಮ್ಮ ತಾಣದ ಮೇಲೆ ಅನುಪಮ ಪ್ರೀತಿ. ಪ್ರವಾಸೋದ್ಯಮದಿಂದ ಸಾಕಷ್ಟು ಆದಾಯವೂ ಸಿಗುವುದರಿಂದ, ಇದರ ಸೌಂದರ್ಯಕ್ಕೆ ಧಕ್ಕೆ ತರದಂತೆ ನೋಡಿಕೊಳ್ಳುತ್ತಿದ್ದಾರೆ. ಹಳೆಯ ಕಟ್ಟಡಗಳ ದುರಸ್ತಿ ಅಥವಾ ನವೀಕರಣದ ಸಮಯದಲ್ಲಿ ನಾಜೂಕಿನಿಂದ ಕೆಲಸ ಮಾಡಲಾಗುತ್ತದೆ. ಇದಕ್ಕೆ ಸ್ಥಳೀಯ ಆಡಳಿತದ ಸಹಕಾರವೂ ಸಾಕಷ್ಟಿದೆ.

ಸುಸ್ಥಿರ ಪ್ರವಾಸೋದ್ಯಮದ ಸವಾಲು: ಕಲ್ಲಿನ ಗೋಡೆಗಳು, ಕೆಂಪು ಹೆಂಚುಗಳ ಮನೆಗಳು ಈದ್ರಾದ ನೋಟಕ್ಕೆ ರಂಗುತಂದಿವೆ. ಐವತ್ತು ವರ್ಷಗಳ ಹಿಂದಿನವರೆಗೂ ತನ್ನ ಪಾಡಿಗೆ ತಾನಿದ್ದ ಈ ದ್ವೀಪಕ್ಕೆ ಪ್ರವಾಸಿಗರ ಭರಾಟೆ ಹೆಚ್ಚುತ್ತಿದೆ. ಹಾಗೆಂದು ಇಲ್ಲಿ ವಿಮಾನ ನಿಲ್ದಾಣವಾಗಲೀ, ರೈಲು ನಿಲ್ದಾಣವಾಗಲೀ ಇಲ್ಲ. ಇರುವುದೊಂದೇ ದಾರಿ- ಜಲಸಾರಿಗೆ. ಬಂದರು ತಲುಪುವ ದೋಣಿಯಿಂದ ಇಳಿದರೆ, ಕಚ್ಚಾ ರಸ್ತೆಯೂ ಅದರಲ್ಲಿ ವಾಹನಗಳ ನಿಷೇಧವೂ ಎದುರಾಗುತ್ತದೆ! ಹಾಗಿದ್ದರೂ ಮನಸ್ಸಿಗೆ ಮುದ ಕೊಡುವ ಈ ತಾಣದತ್ತ ಪ್ರವಾಸಿಗರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ.

ಇಲ್ಲಿನ ಸಣ್ಣಪುಟ್ಟ ಹೋಟೆಲ್, ಬಾರ್ ಹಾಗೂ ತಿನಿಸುಗಳ ಮಳಿಗೆಯನ್ನು ನಿರ್ವಹಿಸುವುದು ಬಹುತೇಕ ಸ್ಥಳೀಯರು. ಅವರಿಗೆ ಇದೇ ಪ್ರಮುಖ ಆದಾಯ. ಈದ್ರಾಕ್ಕೆ ಪ್ರತಿಯೊಂದು ಪದಾರ್ಥವೂ ಹೊರಗಿನಿಂದಲೇ ಬರಬೇಕು. ಸ್ಥಳೀಯರಿಗೆ ನಿತ್ಯ ಬೇಕಾಗುವ ಊಟೋಪಚಾರದ ಪದಾರ್ಥಗಳನ್ನು ಹಡಗುಗಳ ಮೂಲಕ ಇಲ್ಲಿಗೆ ತರಲಾಗುತ್ತದೆ. ಅಷ್ಟೇ ಏಕೆ, ಮೆಗಾಲೊಪೊಲಿಸ್ ಎಂಬಲ್ಲಿ ಉತ್ಪಾದಿಸಿ, ಸಮುದ್ರದ ಕೆಳಗೆ ಹಾಕಿರುವ ತಂತಿಗಳ ಮೂಲಕ ವಿದ್ಯುತ್ ಅನ್ನು ದ್ವೀಪಕ್ಕೆ ಪೂರೈಸಲಾಗುತ್ತಿದೆ. 2018ರಲ್ಲಿ ತಂತಿ ತುಂಡಾಗಿ, ವಾರಗಟ್ಟಲೇ ವಿದ್ಯುತ್ ಪೂರೈಕೆ ಸ್ಥಗಿತಗೊಂಡ ನಿದರ್ಶನವೂ ಇದೆ.

'ಪಾರಂಪರಿಕ ತಾಣ' ಹಣೆಪಟ್ಟಿ ಅಂಟಿಸಿಕೊಂಡ ಕಾರಣದಿಂದಾಗಿ, ಮನೆಗಳ ಚಾವಣಿ ಮೇಲೆ ಸೌರಫಲಕ ಅಳವಡಿಕೆಗೂ ನಿಷೇಧವಿದೆ (ಸೌಂದರ್ಯಕ್ಕೆ ಧಕ್ಕೆ ಎಂಬುದು ಕಾರಣ!). ಸಂಚಾರಕ್ಕೆ ಕಾರು, ಬೈಕ್ ನಿಷೇಧ ವಿಧಿಸಲಾಗಿದೆ (ಮನೆ, ಹೋಟೆಲ್‌ಗಳ ತ್ಯಾಜ್ಯ ವಿಲೇವಾರಿಗೆ ಎರಡು ಟ್ರಕ್‌ಗಳಿಗೆ ಮಾತ್ರ ಅವಕಾಶವಿದೆ). ಇದಕ್ಕಾಗಿ, ಜನರು ಅಗತ್ಯ ಪದಾರ್ಥಗಳನ್ನು ತಂತಮ್ಮ ಮನೆಗಳಿಗೆ ಒಯ್ಯಲು ದುಬಾರಿ ಶುಲ್ಕ ತೆತ್ತು ಕತ್ತೆಗಳನ್ನು ಆಶ್ರಯಿಸಬೇಕು. ಅನಾರೋಗ್ಯದ ಸಂದರ್ಭದಲ್ಲಿ ನಡೆದುಕೊಂಡು ಆಸ್ಪತ್ರೆಗೆ ಹೋಗುವುದೇ ಒಂದು ಸಾಹಸ. ಉಳಿದಂತೆ, ಕಾಯಿಲೆ ಪೀಡಿತರು, ಅಶಕ್ತರನ್ನು ಸ್ಟ್ರೆಚರ್‌ನಲ್ಲಿ ಮಲಗಿಸಿ ಕೆಳಗಿನ ಬಂದರಿಗೆ ಕರೆದೊಯ್ದು, ಅಲ್ಲಿಂದ ಸಮೀಪದ ಪಟ್ಟಣಗಳ ಆಸ್ಪತ್ರೆಗೆ ತಲುಪಿಸಬೇಕಾದರೆ ಸಾಕುಬೇಕಾಗುತ್ತದೆ. 'ಮನೆಗಳ ದುರಸ್ತಿಗೆ ಕಲ್ಲು, ಇಟ್ಟಿಗೆ, ಸಿಮೆಂಟ್ ಬೇಕೆಂದರೆ ಅದಕ್ಕಾಗಿ ನಾವು ಪಡುವ ಪಾಡು ಯಾರಿಗೂ ಬೇಡ. ಪದಾರ್ಥಗಳ ದರಕ್ಕಿಂತ ಮೂರ್ನಾಲ್ಕು ಪಟ್ಟು ಹೆಚ್ಚು ಈ ಸಾಗಣೆಗೆಂದೇ ಖರ್ಚಾಗುತ್ತದೆ' ಎಂಬುದು ನಿವಾಸಿಯೊಬ್ಬನ ಅಳಲು.

ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಪ್ರವಾಸಿಗರ ಸಂಖ್ಯೆ ಹೆಚ್ಚು. ಆ ಸಮಯದಲ್ಲಿ ಸಾಗಣೆ, ಪ್ರಯಾಣ ವೆಚ್ಚವೂ ಹೆಚ್ಚು. ಈ ಅವಧಿಯಲ್ಲಿ ಈದ್ರಾ ಒತ್ತಡದಿಂದ ಬಳಲುತ್ತದೆ. ದಿನವಿಡೀ ಉತ್ಪಾದನೆಯಾಗುವ ಟನ್‌ಗಟ್ಟಲೇ ಹಾನಿಕಾರಕ ತ್ಯಾಜ್ಯವನ್ನು ದೂರಕ್ಕೆ ಒಯ್ದು, ಸುಡಲಾಗುತ್ತದೆ. ಈ ಬೂದಿಯು ಸಮುದ್ರವನ್ನು ನೇರವಾಗಿ ಸೇರಿ, ಜಲಚರಗಳಿಗೆ ಅಪಾಯ ಉಂಟು ಮಾಡುತ್ತದೆ ಎಂದು ಈದ್ರಾ ಪ್ರವಾಸೋದ್ಯಮ ಕುರಿತು ನಡೆಸಿದ ಅಧ್ಯಯನವೊಂದು ಆತಂಕ ವ್ಯಕ್ತಪಡಿಸಿದೆ. ಜೊತೆಗೆ ಈದ್ರಾ ದ್ವೀಪದಲ್ಲಿ ಮಾಡಬಹುದಾದ ಸುಸ್ಥಿರ ಪ್ರವಾಸೋದ್ಯಮದ ಸಾಧ್ಯತೆಗಳನ್ನು ಪಟ್ಟಿ ಮಾಡಿದೆ.

ಇತ್ತ ಈದ್ರಾ ಪರಿಸರಕ್ಕೂ ಧಕ್ಕೆ ಆಗಬಾರದು; ಅತ್ತ ಪ್ರವಾಸಿಗರಿಂದ ಬರುವ ಆದಾಯಕ್ಕೂ ಕೊಕ್ಕೆ ಬೀಳಬಾರದು. ಅಂಥ ಸುಸ್ಥಿರ ಪ್ರವಾಸೋದ್ಯಮದ ಹುಡುಕಾಟದಲ್ಲಿ ಸ್ಥಳೀಯ ಆಡಳಿತ ಚಿಂತನೆ ನಡೆಸಿದೆ.

ಪೂರಕ ಮಾಹಿತಿ: ಬಿಬಿಸಿ ಮತ್ತು ಯೂಟ್ಯೂಬ್ ವರದಿಗಳು

ಮುನ್ನೋಟ 15-01-2023 ರಿಂದ 21-01-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಮಾತುಗಳಲ್ಲಿ ಕಾಠಿಣ್ಯತೆ ಇರುತ್ತದೆ. ನಿಮ್ಮ ನಡವಳಿಕೆ ತೀರಾ ವೈಯಕ್ತಿಕವಾಗಿರುತ್ತದೆ. ಸಂಸಾರದಲ್ಲಿ ಸ್ವಲ್ಪ ಕಾವೇರಿದ ವಾತಾವರಣ ಮೂಡಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ. ವೃತ್ತಿಯಲ್ಲಿ ಇದ್ದ ಗೋಜಲುಗಳು ಸ್ವಲ್ಪಮಟ್ಟಿಗೆ ನಿವಾರಣೆಯಾಗುತ್ತದೆ. ಸ್ವಂತ ಆರೋಗ್ಯ ಅಥವಾ ಹಿರಿಯರ ಆರೋಗ್ಯಕ್ಕಾಗಿ ಹಣ ಖರ್ಚು ಮಾಡುವಿರಿ. ದೈವ ಕಾರ್ಯಗಳಿಗಾಗಿ ಹಣ ಖರ್ಚಾಗುವುದು.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಸಾಹಸ ಪ್ರವೃತ್ತಿ ಹೆಚ್ಚಾಗುತ್ತದೆ. ಅನಿರೀಕ್ಷಿತ ಧನಾಗಮನ ಆಗಬಹುದು. ಸೋದರಿಯರೊಡನೆ ಕಾವೇರಿದ ಮಾತುಗಳಾಗಬಹುದು. ತಂದೆಯಿಂದ ಪಿತ್ರಾರ್ಜಿತ ಆಸ್ತಿ ಬರುವ ಸೂಚನೆ ಇದೆ. ವಿದ್ಯಾರ್ಥಿಗಳಿಗೆ ಇದ್ದ ಸವಲತ್ತು ಕಡಿಮೆಯಾಗಬಹುದು. ಕಣ್ಣಿನ ಬಗ್ಗೆ ಎಚ್ಚರವಹಿಸಿರಿ. ಪಶುಸಂಗೋಪನೆ ಮಾಡುವವರು ಪಶುಗಳ ಆರೋಗ್ಯದ ಬಗ್ಗೆ ಹೆಚ್ಚು ಗಮನ ಕೊಡಬೇಕು.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ನಿಮ್ಮ ವ್ಯಾಪಾರ ವ್ಯವಹಾರಗಳ ಬಗ್ಗೆ ಹೆಚ್ಚು ಚಿಂತನೆ ಮಾಡುವಿರಿ. ಆದಾಯವು ನಿಮ್ಮ ಖರ್ಚನ್ನು ತುಂಬಿಸುವಷ್ಟು ಇರುತ್ತದೆ. ಬಂಧುಗಳ ನಡುವೆ ನಿಮ್ಮ ಗೌರವದ ಮಟ್ಟ ಹೆಚ್ಚಿರುತ್ತದೆ. ವಿದ್ಯಾರ್ಥಿಗಳು ಈಗ ಮಧ್ಯಮ ಫಲಿತಾಂಶದ ನಿರೀಕ್ಷೆಯನ್ನು ಮಾಡಬಹುದು. ಹರಿತವಾದ ವಸ್ತುಗಳಿಂದ ಗಾಯವಾಗಬಹುದು, ಎಚ್ಚರ ವಹಿಸಿರಿ. ಸಂಗಾತಿ ಜೊತೆ ಸೇರಿ ಮಾಡಿದ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವಿರುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಯಾವುದೇ ಕೆಲಸದಲ್ಲೂ ಸ್ವಲ್ಪ ದ್ವಂದ್ವ ನಿರ್ಧಾರಗಳಿರುತ್ತವೆ. ಸಂಗಾತಿ ಆದಾಯದಲ್ಲಿ ಸ್ವಲ್ಪಮಟ್ಟಿನ ಹೆಚ್ಚಳವನ್ನು ಕಾಣಬಹುದು. ಸಮೀಪದ ಬಂಧುಗಳಲ್ಲಿ ಯಾರಿಗಾದರೂ ಅನಾರೋಗ್ಯ ಸಂಭವಿಸುವ ಸಂದರ್ಭವಿದೆ. ಆಸ್ತಿ ವಿಚಾರದಲ್ಲಿ ಸ್ಪಷ್ಟ ನಿರ್ಧಾರಗಳಿರುವುದಿಲ್ಲ. ಕ್ರೀಡಾಪಟುಗಳಿಗೆ ಅಭ್ಯಾಸ ಮಾಡಲು ಉತ್ತಮ ಸೌಲಭ್ಯಗಳು ದೊರೆಯುತ್ತವೆ ಹಾಗೂ ಪ್ರೋತ್ಸಾಹ ಧನ ದೊರೆಯುತ್ತದೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ನಿಮ್ಮ ನಡವಳಿಕೆ ಎಲ್ಲರ ಗಮನ ಸೆಳೆಯುತ್ತದೆ. ವೃತ್ತಿಯಲ್ಲಿ ನಿಮ್ಮ ಕೆಲಸಗಳಿಗೆ ಹೆಚ್ಚಿನ ಬೆಲೆ ದೊರೆತು ನಾಯಕತ್ವ ಬೆಳೆಯತೊಡಗುತ್ತದೆ. ಗಣಿತವನ್ನು ಅಭ್ಯಾಸ ಮಾಡುತ್ತಿರುವವರಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಸರ್ಕಾರಿ ಸಾಲಗಳನ್ನು ಪಡೆದು ಉಳಿದ ಕೈ ಸಾಲಗಳನ್ನು ತೀರಿಸಬಹುದು.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಹಣಕಾಸಿನ ಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸುತ್ತದೆ. ಆದರೂ ಖರ್ಚಿಗೆ ಮಿತಿಹೇರುವುದು ಅತಿ ಅಗತ್ಯ. ಸಮಯಕ್ಕೆ ತಕ್ಕಂತೆ ಬದಲಾಗುವ ಸ್ವಭಾವದವರೂ ಸಿಕ್ಕಿಬೀಳುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಸಾಮಾನ್ಯ ಯಶಸ್ಸು ಇರುತ್ತದೆ. ಆಹಾರ ವ್ಯತ್ಯಾಸದಿಂದ ಅನಾರೋಗ್ಯ ತಲೆದೋರಬಹುದು. ಶಾಲಾ ಶಿಕ್ಷಕರಿಗೆ ಬಯಸುತ್ತಿದ್ದ ಜಾಗಕ್ಕೆ ವರ್ಗಾವಣೆ ಸಿಗುವ ಸಾಧ್ಯತೆಗಳಿವೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖ 1,2,3**
ಬಹಳ ಪ್ರಶಾಂತವಾಗಿರಲು ಸಾಕಷ್ಟು ಪ್ರಯತ್ನಪಡುವಿರಿ. ಸಂಗೀತಗಾರರು ಅಭ್ಯಾಸದಲ್ಲಿ ಹೆಚ್ಚು ತೊಡಗಿಸಿಕೊಳ್ಳುವರು. ನಿರೀಕ್ಷಿತ ಧನ ಆದಾಯ ಇಲ್ಲದಿದ್ದರೂ ತೊಂದರೆ ಇಲ್ಲ. ವ್ಯವಹಾರಿಕ ನಡವಳಿಕೆಯಿಂದ ಪಾಲುದಾರರನ್ನು ಸೆಳೆಯುವಿರಿ. ಭೂ ವ್ಯವಹಾರ ಮಾಡುವವರಿಗೆ ಸ್ವಲ್ಪಮಟ್ಟಿನ ಪ್ರಗತಿ ಇರುತ್ತದೆ. ಆಡಳಿತಾತ್ಮಕ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿರುವವರು ಹೆಚ್ಚಿನ ಶ್ರದ್ಧೆವಹಿಸಬೇಕಾದ ಅಗತ್ಯವಿದೆ.

ವೃಶ್ಚಿಕ — **ವಿಶಾಖ 4 ಅನೂರಾಧ, ಜ್ಯೇಷ್ಠ**
ನಿಮ್ಮ ಪ್ರಯತ್ನದಲ್ಲಿ ಹೆಚ್ಚಿನ ನಂಬಿಕೆ ಇಡಿರಿ. ಧನ ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ನಿಮ್ಮ ಶತ್ರುಗಳನ್ನು ಅವರದೇ ತಂತ್ರಗಳಿಂದ ಮಣಿಸುವಿರಿ. ಕುಲುಮೆ ಕೆಲಸ ಮಾಡುವವರಿಗೆ ಹೆಚ್ಚು ಕೆಲಸ ದೊರೆಯುತ್ತದೆ. ವಿದ್ಯಾರ್ಥಿಗಳು ಅಪೇಕ್ಷಿತ ವಿಷಯಗಳ ಬಗ್ಗೆ ಅಭ್ಯಾಸ ಮುಂದುವರಿಸಬಹುದು.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ವ್ಯಾಪಾರ ವ್ಯವಹಾರಗಳಲ್ಲಿ ಬಹಳ ಚತುರತೆಯನ್ನು ಪ್ರದರ್ಶಿಸಿ ಸೂಕ್ತವಾಗಿ ಮುನ್ನಡೆಯುವಿರಿ. ನಿಮ್ಮ ಚತುರತೆಯನ್ನು ಮೆಚ್ಚಿ ನಿಮ್ಮ ಪಾಲುದಾರರು ನಿಮಗೆ ಮುಖ್ಯ ಸ್ಥಾನವನ್ನು ಕೊಡುವರು. ವೆಚ್ಚದಲ್ಲಿ ಸಾಕಷ್ಟು ಕಡಿಮೆ ಮಾಡಿ ವ್ಯವಹಾರವನ್ನು ಲಾಭದತ್ತ ಹೊರಳುವಂತೆ ಮಾಡುವಿರಿ. ನಿಮ್ಮ ಗಟ್ಟಿ ನಿರ್ಧಾರಗಳು ಹಾಗೂ ಕಠಿಣ ಕ್ರಮಗಳು ಪ್ರಶಂಸಿಸಲ್ಪಡುತ್ತವೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ನಿಮ್ಮ ಯೋಜನೆಗಳ ಬಗ್ಗೆ ನೀವು ಸರಿಯಾಗಿ ತಿಳಿದು ನಂತರ ಅದನ್ನು ಇತರರಿಗೆ ತಿಳಿಸುವ ಪ್ರಯತ್ನ ಮಾಡಿರಿ. ಕುಕ್ಕುಟೋದ್ಯಮವನ್ನು ಮಾಡುತ್ತಿರುವವರಿಗೆ ಲಾಭವಿರುತ್ತದೆ. ಗೋವಿನ ಉತ್ಪನ್ನಗಳನ್ನು ಸಂಸ್ಕರಿಸಿ ಮಾರಾಟ ಮಾಡುವವರಿಗೆ ಹೆಚ್ಚು ಬೇಡಿಕೆ ಬರುತ್ತದೆ. ನಿಮ್ಮ ಸಭ್ಯ ನಡವಳಿಕೆಯಿಂದ ಜನರನ್ನು ಗೆಲ್ಲುವಿರಿ. ವಿದೇಶಿ ವಸ್ತುಗಳನ್ನು ತರಿಸಿ ಮಾರಾಟ ಮಾಡಬಹುದು.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಸ್ವಲ್ಪ ಆಲಸಿತನ ಕಾಡಬಹುದು. ಉತ್ತಮ ಮಾತಿನಿಂದ ಜನರನ್ನು ಸೆಳೆಯುವಿರಿ. ವೈರಿಗಳನ್ನು ಮಟ್ಟ ಹಾಕಲು ಹೊಸ ತಂತ್ರ ಹೆಣೆಯುವಿರಿ. ಕೃಷಿ ಮಾಡಲು ಅತಿಯಾದ ಆಸಕ್ತಿ ಮೂಡುತ್ತದೆ. ತೆರಿಗೆ ತಜ್ಞರಿಗೆ ಹೆಚ್ಚು ಬೇಡಿಕೆ ಬರುತ್ತದೆ ಹಾಗೂ ಕೈತುಂಬಾ ಸಂಪಾದನೆ ಇರುತ್ತದೆ. ತಾಯಿಯ ಆರೋಗ್ಯಕ್ಕಾಗಿ ಹೆಚ್ಚಿನ ಶ್ರಮವಹಿಸುವಿರಿ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ವಿದೇಶದಲ್ಲಿರುವವರಿಗೆ ಹೆಚ್ಚಿನ ಧನ ಸಂಪಾದನೆ ಆಗುತ್ತದೆ. ಕಚೇರಿ ಕೆಲಸಗಳಲ್ಲಿ ಚುರುಕುತನ ತೋರಿ ಬಡ್ತಿಯನ್ನು ದೃಢಪಡಿಸಿಕೊಳ್ಳುವಿರಿ. ವೃತ್ತಿಯಲ್ಲಿ ಹೊಸ ಲೆಕ್ಕಾಚಾರಗಳೊಡನೆ ಹೊಸ ಹೆಜ್ಜೆ ಹಾಕುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆಯನ್ನು ಕಾಣಬಹುದು. ಮಕ್ಕಳ ಸಂತೋಷಕ್ಕಾಗಿ ಧನವ್ಯಯ ಮಾಡುವಿರಿ. ಧನ ಆದಾಯವು ಕಡಿಮೆ ಪ್ರಮಾಣದಲ್ಲಿ ಇರುತ್ತದೆ.

ಪದಬಂಧ 2772



ಮೇಲಿನಿಂದ ಕೆಳಕ್ಕೆ

1. ಇವರು ಒಳ್ಳೆಯ ಮಂದಿಯೇ ಸೈ 3
2. ಅಂದವಾಗಿ ಕಾಣುವ ಗುಣ ಸ್ವಭಾವ 3
3. ಚಿತ್ರ ತಯಾರಿಕೆಯಲ್ಲಿ ಎಲ್ಲಾ ದೃಶ್ಯಗಳನ್ನು ಕೂಡಿಸಿ ತೇಪೆಹಾಕುವ ಕೆಲಸ 4
4. ಸಂಕ್ರಾಂತಿಗೆ ಬೆಲ್ಲದ ಜೊತೆ ಬೆರಯುವ ಸಂಸ್ಕೃತ ಎಳ್ಳು 2
6. ಪೀಳಿಗೆಯಿಂದ ಪೀಳಿಗೆಯವರೆಗೆ 6
8. ರಘುವಂಶದ ಬೆಳಕಾದ ಶ್ರೀರಾಮ- ಕೆಳಗಿನಿಂದ ಮೇಲೆ 3
9. ನೀರಿಲ್ಲದೆ ಮಾಡುವ ಕೃಷಿ 5
10. ಊರಿನ ಕಲಾಪಗಳಿಗೊಂದು ದೊಡ್ಡ ಮನೆ 5
11. ಹತೋಟಿಯಲ್ಲಿರುವ ಸಂಖ್ಯೆ 2
12. ವ್ಯಾಕರಣದಲ್ಲಿ 'ನಾನು', ಶ್ರೇಷ್ಠ ವ್ಯಕ್ತಿ 6
14. ಮನಸ್ಸಿನ ಮೊಟಕು ರೂಪ 2
16. ಪತ್ರದಲ್ಲಿ ಪಾವನವಾದುದು 3
19. ಗೆಲುವಿನ ಹಾಡು 4
20. ನಾಲ್ಕು ಕಂಬಗಳ ಮೇಲೊಂದು ಛಾವಣಿಯ ರಚನೆ 3
21. ಅವರ್ಗೀಯ ಪ್ರಥಮ ವ್ಯಂಜನಕ್ಕೆ ಸೇರಿದ ಅಲ್ಪ ಖಾರ 3
23. ತಲೆಕೆಳಕಾದ ಕಾಡು ಹೊಸದಾಗಿದೆ 2

ಎಡದಿಂದ ಬಲಕ್ಕೆ

1. ಕಾಳು ಕಾಸು ಹೇರಳವಾಗಿ ರೈತರ ಕೈ ಸೇರುವ ಸಮಯ 4
3. ಸೂರ್ಯದೇವನ ಸ್ಥಾನ ಪಲ್ಲಟವಾಗಿ ಭೂಮಿಯಲ್ಲಿ ಸಂಭ್ರಮದ ಕ್ರಾಂತಿ 3
5. ಹಣದೊಡತಿಯ ಪ್ರಾಣ ಪ್ರಿಯ 4
7. ಇದು ಮಧ್ಯದ್ದು ಆ ಕಡೆಯದ್ದೂ ಅಲ್ಲ ಈಕಡೆಯದ್ದೂ ಅಲ್ಲ 4
10. ವಯ್ಯಾರದ ಸಂವೇದಿ 3
11. ಹೆಸರಿನ ಸಮರ್ಪಣೆಗೆ ಸಂಖ್ಯೆ ಸೇರಿದೆ 3
12. ಸೂರ್ಯನ ಪಥ ಸಂಚಲನ ತರುವ ಪುಣ್ಯಕಾಲ 4
13. ಸೀರೆಗೆ ಒಪ್ಪುವ ಕುಪ್ಪಸ 3
14. ಸಂಗೀತ ಕೃತಿಗಳಲ್ಲಿ ಅಂತರಂಗವನ್ನು ಕರೆಯುವ ಪರಿ 3
15. ಮದುವೆಗಂಡಿಗೆ ಮಾಡುವ ಮಹಾ ಸೇವೆ 5
17. ಚಟ್ನಿಗೆ ಬೆರೆಸುವ ಸುವಾಸಿತ ಸೊಪ್ಪು 3
18. ವಿರಳವಾದ ಯಜ್ಞ ತದ್ಭವ 3
20. ಶಕ್ತಿಯುತ ಛಂದಸ್ಸಿನ ಸಾಲುಗಳ ಉಚ್ಚಾರದಿಂದ ತುಂಬಿಹೋದದ್ದು 4
22. ಆರು ಮುಖದ ಪಾರ್ವತಿ ತನಯ 4
24. ಮುಖದ ಮತ್ತೊಂದು ರೂಪ 3
25. ಕಷ್ಟ ಕಾರ್ಪಣ್ಯಗಳಿಗೆ ದೊರೆಯುವ ಒಂದು ರೀತಿಯ ಮಾರ್ಗೋಪಾಯ 4

ಪದಬಂಧ ಉತ್ತರ -2771

ಮೇಲಿಂದ ಕೆಳಕ್ಕೆ

1. ಮಂಡಲ 2.ತಿಮಿರ 3.ಪದ್ಮಿನಿ 4.ನೆರಳು 5.ವಿಧೇಯ 6.ವಿಧಾನ 7. ಯಶಸ್ವೀ 8.ಶಿಬಿರ 9.ಶುಭಶ್ರೀ 10.ಕಬೀರ 12.ತಿಲಕ 14.ಅಡವಿ 16.ಕಲಾಪ 17.ಕಪ್ತಾನ 18.ಸಮೀರಾ 20.ರೂಪಕ 21.ದಮನಿ 22.ಜಮಾನ

ಎಡದಿಂದ ಬಲಕ್ಕೆ

1. ಮಂಗಳಾರತಿ 3.ಪರಿವರ್ತನೆ 5.ವಿಚಾರವಿನಿಮಯ 8.ಶಿವಾಯ 9.ಶುನಕ 11.ಸ್ವೀಕೃತಿ 13.ರಸುಅ 15.ಶ್ರೀಕರ 17.ಕಳಂಕ 19.ವಿಶ್ವರೂಪದರ್ಶನ 23.ರಮತಾರಕ 24.ನಿತ್ಯಯೌವ್ವನ

ಕೊಳೆಗೇರಿ ಎಂದೇನೂ ಚಳಿ ಕರುಣೆ ತೋರುವುದೇ? ಗಡಗಡ ನಡುಗುವ ಚಳಿಯಲ್ಲಿ ಅಮ್ಮಂದಿರ ಬೆಚ್ಚನೆಯ ತೋಳಬಂದಿಯಲ್ಲಿ ಆಶ್ರಯ ಪಡೆದಿರುವ ಪುಟಾಣಿಗಳು... ಈ ಗೊರವಜ್ಜನಿಗೆ ವೇಷವೇ ಕವಚ

ಬೆಚ್ಚನೆಯ ಬಿಂಬಗಳು

ಚಿತ್ರಗಳು: ತಾಜುದ್ದೀನ್ ಆಜಾದ್



ತಾಪಮಾನದಲ್ಲಿ ದಿಢೀರ್ ಕುಸಿತ ಕಂಡಿದ್ದರಿಂದ ಈಗ ಎಲ್ಲೆಲ್ಲೂ ಗಡಗಡ ನಡುಗುವ ಚಳಿಯ ಅನುಭವ. ಉತ್ತರ ಭಾರತದಲ್ಲಿ ಚಳಿಯ ತೀವ್ರತೆ ತುಂಬಾ ಹೆಚ್ಚಿದೆ ನಿಜ. ಆದರೆ, ಕುಸಿದ ಉಷ್ಣಾಂಶ ನಮ್ಮ ಕಲಬುರ್ಗಿ, ಬೀದರ್ ಜಿಲ್ಲೆಗಳನ್ನು ನಡುಗಿಸದೇ ಬಿಟ್ಟಿಲ್ಲ. ಒಲೆಯ ಮೇಲಿನಿಂದ ಆಗಷ್ಟೇ ತೆಗೆದು ಲೋಟಕ್ಕೆ ಬಗ್ಗಿಸಿದ ಚಹಾ, ಬಾಯಿಗೆ ಸೇರುವಷ್ಟರಲ್ಲಿ ತಣ್ಣಗಾಗುವುದೇನು ಸುಮ್ಮನೆಯೇ ಮತ್ತೆ? ಕಂಬಳಿ–ಕೌದಿ ಸಾಲದಾದವು ಎಂದು ರಗ್ಗುಗಳೂ ಮೈಮೇಲೆ ಏರಿದರೂ ಚಳಿ ಬಿಡಲೊಲ್ಲದು. ಆದರೆ, ಕಂದಮ್ಮಗಳಿಗೆ ಮಾತ್ರ ಅಮ್ಮನ ಮಡಿಲೇ ಈಗ ಬೆಚ್ಚನೆಯ ತಾಣ. ಚಳಿ ಇದ್ದರೇನು, ಟ್ರಾಫಿಕ್‌ನಲ್ಲಿನ ವಾಹನಗಳಂತೆ ಬದುಕಿನ ವ್ಯಾಪಾರವೇನು ಗಕ್ಕನೆ ನಿಂತು ಬಿಡುವುದೇ?

ಕಂಬಳಿಯಿಂದ ಕೂಡಿದ ವೇಷಭೂಷಣವೇ ಗೊರವರ ವೇಷಧಾರಿಗಳಿಗೆ ರಕ್ಷಣೆ ಕೊಡುವುದರಿಂದ ಉಷ್ಣಾಂಶ 5.5 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದರೂ ಚಳಿಗೆ ಅಂಜದೆ ಲೋಕಾಭಿರಾಮವಾಗಿ ಹರಟುತ್ತಾ ಹೊರಡುವರು. ಕೆಲಸಕ್ಕೆ ಹೊರಟ ಕಾಕಾನಿಗೆ ತಲೆ, ಕಿವಿಗಳನ್ನು ಬೆಚ್ಚಗಿಡಲು ಮಫ್ಲರ್ ಒಂದಿದ್ದರೆ ಸಾಕು. ಮುಖದ ತುಂಬಾ ವಯಸ್ಸಿನ ನೆರಿಗೆಗಳನ್ನು ಹೊತ್ತಿರುವ ಅಜ್ಜಿ, ಹಲವು ದಶಕಗಳ ಈ ಜೀವನ ಯಾತ್ರೆಯಲ್ಲಿ ಇಂತಹ ಎಷ್ಟು ಚಳಿಗಾಲಗಳನ್ನು ಕಂಡಿದ್ದಾಳೋ? ಚಳಿಯನ್ನೇ ನಡುಗಿಸುವಂತಹ ಜೀವನೋತ್ಸಾಹ ಆಕೆಯದು. ಆದರೆ, ವಯಸ್ಸಿನಲ್ಲಿ ಆಕೆಗಿಂತ ಚಿಕ್ಕವಳಾದ ಇನ್ನೊಬ್ಬ ಅಜ್ಜಿಗೆ ಬಿದಿರಿನ ಬುಟ್ಟಿಗಳ ನಡುವೆ ಕುಳಿತರೂ ತಣ್ಣನೆಯ ಸುಳಿಗಾಳಿಯ ಕಾಟ. ಆಡುಗಳನ್ನು ಹಿಡಿದ ಕುಳಿತ ಅಜ್ಜನಿಗೆ ಹಿಡಿದ ಚಳಿ ಯಾವುದು? ಉಷ್ಣಾಂಶದಲ್ಲಿ ಉಂಟಾಗಿರುವ ಕುಸಿತದ್ದೇ ಅಥವಾ ವ್ಯಾಪಾರ ಆಗದಿದ್ದದ್ದೇ?

ಮುಖದ ತುಂಬಾ ನೆರಿಗೆಗಳು ಮೂಡಿರುವ ಈ ಅಜ್ಜಿ, ತನ್ನ ನೆರಿಗೆಗಳಷ್ಟೇ ಚಳಿಗಾಲವನ್ನು ಕಂಡವರು. ಚಳಿಯ ಅನುಭವಕ್ಕೆ ಪಕ್ಕಾಗುತ್ತಿರುವ ಈ ಪುಟ್ಟಿಗೆ ಬೆಚ್ಚನೆಯ ಹೊದಿಕೆ ಬೇಕೇ ಬೇಕು

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಎರಡು ಅಕ್ಷರಗಳಿಗೆ ಸಂಬಂಧಿಸಿದಂತೆ ಪಕ್ಕದಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ನಾಲ್ಕು ಅಕ್ಷರಗಳ ಹೊಸ ಪದ ರಚಿಸಿ.

1. __ ಯಂತ್ರ __ 'ಯಂತ್ರ'ದಿಂದ ತಡೆಯುವಿಕೆ
2. __ ಕರ __ 'ಕರ'ಬಾಕಿಗಾಗಿ ನಡೆದ ಪ್ರತಿಭಟನೆ
3. __ ಲವ __ 'ಲವ'ನ ಪರೀಕ್ಷಾ ಸಂಖ್ಯೆ
4. __ ನವ __ 'ನವ' ತಿಂಗಳು
5. __ ವನ __ 'ವನ'ದ ದುರ್ಗತಿ

ಸ್ವರಾಕ್ಷರ ಸ್ವಾರಸ್ಯ

ಅಕ್ಷರದ ಆನಂದ
ಇಲ್ಲಿ ಈಡೇರಲು
ಉನ್ನತವಾಗಿ ಊಹಿಸಲು
ಋಷಿಗಳಂತೆ ಎಲ್ಲರ
ಏಳ್ಗೆಗಾಗಿ ಐಕ್ಯಮತದಿಂದ
ಒಪ್ಪ ಓರಣದಿಂದ
ಔಚಿತ್ಯಪೂರ್ಣವಾಗಿ
ಅಂತಃಕರಣದಿಂದ ಕನ್ನಡ
ಕಲಿತರೆ ಅಃ ಎಂಥಾ ಮಜಾ

ಹೊಂದಿಸು ಆನಂದಿಸು



ಭಾರತೀಯ ನೃತ್ಯಗಳನ್ನು ಹೊಂದಿಸಿ

1. ಭರತನಾಟ್ಯ	A. ಆಂಧ್ರ ಪ್ರದೇಶ
2. ಮಣಿಪುರಿ	B. ಕೇರಳ
3. ಕಥಕ್	C. ದಕ್ಷಿಣ ಭಾರತ
4. ಕಥಕ್ಕಳಿ	D. ಒಡಿಶಾ
5. ಕೂಚಿಪುಡಿ	E. ಉತ್ತರ ಭಾರತ
6. ಒಡಿಸ್ಸಿ	F. ಮಣಿಪುರ

ಪದವಿನೋದ

ಇಲ್ಲಿ ಕೊಟ್ಟಿರುವ ಎರಡು ಪದಗಳಿಗೆ ಸಮಾನಾರ್ಥಕ ಪದ ತಿಳಿದು ಮುಂದೆ ಸೂಚಿಸಿರುವ ಸುಳಿವಿಗೆ ತಕ್ಕಂತಹ ಪದ ರಚಿಸಿ

1. ಅರಸ + ಬೆಟ್ಟ = ಒಂದು ಸೊಪ್ಪು
2. ಮದುವೆಗಂಡು + ಗೌರವ = ಆದಾಯ
3. ಶಿವ + ರಸ್ತೆ = ದೂರ ಅಳೆಯುವ ಮಾನ
4. ಮಾಲೆ + ಎಳೆ = ಶೂರ
5. ವಿಷ್ಣು + ಶಂಕರ = ಒಂದು ತಾಲ್ಲೂಕಿನ ಹೆಸರು

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ರಾಮುಮದ್ದು = ________
2. ಗಡಿವಿಚಾರ = ________
3. ಯಮಸರಸ = ________
4. ಬೀದರಕನ್ನಡಕ = ________

ಚಳಿರಾಯ

ಮಕ್ಕಳು ಮರಿಗಳ ಸೊಕ್ಕನು ಮುರಿಯುತ
ತೆಕ್ಕೆಯ ಬೀಳುವನು ಚಳಿರಾಯ
ಚಿಕ್ಕವರಿರಲಿ ದೊಡ್ಡವರಿರಲಿ
ಕನಿಕರ ತೋರದ ಮಹಾರಾಯ!
ಸುಮ್ಮನೆ ಕುಳಿತ ಅಮ್ಮನ ಕೌದಿಯು
ಒಮ್ಮೆಲೆ ಬರುವದು ಹಿಗ್ಗಿನಲಿ
ತಮ್ಮನು ಮುದುಡಿ ಬೆಚ್ಚಗೆ ಮಲಗಿ
ಗೊರಕೆ ಹೊಡೆಯುವ ರಗ್ಗಿನಲಿ
ಅಜ್ಜನಿಗಂತೂ ಥಂಡಿಗೆ ಆಸರೆ
ತೇಪೆ ಹಾಕಿದ ಕೋಟು
ಅಪ್ಪನಿಗಂತೂ ಬೇಕೇಬೇಕು
ಸಾಕ್ಸ್ ಜೊತೆಯಲಿ ಬೂಟು
ತಂಗಿಯ ಕಿವಿಯನು ಮುಚ್ಚಲು ಬೆಚ್ಚಗೆ
ಕುಂಚಿಗೆ ಆಸರೆ ನೀಡುವುದು
ಅಕ್ಕಗೆ ಸ್ವೆಟರ್ ಅಪ್ಪಗೆ ಮಫ್ಲರ್
ಹಂಚಿಕೆ ಮೊದಲೆ ಆಗಿಹುದು
ಅಣ್ಣನ ಬಳಿಯಲಿ ಇರುತಿಹ ಕಂಬಳಿ
ತಣ್ಣನೆ ಗಾಳಿಯ ತಡೆಯುವುದು
ಕಂಬಳಿ ಹೊದ್ದರೆ ಥಂಡಿಯು ಹೆದರಿ
ದೂರಕೆ ತಾನು ಓಡುವದು
ಚಳಿಯನು ತಡೆಯಲು ಜಳಕಕೆ ಬೇಕು
ಎಲ್ಲರಿಗೂ ಬಿಸಿ ನೀರು
ನೆಗಡಿಯು ತಡೆಯಲು ಕಾಡೆ ಕಷಾಯ
ಅಜ್ಜಿಯ ಮೆಣಸಿನ ಸಾರು
ಬಿಸಿಬಿಸಿ ಚಹವನು ಕಾಸುವ ಕಾಯಕ
ಅವ್ವಗೆ ನಿತ್ಯವೂ ತಪ್ಪುವದಿಲ್ಲ
ಚಹವನು ಕುಡಿಯದೆ ಶಾಲೆಗೆ ಹೋಗಲು
ಯಾವ ಮಕ್ಕಳೂ ಒಪ್ಪುವದಿಲ್ಲ

ಗಣಿತದಲ್ಲಿ ಗರ್ದಿ ಗಮ್ಮತ್ತು

ಮಗ್ಗಿ ಮಾಡುವ ಶ್ರಮ

ಇಲ್ಲಿರುವುದು 1 ರಿಂದ 100ರ ವರೆಗೆ ಮಗ್ಗಿ ಬಾಯಿಪಾಠ ಮಾಡದೇ ಮಗ್ಗಿಗಳನ್ನು ಕಂಡು ಹಿಡಿಯುವ ಜಂತ್ರಿ. ನೀವು ಮಾಡಬೇಕಾದುದು ಇಷ್ಟೆ. ನಿಮಗೆ ಈಗ 68ರ ಮಗ್ಗಿ ಬೇಕೆಂದರೆ ಮೊದಲು ಈ ಸಂಖ್ಯೆ ಏರಿಕೆಯ ಸಂಖ್ಯೆಯೋ ಅಥವಾ ಇಳಿಕೆಯ ಸಂಖ್ಯೆಯೋ ಎಂದು ಪತ್ತೆ ಹಚ್ಚಿರಿ. ಏರಿಕೆ ಸಂಖ್ಯೆ ಅಂದರೆ ದಶಕ ಸ್ಥಾನಕ್ಕಿಂತ ಬಿಡಿ ಸ್ಥಾನ ಹೆಚ್ಚಿದ್ದರೆ ಅದು ಏರಿಕೆ ಸಂಖ್ಯೆ (ಉದಾ: 68) ಹಾಗೆ ದಶಕ ಸ್ಥಾನಕ್ಕಿಂತ ಬಿಡಿ ಸ್ಥಾನ ಕಡಿಮೆ ಇದ್ದರೆ ಇಳಿಕೆ ಸಂಖ್ಯೆಯೆಂದೂ (ಉದಾ: 74), ಎರಡೂ ಒಂದೇ ಅಂಕಿ ಇದ್ದರೆ ಅದು ಸಮ ಸಂಖ್ಯೆ ಎಂದೂ ತಿಳಿಯತಕ್ಕದ್ದು (ಉದಾ: 77). ಈಗ 68ರ 7ಲೆ (68 x 7 = ?) ಎಷ್ಟು ಎಂದು ತಿಳಿಯಬೇಕಿದ್ದರೆ ಇದು ಏರಿಕೆ ಸಂಖ್ಯೆಯಾಗಿದ್ದರಿಂದ ಏರಿಕೆ ಪಟ್ಟಿಯಲ್ಲಿ 6 – 8 ಎಲ್ಲಿವೆ ಎಂದು ಪತ್ತೆಹಚ್ಚಿ. 6ರ ಕೆಳಗೆ 7ಲೆ ಎಂದರೆ 7ರ ವರೆಗಿನ ಬಾಕ್ಸ್ ಗಮನಿಸಿ. ಇದು $^{4}/_{2}$ ಆಗಿದೆ. ಹಾಗೆಯೇ ಬಿಡಿ 8ರ7ಲೆ ಎಂದರೆ 7ರ ವರೆಗಿನ ಬಾಕ್ಸನ್ನು ಗಮನಿಸಿ. ಇದು $^{5}/_{6}$ ಆಗಿದೆ. ಇವೆರಡೂ ಬಾಕ್ಸ್‌ನ್ನು ಕಣ್ಣಿನಲ್ಲಿ ಹತ್ತಿರ ಹತ್ತಿರ ತನ್ನಿ ಅಂದರೆ $^{4}/_{2}$, $^{5}/_{6}$ ಕಾಣುತ್ತದೆ. ನೀವು ಈಗ ಅಡ್ಡಗೆರೆಯ ನಡುವೆ ಇರುವ 2 ಮತ್ತು 5ನ್ನು ಕೂಡಿಸಿ 7 ಮಾಡಿ ಕೈಲೆ ಬಂದರೆ ಬಿಡಿ ಹಾಗೇ ಇಟ್ಟು ಮುಂದಿನ ಅಂಕಿಗೆ ಕೂಡಿಸಿ. ಈಗ 4ಕ್ಕೆ 4 ಇಡಿ.

ಒಟ್ಟು 42 + 56 ಈ ರೀತಿ ಈಗ ನಿಮ್ಮ ಉತ್ತರ ಸಿದ್ಧ.
68 x 7 = 476
ಸಮಸಂಖ್ಯೆ 77 ಈ ರೀತಿ ಇದ್ದರೆ ಒಂದೇ ಬಾಕ್ಸನ್ನು ಎರಡು ಬಾರಿ ಇಟ್ಟು ಲೆಕ್ಕ ಮಾಡಿ.

ಏರಿಕೆ ಕ್ರಮ

	0	1	2	3	4	5	6	7	8	9
1	0/0	0/1	0/2	0/3	0/4	0/5	0/6	0/7	0/8	0/9
2	0/0	0/2	0/4	0/6	0/8	1/0	1/2	1/4	1/6	1/8
3	0/0	0/1	0/6	0/9	1/2	1/5	1/8	2/1	2/4	2/7
4	0/0	0/4	0/8	1/2	1/6	2/0	2/4	2/8	3/2	3/6
5	0/0	0/5	1/0	1/5	1/0	2/5	3/0	3/5	4/0	4/5
6	0/0	0/6	1/2	1/8	2/4	3/0	3/6	4/2	4/8	5/4
7	0/0	0/7	1/4	2/1	2/8	3/5	4/2	4/9	5/6	6/3
8	0/0	0/8	1/6	2/4	3/2	4/0	4/8	5/6	6/4	7/2
9	0/0	0/9	1/8	2/7	3/6	4/5	5/4	6/3	7/2	8/1
10	0/0	1/0	2/0	3/0	4/0	5/0	6/0	7/0	8/0	9/0

ಇಳಿಕೆ ಕ್ರಮ

	9	8	7	6	5	4	3	2	1	0
1	0/9	0/8	0/7	0/6	0/5	0/4	0/3	0/2	0/1	0/0
2	1/8	1/6	1/4	1/2	1/0	0/8	0/6	0/4	0/2	0/0
3	2/7	2/4	2/1	1/8	1/5	1/2	0/9	0/6	0/3	0/0
4	3/6	3/2	2/8	2/4	2/0	1/6	1/2	0/8	0/4	0/0
5	4/5	4/0	3/5	3/0	2/5	2/0	1/5	1/0	0/5	0/0
6	5/4	4/8	4/2	3/6	3/0	2/4	1/8	1/2	0/6	0/0
7	6/3	5/6	4/9	4/2	3/5	2/8	2/1	1/4	1/7	0/0
8	7/2	6/4	7/6	4/8	4/0	3/2	2/4	1/6	0/8	0/0
9	8/1	7/2	6/3	5/4	4/5	3/6	2/7	1/8	0/1	0/0
10	9/0	8/0	7/0	6/0	5/0	4/0	3/0	2/0	1/0	0/0

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ
1. ಪಾದರಕ್ಷೆ 2. ದುಮುಗುಟ್ಟು 3. ಅನಾದರ 4. ಅಗಣಿತ 5. ವರಮಾನ

ಅದಲು ಬದಲು
1. ಮಗುತಟ್ಟು 2. ವಿಶ್ವನಮಾವ 3. ಹಾಸಿಗೆ ಹಿಡಿ 4. ಅವಲೋಕನ

ಅಕ್ಷರ ಆಟ
1. ಕೇತನ 2. ಚೇತನ 3. ಚಿಂತನ 4. ಈತನ 5. ಆತನ 6. ಜತನ 7. ಪತನ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ವರದಾಕುಮಾರಿ,
ಚಳ್ಳಕೆರೆ (ಚಿತ್ರದುರ್ಗ)

ಮಲ್ಲಮ್ಮ ಬಡಪ್ಪನವರ,
ಮುಂಡರಗಿ (ಗದಗ)

ಶ್ರಾವಣಿ
ಬೆಂಗಳೂರು

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.
ಉತ್ತರ ಕಳುಹಿಸಲು ಇಮೇಲ್ ವಿಳಾಸ

majakoora@prajavani.co.in